ಮಾರಿಹಬ್ಬ ಒಂದು ಅಧ್ಯಯನ

ಮಾಸ್ಟರ್ ಆಫ್‌ಫಿಲಾಸಫಿ (ಎಂ. ಫಿಲ್) ಪದವಿಯ ಆಂಶಿಕ ಅವಶ್ಯಕತೆಗಾಗಿ
ಕನ್ನಡ ವಿಶ್ವವಿದ್ಯಾಲಕ್ಕೆ ಸಲ್ಲಿಸಿದ ಪ್ರೌಢ ಪ್ರಬಂಧ

ಸಂಶೋಧಕರು :
ಜಿ. ಆರ್. ಮಂಜುನಾಥ, ಎಂ.ಎ.,

ಮಾರ್ಗದರ್ಶಕರು :
ಡಾ|| ಕೆ. ಎಂ. ಮೈತ್ರಿ, ಎಂ.ಎ., ಬಿ.ಇಡಿ., ಪಿ.ಹೆಚ್.ಡಿ.,

ಬುಡಕಟ್ಟು ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – 583 221

1997

ಸಂಪೂರ್ಣ ಸಂ.ಕ.ಆವೃ.

32

ಮಾರಿಹಬ್ಬ ಒಂದು ಅಧ್ಯಯನ

ಮಾಸ್ಟರ್ ಆಫ್‌ಫಿಲಾಸಫಿ (ಎಂ. ಫಿಲ್) ಪದವಿಯ ಆಂಶಿಕ ಅವಶ್ಯಕತೆಗಾಗಿ
ಕನ್ನಡ ವಿಶ್ವವಿದ್ಯಾಲಕ್ಕೆ ಸಲ್ಲಿಸಿದ ಪ್ರೌಢ ಪ್ರಬಂಧ

ಸಂಶೋಧಕರು :
ಜಿ. ಆರ್. ಮಂಜುನಾಥ, ಎಂ.ಎ.,

ಮಾರ್ಗದರ್ಶಕರು :
ಡಾ|| ಕೆ. ಎಂ. ಮೈತ್ರಿ, ಎಂ.ಎ., ಬಿ.ಇಡಿ., ಪಿ.ಹೆಚ್.ಡಿ.,

ಬುಡಕಟ್ಟು ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – 583 221

1997

ಪ್ರಮಾಣ ಪತ್ರ

ಈ ಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ 1996 – 97ರ ಶೈಕ್ಷಣಿಕ ವರ್ಷದ ಎಂ.ಫಿಲ್. ಪದವಿಗಾಗಿ ಡಾ: ಕೆ.ಎಂ. ಮೈತ್ರಿ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಈ ಅಧ್ಯಯನದ ವಿಷಯವನ್ನು ಇದುವರೆಗೆ ಯಾವ ಪದವಿಗೂ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ವಿದ್ಯಾರಣ್ಯ :

18 – 9 – 1997.

ಸಂಶೋಧಕ

(ಜಿ.ಆರ್. ಮಂಜುನಾಥ)
ಬುಡಕಟ್ಟು ಅಧ್ಯಯನ ವಿಭಾಗ.

ಪ್ರಮಾಣ ಪತ್ರ

ಈ ಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ 1996 – 97ರ ಶೈಕ್ಷಣಿಕ ವರ್ಷದ ಎಂ.ಫಿಲ್. ಪದವಿಗಾಗಿ ಡಾ: ಕೆ.ಎಂ. ಮೈತ್ರಿ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಈ ಅಧ್ಯಯನದ ವಿಷಯವನ್ನು ಇದುವರೆಗೆ ಯಾವ ಪದವಿಗೂ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ವಿದ್ಯಾರ್ಥಿ :

18 – 9 – 1997.

ಸಂಶೋಧಕ

(ಜಿ.ಆರ್. ಮಂಜುನಾಥ)
ಬುಡಕಟ್ಟು ಅಧ್ಯಯನ ವಿಭಾಗ.

ಪ್ರಮಾಣ ಪತ್ರ

ಈ ಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ 1996 – 97 ರ ಶೈಕ್ಷಣಿಕ ವರ್ಷದ ಎಂ.ಫಿಲ್. ಪದವಿಗಾಗಿ ಜಿ.ಆರ್. ಮಂಜುನಾಥ ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಈ ಅಧ್ಯಯನದ ವಿಷಯವನ್ನು ಇದುವರೆಗೆ ಯಾವ ಪದವಿಗೂ ಅವರು ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ :

18 – 9 – 1997.

ಮಾರ್ಗದರ್ಶಕರು :

(ಡಾ : ಕೆ.ಎಂ. ಮೈತ್ರಿ)

ಪ್ರವಾಚಕರು,

ಬುಡಕಟ್ಟು ಅಧ್ಯಯನ ವಿಭಾಗ,

ಪ್ರಮಾಣ ಪತ್ರ

ಈ ಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ 1996 – 97 ರ ಶೈಕ್ಷಣಿಕ ವರ್ಷದ ಎಂ.ಫಿಲ್. ಪದವಿಗಾಗಿ ಜಿ.ಆರ್. ಮಂಜುನಾಥ ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಈ ಅಧ್ಯಯನದ ವಿಷಯವನ್ನು ಇದುವರೆಗೆ ಯಾವ ಪದವಿಗೂ ಅವರು ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

(signature) 18/9/97

ವಿದ್ಯಾರಣ್ಯ:

18 – 9 – 1997.

ಮಾರ್ಗದರ್ಶಕರು:

(ಡಾ: ಕೆ.ಎಂ. ಮೈತ್ರಿ)

ಪ್ರವಚಕರು,

ಬುಡಕಟ್ಟು ಅಧ್ಯಯನ ವಿಭಾಗ,

ಕೃತಜ್ಞತೆಗಳು:-

ಕನ್ನಡ ವಿಶ್ವವಿದ್ಯಾಲಯದಲ್ಲಿ ನನಗೆ ಎಂ.ಫಿಲ್.ಅಧ್ಯಯನಕ್ಕೆ ಅವಕಾಶ ಕಲ್ಪಿಸಿಕೊಟ್ಟ ಮಾನ್ಯ ಕುಲಪತಿಗಳಾದ ಶ್ರೀ ಡಾ:ಚಂದ್ರಶೇಖರ ಕಂಬಾರ ರು ಹಾಗೂ ಮಾ ಕುಲ ಸಚಿವರಿಗೆ,

ಅಧ್ಯಯನದ ಕ್ರಮವನ್ನು ಭೋಧಿಸಿ ಪ್ರೀತಿಯಿಂದ ಮಾರ್ಗದರ್ಶನ ನೀಡಿದ ಡಾ:ಕೆ.ಎಂ.ಮೈತ್ರಿಯವರಿಗೆ ಹಾಗೂ ಬುಡಕಟ್ಟು ಅಧ್ಯಯನದ ವಿಭಾಗದ ಮುಖ್ಯಸ್ಥರಾದ ಪ್ರೊ.ಹಿ.ಚಿ.ಬೋರಲಿಂಗಯ್ಯ ಅವರಿಗೆ,

ಅಧ್ಯಯನದ ಅವಧಿಯಲ್ಲಿ ಉಪಯುಕ್ತ ಚರ್ಚೆ ನಡೆಸಿ ಸೂಕ್ತಸಲಹೆ ನೀಡಿ ಸಹಕರಿಸಿದ ಕನ್ನಡ ವಿಶ್ವವಿದ್ಯಾಲಯದ ಉಪನ್ಯಾಸಕರುಗಳಾದ ಡಾ:ರಹಮತತರೀಕೆರೆ, ಪ್ರೊ:ಬಿ.ಎಸ್.ಸತ್ಯನಾಥ್, ಪ್ರೊ: ಪುರುಷೋತ್ತಮ ಬಿಳಿಮಲೆ, ಚಲುವರಾಜು ಅವರಿಗೆ, ಕ್ಷೇತ್ರ ಕಾರ್ಯದ ಅವಧಿಯಲ್ಲಿ ಉಪಯುಕ್ತ ಮಾಹಿತಿ ನೀಡಿ ಸಹಕರಿಸಿದ ವಕ್ತೃ ವೃಂದಕ್ಕೆ,

ಅಧ್ಯಯನಾಂಗದ ನಿರ್ದೇಶಕರಾದ ಪ್ರೊ:ಮಲ್ಲೇಪುರಂ ಜಿ.ವೆಂಕಟೇಶರವರಿಗೆ,

ನನ್ನ ಅಧ್ಯಯನದ ಅವಧಿಯಲ್ಲಿ ಸ್ನೇಹದಿಂದ ಸಹಕರಿಸಿದ ಸ್ನೇಹಿತ ಜಿ.ಎನ್.ಕೀರ್ತಿನಾಥ್ ಹಾಗೂ ಸಂಶೋಧನಾ ಮಿತ್ರರಿಗೆ,

ಅಧ್ಯಯನದ ಬಗ್ಗೆ ವಿಚಾರಿಸುತ್ತ ಹುರಿದುಂಬಿಸುತ್ತಿದ್ದ ಹಿರಿಯರಾದ ಶ್ರೀ ಬಿದರಳ್ಳಿ ನರಸಿಂಹಮೂರ್ತಿ, ಸ್ನೇಹಿತರಾದ ವಾಸುದೇವ ನಾಡಿಗ, ಮಂಜುನಾಥ ಎಚ್.ಜಿ. ಚನ್ನೇಶ, ಹೊನ್ನಾಳಿ ಚಂದ್ರಶೇಖರ ಹಾಗೂ ಕರಿಸಿದ್ದಪ್ಪ ಅವರಿಗೆ,

ನನ್ನ ಪ್ರತಿ ಕ್ಷಣದ ತೊಡರುಗಳಿಗೂ ಸ್ಪಂದಿಸಿ ಅಧ್ಯಯನಕ್ಕೆ ಪ್ರೇರೇಪಿಸಿದ ಸ್ನೇಹಿತ ನನ್ನೂರಿನ ಹಾಲೇಶ ಕೋರಿ ಹಾಗೂ ನನ್ನ ಕ್ಷೇತ್ರಕಾರ್ಯದಲ್ಲಿ ಜೊತೆಗಿದ್ದು ಸಹಕರಿಸಿದ ನಾಗರಾಜ ಎಚ್.ಎಸ್.ಮತ್ತು ವೈ.ಪಿ.ಬಸವರಾಜ ಬೀರಗೊಂಡನಹಳ್ಳಿ, ವೆಂಕಟೇಶ ಹೆಚ್.ಕೆ.ಇವರಿಗೆ,

ನನ್ನ ಸಾಧನೆಗಳಿಗೆ ಯಾವತ್ತೂ ಬೆಂಬಲವಾಗಿ ನಿಂತಿರುವ ನನ್ನ ತಾಯಿ ಶಿವಲಿಂಗಮ್ಮ ಹಾಗೂ ತಂಗಿ ಪುಷ್ಪಳಿಗೆ,

ಅಂದವಾಗಿ ಬೆರಳಚ್ಚು ಮಾಡಿಕೊಟ್ಟ ಗುರು ಟೈಪಿಂಗ ಸೆಂಟರ್ ಶಿವಮೊಗ್ಗ ಇವರಿಗೆ.

:: ಮಾರಿ ಹಬ್ಬ ಒಂದು ಅಧ್ಯಯನ ::

ಪರಿವಿಡಿ:-

111·4 ಹಬ್ಬದ ಮುಕ್ತಾಯದ ವಿವರ

ಅ) ಅಮ್ಮ ಹೊರಡುವುದು.

ಆ) 'ಮೋಚುವ' ಆಚರಣೆ

111·5 ಕೋಣನ ಬಿಡುವುದು ಮತ್ತು ಮಾರಿ ಮುತ್ತೈದೆಯಾಗುವುದು.

IV. 'ಮಾರಿ ಹಬ್ಬದ' — ತಾತ್ವಿಕ ಚರ್ಚೆ —

IV.1 ವರ್ಣ ಸಂಕರದ ಹಿನ್ನೆಲೆಯಲ್ಲಿ.

IV.2 ರಕ್ಷೆ ಮತ್ತು ಫಲವಂತಿಕೆಯ ಹಿನ್ನೆಲೆಯಲ್ಲಿ

V. ಉಪ ಸಂಹಾರ

ವ್ಯಕ್ತಿಗಳ ವಿವರ,
ಆಧಾರ ಗ್ರಂಥಗಳು,
ಸಹಾಯಕ ಗ್ರಂಥ ಸೂಚಿ,
ಛಾಯಾ ಚಿತ್ರಗಳು.

ಅಧ್ಯಾಯ: ೧

1. ಪೀಠಿಕೆ :-

1.1 ಅಧ್ಯಯನದ ವಸ್ತು, ಉದ್ದೇಶ ಮತ್ತು ವ್ಯಾಪ್ತಿ.

1.2 ಪ್ರಬಂಧದ ಸ್ವರೂಪ ಮತ್ತು ಅಧ್ಯಯನ ವಿಧಾನ.

ಪೀಠಿಕೆ

ಗ್ರಾಮೀಣರ ಬದುಕಿನಲ್ಲಿ ಹಬ್ಬಗಳು ವಿಶೇಷ ಸ್ಥಾನ ಪಡೆದಿವೆ. ತಮ್ಮ ನಿರಂತರ ಹೋರಾಟದ ಬದುಕಿನಲ್ಲಿ ತಾವು ಕಂಡುಂಡ ಅನುಭವ ವಿಶೇಷಗಳನ್ನು, ನೋವು – ನಲಿವುಗಳನ್ನು – ಪರಸ್ಪರ ಹಂಚಿಕೊಂಡು, ಭಕ್ತಿ, ಭಾವುಕತೆಯಲ್ಲಿ ಮುಕ್ತವಾಗಿಸಿಕೊಳ್ಳುವ ಕ್ಷಣಗಳಿವು. ತಮ್ಮದೇ ಆದ ಕಲೆ, ಸಾಹಿತ್ಯ ಮೊದಲಾದ ಅಭಿವ್ಯಕ್ತಿ, ಕ್ರೀಡೆ, ನಾಟ್ಯ, ನೃತ್ಯಾದಿ ಕಲೆಗಳು ಇಂತಹ ಸಂದರ್ಭದಲ್ಲಿ ಒಂದು ಸ್ಪಷ್ಟ ರೂಪವನ್ನು ಪಡೆಯುತ್ತವೆ. ತಮ್ಮದೇ ಆದ ಒಂದು ವಿಶಿಷ್ಟ ಸಾಂಸ್ಕೃತಿಕ ಸಂವಹನ ಇಲ್ಲಿ ನಡೆಯುತ್ತದೆ. ಕೃಷಿ ಸಂಬಂಧಿ ಹಾಗೂ ಪಶುಪಾಲನೆಗೆ ಸಂಬಂಧಿಸಿದ ಅನೇಕ ವಸ್ತು ವಿಶೇಷಗಳ ಬಗೆಗೆ ದೈವೀ ಭಾವನೆಯಿಂದ ನಿಗಾವಹಿಸಲು ಪ್ರೇರೇಪಿಸುವ ಈ ಘಳಿಗೆಗಳು ಅವರನ್ನು ಮತ್ತೆ ಮತ್ತೆ ತಮ್ಮ ಬದುಕಿಗೆ ಆಧಾರವಾದ ದುಡಿಮೆಯ ಮೂಲಗಳ ಬಗೆಗೆ ಕಾಳಜಿ ವಹಿಸುವಂತೆ ಪ್ರೇರೇಪಿಸುತ್ತವೆ. ಪಶುಗಳನ್ನು ಶೃಂಗರಿಸುತ್ತಾರೆ. ವ್ಯವಸಾಯದ ಮರ ಮುಟ್ಟುಗಳನ್ನು ಪರೀಕ್ಷಿಸಿ, ತೊಳೆದು ಪೂಜಿಸಿ ಮುಂದಿನ ಋತುವಿಗೆ ಸಿದ್ಧ ಮಾಡಿಕೊಳ್ಳುತ್ತಾರೆ. ತಾವೂ ಸಹ ಹೊಸ ಬಟ್ಟೆ ತೊಟ್ಟು, ಮನೆ ಸಾರಿಸಿ ಇನ್ನೊಂದು ಹಬ್ಬದವರೆಗೆ ಓರಣವಾಗಿರುವಂತೆ ನೋಡಿಕೊಳ್ಳುತ್ತಾರೆ.

ಹಬ್ಬ–ಹರಿದಿನಗಳು, ಗ್ರಾಮೀಣರ ಬದುಕಿನಲ್ಲಿ ಪ್ರಮುಖವಾಗುವುದು ಅವುಗಳ ಸಾಂಸ್ಕೃತಿಕ ಸಂವಹನ ಗುಣದಿಂದಾಗಿ ಎನ್ನಬಹುದು. ಕೆಲವಾರು ಹಬ್ಬಗಳು ಆಯಾ ದಿನಗಳ ವೈಶಿಷ್ಟ್ಯವನ್ನು ಮಾತ್ರ ಪರಿಗಣಿಸಿ ಬಂದವುಗಳಾದರೆ, ಇನ್ನು ಕೆಲವು ತಮ್ಮ ಆಚರಣಾದಿ ಕ್ರಿಯೆಗಳಿಂದ ತಮ್ಮದೇ ಆದ ವಿಶಿಷ್ಟ ಸಾಂಸ್ಕೃತಿಕ ಮೌಲ್ಯಗಳನ್ನು ಸಮಾಜಕ್ಕೆ ಬದ್ಧವಾಗಿಸುತ್ತವೆ. ಮತ್ತು ಅಂತಹ ಸಾಂಸ್ಕೃತಿಕ ಕಟ್ಟುಗಳೊಳಗೆ ಒಂದು ವಿಶಿಷ್ಟ ಪ್ರಾದೇಶಿಕ ಅಥವಾ ಸಾಮಾಜಿಕ ವರ್ಗವನ್ನು ಬಂಧಿಸುತ್ತವೆ. ಇಂತಹ ಹಬ್ಬಗಳು ಆಯಾ ಸಮಾಜದ ಜನರ ಸಂಬಂಧಗಳನ್ನು ಮತ್ತು ಅವರ ಜವಾಬ್ದಾರಿಗಳನ್ನು ಮತ್ತೆ ಮತ್ತೆ ನೆನಪಿಸಿ ಅವಕ್ಕೆ ಬದ್ಧವಾಗಿಸುತ್ತವೆ. ಹಾಗಾಗಿ ಕೆಲವಾರು ಹಬ್ಬಗಳು ಒಂದು ಸಮಾಜದ ಒಳ ಸಂಬಂಧಗಳ, ಜವಾಬ್ದಾರಿಗಳ ದೃಶ್ಯ ರೂಪವಾಗಿ ಕಾಣುತ್ತವೆ. ಅವು ಸಮಾಜದಿಂದ ನಿರ್ಮಾಣಗೊಂಡು ಸಮಾಜವನ್ನು ಬಲಪಡಿಸಿ ರಕ್ಷಿಸುತ್ತದೆ ಕೂಡ.

<u>ಅಧ್ಯಯನ ವಸ್ತು, ಉದ್ದೇಶ ಮತ್ತು ವ್ಯಾಪ್ತಿ</u>:–

ಪ್ರಸ್ತುತ ಅಧ್ಯಯನದ ವಸ್ತು 'ಮಾರಿಹಬ್ಬ' – ಮಾರಿಹಬ್ಬ ಗ್ರಾಮೀಣ ಪ್ರದೇಶಗಳಲ್ಲಿ ಬಹಳ ಮಹತ್ವ ಮತ್ತು ಮನ್ನಣೆಯನ್ನು ಗಳಿಸಿಕೊಂಡಿರುವ ಹಬ್ಬವಾಗಿದೆ. ಸಾಮಾನ್ಯವಾಗಿ ಸುಗ್ಗಿಯ ತಿಂಗಳುಗಳಲ್ಲಿ ಅಂದರೆ ಜನವರಿ – ಫೆಬ್ರುವರಿ ತಿಂಗಳುಗಳಲ್ಲಿ ಜರುಗುವ ಈ ಹಬ್ಬ 'ಬಲಿ'ಯ ತೀವ್ರತೆಯನ್ನುಳ್ಳ ಹಬ್ಬವಾಗಿದೆ. ಈ ಹಬ್ಬವನ್ನು ಅನೇಕ ಹಳ್ಳಿಗಳು ಒಟ್ಟಾಗಿ ಅಥವಾ ಒಂದೊಂದೇ ಹಳ್ಳಿ ಪ್ರತ್ಯೇಕವಾಗಿ ಆಚರಿಸುತ್ತವೆ. ಆಯಾ ಹಳ್ಳಿಗಳ ಸಂಖ್ಯೆಗನುಗುಣವಾಗಿ '<u>ಮಾರಿ</u>' ಪ್ರಭಾವಿತ ಸ್ಥಾನಕ್ಕೇರುತ್ತಾಳೆ. ಸಾಮಾನ್ಯವಾಗಿ ಏಳೂರು, ಮೂರೂರು, ಒಂದು ಊರು, ಹೀಗೆ ಹಬ್ಬವಾಚರಿಸುತ್ತಾರೆ. '<u>ಮಾರಿ</u>' ಇಲ್ಲಿ ಒಬ್ಬ ರಕ್ಷಕ ದೇವತೆಯಾಗುತ್ತಾಳೆ.

ಮಾರಿ ಹಬ್ಬದಲ್ಲಿ ಸಾಮಾನ್ಯವಾಗಿ ಎರಡು ರೀತಿಯ ಹಬ್ಬಗಳಿವೆ.

1) ಊರು ಮಾರಿ 2) ಬಿಡುಮಾರಿ.

ಮೇಲ್ನೋಟಕ್ಕೆ ಈ ಪ್ರಮುಖ ಸಂಪ್ರದಾಯಗಳಲ್ಲಿ ಎರಡು ಕಡೆ ಸಾಮಾನ್ಯ ಅಂಶಗಳೇ ಇದ್ದರೂ 'ಬಿಡುಮಾರಿ' ಹಬ್ಬದಲ್ಲಿ ಪ್ರತೀ ಹಬ್ಬಕ್ಕೂ ಹೊಸ ವಿಗ್ರಹದ ಕೆತ್ತನೆ ನಡೆಯಬೇಕಾಗುವುದರಿಂದ ಹಬ್ಬದ ಆರಂಭದ ಅಂದರೆ 'ಮುಹೂರ್ತಕಂಬ' ಕ್ರಿಯೆಯಿಂದಲೇ ಆರಂಭವಾಗುತ್ತದೆ. ಹಾಗಾಗಿ ಮರ ಕಡಿಯುವ ಮತ್ತು ವಿಗ್ರಹ ಕೆತ್ತುವ ಸಮಯದ ಕೆಲವು ಆಚರಣೆಗಳು ಇಲ್ಲಿ ಹೆಚ್ಚಿಗೆ ಸೇರ್ಪಡೆಯಾಗುತ್ತವೆ. ಇಲ್ಲಿ 'ಬಿಡುಮಾರಿ'ಯನ್ನು ಕಾಡುಮಾರಿ ಎಂತಲೂ ಇವಳು ತೀರಾ ಉಗ್ರಳೆಂತಲೂ ತಿಳಿಯಲಾಗಿದೆ. ಈ ಹಬ್ಬ ಮೂರು, ಏಳೂರು, ಐದೂರು, ಹೀಗೆ ಅನೇಕ ಊರುಗಳು ಸೇರಿ ಮಾಡುವುದು ಸಾಮಾನ್ಯ. ಬಹುಶಃ ವಿಗ್ರಹವನ್ನು ಪ್ರತೀ ಬಾರಿಯೂ ಕಾಡಿಂದ ಮರ ತಂದು ಮಾಡುವುದು, ಮತ್ತು ಹಬ್ಬದ ಕೊನೆಯಲ್ಲಿ ಕೆತ್ತನೆ ಮೂರ್ತಿಯನ್ನು ಕಾಡಲ್ಲೇ ಬಿಟ್ಟು ಬರುವುದು — ಈ ಮಾರಿಯನ್ನು ಕಾಡುಮಾರಿ, ಬಿಡುಮಾರಿ ಎಂದು ಕರೆಯುವುದಕ್ಕೆ ಕಾರಣವಾಗಬಹುದು.

'ಗೂಡು ಮಾರಿ' ಹಬ್ಬದಲ್ಲಿ ಪ್ರತೀ ಹಬ್ಬಕ್ಕೂ ವಿಗ್ರಹ ಕೆತ್ತನೆ ಹೊಸದಾಗಿ ನಡೆಯದೇ ಇರುವುದರಿಂದ ಇಲ್ಲಿ ವಿಗ್ರಹ ಕೆತ್ತನೆಗೆ ಸಂಬಂಧಿಸಿದ ಆಚರಣೆಗಳು ಜರುಗುವುದಿಲ್ಲ. ಇಲ್ಲಿ ಹಬ್ಬದ ಚಟುವಟಿಕೆಗಳು ಕಂಭ ಮುಹೂರ್ತದ ಕೋಣವನ್ನು ಕಡಿಯುವ ಮೂಲಕವಾಗಿದೆ. ಅಂದರೆ ಕೋಣವನ್ನು ಕಡಿದು ಊರೆಲ್ಲ ಮೆರೆಸುವ ಮೂಲಕ ಹಬ್ಬದ ಕ್ರಿಯಾರಂಭವಾಗುತ್ತದೆ. ಈ ಮಾರಿ 'ಬಿಡುಮಾರಿ'ಗಿಂತ ಸ್ವಲ್ಪ ಸೌಮ್ಯಳು ಎನ್ನಲಾಗುತ್ತದೆ. ಬಹುಶಃ ಊರಲ್ಲಿ ನೆಲೆನಿಂತ ಇವಳಿಗೆ ಊರಲ್ಲಿ ಒಂದು ನಿರ್ದಿಷ್ಟ ದೇವಸ್ಥಾನವಿರುವುದು ಮತ್ತು ನಿತ್ಯ ಪೂಜೆ ಪಡೆಯುವ ಕಾರಣದಿಂದ, ಅದರಲ್ಲೂ ಊರ ಸಂಸ್ಕೃತಿಯಲ್ಲಿಯೇ ಇರುವ ಕಾರಣದಿಂದ ಇವಳ '<u>ಸೌಮ್ಯತೆ</u>' ಜನರ ಒಪ್ಪಿಗೆ ಪಡೆದಿರಬೇಕು. ಎಸ್.ಎಸ್. ಹಿರೇಮಠರು ಹೇಳುವಂತೆ '<u>ಗ್ರಾಮಮ್ಮ</u>'ನ ಕಲ್ಪನೆಗೆ ಹತ್ತಿರವಿರುವ ಮಾರಿ ಇವಳು.

ಅಲೆಮಾರಿ ಪಶುಪಾಲಕ ವರ್ಗ ಮತ್ತು ನೆಲೆನಿಂತ ಕೃಷಿಕವರ್ಗಗಳ ಹಿನ್ನೆಲೆಯಲ್ಲಿಯೂ ಈ ಎರಡು ಭಿನ್ನ 'ಮಾರಿ'ಯರು ಅರ್ಥ ಪಡೆಯುತ್ತಾರೆ. ನಂತರದ ಇಬ್ಬರ ಸಮ್ಮಿಲನ ಮತ್ತು ನೆಲೆನಿಂತ ಕಾಲಕ್ಕೆ ಆಚರಣೆಗಳ ಸಮಾನ ಚೌಕಟ್ಟನ್ನು ಕಳಿಸಿಕೊಂಡಿರಬಹುದು.

ಪ್ರಸ್ತುತ ಪ್ರಬಂಧ ಪ್ರಾದೇಶಿಕವಾಗಿ ಹೊನ್ನಾಳಿ ತಾಲ್ಲೂಕಿನ ಹೊನ್ನಾಳಿ ಮತ್ತು ಬೀರಗೊಂಡನಹಳ್ಳಿಯನ್ನು ಮಾತ್ರ ಆಧಾರವಾಗಿಟ್ಟುಕೊಂಡಿರುವುದರಿಂದ ಹಾಗೂ ಅಲ್ಲಿ 'ಗೂಡುಮಾರಿ'ಯ ಆಚರಣೆ ಮಾತ್ರವಿರುವುದರಿಂದ 'ಗೂಡುಮಾರಿ' ಹಬ್ಬವನ್ನು ಮಾತ್ರ ಪರಿಗಣಿಸಿ ವಿವರಿಸಲಾಗಿದೆ.

'ಮಾರಿಹಬ್ಬ' ಸಾಮಾನ್ಯವಾಗಿ ಡಿಸೆಂಬರ್‌ನಿಂದ ಫೆಬ್ರವರಿಯ ಅಂತ್ಯದವರೆಗಿನ ದಿನಗಳಲ್ಲಿ ನಡೆಯುವ ಹಬ್ಬವಾದರೂ ಹೊನ್ನಾಳಿ ಪ್ರದೇಶದಲ್ಲಿ ಆಷಾಢ ಅಥವಾ ಜುಲೈ ತಿಂಗಳಿನಲ್ಲಿ ನಡೆಯುತ್ತದೆ. ಆದರೆ ಬೀರಗೊಂಡನಹಳ್ಳಿಯಲ್ಲಿ 'ಫೆಬ್ರವರಿ' ತಿಂಗಳಿನಲ್ಲೇ ನಡೆಯುತ್ತದೆ. ದೇವತೆಯೊಬ್ಬಳನ್ನು ತೃಪ್ತಿಪಡಿಸುವ ಆಶಯವನ್ನೊಳಗೊಂಡಿರುವ ಈ ಹಬ್ಬ 'ಮಾಂಸ' ನೈವೇದ್ಯದ ಅಥವಾ ಮಾಂಸಾಹಾರಿ ಪ್ರವೃತ್ತಿಯ ಮಹತ್ವದ ಹಬ್ಬವಾಗಿದೆ. ಬಲಿಯ ತೀವ್ರತೆಯುಳ್ಳ ಮತ್ತು ಕೆಲವೊಮ್ಮೆ ಆದಿಮ ಸ್ಥಿತಿಯಲ್ಲಿನ ಮಾನವನ ಗುಂಪು ಬೇಟೆಯ ಮತ್ತು ಆ ಸಂಬಂಧಿ ಕಾರ್ಯವನ್ನು ಪ್ರತಿನಿಧಿಸುವ ಅನೇಕ ಆಚರಣೆಗಳನ್ನು ಈ ಹಬ್ಬ ಒಳಗೊಂಡಿದೆ. ಇದರೊಟ್ಟಿಗೆ ವಿವಾಹ ಮತ್ತು ವೈಧವ್ಯದಂತಹ ಧರ್ಮ ನಿರ್ದೇಶಕ ಶಿಷ್ಟವೆಂದು ಕರೆಯಲ್ಪಡುವ ಸಂಸ್ಕೃತಿಯೊಂದರ ಆಚರಣೆಗಳನ್ನು ಒಳಗೊಂಡಿದೆ. ಒಟ್ಟಾರೆ ಈ ಮಾರಿಹಬ್ಬ ಕ್ರೂರ ದೇವತೆಯೊಬ್ಬಳ ತೃಪ್ತಿಯ ಆಶಯವನ್ನು ಹೇಗೆ ಒಳಗೊಂಡಿದೆಯೋ ಹಾಗೆಯೇ ಶಿಷ್ಟದೇವತೆಯೊಬ್ಬಳ ಧರ್ಮ ತತ್ವ ರಕ್ಷಣೆಯ ಆಶಯವನ್ನೂ ಅಂಟಿಸಿಕೊಂಡಿದೆ. ಹೀಗೆ ಎರಡು ಭಿನ್ನ ಆಶಯಗಳನ್ನೊಳಗೊಂಡು ತೀರಾ ಸಂಕೀರ್ಣಗೊಂಡ ಈ ಹಬ್ಬದ ಗಡಿ ನಿರ್ಬಂಧ, ಕೋಣ, ಬಲಿ, ಬರಗ, ವಿವಾಹ, ವೈಧವ್ಯ ಮೊದಲಾದ ಅಂಶಗಳ ತಾತ್ವಿಕ ವಿವೇಚನೆ ಬಹಳಷ್ಟು ಸಂದಿಗ್ಧತೆಗಳ ನೆಲೆಯಲ್ಲೇ ನಡೆಯಬೇಕಾಗುತ್ತದೆ. ಒಂದು ಆದಿಮ

ಸಂಸ್ಕೃತಿಯ ಕಲ್ಪನೆಯ ಮತ್ತು, ಅವು ರೋಗದ ಬಗೆಗಿನ ಅಥವಾ ನಿಸರ್ಗದ ಕಠೋರತೆಯ ಕಲ್ಪನೆಯಾಗಿ ಹುಟ್ಟು ತಳೆದ '<u>ಮಾರಿ</u>', ಆ ಎಲ್ಲ ವಿಪತ್ತುಗಳಿಂದ ಪಾರು ಮಾಡಬಲ್ಲ, ರಕ್ಷೆಯ ಗುಳಿಗೆಯ ಅಮ್ಮನಾಗಿ ಮೂಡಿದ್ದು, ನಂತರ ಸೃಷ್ಟಿಯದಾಗಿದೆ. ಅವಳ ತೃಪ್ತಿ ಪಡಿಸುವ ಅಂಶಗಳಿಂದ ಈ ನೈವೇದ್ಯ ಅಥವಾ 'ಬಲಿ' ಗಳು ನಂತರದ ಕಾಲಘಟ್ಟದಲ್ಲಿ ವರ್ಣ ಸಂಕರದ ಕಥೆಗೆ ಬದ್ಧಗೊಳಿಸಲ್ಪಟ್ಟ ವಿಷಯ ಸತ್ಯಕ್ಕೆ ಹತ್ತಿರವಿದೆ. ಇಂತಹ ರೋಗ ತರುವ ದೇವಿಯನ್ನೇ ರೋಗ ನಿವಾರಣೆಯ ದೇವಿಯನ್ನಾಗಿಯೂ ಕಂಡುಕೊಂಡ ಈ ಕಲ್ಪನೆಯಲ್ಲಿ 'ತಾಯಿ' ಬಗೆಗಿನ ಸಹಜ ಭಾವನೆ – ಸೃಷ್ಟಿಯ ಅರ್ಹತೆಯುಳ್ಳ ಸ್ತ್ರೀಯನ್ನು ದೇವತೆಯಾಗಿ ಕಂಡ ಮಾನವನ ಆ ವಿಸ್ಮಯದ ಫಳಿಗೆ ಕೆಲಸ ಮಾಡಿದೆ.

ಈ ವೇಳೆಯ ಚರ್ಚೆಗೆ ಗ್ರಾಮೀಣರು ಮಾರಿಯನ್ನು ಗ್ರಹಿಸಿರುವ ರೀತಿಯನ್ನು ನೋಡಬೇಕಾಗುತ್ತದೆ. 'ಮಾರಿ' ಎಂದರೆ ದುಷ್ಟ, ದುಷ್ಟ ರೋಗ ಎಂಬ ರೀತಿಯಂತೆಯೇ ಅವಳನ್ನು ಮಹಾಕಾಯಿ, ಗ್ರಾಮದ ತಾಯಿ ಎಂದೂ ತಿಳಿಯುತ್ತಾರೆ. ಅಂದರೆ ಇಲ್ಲಿ ಮಾರಿಯನ್ನು 'ತಾಯಿ'ಯಾಗಿ ಕಂಡು ಊರ ರಕ್ಷೆಯನ್ನು ಅವಳಿಗೆ ವಹಿಸಿರುವ, ಹೊರಗಿನಿಂದ ಬರುವ '<u>ರೋಗ</u>' ವನ್ನು ಈ ತಾಯಿಯು ಕೋಪದ ಪ್ರಭಾವವೆಂದೇ ತಿಳಿದ ಸ್ಥಿತಿಯಾಗಿದೆ. ಒಟ್ಟಾರೆ '<u>ಮಾರಿ</u>' ಸೃಷ್ಟಿಯ ಹಿನ್ನೆಲೆಯನ್ನು ವೈದಿಕೇತರ ನೆಲೆಯಲ್ಲಿ ಚರ್ಚಿಸುವ ಮತ್ತು ನಂತರದ ಅದರ ಬೆಳವಣಿಗೆ, ಅದು ಪಡೆದುಕೊಂಡ ಅರ್ಥಗಳನ್ನು ಚಿಂತಿಸುವುದು ಈ ಪ್ರಬಂಧದ ಉದ್ದೇಶಗಳಲ್ಲೊಂದಾಗಿದೆ.

'<u>ಮಾರಿ</u>' ಹಬ್ಬ ಪ್ರಸ್ತುತದಲ್ಲಿ ಕಟ್ಟಿಕೊಂಡಿರುವ ಅರ್ಥಗಳನ್ನು ಮತ್ತು ಆಚರಣೆಗಳನ್ನು ಒಡೆಯುವ ಮೂಲಕ ಸಿಗುವ ಸುಳಿವುಗಳನ್ನು ಆಧಾರವಾಗಿಟ್ಟುಕೊಂಡು 'ಮಾರಿ'ಯ ಪೂರ್ವ ಸ್ಥಿತಿ ಕಂಡುಕೊಳ್ಳುವ ಪ್ರಯತ್ನ ನಡೆಸಲಾಗುವುದು.

ಕೆಲವು ಭಿನ್ನ ಸಂಸ್ಕೃತಿಗಳ ಆಚರಣೆಗಳು – ವೈದಿಕ ಪ್ರಭಾವಕ್ಕೆ ಒಳಗಾದ ಸಂದರ್ಭದಲ್ಲಿ ಅವು ತಿರುಚಲ್ಪಟ್ಟ 'ಸ್ಥಿತಿ'ಯನ್ನು, ಕುರಿತ ಚರ್ಚೆ ಈ ಪ್ರಬಂಧ ಒಳಗೊಳ್ಳುತ್ತದೆ.

ಅಲ್ಲದೇ ಮಾರಿಹಬ್ಬವನ್ನು '<u>ವರ್ಣಸಂಕರದ</u>' ಪ್ರಸ್ತುತ ಆಚರಣೆಯ ಹಿನ್ನೆಲೆಯ ಚರ್ಚೆಯನ್ನು, ಮತ್ತು ಆಚರಣೆಗಳು ಸಾಂಕೇತಿಕವಾಗಿ ನೀಡುವ ಫಲವಂತಿಕೆ, ರೋಗನಿವಾರಣೆ ಅಥವಾ ಕಾವಲಿನ ಆಶಯದ ಹಿನ್ನೆಲೆಯ ಚರ್ಚೆಯನ್ನು, ಈ ಎರಡೂ ದೃಷ್ಟಿಕೋನದ ವಿವೇಚನೆಯ ಮೂಲಕ '<u>ಮಾರಿ</u>' ಹಬ್ಬದ ಪ್ರಸ್ತುತತೆಯನ್ನು ಚಿಂತಿಸುವುದು ಕೂಡ ಪ್ರಯತ್ನವಾಗುತ್ತದೆ. ಬಹುಶಃ ವರ್ಣಸಂಕರದ ಕಥೆಯು ಈ ಒಂದು ಗ್ರಾಮದೇವತೆಗೇ ಕಟ್ಟಲ್ಪಟ್ಟಿರುವ ಕಾರಣ ಮತ್ತು ಈ ವರ್ಣಸಂಕರ ಇಲ್ಲಿ ಇಷ್ಟೊಂದು ವಿರೋಧ ಪಡೆದಿರುವ ಕಾರಣಗಳ ಮೂಲಕ ವೈದಿಕ ಸಮಾಜದ ಆಚರಣೆಗಳು ಹೇಗೆ ಭಾರತೀಯ ಸಂಸ್ಕೃತಿ ಆಚರಣೆಯನ್ನು ತಿರುಚಿದೆ ಎಂಬುದನ್ನು ತಿಳಿಯಬಹುದೆಂದು ನಂಬಿಕೆಯಿಂದ ಈ ಅಧ್ಯಯನ ಕೈಗೊಳ್ಳಲಾಗುತ್ತಿದೆ. ಈ ಪ್ರಮುಖ ಎರಡು ಭಿನ್ನ ದೃಷ್ಟಿಕೋನದ ಚರ್ಚೆ ಸಹಿತ, ಕಾರ್ಯದ ತಿರುಳು ಹಬ್ಬದ ಆಚರಣಾತ್ಮಕ ಅಂಶಗಳನ್ನು ವಿವರಿಸುವ ಪ್ರಯತ್ನ ಕೂಡ ಪ್ರಬಂಧದ ಒಟ್ಟಾರೆ ಉದ್ದೇಶವನ್ನು ಬಿಂಬಿಸುತ್ತದೆ ಎಂದುಕೊಂಡಿದ್ದೇನೆ.

<u>ವ್ಯಾಪ್ತಿ</u>:– ಈ ಪ್ರಬಂಧ ಉದ್ದೇಶಕ್ಕೆ ಬಹಳ ಸೀಮಿತವಾದ ಪ್ರಾದೇಶಿಕತೆಯನ್ನು ಬಳಸಿಕೊಳ್ಳಲಾಗಿದೆ. ಎಂ.ಎಲ್. ಪದವಿಯ ಆಂಶಿಕ ಅಗತ್ಯಕ್ಕಾಗಿ ಈ ಪ್ರಬಂಧವನ್ನು ರಚಿಸಿರುವುದರಿಂದ, ~~ತೀರಾ~~ ತೀರಾ ಕಡಿಮೆ ಸಮಯಾವಕಾಶವಿರುವುದರಿಂದ ಅಧ್ಯಯನದ ಅನುಕೂಲಕ್ಕಾಗಿ ಕೇವಲ ಹೊನ್ನಾಳಿ ತಾಲ್ಲೂಕಿನ ಹೊನ್ನಾಳಿ ಮತ್ತು ಇರಗೊಂಡನಹಳ್ಳಿ ಗಳನ್ನು ಮಾತ್ರ ಕ್ಷೇತ್ರಕಾರ್ಯಕ್ಕೆ ಬಳಸಿಕೊಳ್ಳಲಾಗಿದೆ. ಮತ್ತು ಹಬ್ಬದ ವಿವರಗಳು '<u>ಸಾರು ಮಾರಿ</u>' ಗೆ ಮಾತ್ರ ಸಂಬಂಧಿಸಿದ್ದು ಅದು ಈ ಎರಡು ಗ್ರಾಮ

ಗಳಿಂದ ಮಾತ್ರ ಸಂಗ್ರಹಿಸಲಾಗಿದೆ. ಇಲ್ಲಿನ ಸಂಗ್ರಹಿತ ಮಾಹಿತಿಗಳೂ ಇನ್ನೆಲ್ಲಿಯದೂ ಮಾಹಿತಿಗಳಿಗಿಂತ ಭಿನ್ನವಾಗುವ ಸಾಧ್ಯತೆಗಳೂ ಇವೆ. ಪ್ರಾದೇಶಿಕ ಭಿನ್ನತೆಗಳೇನೇ ಇದ್ದರೂ ಆಶಯ ಮಾತ್ರ ಸಾಮಾನ್ಯವಾಗಿ ಒಂದೇ ಎಂಬ ಧೋರಣೆ ಇಲ್ಲಿನದು. ಇಲ್ಲಿನ ಸಂಗ್ರಹಿತ ಮಾಹಿತಿಗಳನ್ನು ಇತರ ಗ್ರಂಥಗಳ ವಿವರಗಳೊಂದಿಗೆ ಅಲ್ಲಲ್ಲಿ ಬೇಕೆನಿಸಿದಾಗ ಹೋಲಿಸಿ ವಿವರಿಸಲಾಗಿದೆ. ಒಟ್ಟಾರೆ ಈ ಪ್ರಬಂಧ ಹೊನ್ನಾಳಿ ತಾಲ್ಲೂಕಿನ ಎರಡು ಗ್ರಾಮಗಳಿಗೆ ಮಾತ್ರ ಸೀಮಿತವಾಗಿರುವುದು ಅದರ ವ್ಯಾಪ್ತಿಯ ಮಿತಿಯನ್ನು ಸೂಚಿಸುತ್ತದೆ ಎಂದು ಹೇಳಬಯಸುತ್ತೇನೆ.

ಇಡೀ ಪ್ರಬಂಧದ ವರ್ಣ ಸಂಕರ ಮತ್ತು ತಾಯಿದೇವತೆಯ ಮೂಲ ಆಶಯವಾದ ಕರವಲ್ಯ ಫಲವಂತಿಕೆ ಮತ್ತು ರೋಗನಿವಾರಣೆಯ ದೃಷ್ಟಿಯಿಂದ ಚರ್ಚಿತವಾಗಿದ್ದು, ಇಲ್ಲಿ ಮಾರಿಯ ಸುತ್ತಲಿನ ಆಚರಣೆಯಲ್ಲಿರುವ ವರ್ಣ ಸಂಕರದ ಅಂಶಗಳನ್ನು ಒಡೆದು, ಅದರಾಚೆಗಿನ ಸಾಧ್ಯತೆಗಳನ್ನು ತಿಳಿಯಬಯಸಲಾಗಿದೆ. ಮಾತ್ರವಲ್ಲದೆ ಇದು ಪ್ರಬಂಧದ ಮುಖ್ಯ ಧೋರಣೆಯೂ ಕೂಡ ಆಗಿದೆ. ಇದುವರೆಗಿನ ಅಧ್ಯಯನಗಳು 'ವರ್ಣ ಸಂಘರ್ಷ' ದ ಕಥೆಯಾಗಿಯೇ ಈ ಹಬ್ಬವನ್ನು ಗ್ರಹಿಸಲು, ವಿವರಿಸಲು ಯತ್ನಿಸಿರುವುದರಿಂದ ಇಂತಹ ಭಿನ್ನವಾದ ವಿವರದ ಅಗತ್ಯತೆ ಮತ್ತು ಸಾಧ್ಯತೆಗಳನ್ನು ಗುರುತಿಸುವ ಪ್ರಯತ್ನವನ್ನು ಇಲ್ಲಿ ನಡೆಸಲಾಗಿದೆ.

ಪ್ರಬಂಧದ ಸ್ವರೂಪ ಮತ್ತು ಅಧ್ಯಯನದ ವಿಧಾನ:-

ಪ್ರಬಂಧ ಹಿಂದಿನ ಉದ್ದೇಶಕ್ಕನುಗುಣವಾಗಿ ಸಂಗ್ರಹಿತ ಮಾಹಿತಿಗಳನ್ನೊಳಗೊಂಡಿದ್ದು, ಅವನ್ನು ಅಧ್ಯಯನದ ಅನುಕೂಲತೆಗಾಗಿ ಪ್ರಧಾನವಾದ 5 ಮುಖ್ಯ ಭಾಗಗಳನ್ನೊಳಗೊಂಡಿದೆ. ಮೊದಲನೆಯ ಭಾಗ 'ಪೀಠಿಕೆ'ಯಾಗಿದ್ದು, ಇಲ್ಲಿ ಅಧ್ಯಯನದ ವಸ್ತು, ಉದ್ದೇಶ ಮತ್ತು ಪ್ರಬಂಧದ ವ್ಯಾಪ್ತಿಯನ್ನು ಕುರಿತ ಚರ್ಚೆಯಲ್ಲದೇ, ಪ್ರಬಂಧದ ಒಟ್ಟಾರೆ ಸ್ವರೂಪ ಮತ್ತು ಅಧ್ಯಯನಕ್ಕೆ ಅನುಸರಿಸಿದ ಅಧ್ಯಯನಕ್ಕೆ ಅನುಸರಿಸಿದ ಅಧ್ಯಯನ ವಿಧಾನವನ್ನೇ '<u>ಪ್ರಬಂಧದ ಸ್ವರೂಪ ಮತ್ತು ಅಧ್ಯಯನ ವಿಧಾನ</u>' ಎಂಬ ಭಾಗದಲ್ಲಿ ವಿವರಿಸಿದೆ. ಹಾಗೇ ಈ ಅಧ್ಯಯನದ ಕೊನೆಯಲ್ಲಿ ಇದುವರೆಗೆ ನಡೆದ 'ಮಾರಿ' ಬಗೆಗಿನ ಅಧ್ಯಯನಗಳ ಸಂಕ್ಷಿಪ್ತ ವರದಿಯನ್ನೇ ಸಿಕ್ಕಷ್ಟು ಮಾಹಿತಿಗಳ ಮಿತಿಯಲ್ಲಿ ಇದುವರೆಗಿನ ಅಧ್ಯಯನ ಸಮೀಕ್ಷೆ' ಎಂಬ ಭಾಗದಲ್ಲಿ ಚರ್ಚಿಸಿದೆ.

ಎರಡನೆಯ ಅಧ್ಯಾಯ 'ಹೆಣ್ಣುದೇವತಾರಾಧನೆ' ಯೆಂಬುದಾಗಿದ್ದು, ಹೆಣ್ಣು ದೇವತೆಯ ಕಲ್ಪನೆ ಮತ್ತು ಅದರ ಬೆಳವಣಿಗೆಯನ್ನು ಕುರಿತು ಚರ್ಚಿಸುವ 'ಹೆಣ್ಣುದೇವತೆಯ ಕಲ್ಪನೆ ಮತ್ತು ವಿಕಾಸ' ಎಂಬ ಭಾಗವನ್ನೂ, ಅದರ ಮುಂದುವರಿದ ಭಾಗಗಳಾಗಿ 'ಮಾರಿ, ಮಾರಮ್ಮ ಒಂದು ವಿವೇಚನೆ', 'ಮಾರಿವಿಧಗಳು' ಎಂಬ ಭಾಗಗಳನ್ನು ಒಳಗೊಂಡಿದೆ. ಇದೇ ಅಧ್ಯಾಯದಲ್ಲಿ 'ಮಾರಿಹಬ್ಬದ ಬಗೆಗಿನ ಐತಿಹ್ಯಗಳು' ಮತ್ತು 'ಅಸಾದಿ ಪದಗಳು' ಎಂಬ ಎರಡು ಭಾಗಗಳಿದ್ದು, ಹಬ್ಬಕ್ಕೆ ಸಂಬಂಧಿಸಿದ ಐತಿಹ್ಯ ಮತ್ತು ಪದಗಳ ಸಂಗ್ರಹವನ್ನೊಳಗೊಂಡಿದೆ.

ಮಾರಿ ಹಬ್ಬದ ಆಚರಣೆ ಮತ್ತು ಸಂಪ್ರದಾಯಗಳು ಎಂಬ ಮೂರನೆಯ ವಿಭಾಗ 'ವಿಗ್ರಹ ಕೆತ್ತನೆ' ಎಂಬ ವಿಶೇಷ ಭಾಗವನ್ನು ಹೊಂದಿದ್ದು, ಇಲ್ಲಿ ಮಾರಿ ವಿಗ್ರಹ ಕೆತ್ತುವಾಗಿನ ವಿಧಿವಿಧಾನಗಳನ್ನು ಒಳಗೊಂಡಿದೆ. ಇದು ಪ್ರಬಂಧ ಚರ್ಚಿಸಿರುವ 'ಊರು ಮಾರಿ' ಹಬ್ಬದಲ್ಲಿ ಪ್ರತೀ ಬಾರಿ ಕಾಣ ಸಿಗದಿದ್ದುದರಿಂದ ಅವನ್ನು ಈ ಅಧ್ಯಾಯದಲ್ಲಿ ಪ್ರತ್ಯೇಕವಾಗಿ ಹೇಳಲಾಗಿದೆ. ಉಳಿದಂತೆ ಈ ಅಧ್ಯಾಯ ಮಾರಿ ಹಬ್ಬದ ಆಚರಣೆಗಳನ್ನು 'ಹಬ್ಬದ ಪೂರ್ವಭಾವಿ ತಯಾರಿ', ಹಬ್ಬದ ಆರಂಭದ ವಿವರ, 'ಬಲಿ ಸಂದರ್ಭದ ವಿವರಗಳು', 'ಹಬ್ಬದ ಮುಕ್ತಾಯದ ವಿವರ' ಹೀಗೆ ನಾಲ್ಕು ವಿಭಾಗಗಳಲ್ಲೂ ವಿಧಾನಗಳನ್ನು ಒಳಗೊಂಡಿದೆ.

ನಾಲ್ಕನೆಯ ಅಧ್ಯಾಯವು ಪ್ರಬಂಧದ ಮುಖ್ಯ ಭಾಗವಾದ ತಾತ್ವಿಕ ಚರ್ಚೆಯನ್ನೊಳಗೊಂಡಿದ್ದು ಇಲ್ಲಿ '<u>ಶಕ್ತಿ ದೇವತೆಯಾಗಿ ಮತ್ತು ಫಲವಂತಿಕೆಯ ಚಿನ್ಹೆಯಲ್ಲಿ</u>' ಎಂಬ ಭಾಗದಲ್ಲಿ ಆ ಕುರಿತ ಚರ್ಚೆಯನ್ನು ಹಬ್ಬದ ಜಾತ್ರೆಗಾಗಿ ವಿಷಯಗಳ ಹಾಗೂ ಅವುಗಳ ಆಶಯದ ಮೂಲಕ ಚರ್ಚಿಸಲಾಗಿದ್ದು ಮಾರಿಯ ಮೂಲವನ್ನು ವರ್ಣಸಂಕರದ ಆಶಯಕ್ಕೆ ಭಿನ್ನವಾದ ರೀತಿಯಲ್ಲಿ ಗ್ರಹಿಸಲು ಪ್ರಯತ್ನಿಸಲಾಗಿದೆ. ಎರಡನೆಯ ಭಾಗವಾದ 'ವರ್ಣಸಂಕರದ ಚಿನ್ಹೆಯಲ್ಲಿ' ಎಂಬ ಭಾಗದಲ್ಲಿ 'ಮಾರಿಹಬ್ಬದ' ಆಚರಣೆ ಹಾಗೂ ಐತಿಹ್ಯಗಳ ಸಹಾಯದಿಂದ ಹಬ್ಬದ ಆಶಯವನ್ನು ವರ್ಣ ವಿದ್ವೇಷದ ಚಿನ್ಹೆಯಲ್ಲಿ ಚರ್ಚಿಸಲಾಗಿದ್ದು, ಈ ಆಶಯ ಹೇಗೆ ಇತ್ತೀಚೆಗೆ ಮಾರಿದೇವತೆಗೆ ಅಂಟಿಸಲಾಗಿದೆ ಎಂಬ ವಿಷಯವನ್ನು ಚರ್ಚಿಸಲಾಗಿದೆ.?

ಐದನೆಯ ಅಧ್ಯಾಯವಾದ '<u>ಉಪಸಂಹಾರ</u>' ದಲ್ಲಿ ಮಾರಿಹಬ್ಬದ ಪ್ರಬಂಧದ ಒಟ್ಟಾರೆ ಚರ್ಚೆಯಿಂದ ಫಲಿತ ವಿಷಯವನ್ನು ಮಂಡಿಸಲು ಉಪಯೋಗಿಸಲಾಗಿದೆ.

ಕೊನೆಯಲ್ಲಿ ವಕ್ತೃಗಳ, ಆಧಾರ ಮತ್ತು ಸಹಾಯಕ ಗ್ರಂಥಗಳ ಉಲ್ಲೇಖವಿದ್ದು ಇದರೊಂದಿಗೆ ಪ್ರಬಂಧ ಮುಕ್ತಾಯವಾಗಿದೆ.

<u>ಅಧ್ಯಯನ ವಿಧಾನ</u>:-

ಈ ಪ್ರಬಂಧ ರಚನೆಯಲ್ಲಿ ಸಹಭಾಗೀ ಅಧ್ಯಯನ ಮತ್ತು ಅವಲೋಕನ ವಿಧಾನದಲ್ಲಿ ಮಾಹಿತಿಗಳನ್ನು ಸಂಗ್ರಹಿಸಿದ್ದು ಅವಶ್ಯವೆಂದು ಕಂಡಲ್ಲಿ ಹೆಚ್ಚಿನ ಮಾಹಿತಿಗಾಗಿ ಪ್ರಶ್ನಾವಳಿ ಮೂಲಕ ಸಂದರ್ಶನದ ವಿಧಾನವನ್ನು ಅನುಸರಿಸಲಾಗಿದೆ. ಹೀಗೆ ಹಬ್ಬದ ಆಚರಣೆಗಳಲ್ಲಿ ನೇರವಾಗಿ ಪಾಲ್ಗೊಂಡು, ಕಲವೊಮ್ಮೆ ದೂರ ಅಂತರದಲ್ಲಿ ಅವನ್ನು ವೀಕ್ಷಿಸಿ ಜೊತೆಗೆ ಹಬ್ಬದಲ್ಲಿನ ಪ್ರಮುಖರನ್ನು ಸಂದರ್ಶಿಸಿ ವಿಷಯ ಸಂಗ್ರಹಿಸಲಾಗಿದ್ದು ಆ ವಿಷಯಗಳನ್ನು ವೈಚಾರಿಕವಾಗಿ ವಿಶ್ಲೇಷಿಸಲಾಗಿದೆ. ಅನೇಕ ಗ್ರಂಥಗಳ, ವಿದ್ವಾಂಸರ ಅನಿಸಿಕೆಗಳೊಂದಿಗೆ ಈ ಸಂಗ್ರಹಿತ ಮಾಹಿತಿಗಳನ್ನಿಟ್ಟು ವಿವೇಚಿಸಲಾಗಿದೆ.

<u>**ಮಾರಿ ಹಬ್ಬದ ಅಧ್ಯಯನಗಳ ಸಮೀಕ್ಷೆ**</u> :-

ಮಾರಿ ಹಬ್ಬದ ಬಗ್ಗೆ ಈವರೆಗೆ ಸಾಕಷ್ಟು ಅಧ್ಯಯನ ನಡೆದಿದೆ. ಅನೇಕ ವಿದೇಶೀಯ ಮತ್ತು ದೇಶೀಯ ವಿದ್ವಾಂಸರೂ ಈ ಬಗ್ಗೆ ಮಾಹಿತಿ ನೀಡಿದ್ದಾರೆ. ಪ್ರಧಾನವಾದ ಅಧ್ಯಯನವಸ್ತುವಾಗಿ ಯಲ್ಲದಿದ್ದರೂ, ಸಂದರ್ಭಾನುಸಾರವಾಗಿ ಈ ಬಗ್ಗೆ ಮಾಹಿತಿ ನೀಡಿದ್ದಾರೆ.

Edger Thurston ಅವರು ತಮ್ಮ ' The Caste and Tribes of S. India ' ಎಂಬ ಏಳು ಸಂಪುಟಗಳಲ್ಲಿ ಅಲ್ಲಲ್ಲಿ ಅಮ್ಮನ ಆರಾಧನೆಯನ್ನು ಕುರಿತ ಮಾಹಿತಿಯನ್ನು ಕುರುಬ, ಮಾದಿಗ ಮೊದಲಾದ ಜನರ ಆಚರಣೆ ದೈವಾರಾಧನೆ ಬಗ್ಗೆ ಹೇಳುವಾಗ ನೀಡಿದ್ದಾರೆ. ಆದರೆ ಅದೇನೂ ವಿವರವಾದ ಅಧ್ಯಯನದ ಮಾಹಿತಿಯಲ್ಲವಾದ್ದರಿಂದ ಹಾಗೂ ಅದು ಕೇವಲ ಸಂದರ್ಭದ ಸಂಕ್ಷಿಪ್ತ ವಿವರ ಮಾತ್ರವಾಗಿದೆ.

ಮೊಟ್ಟ ಮೊದಲು ದಕ್ಷಿಣಭಾರತದ ಗ್ರಾಮದೇವತೆಗಳ ಬಗ್ಗೆ ವಿವರವಾದ ಅಧ್ಯಯನ ಕೈಗೊಂಡ Henry Whetehead ಅವರು ತಮ್ಮ ' The Village Gods of South India ' ಎಂಬ ಕೃತಿಯಲ್ಲಿ ಮಾತೃದೇವತೆಗಳ ಬಗ್ಗೆ ವಿವರವಾಗಿ ಪ್ರಸ್ತಾಪಿಸುತ್ತಾರೆ. ಅಲ್ಲಿ ಮಾರಮ್ಮನ ಪ್ರಸ್ತಾಪವಿದೆಯಾದರೂ ಅದೂ ಕೂಡ ' ಮಾರಿ ' ಕುರಿತ ಮಹತ್ವದ ಅಧ್ಯಯನದಲ್ಲ ಎನ್ನಬಹುದು.

D. D. Kosambi ಅವರು ತಮ್ಮ ' The culture and civilization of Ancient India in historical out lines ಎಂಬ ಕೃತಿಯಲ್ಲಿ ಮಾತೃದೇವತೆಗಳ ಆರಾಧನೆ ಬೆಳೆದು ಬಂದ ರೀತಿಯನ್ನು ಕುರಿತು ಚರ್ಚಿಸುತ್ತಾರೆ.

Gertrude Jobes ಎಂಬ ವಿದ್ವಾಂಸರು ತಮ್ಮ 'Dictionary of mythology folklore' — ಎಂಬ ಕೃತಿಯಲ್ಲಿ MAREMMA MARAIAMMA MARIMATHA ಮೊದಲಾದ ದೈವಗಳನ್ನ ರೋಗ ದೇವತೆಯಾಗಿ, ರೋಗನಿವಾರಣೆಯ ದೇವತೆಯಾಗಿ ಅರ್ಥೈಸಿದ್ದಾರೆ. ಅವರು MAREMMA ವನ್ನು A wild and swampy region, especially one noted for malaria --- ಎಂದು ಹೇಳುತ್ತಾರಲ್ಲದೆ, MARIAMMA ಎಂಬ ಪದಕ್ಕೆ A goddess worshiped near madras ಎಂದೂ A malignant disease bringer ಎಂದು ಅರ್ಥೈಸಿ ಮಾರಿಯನ್ನು ರೋಗ ದೇವತೆಯಾಗಿ ಅರ್ಥೈಸಿದ್ದಾನೆ. ಇದು ಯಾವುದೇ ರೀತಿಯ 'ಮಾರಿ' ಕುರಿತ ವಿವರವಾದ ಅಧ್ಯಯನವಲ್ಲ.

M.A.Sherring ಎಂಬ ವಿದ್ವಾಂಸರು ತಮ್ಮ 'Hindu Tribes & Castes' ಎಂಬ ಗ್ರಂಥದ ಎರಡನೆಯ ಸಂಪುಟದಲ್ಲಿ ಬೆಟ್ಟ ಕುರುಬರ ಬಗ್ಗೆ ಹೇಳುತ್ತ, ಅವರಲ್ಲಿ ಆರಾಧನೆಯಲ್ಲದೆ ಕುಲದೇವರು, ಅಥವ 'ಎನೆ ಹೊಂಬ ದೇವರು' ಪೂಜೆಯ ಬಗ್ಗೆ ಹೇಳುತ್ತಾರೆ. ಕೇಲು ಪೂಜೆ ಅಮ್ಮನ ಆರಾಧನೆಯ ಮೂಲ ರೂಪವೇ ಆಗಿದ್ದು, ಈ ಪೂಜೆಯೂ ಕೂಡ ಮಾರಿ ಅಥವಾ ಅಮ್ಮನ ಪೂಜೆಯೇ ಎನ್ನಬಹುದಾದರೂ ಅಲ್ಲಿ ಆ ಬಗ್ಗೆ ವಿವರವಾದ ಚರ್ಚೆಯಿಲ್ಲ. ಕನ್ನಡದಲ್ಲೂ ಸಾಕಷ್ಟು ಅಧ್ಯಯನಗಳು ನಡೆದಿವೆ. ಗ್ರಾಮದೇವತಾರಾಧನೆಯ ಬಗ್ಗೆ ನಡೆದ ಅಧ್ಯಯನಗಳಲ್ಲಿ ಈ ಬಗ್ಗೆ ವಿವರಿಸಿವೆ.

ಡಾ. ಸಿದ್ಧಲಿಂಗಯ್ಯನವರೂ 'ಗ್ರಾಮದೇವತೆಗಳು' ಎಂಬ ತಮ್ಮ ಪ್ರೌಢ ಪ್ರಬಂಧದಲ್ಲಿ ಹೊಂಬಗ್ರಾಮ ದೇವತೆಗಳ ಬಗ್ಗೆ ವಿವರಿಸುತ್ತಾರಲ್ಲದೆ ಇಲ್ಲಿ ಮಾರಿಯ ಆರಾಧನೆ ಬಗ್ಗೆ ವಿವರ ನೀಡುತ್ತ, ವರ್ಣಸಂಕರದ ಆಶಯದ ಹಿನ್ನೆಲೆಯಲ್ಲಿ ಇದನ್ನು ಅರ್ಥೈಸಲು ಪ್ರಯತ್ನ ಪಟ್ಟಿದ್ದಾರೆ.

'ಬನ್ನಿಬ್ಬಾಲಕಾರ' ರೂ ತಮ್ಮ ಪ್ರೌಢ ಪ್ರಬಂಧದಲ್ಲಿಯೂ ಮಾರಿಯ ಬಗೆಗೆ ವಿವರವಾಗಿ ಚರ್ಚಿಸಿದ್ದಾರೆ. ಆದರೆ ಮಾರಿಯ ಸಂಪ್ರದಾಯವನ್ನು ವರ್ಣ ಪ್ರಜ್ಞೆಯ ಹಿನ್ನೆಲೆಯ ಅನಿಷ್ಟಕರ ಬೆಳವಣಿಗೆಯಾಗಿ ಗ್ರಹಿಸಿದಂತೆ ತೋರುತ್ತದೆಯಾದರೂ, 'ಮಾರಿ'ಯ ಪೂರ್ವಸ್ಥಿತಿಯ ಭಿನ್ನ ಆಶಯವನ್ನು ಗುರುತಿಸಲು ಅಷ್ಟಾಗಿ ಪ್ರಯತ್ನಿಸಿಲ್ಲವೆನ್ನಬಹುದು.

ಡಾ. ಬಸವರಾಜ ನೆಲ್ಲಿಸರ ಅವರು ತಮ್ಮ ಶಿವಮೊಗ್ಗ ಜಿಲ್ಲೆಯ ಗ್ರಾಮದೇವತೆಗಳ ಬಗೆಗಿನ ಅಧ್ಯಯನ ಪ್ರಬಂಧದಲ್ಲಿ ಅಕ್ಕವಳ್ಳಿ ಮಾರಮ್ಮ, ಅರಕೆರೆ ಮಾರಿ ಮೊದಲಾದ ಮಾರಿ ದೇವತಾರಾಧನೆಯ ಬಗೆಗಿನ ವಿವರಣೆಗಳನ್ನು ಕೊಟ್ಟಿದ್ದಾರೆ. ಈ ಅಧ್ಯಯನ ಕೇವಲ ಸಾಂಸ್ಕೃತಿಕ ಅಧ್ಯಯನ ಮಾತ್ರವಾಗಿದ್ದು, ಸಂಗ್ರಹವನ್ನೊಳಗೊ

ಇವಲ್ಲದೇ ಅನೇಕ ಬಿಡಿ ಲೇಖನ ಹಾಗೂ ವಿಚಾರ ಸಂಕಿರಣದ ಬರಹಗಳೂ, ಕೃತಿಗಳೂ ರಚಿತವಾಗಿವೆ.

'ಕರ್ನಾಟಕ ಜಾನಪದ ಟ್ರಸ್ಟ್' ಮೂಲಕ ಎಚ್.ಎಲ್. ನಾಗೇಗೌಡರು ಹೊರತರುವ 'ಜಾನಪದ ಜಗತ್ತು' ಎಂಬ ಪತ್ರಿಕೆಯ ಸಂಪುಟ 17, ಸಂಚಿಕೆ : ೭ನ್ನು ಮಾರಿ ಆರಾಧನೆಗೇ ಮೀಸಲಾಗಿ ಪ್ರಕಟಿಸಿದ್ದಾರೆ. ಇಲ್ಲಿ 'ಮಾರಿ' ಪದದುತ್ಪತ್ತಿ, ಆರಾಧನೆಯ ಸ್ವರೂಪಗಳು, ಮೊದಲಾದ ವಿವರಗಳ ಬಗೆಗೆ ಅನೇಕ ವಿದ್ವಾಂಸರು ಲೇಖನ ಬರೆದಿದ್ದಾರೆ. ಅಲ್ಲದೆ ಎಚ್.ಎಲ್. ನಾಗೇಗೌಡರೇ ಪ್ರತ್ಯೇಕವಾಗಿ 'ಗ್ರಾಮದೇವತೆ' ಮಾರಮ್ಮ ಎಂಬ ಪ ಪುಸ್ತಕವನ್ನು ಸಂಪಾದಿಸಿ ಕೊಟ್ಟಿದ್ದಾರೆ. ಇದರಲ್ಲಿ ಮಾರಿ ಹಬ್ಬದ ಬಗೆಗಿನ — ದೀರ್ಘವಾದ ಕಥೆಯೊಂದನ್ನು ಇಡೀ ಪುಸ್ತಕವಾಗಿ ಸಂಪಾದಿಸಿ ಕೊಡಲಾಗಿದೆ. ಇದರಲ್ಲಿ ವೈಚಾರಿಕ ಚರ್ಚೆಯನ್ನೇನೂ ಒಳಗೊಂಡಿಲ್ಲ.

ಧಾರವಾಡದ ಕರ್ನಾಟಕ ವಿಶ್ವ ವಿದ್ಯಾಲಯದ ಕನ್ನಡ ಅಧ್ಯಯನ ಪೀಠವು 1991ರಲ್ಲಿ ಅಂಕೋಲೆಯಲ್ಲಿ ನಡೆದ ಎಂಟನೆಯ ಅಖಿಲ ಕರ್ನಾಟಕ ಜಾನಪದ ಸಮ್ಮೇಳನದಲ್ಲಿ ಮಂಡಿತವಾದ ಪ್ರಬಂಧಗಳನ್ನು ಡಾ.ಎಂ.ಬಿ. ಕೊಟ್ರಶೆಟ್ಟಿಯವರ ಸಂಪಾದನೆಯಲ್ಲಿ ಪ್ರಕಟಿಸಿದೆ. ಇಲ್ಲಿ ಸಿದ್ಧಲಿಂಗಯ್ಯ, ಸೋಮಶೇಖರ ಇಮ್ರಾಪುರ,

ಡಾ: ಎನ್.ಆರ್. ನಾಯಕ ಮೊದಲಾದ ವಿದ್ವಾಂಸರು ಮಾರಿದೇವತೆಯ ಆರಾಧನೆಗಳ ಬಗ್ಗೆ ಅನೇಕ ಪ್ರಬಂಧಗಳನ್ನು ಬರೆದಿದ್ದಾರೆ. ಈ ಗ್ರಂಥ 'ಗ್ರಾಮದೇವತೆಗಳ' ಆರಾಧನೆಗೆ ಸಂಬಂಧಿಸಿದ್ದಾಗಿದೆ. ಹಂಪಿಯ ಕನ್ನಡ ವಿಶ್ವ ವಿದ್ಯಾನಿಲಯವು ಕರ್ನಾಟಕ ಗ್ರಾಮದೇವತೆಗಳ ಬಗ್ಗೆ ಅಧ್ಯಯನ ನಡೆಸಿದೆಯಾದರೂ — ಅಧ್ಯಯನ ಪ್ರಕಟಗೊಂಡಿಲ್ಲ.

ಎಸ್.ಎಸ್. ಹಿರೇಮಠರು 'ಕರ್ನಾಟಕ ಪರಂಪರೆ' ಮಾಲಿಕೆಯಲ್ಲಿ 'ಜಾತ್ರೆಗಳು' ಎಂಬ ೭ನೇ ಭಾಗವನ್ನು ಮಾತೃದೇವತಾರಾಧನೆಯ ಪರಂಪರೆ ಅಧ್ಯಯನಕ್ಕೆ ಮೀಸಲಿರಿಸಿ ಬರೆದಿದ್ದಾರೆ. ಇದರಲ್ಲಿ 'ಅಮ್ಮ' ಮತ್ತು 'ಮಾರಿ' ದೇವತೆಗಳ ಪರಂಪರೆಯನ್ನು ವಿಭಿನ್ನ ಮಾಹಿತಿಗಳ ಮೂಲಕ, ಅಧ್ಯಯನ ಮಾಡಲು ಪ್ರಯತ್ನಿಸಿದ್ದಾರೆ. ಮಾರಮ್ಮನನ್ನು ಊರಮ್ಮ ಮತ್ತು ಮಾರಮ್ಮನಾಗಿಯೂ, ಅಲೆಮಾರಿ ಪಶುಪಾಲಕ ಹಾಗೂ ಕೃಷಿಕ ನೆಲೆನಿಂತ ದ್ರಾವಿಡ ವರ್ಗಗಳ ದೇವತೆಗಳಾಗಿ ಅವುಗಳ ಸಮ್ಮಿಶ್ರ ಆಯಾಮಗಳ ಪ್ರತಿರೂಪವಾಗಿ ಇಂದಿನ ಆಚರಣೆಯನ್ನು ಗ್ರಹಿಸಲು ಪ್ರಯತ್ನಿಸಿದ್ದಾರೆ. ಅಲ್ಲದೆ 'ಮಾರಿ' ಆಚರಣೆಯ ಮೂಲವನ್ನು ರಕ್ಷಣೆಯ, ಫಲವಂತಿಕೆಯ ಹೊಲೆ ಮಾದಿಗರ ದೇವತೆಯಾಗಿ ಅರ್ಥೈಸಲು, ವರ್ಣ ಸಂಕರದ ಆಶಯವನ್ನು ಪಡೆದು ನೋಡಲಾಗಿದೆ.

ಇವಲ್ಲದೆ ಅನೇಕ ಗ್ರಂಥಗಳಲ್ಲಿ ಅಲ್ಲಲ್ಲಿ ಬಿಡಿ ಲೇಖನಗಳೂ ಪ್ರಕಟವಾಗಿವೆ. ಜಾನಪದ 1993 ಎಂಬ ಕೃತಿಯನ್ನು ಕರ್ನಾಟಕ ಜಾನಪದ ಮತ್ತು ಯಕಗಾನ ಅಕಾಡೆಮಿ ರಂಗಾರೆಡ್ಡಿ ಕೋಡಿ ರಾಂಪುರ ಅವರ ಸಂಪಾದಕತ್ವದಲ್ಲಿ ಪ್ರಕಟಗೊಳಿಸಿದ್ದು, ಇದರಲ್ಲಿ ಡಾ: ರಹಮತ ತರೀಕೆರೆಯವರು 'ಗ್ರಾಮ ದೇವತೆಗಳು ಹಾಗೂ ಊರೊಟ್ಟಿಗಿನ ಸಂಬಂಧಗಳು' ಎಂಬ ಲೇಖನದಲ್ಲಿ ಮಾರಿ ಆರಾಧನೆಯ ಆಯಾಮವನ್ನು ಕುರಿತು ಚರ್ಚಿಸಿದ್ದು ಇಲ್ಲಿಯೂ 'ವರ್ಣಸಂಕರ'ದ ಆಶಯವನ್ನೇ ಪ್ರಮುಖವಾಗಿ ಗಮನಿಸಲಾಗಿದೆ.

'ಬಂಡಾಯ ಜಾನಪದ' ಎಂಬ ತಮ್ಮ ಕೃತಿಯಲ್ಲಿ ರಂಗಾರೆಡ್ಡಿ ಕೋಡಿ ರಾಂಪುರ ಅವರೂ 'ಜಾನಪದದ ಮೇಲೆ ಆಧುನಿಕತೆಯ ಪ್ರಭಾವ' ಎಂಬ ಲೇಖನದಲ್ಲಿ ಮಾರಿ ಬಗೆಗೆ ಪ್ರಸ್ತಾಪ ಮಾಡಿದ್ದಾರೆ.

ಇತ್ತೀಚೆಗೆ 1998ರಲ್ಲಿ ಹಂಪಿಯ ಕನ್ನಡ ವಿಶ್ವ ವಿದ್ಯಾಲಯದ ಪ್ರೊ. ಹಿ.ಚಿ.ಬೋರಲಿಂಗಯ್ಯನವರ ಸಂಪಾದನೆಯಲ್ಲಿ ಹೊರತಂದಿರುವ 'ಕರ್ನಾಟಕ ಜನಪದಗಳ ಕಲೆಗಳ ಕೋಶ'ದಲ್ಲಿಯೂ ಕೂಡ ಮಾರಿ ಯಾರಾಧನೆಗೆ ಸಂಬಂಧ ಪಟ್ಟ ವಿವರಗಳಿವೆ.

ಒಟ್ಟಾರೆ 'ಮಾರಿ ದೇವತೆಯ ಬಗೆಗೆ ಸಾಕಷ್ಟು ಅಧ್ಯಯನಗಳು ನಡೆದಿವೆ. ಈ ಮಾಹಿತಿಗಳು ಕೆಲವು ಮಾತ್ರವಾಗಿವೆ.

ಅಧ್ಯಾಯ : ೨

11. ಹೆಣ್ಣು ದೇವತಾರಾಧನೆ :-

11.1 ಹೆಣ್ಣು ದೇವತೆಂಬ ಕಲ್ಪನೆ ಮತ್ತು ವಿಕಾಸ,

11.2 ಮಾರಿ, ಮಾರಿಯಮ್ಮ ಒಂದು ವಿವೇಚನೆ,

11.3 'ಮಾರಿ' ವಿಧಗಳು,

11.4 ಮಾರಿಹಬ್ಬದ ಬಗೆಗಿನ ಐತಿಹ್ಯಗಳು,

11.5 ಆಸಾದಿ ಪದಗಳು.

ಪ್ರಾಣ್ಯ ದೇವತಾರಾಧನೆ :—

1.1. 'ಪ್ರಾಣ್ಯ ದೇವತೆಯ' ಕಲ್ಪನೆ ಮತ್ತು ವಿಕಾಸ:

ಸಮಾಜ ಅಥವಾ ಸಂಸ್ಕೃತಿ ಬೆಳೆದ ಮೊದಲಲ್ಲಿ ಮನುಷ್ಯ ಜೀವಿ ಯಾವುದೇ ನಿಯಂತ್ರಿತ, ನಿರ್ದಿಷ್ಟ ಸ್ಥಳವನ್ನು ಮತ್ತು ಕ್ರಮವನ್ನು ತನ್ನ ನೆಲೆ ಮತ್ತು ಜೀವನಕ್ಕೆ ಅನ್ವಯಿಸಿಕೊಂಡಿರಲಿಲ್ಲ ಎಂಬುದು ಎಲ್ಲರೂ ಒಪ್ಪಬಹುದಾದ ಸಾಮಾನ್ಯ ಸಂಗತಿ. ಪ್ರಕೃತಿಯ ಸಹಜ ಸನ್ನಿವೇಶಗಳಿಂದ ಭಯ, ಅವುಗಳ ಪರಿಸರಗಳೊಂದಿಗೆ ತನ್ನ ಬದುಕನ್ನು ನಿರ್ವಹಿಸಿಕೊಂಡ ಅವನ ಆರಂಭಿಕ ಪ್ರಯತ್ನ ಮತ್ತು ಹೋರಾಟಗಳು ಅವನ ಮುಂದಿನ ಅನೇಕಾನೇಕ ಆಲೋಚನೆ ಮತ್ತು ಅನ್ವೇಷಣೆಗಳಿಗೆ ದಾರಿ ಮಾಡಿಕೊಟ್ಟವು. ಪ್ರಕೃತಿಯ ರುದ್ರಭೀಕರ ಮತ್ತು ರಮ್ಯ ಕ್ರಿಯೆಗಳ ಸಹಜ ಸೃಷ್ಟಿ ಮತ್ತು ನಿರ್ವಹಣೆ ಇವೆಲ್ಲ ಆಶ್ಚರ್ಯ, ಕುತೂಹಲ, ಭಯ ಮಿಶ್ರಿತವಾದ ಭಾವನೆಗಳನ್ನು ಹುಟ್ಟು ಹಾಕಿರಬಹುದಲ್ಲದೆ ಅವೆಲ್ಲವುಗಳ ಹಿಂದೆ ಯಾವುದೋ ಒಂದು ಅತ್ಯದ್ಭುತ, ಸರ್ವಶಕ್ತ ಶಕ್ತಿಯಿರಬೇಕೆಂಬ ನಿಲುವು ಮೂಡಿಸಿರಬೇಕು ಇವೆಲ್ಲ ಆತ ಕಾರ್ಯ—ಕಾರಣ ಸಂಬಂಧವನ್ನು ಕಲ್ಪಿಸಿ ಚಿಂತಿಸುವ ಎಷ್ಟೋ ಹಿಂದೆ ನಡೆದಿರಬಹುದಾದ ಸಂಗತಿ. ಹೀಗೆ ಚಿಂತಿಸಿದ ಮನಸ್ಸು, ದಿಢೀರೆಂದು ನಡೆಯುವ ಪ್ರಕೃತಿಯ ಅದೆಷ್ಟೋ ಸನ್ನಿವೇಶಗಳ ಹಿಂದೆ ಇದೆಯೆಂದು ತಾನು ಕಲ್ಪಿಸಿಕೊಂಡ ಆ ಅಗೋಚರ ಶಕ್ತಿಯನ್ನು ಎಲ್ಲಕ್ಕಿಂತಲೂ ದೊಡ್ಡದೆಂದೇ ಆತ ಭಾವಿಸಿದ. ಅದನ್ನು ತೃಪ್ತಿಪಡಿಸುವ ಮೂಲಕ ತನ್ನನ್ನು ತಾನು ರಕ್ಷಿಸಿಕೊಳ್ಳಬಹುದೆಂಬ ನಂಬಿಕೆಯನ್ನು ಹುಟ್ಟಿಸಿಕೊಂಡ: ಇದು ತನ್ನ ಅನುಭವದ ಸಹಜತೆಯಿಂದ ಪ್ರೇರೇಪಿತವಾದದ್ದು. ಆದ್ದರಿಂದ ತನ್ನ ಆಹಾರ ಪದ್ಧತಿಯನ್ನೇ ದೇವರ ತೃಪ್ತಿಯ ಸಾಧನವಾಗಿ ಆರೋಪಿಸಿಕೊಂಡು ಬಂದಿರಬೇಕು. ಇನ್ನಲ್ಲ 'ಆಹಾರ'ವನ್ನು ತೃಪ್ತಿಪಡಿಸುವ ವಸ್ತುವಾಗಿ ಕಂಡ ಮಾನವಅಥವಾ ಜೀವಿಯಸಹಜ ಮಿತಿ ಇದೆ.

ಹೀಗೆ ಪರಿಸರದ ಘಟನಾವಳಿಗಳ ಸೃಷ್ಟಿ ಮೂಲವನ್ನು ದೈವವೆಂದೇ ನಂಬಿದ ಈತ — ಅವರ ವಸ್ತು ವಿಶೇಷಗಳನ್ನು ತನ್ನ ಹಾಗೂ ತನ್ನಂತೆಯೇ ಇರುವ ಇತರೆ ಪ್ರಾಣಿ ಸಸ್ಯಾದಿಗಳ, ಜೀವಕೋಟಿಗಳ ಸೃಷ್ಟಿಯೂ ಆ ಅಜ್ಞಾತ ಶಕ್ತಿಯಿಂದಲೇ ನಡೆಯುತ್ತದೆಂದು ಭಾವಿಸಿ ಆರಾಧಿಸತೊಡಗಿದ. ಈ ಸಂದರ್ಭದಲ್ಲಿ ತಾನು ಕಲ್ಪಿಸಿದ ಆ ಶಕ್ತಿಯನ್ನು ಗಂಡೆಂದಾಗಲೀ—ಹೆಣ್ಣೆಂದಾಗಲೀ ಸ್ಪಷ್ಟವಾಗಿ ವಿಭಾಗಿಸಲು ಅರಿತಿರಲಾರ. ಒಟ್ಟಾರೆ ಆ 'ಶಕ್ತಿ'ಯಾಗಿ ಆ ಘಳಿಗೆಯಲ್ಲಿ ಆತನಿಗೆ ತೋಚಿದ್ದನ್ನು ಪೂಜಿಸಿರಬೇಕು. ಬೇಟೆಯಾಡುತ್ತಾ, ತನಗಾದ ನೋವು, ಸಾವಿನ ಸಂದರ್ಭ, ಗಾಯ, ಕಾಯಿಲೆ — ಇವುಗಳಿಗೆ ತನಗೆ ಸಿಕ್ಕ ಗಿಡ—ಗಂಟಿ, ಮರದ ತೊಗಟೆ ಮಣ್ಣುಗಳನ್ನು ಮದ್ದಾಗಿ ಕಂಡುಕೊಂಡು ಅವನ್ನು '<u>ರಕ್ಷಕ ಶಕ್ತಿ</u>'ಯಾಗಿ ಪೂಜಿಸತೊಡಗಿರಬೇಕು.

ಈ ದಿನಗಳಲ್ಲೆಲ್ಲ ತಾನು ಆಹಾರಕ್ಕೆ ಬೇಟೆ ಅಂದರೆ ಮಾಂಸ, ಸಸ್ಯಗಳೆರಡನ್ನೂ ಬಳಸುತ್ತಾ, ಆಯಾ ಸನ್ನಿವೇಶ, ಪ್ರದೇಶದಲ್ಲಿ ದೊರೆಯುವ ಒಳ್ಳೆಯ ರುಚಿಯಾದದ್ದನ್ನು ಪ್ರಮುಖ ಆಹಾರವಾಗಿ ಬಳಸುತ್ತಾ ಸಾಗುತ್ತಿದ್ದನೆನ್ನಬಹುದು. ಆದರೆ ಅವರಿಗೆ ಆಗ ಯಾವುದೇ ಒಂದು ಜೀವನಾಂತ್ಯದವರೆಗಿನ ನಿರ್ದಿಷ್ಟ ವಾಸ ಸಾಧನವಿರಲಿಲ್ಲ. ಹೀಗಿರುತ್ತಲೇ ಸಂತಾನ ಕ್ರಿಯೆಯ ಅದ್ಭುತ, ಹೆರುವ ಅಂದರೆ ಸೃಷ್ಟಿಸುವ ಹೆಣ್ಣು ಜೀವಿಯ ಶಕ್ತಿಯ ಬಗ್ಗೆ ಅವನಿಗೆ ಆಶ್ಚರ್ಯ ಮೂಡಿರಬೇಕು. ಸೃಷ್ಟಿಯ ಮೂಲವನ್ನು ದೈವವೆಂದು ಆರಾಧಿಸುತ್ತಿದ್ದ ಅವನಿಗೆ ಹೆಣ್ಣು ಆ ರೂಪವಾಗಿ ಕಾಣತೊಡಗಿರಬೇಕು. ಆದರೆ ಅದೇ ಸತ್ಯವೆನ್ನಲಾಗದು.

ಕೃಷಿಯ ಮಹತ್ವವರಿತು ಕಥೆ ಕೆಲವಾರು ಕಾಲ ನೆನಪಿನಲ್ಲಿರುವಂತೆ, ಸಸ್ಯದ ಬೆಳವಣಿಗೆ, ಪ್ರಾಣಿಗಳ ಜೊತೆಗಿನ ಸಂಪರ್ಕವುಳ್ಳದ್ದರಿಂದಾಗಿಯೇ ಕೃಷಿಯು ಆರಂಭವಾಗಿರಬೇಕು. ಪ್ರಾಣಿ ಸಾಕಣೆ ಮತ್ತು ಸಸ್ಯ ಬೆಳೆಸುವ ಕ್ರಿಯೆಗಳಲ್ಲಿ ಯಾವುದು ಮೊದಲೆಂದು ನಿಖರವಾಗಿ ಹೇಳಲಾಗುವುದಿಲ್ಲ. ಏಕೆಂದರೆ ಮಾನವನ ಗುಂಪು ಎಲ್ಲಿಯೋ ಒಂದೇ ಕಡೆಯಲ್ಲಾಗಿ ಅಲ್ಲಿಯೇ ವಾಸಿಸಲು ಬೆಳೆದು, ಆಹಾರ ಶೇಖರಣೆ–ಸಂಗ್ರಹಿಸಲು ಕಲಿತು, ಆ ನಂತರ ಎಲ್ಲಾ ಕಡೆ ಹರಡಿತೆಂದು ಹೇಳಲು ಬರುವುದಿಲ್ಲ. ಎಲ್ಲೆಲ್ಲಿ ಯಾವ ಆಹಾರದ ಮೂಲ ಅವನಿಗೆ ದೊರಕಿತೋ ಅದು ಅವನ ಆಹಾರವಾಯಿತು. ಆಹಾರ ಸಂಗ್ರಹಣೆ ಮತ್ತು ಸಾಕಣೆಗೆ ಅತಿ ಮುಖ್ಯವಾಗಿರಬೇಕು. ಸಾಕುಪ್ರಾಣಿಗಳನ್ನು ಅತಿ ಕಂಡುಕೊಂಡು ಪಶು ಸಂಗೋಪನೆಗೆ ತೊಡಗಿದ – ಅವುಗಳಿಗೆ ಮೂಲವಾದ ಸಸ್ಯಸಂಪತ್ತಿನ ಆರಂಭವಾಗಿರಬೇಕು ಅಥವಾ ಸಸ್ಯಾಹಾರದ ರುಚಿಯು ಸಸ್ಯ ಬೆಳೆಸಲು ಪ್ರೇರಣೆಯಾಗಿರಬೇಕು ಒಟ್ಟಾರೆ ಸಸ್ಯಕ್ಕೆ ಸಂಬಂಧಿಸಿದ ಕೃಷಿ '<u>ನೆಲೆನಿಂತ</u>' ಸ್ಥಿತಿಯನ್ನು ತೋರಿಸುತ್ತದೆ.

ಒಟ್ಟಾರೆ ಪಶುಪಾಲನೆ ಮತ್ತು ಕೃಷಿಯ ಹಂತಗಳಲ್ಲಿ ಹೆಣ್ಣು ಪ್ರಮುಖ ಸ್ಥಾನ ಪಡೆದಳೆನ್ನಬಹುದು. ಈ ಸಂದರ್ಭದಲ್ಲಿ ಬೇಟೆಯೇ ಇಲ್ಲವೆಂದೇನೂ ಅಲ್ಲ, ಆದರೆ ಬೇಟೆಗೆ ಗಂಡು ಹೊರಹೋದಾಗ ಹೆಂಗಸು, ಹೆಣ್ಣಿನ ಕ್ರಿಯಾಶೀಲತೆಗೆ **ಅದು** ಅನುವುಮಾಡಿಕೊಟ್ಟಿರಬೇಕು. ಇಲ್ಲಿ ಗಂಡು ಬೇಟೆಗೆ ಹೋದಾಗ ಹೆಣ್ಣು ತನ್ನ ಮಕ್ಕಳ, ಮರಿಗಳ ಆರೈಕೆಯಲ್ಲಿ ತೊಡಗುತ್ತಿದ್ದು ಸನ್ನಿವೇಶದಲ್ಲಿ–ಅವಳು ಭೂಮಿಯನ್ನು ಅಗೆದು ಹಸನುಮಾಡಿ ಸಸಿ ಬೆಳೆಸುವತ್ತ ಗಮನಹರಿಸಿದಳು. ಈ ಹಂತದಲ್ಲಿ ಸಾಕಿದ ಪಶುಗಳು ತಮ್ಮ ಕರುವಿಗೆ ಜನ್ಮ ನೀಡುವ, ಹೆಣ್ಣು–ಮಗುವಿಗೆ ಜನ್ಮ ನೀಡುವ, ಭೂಮಿ ಸಸಿಗೆ ಜೀವ ನೀಡುವ ಸೃಷ್ಟಿಕ್ರಿಯೆಯಲ್ಲಿ ಮಾನವ ಹಂತ ಸಮಾನಾಂತರ–ಇದೇ ಸೃಷ್ಟಿಯ ಶಕ್ತಿಯನ್ನು ಹೆಣ್ಣಾಗಿ ಗ್ರಹಿಸಲು ಕಾರಣವಾಗಿರಬಹುದು. ಅಲ್ಲದೆ ಆರೈಕೆಯ ಗುಣವೂ ಅವಳಿಗೆ ಆರೋಪಿಸಲ್ಪಟ್ಟಿರಬೇಕು. ಒಟ್ಟಾರೆ ಹೀಗೆ ಸೃಷ್ಟಿ, ಆರೈಕೆ ಅಂದರೆ ಉತ್ಪಾದಕತೆಗಳೆರಡೂ ಗುಣಗಳಿಂದ ದೈವತ್ವದ ರೂಪ ತಳೆದ ಸ್ತ್ರೀ ಆರಂಭದ ದಿನಗಳಲ್ಲಿ ಆರಾಧಿಸಲ್ಪಟ್ಟಿದ್ದಾಳೆ.

ಒಟ್ಟಾರೆ ಕೃಷಿಯ ಆರಂಭ ಸ್ತ್ರೀಯಿಂದಲೇ ಆಗಿರಬಹುದಿದ್ದು, ಈ ಸಂದರ್ಭದಲ್ಲಿ ಸ್ತ್ರೀ ದೈವತ್ವಕ್ಕೇರಿರುವ ಸಾಧ್ಯತೆಯಿದೆ.

''........ ಸ್ತ್ರೀಯ ಗರ್ಭಧಾರಣಾ ಸೃಷ್ಟಿ ಭೂಮಿಯ ಸಸ್ಯಧಾರಣ ಸೃಷ್ಟಿಗೆ ಸಮನಾಗಿ ಇದು ಪುರುಷನ ಮೇಲೆ ಪ್ರಭಾವ ಬೀರಿತು. ಈ ಹಿನ್ನೆಲೆಯಲ್ಲಿ ಅನೇಕ ಆಚರಣೆಗಳು ಮತ್ತು ಪುರಾಣಗಳು ಹುಟ್ಟಿಕೊಂಡವು. ಎಲ್ಲ ಆಚರಣೆಗಳಲ್ಲಿ 'ಸ್ತ್ರೀ' ಯೇ ಪ್ರಧಾನಳಾದಳು. ಹೀಗಾಗಿ ಕೃಷಿ ಹಂತದಲ್ಲಿ ಸ್ತ್ರೀ ಪ್ರಧಾನವಾಗುತ್ತಾ ಹೋದಳು. ಈ ಪ್ರಾಧಾನ್ಯತೆಯಿಂದಾಗಿ ಮಗಳಿಂದ ಮಗಳಿಗೆ ಆಸ್ತಿಯ ವರ್ಗಾವಣೆ ಆಗುತ್ತಾ ಹೋಯಿತು. ಸ್ತ್ರೀಗೆ ಇಂತಹ ಮಹತ್ವ ಪ್ರಾಪ್ತವಾದ ಹಂತದಲ್ಲಿಯೇ ಸ್ತ್ರೀಯ ಆರಾಧನೆ ಕೂಡ ಆರಂಭವಾಯಿತೆನ್ನಬಹುದು..1 (ಪ್ರೊ.ಹಿ.ಚಿ.ಬೋರಲಿಂಗಯ್ಯ.ಪುಟ 112)

ಹೀಗೆ 'ಸ್ತ್ರೀ' ಆರಾಧನೆಯು ಮಟ್ಟಕ್ಕೇರಿದಂತೆ ಮಾನವ ತಾನು ಕಂಡುಂಡ ಪ್ರಕೃತಿಯ ರುದ್ರ ಮತ್ತು ರಮ್ಯತೆ ಸ್ವರೂಪವನ್ನು ಹೆಣ್ಣಿಗೆ ಆರೋಪಿಸತೊಡಗಿದ. ಮಾತ್ರವಲ್ಲ, ತಾನು ಪ್ರಕೃತಿಯಲ್ಲಿ ಕಂಡುಕೊಂಡ, ತನ್ನನ್ನು ರೋಗ, ಗಾಯಗಳಿಂದ ರಕ್ಷಿಸಬಲ್ಲ ಮರ, ಗಿಡಗಳೂ ಹೆಣ್ಣಾಗಿ ಆರಾಧನೆಗೊಳಪಟ್ಟವು. ನೆಲವೂ ತಾಯಿ ಮಕ್ಕಳನ್ನು ಶಿಕ್ಷಿಸುವ ಅಧಿಕಾರವನ್ನೂ ಪಡೆದದ್ದು. ತಾಯಿ ದೇವರ ಸಾಮರ್ಥ್ಯವನ್ನು ವೃದ್ಧಿಸಿತು.

ಈ 'ತಾಯಿ' ಎನಿಸಿದ ದೈವತ್ವಕ್ಕೇರಿದ ಹೆಣ್ಣು ಹೆಮ್ಮೆಯ ಸ್ಥಾನವಲ್ಲದಿದ್ದರೂ, ಶಿಕ್ಷಿಸುವ ಶಕ್ತಿಯ ಸ್ವಾಮಿನಿಯಾಗಿದ್ದು, ಅಂಥ ಶಕ್ತಿಯುಳ್ಳವಳೆಂದು ಭಾವಿಸಿದರು. ಬಹುಶಃ 'ಸ್ತ್ರೀ' ಯ ಆರಾಧನೆ ಗೌರವ ಪಡೆಯುವುದಕ್ಕೆ ಮತ್ತು ಅವಳು ಪ್ರಧಾನಳಾಗುವುದಕ್ಕೆ ಇದು ಕಾರಣವಾಗಿರಬಹುದು. ಈ ದೇವಿ, ನೆಲ ನಿಂತ ಸ್ಥಿತಿಗೆ ಬಂದ ಮೇಲೆ ಇವಳು ಹೆಣ್ಣಾದಳಲ್ಲ ಗ್ರಾಮವನ್ನು ಕಾಯುವ ಗ್ರಾಮದ ತಾಯಿಯಾದಳು. ಆ ಗ್ರಾಮದೇವತೆಗಳಲ್ಲಿ ಬಹುಪಾಲು ಭಾಗ 'ಸ್ತ್ರೀ' ದೇವತೆಗಳೇ ಇರುವುದನ್ನು ನೋಡಿದಾಗ ತಾಯಿ ದೇವತೆಯ ಮಹತ್ವದ ಅರಿವಾಗುತ್ತದೆ.

ಗ್ರಾಮದೇವತೆಗಳ ಬಗೆಗೆ ಸಂಶೋಧನಾತ್ಮಕ ಪ್ರಬಂಧ ರಚಿಸಿರುವ ಡಾ: ಸಿದ್ಧಲಿಂಗಯ್ಯ ಹೇಳುವಂತೆ

'' ಕೃಷಿ ಸಂಸ್ಕೃತಿಯ ಇನ್ನೊಂದು ಲಕ್ಷಣ; ದೇವತೆಯ ಜೊತೆ ದೇವರು ನಿಂತಿರುವುದಿಲ್ಲ. ಪುರುಷ ದೇವತೆ ಪತಿಯ ಸ್ಥಾನ ಅಥವಾ ಸಹೋದರನಾಗಿ ಪರಿಗಣಿಸಲ್ಪಟ್ಟಿರುವುದು ಕಂಡು ಬರುತ್ತದೆ. ಶಿವನ ಸ್ಥಾನದ ಮೇಲಿನ ಕೇವಲ ಕೆಳಗಿನವರಲ್ಲಿ ಹುಟ್ಟುವ ಗಣಪತಿಯ ಪುರಾಣದ ತಾಯಿಯು ಒಂದು ರೀತಿಯಲ್ಲಿ ಸ್ತ್ರೀಯ ಮಹತ್ವವನ್ನು ಎತ್ತಿ ಹಿಡಿದು ಸೃಷ್ಟಿ ಕ್ರಿಯೆಯಲ್ಲಿ ಪುರುಷನ ಪಾತ್ರವನ್ನೇ ಅಲ್ಲಗಳೆಯುತ್ತದೆ. ಗ್ರಾಮ ದೇವತೆಗಳ ಇನ್ನೊಂದು ಲಕ್ಷಣ ಇಲ್ಲಿನ ಶೇ.90 ಭಾಗ ದೇವತೆಯರಿಗೆ ಗಂಡಂದಿರು ಇಲ್ಲ, ಇವರನ್ನು ಪೂಜಿಸುವ ಭಕ್ತರನ್ನು ಕೇಳಿದರೆ ದೇವತೆಗೆ ಗಂಡ ಇರಲು ಸಾಧ್ಯವಿಲ್ಲ ಇದ್ದರೂ ಇರಬಹುದು ನಮಗೆ ಗೊತ್ತಿಲ್ಲ ಎನ್ನುತ್ತಾರೆ.[2] (ಪ್ರೊ. ಡಾ: ಸಿದ್ಧಲಿಂಗಯ್ಯ– ಪುಟ 96)

ಅವರು ಹೇಳುವಂತೆ ಇದು ಗಂಡನ್ನು ನಿರಾಕರಿಸುವ ದೃಷ್ಟಿ. ಆದರೆ ಹಾಗೆ ಹೇಳುವುದಕ್ಕಾಗುವುದಿಲ್ಲ. ಆ ಕಾಲಕ್ಕೆ 'ಗಂಡ' ಅಥವಾ 'ತಂದೆ' ಯ ನಿರ್ದಿಷ್ಟತೆ ಇಲ್ಲವಾದುದರಿಂದ ಇಂತವಳಿಗೆ ಇವನೇ ಗಂಡ ಎನ್ನಲಾರದ ಸ್ಥಿತಿ ಮತ್ತು ನಿತ್ಯದ ಮನೆಯಲ್ಲಿನ ಅವನ ಗೈರು ಹಾಜರಿ ಗಂಡನ ಪರಿಕಲ್ಪನೆಗೆ ಅಡ್ಡಿಯಾಗಿದ್ದುದೂ ಅಲ್ಲದೆ, ತಾಯಿಯ ನಿರ್ದಿಷ್ಟತೆ ಅವಳ ಮಹತ್ವವನ್ನು ಹೆಚ್ಚಿಸಿರುವ ಸಾಧ್ಯತೆಯಿದೆ. ಒಟ್ಟಾರೆ ಇದು ಸ್ಥಿತಿಯ ಸಮಾಜ, ಸ್ತ್ರೀಯ ಮಹತ್ವವನ್ನೂ ಅವಳ ಗರ್ಭಧಾರಣಾ ಶಕ್ತಿಯಿಂದ ಕಂಡುಕೊಂಡು ಅವಳನ್ನು ದೈವತ್ವಕ್ಕೇರಿಸಿರುವುದು ಕಂಡು ಬರುತ್ತದೆ. PHILIP ROWSON ಎಂಬ ವಿದ್ವಾಂಸರ ಪ್ರಕಾರ ಸ್ತ್ರೀ ಆರಾಧನೆ ಬೆಳೆದುದು ಈ ಹಿನ್ನೆಲೆಯಲ್ಲಿಯೇ ಅವರು ಹೇಳುವಂತೆ '' The idea of a generically female creative womb. mother of beasts,plants and men which in a complex anology between The earth - - - - (3.54)

(ಉದ್ಧೃತ : ಜಾತ್ರೆಗಳು – ಎಸ್.ಎಸ್. ಹಿರೇಮಠ ಪುಟ : 21)

ಅಂದರೆ ಸಾಮಾನ್ಯವಾಗಿ ಸ್ತ್ರೀ, ಆರಾಧನೆ ಆರಂಭವಾದುದು ಅವಳ ಗರ್ಭಧಾರಣೆಯ ಮೂಲಕ ಅಂದರೆ ತಾಯ್ತನದ ಮೂಲಕವೇ, ಪಶುಗಳ ತಾಯ್ತನ, ಭೂಮಿಯ ತಾಯ್ತನ ಹೀಗೆ ಒಟ್ಟಾರೆ ತಾಯ್ತನದ ಪೂಜೆ,ಸೃಷ್ಟಿ ಕ್ರಿಯೆ ಮೂಲಕ ಆರಂಭವಾಗಿದೆ ಎನ್ನಬಹುದು.

ನಂತರದ ದಿನಗಳಲ್ಲಿ ಕುಟುಂಬದ ಹೊಣೆ ಹೊತ್ತು, ಸಾಗಿಸುತ್ತಿದ್ದ ಈ ತಾಯಿ ಕುಟುಂಬದ ಸ್ಪಷ್ಟ ಮತ್ತು ನಿರ್ದಿಷ್ಟ ಸ್ಥಾನದಿಂದಲೂ ಒಡತಿಯಾದಳು. ಈ ತಾಯಿಯ ಒಡೆತನ ಅವಳ ಸಂರಕ್ಷಣಾ ಮನೋಭಾವದಿಂದ ಲಭಿಸಿದ್ದರಿಂದ ಅವಳ ದೈವೀರೂಪಕ್ಕೂ ತಾನು ನೆಲೆ ನಿಂತ ಪ್ರದೇಶದ ಒಡೆತನ,ರಕ್ಷಣೆಯ ಹೊಣೆಗಾರಿಕೆ ಲಭಿಸಿ ಅವಳು ಊರ ಕಾವಲಮ್ಮನಾದಳು. ಗ್ರಾಮದೇವತೆಯಾದಳು. ಒಟ್ಟಾರೆ ಊರ ರಕ್ಷೆ ಅವಳ ಕರ್ತವ್ಯವಾಯಿತು. ಆದಕ್ಕಾಗಿ ಅವಳನ್ನು ಸಂತೃಪ್ತಿಗೊಳಿಸುವ ಕೆಲಸ ಊರ ಜನರದ್ದಾಯಿತು. ಇವೆಲ್ಲವುಗಳು ಕಾಡ ಗ್ರಾಮೀಣರ ಪ್ರತ್ಯೇಕ ಕಲ್ಪನೆಗಳು ಮಾತ್ರ' ಅಂದರೆ ಅವರು ಕಂಡುಕೊಂಡ 'ತಾಯಿ'ತನಗಳು. ಆದರೆ ನಂತರದ ದಿನಗಳಲ್ಲಿ ವೈದಿಕರು ಈ ಪಂಗಡಗಳನ್ನು ತಮ್ಮ ಪ್ರಭಾವಕ್ಕೆ ಒಳಪಡಿಸಿಕೊಳ್ಳುವ ಸಂದರ್ಭದಲ್ಲಿ ಕಷ್ಟರೂಪವನ್ನೇನಲ್ಲ (ಏಕೆಂದರೆ ಗ್ರಾಮೀಣರು ತಾಯಿಯ ಮುನಿಸಿನ ರೂಪವನ್ನೂ ಪೂಜಿಸುತ್ತಿದ್ದರು) ತಮ್ಮ ದೈವದ ತಾಮಸ ಕಳೆದಿತೆಂದು ಹೇಳಿ ಅವಳನ್ನು ತಮ್ಮ ಪ್ರಭಾವಕ್ಕೆ ಒಳಪಡಿಸಲು ಪ್ರಯತ್ನಿಸಿದರು.

[illegible]

" The most interesting are the goddesses, that have a strong, highly localised cult."

[illegible] ಹೀಗೆ ದೇವತೆಯ ಪುರಾಣಗಳೊಂದಿಗೆ ಹೊಂದಿರುವ ಈ ದೇವಿ ದೇವತೆಯಾದ್ದರಿಂದ ಅವಳ [illegible] ಗುಣಗಳಿಂದ ಪ್ರೇರಿತವಾಗಿ 'ಶಕ್ತಿ' ಎಂಬ ಜನಾಂಗದವರಿಂದ ಪೂಜಿತವಾದ ರಕ್ತ ದೇವತೆಯಾಗಿ ಬೆಳೆದು, 'ಗ್ರಾಮ ದೇವತೆ' ಎಂಬ ಸ್ಥಾನದಲ್ಲಿ ನೆಲೆಯಾಗಿದೆ. ಈ ದೇವಿಯರ ಸಾಮ್ಯ, ಭೇದ, ರೂಪಗಳನ್ನು ಮಾನವ [illegible] ತರ್ಕದಲ್ಲಿ ಅರಿತು ವಿಶ್ಲೇಷಿಸಿ ಆರಾಧಿಸತೊಡಗಿದಂತೆ ಅವಳ ವಿವಿಧ ಆರಾಧನೆಗಳು ರೂಢಿಗೊಂಡಿರಬೇಕು. ಮುನಿದ ದೇವಿ ಉಗ್ರಳಾಗಿರುವುದು, ಸಂತೋಷಗೊಂಡವಳು ಸೌಮ್ಯಳಾಗಿರುವ ಹಾಗೆ ಕಲ್ಪಿತವಾಗಿರಬೇಕು.

—೦—

1.2 ಮಾರಿ, ಮಾರಮ್ಮ, ಒಂದು ವಿವೇಚನೆ,

ನಾವು ಈ ಹಿಂದೆ ಚರ್ಚಿಸಿದಂತೆ ಮನುಷ್ಯ 'ತಾಯಿ' ಆರಾಧನೆಗೆ ಮೊದಲುಗೊಂಡದ್ದು, ಅವಳ ಸೃಷ್ಟಿ ಶಕ್ತಿಯ ಹಿನ್ನೆಲೆಯಲ್ಲಿ. ಅವಳ ಸೃಷ್ಟಿಸುವ ಶಕ್ತಿ ಅವನಿಗೆ ಆಶ್ಚರ್ಯ ಮೂಡಿಸಿತು. ಹಾಗಾಗೇ ಅವಳ ಗರ್ಭಧಾರಣಾ ಶಕ್ತಿಗೂ ಭೂಮಿಯ ಸಸ್ಯಧಾರಣಾ ಶಕ್ತಿಗೂ ಸಂಬಂಧ ಕಲ್ಪಿಸಿದ. ಒಟ್ಟಾರೆ ಇನ್ನೊಂದನ್ನು ಸೃಷ್ಟಿಸಬಲ್ಲ ಶಕ್ತಿಯನ್ನು ಹೆಣ್ಣಾಗಿ ಗ್ರಹಿಸಿದ. ಸೃಷ್ಟಿಯ ಮೂಲವನ್ನೇ ಹೆಣ್ಣಾಗಿ ಗ್ರಹಿಸಿದ ಅವರು ಯಾವುದೇ ಸೃಷ್ಟಿಯನ್ನು ಅದು ಸೌಮ್ಯವಿರಬಹುದು ಅಥವಾ ಕಠೋರವಿರಬಹುದು ತಾಯಿತನವಾಗಿ ಕಂಡಿರಬಹುದು. ಏಕೆಂದರೆ ಸಲಹುವ ಸೌಮ್ಯತೆಯಂತೆಯೇ ಶಿಕ್ಷಿಸುವ ಕಠೋರತೆಯನ್ನೂ ಅವರು 'ತಾಯಿ'ಯ ಇನ್ನೊಂದು ಮುಖವಾಗಿ ಕಂಡಿರಲು ಸಾಧ್ಯ. ಈ ಕಠೋರತೆಯ ಮುಖದಲ್ಲಿ ರೋಗ, ವಿಕೋಪ, ಸಾವು ಮೊದಲಾದ ಶಿಕ್ಷಾ ವಿಧಾನಗಳನ್ನು ಅಂಟಿಸತೊಡಗಿದಂತೆ 'ತಾಯಿ' ಭೀಕರಳೂ ಆದದ್ದು ಮತ್ತು, ಅಂತಹ ಬೀಕರ ರೂಪದ ಶಮನಕ್ಕಾಗಿ ಅವಳನ್ನು ಪೂಜಿಸುವ ಪದ್ಧತಿ ಬೆಳೆದದ್ದು ಮಾನವ ಸಹಜ ಮನೋವ್ಯಾಪಾರದಲ್ಲಿಯೇ.

ಇಂತಹ ಕಠೋರತೆಯ ತಾಯಿದೇವರ ಮುಖವನ್ನು 'ಮಾರಿ' ಎಂದು ಕರೆದಿರುವ ಸಾಧ್ಯತೆ ಇದೆ. ಅಂದರೆ ಇಲ್ಲಿ ಮೂರ್ತರೂಪದ ಕಲ್ಪನೆಯಿಲ್ಲ ಕೇವಲ ಗುಣಾವಳಿಗಳನ್ನ ಯಾವುದೇ ವಸ್ತುವಿನ ಮೂಲಕ ಪೂಜಿಸುವ ಪರಿಪಾಠವಿದೆ.

'ಮಾರಿ' ಎಂಬ ಪದ ಕೂಡ ಇದೇ ಅರ್ಥವನ್ನು ಸೂಚಿಸುತ್ತದೆ. 'ಮಾರಿ' ಎಂದರೆ ದೊಡ್ಡ ಭೀಕರ, ಕಠೋರ ಎಂಬರ್ಥವನ್ನು ನೀಡುತ್ತವೆ. ಹಳ್ಳಿಯಲ್ಲಿ ಈಗಲೂ ಈ ಅರ್ಥದ ಮಾತಿಗಳಿವೆ. 'ಮಾರಿಹೊಳೆ', 'ಮಾರಿ ರೋಗ', 'ಮಾರಿ ಇದ್ದಂಗೆ', 'ಮಾರಿ ಆಡ್ದಂಗೆ', 'ಮಾರೇರು' ಎಂಬ ನುಡಿಗಳಲ್ಲ 'ಮಾರಿ' ಎಂಬ ಪದವನ್ನು 'ದೊಡ್ಡ' ಎಂದು ಹೇಗೋ ಹಾಗೇ ಭೀಕರ ಎಂದು ಅರ್ಥದಲ್ಲಿ ಮತ್ತು 'ಹಿತಕಾರಿಯಲ್ಲದ ಕಠೋರತೆಯನ್ನ ಸೂಚಿಸುವ ಅರ್ಥದಲ್ಲೇ ಬಳಕೆಗೊಂಡಿದೆ. 'ಹೆಣ್ಣು ಒಲಿದರೆ ನಾರಿ, ಮುನಿದರೆ ಮಾರಿ' ಎಂಬ ನಾಣ್ಣುಡಿ ಈ ವಿಷಯವನ್ನು ಇನ್ನಷ್ಟು ಸ್ಪಷ್ಟಪಡಿಸುತ್ತದೆ. ಇಲ್ಲಿ ಹೆಣ್ಣನ್ನು 'ನಾರಿ' ಮತ್ತು 'ಮಾರಿ' ಎಂಬ ಭಿನ್ನ ಅರ್ಥಗಳಲ್ಲಿ ಪರಿಕಲ್ಪಿಸಲಾಗಿದೆ 'ನಾರಿ' ಎಂಬುದು ಸಹನೆಯ ಸೌಮ್ಯ ರೂಪವನ್ನು 'ಮಾರಿ' ಎಂಬುದು ಭೀಕರ, ಕಠೋರ, ಕರಾಳ ರೂಪವನ್ನು ಅರ್ಥೈಸುತ್ತದೆ. ಹಾಗಾಗಿ ಹೆಣ್ಣಿನ ಒಲವಿನ ರೂಪವನ್ನ ಸೌಮ್ಯ ಎಂದೂ, ಮುನಿಸಿನ, ಕೋಪವನ್ನ 'ಮಾರಿ' ಎಂತಲೂ ಅರ್ಥೈಸಿರುವಂತಿದೆ. ಈ ನಾಣ್ಣುಡಿಯ ಹಿನ್ನೆಲೆ ಏನೇ ಇದ್ದರೂ 'ಹೆಣ್ಣಿನ' ರೂಪವನ್ನು ನಾರಿ ಮತ್ತು ಮಾರಿ ಎಂಬ ಎರಡು ಬಿನ್ನ ರೀತಿಯಲ್ಲಿ ಅರ್ಥೈಸುವ ರೀತಿ ಮಾತ್ರ ಬಹಳ ಮುಖ್ಯವಾಗಿದೆ. ಹಳ್ಳಿಗರು ಮಾರೇ ರನ್ನ ಕಾಡುವ, ಪೀಡೆ ನೀಡುವವರು ಎಂದತೆಯೇ ತಾಯಂದಿರು ಎಂಬ ಭಯಮಿಶ್ರಿತ ಗೌರವದಿಂದಲೇ ಕಾಣುತ್ತಾರೆ. ಪೂಜಿಸುತ್ತಾರೆ. 'ಮಾರಿಬೇನೆ' ಎಂಬುದು ಕಾಯಿಲೆಯ ರೂಪವಾಗಿ ಕಾಣಿಸಿಕೊಂಡರೆ, 'ಮಾರಿಹೊಳೆ' ಎಂಬುದು ಭೀಕರ, ದೊಡ್ಡ

ಎಂಬರ್ಥದಲ್ಲಿ ಬಳಕೆಯಾಗಿದೆ. ಈ ಎರಡೂ ಕಡೆ 'ದೊಡ್ಡಕೇಡು' ನ್ನು ಸೂಚಿಸುವ ಪದಗಳೇ ಆಗಿದೆ. ಅಂದರೆ ರೋಗ ಬೇನೆ ಭೀಕರತೆಯನ್ನು, ಕೆಡುಕನ್ನು ತರುವ ದೊಡ್ಡ ತಾಯಿಯಾಗಿ 'ಮಾರಿ' ಯನ್ನು ಪೂಜಿಸುವ ಪರಿಪಾಠ ವ್ಯಕ್ತವಾಗುತ್ತದೆ. ಇದಕ್ಕೆ ವಿವಿಧ ಮಾರಿಯರು ಸಾಧಿಯರೂ ಪುಷ್ಟಿ ನೀಡುತ್ತವೆ. ಇಲ್ಲೆಲ್ಲ 'ಮಾರಿ' ಯೊಂದಿಗೆ ಯಾವುದೇ ಕಲ್ಪಿತ 'ವರ್ಣ ಸಂಕರ' ದಂತಹ ಕಥೆಯಾಗಲಿ ಅಂಟಿಸಲ್ಪಟ್ಟಿಲ್ಲ. ಕಿಟೆಲ ಶಬ್ದಕೋಶದಲ್ಲಿ ಕೂಡ 'ಮಾರಿ' ಎಂಬುದಕ್ಕೆ ದೊಡ್ಡ, ಭೀಕರ ಎಂಬರ್ಥಗಳೇ ಇರುವುದು. ಈ ಪದದ ಜೊತೆಯಲ್ಲಿ 'ಅಮ್ಮ' ಎಂಬ ಪದ ಸೇರಿ 'ಮಾರಮ್ಮ', 'ಮಾರಿಯಮ್ಮ', ಎಂಬ ರೂಪಗಳು ಬಂದುದರಿಂದ, ಈ ಮಾರಿತನದ ಅಮ್ಮ ಎಂದು ಅರ್ಥೈಸಬಹುದೋ ಅಥವ 'ಮಾರಿಯರ ಅಮ್ಮ' — ಎಲ್ಲರ ಅಮ್ಮ' ದೊಡ್ಡಮ್ಮ (ದೊಡ್ಡತಾಯಿ) ಎಂದು ಹೇಳಬೇಕೋ ಎಂಬ ಸಂದಿಗ್ಧತೆ ಒದಗುತ್ತದೆ. ಈ ಎರಡೂ ಅರ್ಥಗಳು ಕೆಲವೊಮ್ಮ ಗ್ರಾಮೀಣರ ಗ್ರಹಿಕೆಗಳಾಗುತ್ತವೆ. ಅಮ್ಮ ಎಂಬುದು 'ತಾಯಿ' ಎಂಬರ್ಥದಲ್ಲೇ ಆಗಿದ್ದು ಈ ತಾಯಿಯು 'ಮಾರಿ' ರೂಪವನ್ನು 'ಮಾರಮ್ಮ' ನಾಗಿ ಕಾಣಲಾಗಿದೆ.

ಇಲ್ಲಿ 'ಮಾರಿ' ಎಂಬುದರ ಅರ್ಥವನ್ನು 'ದೊಡ್ಡ, ಭೀಕರ, ಎಂಬರ್ಥದಲ್ಲಿ ಗ್ರಹಿಸಿದರೆ ಅದರೊಂದಿಗೆ 'ಅಮ್ಮ' ಎಂಬ ರೂಪವನ್ನು ಸೇರಿಸಿದಾಗ ಭೀಕರವಾದ ತಾಯಿ, ದೊಡ್ಡ ತಾಯಿ ಎಂದಾಗುತ್ತದೆ. ಅಂದರೆ 'ಮಾರಮ್ಮ' ಎಂಬ ಪದವನ್ನು ಮಾರಿ + ಅಮ್ಮ ಎಂದು ಎರಡು ಪ್ರತ್ಯೇಕ ಪದಗಳ ಒಟ್ಟು ರೂಪವಾಗಿ ಕಂಡಾಗ ಈ ಅರ್ಥ ಸ್ಫುರಿಸುತ್ತದೆ. ಹಳ್ಳಿಗರು ಪೂಜಿಸುವ 'ಮಾರಿ' ಯ ರೀತಿಗಳೂ ಕೂಡ ಇದಕ್ಕೆ ಪೂರಕವಾಗಿದೆ. ಅವರಲ್ಲಿ 'ಮಾರೇರು' ಎಂದರೆ ರೋಗ ತರುವ ಪೀಡಿಸುವ ದೇವಿಯರು ಎಂದಾಗುತ್ತದೆ. ಇದಕ್ಕೆ ಗಳ್ಳಮಾರಿ, ಪ್ಲೇಗುಮಾರಿ, ಧಡಾರಮಾರಿ, ಕೂಗುಮಾರಿ, ಗಾಳಿಮಾರಿ, ಈ ಎಲ್ಲರೂ ಒಂದೊಂದು ರೋಗ ಹರಡುವ ದೇವಿಯರು. ಆದಕ್ಕೆ ಅವರು ಕೋಪಿಸಿಕೊಳ್ಳದಂತೆ ಪೂಜಿಸಿ ಕಳುಹಿಸಲಾಗುತ್ತದೆ. ಕಳುಹಿಸುವ ಕ್ರಿಯೆ ಬಹಳ ಮುಖ್ಯವಾಗುತ್ತದೆ. ಇಲ್ಲಿ ಕಳೆದುಕೊಳ್ಳುವ ಆಸಕ್ತಿ ವ್ಯಕ್ತವಾಗುತ್ತದೆ. ಹಾಗಾಗಿ 'ಮಾರಿ' ಎಂಬುದನ್ನು ಕ್ಷುದ್ರರೂಪದ ಕೆರಳಿದ ತಾಯಿಯಾಗಿ ಗ್ರಹಿಸುವುದೇ ಸೂಕ್ತ. '<u>ಹತಮಾರಿ</u>' ಎಂಬ ಪದವೂ ಈ ಮಾತಿಗೆ ಸಮರ್ಥನೆ ಒದಗಿಸುತ್ತದೆ.

ಜಾನಪದ ಗೀತೆಯಲ್ಲೂ ಕೂಡ ಕೆಡುಕಿನ ಗುಣವುಳ್ಳ ಹೆಣ್ಣನ್ನು ಮಾರಿಗೆ ಹೋಲಿಸಲಾಗಿದೆ.

> ತಾಟಗಿತ್ತಿ ತಂದೆ ತೊಲೆಬಂ ಬಸವಿ ತಂದೆ :
> ಮೋಟದ ಮಾರಿ ನೀ ತಂದೆ : ಅಣ್ಣಯ್ಯ
> ತಂಗೇರಿಗೆಲ್ಲಾ ನೀ ಹಗೆಯಾದೆ :: 5

ಇಲ್ಲಿ ಕಾಡುವ, ಕೀಟಲೆ ಮಾಡುವ ದುಷ್ಟಬುದ್ಧಿಯ ಹೆಣ್ಣನ್ನು ಹೆಂಡತಿಯಾಗಿ ತಂದ ಅಣ್ಣನನ್ನು ತಂಗಿ ಕೇಳುತ್ತಿದ್ದಾಳೆ.

ತಂಬಲ ಹಾಕದ ತುಂಬ ಕೆಂಪು ಗಿಣಿಗಡಕ ಹಣ್ಣಿನ ಹಾಂಗ,
ಇದ್ದಂತ ತುಟಿಯು ಬಣ್ಣತ್ಹಾರಿತು ? ಯಾವ ಗಾಳಿಗೆ, ಹೀಂಗ
ಈ ಗದ್ದ, ಗಲ್ಲ, ಹಣಿ, ಕಣ್ಣು ಕಂಡು ಮಾರೀಗೆ ಮಾರಿಯಾ ರೀತಿ
ಸಾವನ ತನ್ನ ಕೈ ಸವರಿತಿಲ್ಲ, ಬಂತೆನಗ ಇಲ್ಲದ ಭೀತಿ, 6

ಎಂದಿದ್ದಾರೆ. ಇಲ್ಲಿ 'ಮಾರೀಗೆ ಮಾರಿಯ ರೀತಿ' ಎಂಬುದು ಮುದ್ದಾದ ಮುಖಕ್ಕೆ ಸಾವನ್ನು ತಂದ ಭೀಕರವನ್ನು ತಿಳಿಸುತ್ತದೆ.

ಜನ್ನನ ಯಶೋಧರ ಚರಿತೆಯಲ್ಲಿ ಬರುವ 'ಮಾರಿಯ ವರ್ಣನೆ'ಯಿರಬಹುದು. ಅದಕ್ಕೂ ಮೊದಲು ಬಸವಣ್ಣ ಮೊದಲಾದ ವಚನಕಾರರು ಲೇವಡಿ ಮಾಡುವ 'ಮಾರಿ'ಯರಿರಬಹುದು ಇವರೆಲ್ಲ ನಮಗೆ ಕರಾಳರೀತಿಯ, ಹಿಂಸಾ ಸ್ವರೂಪದ, ಮಾಂಸಹಾರಿ, ನರಭಕ್ಷಕ ದೇವತೆಗಳೇ ಆಗಿದ್ದಾರೆ.

ಬಸವಣ್ಣನವರು ವಿಗ್ರಹಾರಾಧನೆ ಹಾಗೂ ಸಣ್ಣಪುಟ್ಟ ಕ್ಷುದ್ರದೇವತಾರಾಧನೆಗಳನ್ನು ಖಂಡಿಸುತ್ತಾ 'ಮಾರಿ ಮಸಣಿ' ಯರ ಪ್ರಸ್ತಾಪಮಾಡಿ ಅವನ್ನು ಖಂಡಿಸುತ್ತಾರೆ. ಇಲ್ಲಿ ಮಾರಿ ಎಂಬುದು ಒಂದು ಕ್ಷುದ್ರ ಹೆಣ್ಣು ದೈವ ಮಾತ್ರವೇ ಹೊರತು ಯಾವುದೇ ವರ್ಣಸಂಕರ ಕತೆಯ ಅಧಿದೈವವಲ್ಲ.

ಜಾನಪದ ಕವಿಯೂ, ಜ್ಞಾನಿಯೂ ಆದ ಸರ್ವಜ್ಞನೂ ಕೂಡ ತನ್ನ ತತ್ವ ಪದಗಳಲ್ಲಿ 'ಮಾರಿ' ಪ್ರಸ್ತಾಪಮಾಡುತ್ತಾನೆ. ಒಂದು ಕಡೆ ಆತ ಹೇಳಿದ್ದಾನೆ.

ಒಮ್ಮೆ ಕರೆದರೆ ಕೇಳ : ದಿಮ್ಮೆ ಕರೆದರೆ ಕೆರಳಿ,
ಹಮ್ಮಿನಲಿ ಇರುವ ಸತಿಯಿಂದ ಹೊಡೆದೊಯ್ವ
ಹೆಮ್ಮಾರಿ ಲೇಸು ಸರ್ವಜ್ಞ : 7 (ಪುಟ 233.)

ಇಲ್ಲಿ '<u>ಹೆಮ್ಮಾರಿ</u>' ಎಂಬುದು ಹೊಡೆದೊಯ್ಯುವ ದೇವತೆ. ರಣಮಾರಿ, ಸಾವನ್ನು ತರುವ ದೇವತೆಯೆಂಬ ಗ್ರಹಿಕೆಯಿದೆ. ಅಂದರೆ ಈ ಕಾಲದಲ್ಲಿ ಮಾರಿಯ ಸುತ್ತ ಈ ವರ್ಣವಿದ್ವೇಷದ ಯಾವ ಕಥೆಯ ಸುಳಿವೂ ಸಿಕ್ಕುವುದಿಲ್ಲ. ಆದರೆ ಸರ್ವಜ್ಞನದೆಂಬ ಇನ್ನೊಂದು ವಾಚನ ಹೀಗಿದೆ :

ತಾರವನು ನೀನಿತ್ತು : ಬೇರವನ್ನು ಬಡಬೇಕು :
ನೀರೆಯವಳೆಂದು ಪರವಧುವ ಸಾರಿದರೆ :
ಮಾರಿ ಬಂದಿಹುದು ಸರ್ವಜ್ಞ : (ಅದೇ ಪುಟ 239)

ಇಲ್ಲಿ ಬೇರೆಯವರ ಸತಿಯನ್ನು ಪೀಡಿಸಿರುವ, ಅಂತವನಿಗೆ ಮಾರಿ ಬಡಿವ ಸುಳಿವಿದ್ದು ಇದು ಕವಿ 'ಬೇನೆ' ಯ ಹೊಡೆತವನ್ನು ಅನೈತಿಕ ಸಂಚಿಗೆ ಎಚ್ಚರಿಕೆಯಾಗಿ ಬಳಸಿದ್ದಾನೆ.

ಜನ್ನನ ಯಶೋಧರ ಚರಿತೆಯಲ್ಲಿ ಬರುವ ಮಾರಿಯ ವರ್ಣನೆ ನಮಗೆ ದೊರಕುವ ಪ್ರಾಚೀನ ಕಾವ್ಯದಲ್ಲಿನ ವರ್ಣನೆಯಾಗಿದೆ. ಅದು ಹೀಗಿದೆ.

ಆ ಪುರದ ತೆಂಕವಂಕದೊ
ಳಾಪೊತ್ತುಮನೇಕ ಜೀವಹತಿ ತನಗೆ ಸುಖೋ
ದ್ದೀಪನಮೆನಿಸುವ ಪಾಪಕ
ಳಾ ಪಂಡಿತೆ ಚಂಡಮಾರಿ ದೇವತೆಯಿರ್ಪಳ್
ತನಗರಸು ವೆರಸು ಪುರಜನ
ಮನಿತು ವಿಷಂ ಚೈತ್ರಮೆಂಬ ತಿಂಗಳೊಳಖಿಲಾ
ರ್ಚನೆವೆರಸು ಜಾತ್ರೆ ನೆರೆಯದೊ
ಡನಿತು ಮನೋಮೋದದೆ ವಿಳಯದೊಳ್ ನೆರೆಯಿಸುವಳ್ 8 (ಪುಟ 2)

ಇಲ್ಲಿ 'ಚಂಡಮಾರಿ' ಎಂಬ ಉಗ್ರದೇವತೆಯ ಬಗ್ಗೆ ಇರುವ ಮಾಹಿತಿಯೆಂದರೆ,

> ರಾಜಪುರವೆಂಬ ಪಟ್ಟಣದ ದಕ್ಷಿಣ ಭಾಗದಲ್ಲಿ ಯಾವಾಗಲೂ ಅನೇಕ ಜೀವಿಗಳ ಹತ್ಯೆ ತನಗೆ ಸುಖಕರವಾಗುವುದು ಎಂದುಕೊಂಡಿರುವ ಪಾಪಕ್ಕೆ ಹೆಸರಾದ ದುಷ್ಟದೇವತೆಯಾದ ಚಂಡ ಮಾರಿ ಇದ್ದಳೆಂದೂ, ಆ ನಾಡಿನ ರಾಜನೊಡಗೂಡಿ ಅಲ್ಲಿನ ಜನರೆಲ್ಲರೂ ಚೈತ್ರಮಾಸದಲ್ಲಿ ತನ್ನ ಜಾತ್ರೆ ನಡೆಸದಿದ್ದರೆ, ಎಲ್ಲರನ್ನೂ ಪ್ರಳಯದಲ್ಲಿ ನಾಶ ಮಾಡುವಳು.....

ಎಂಬ ವಿವರವಿದೆ. ಇಲ್ಲಿ ಚಂಡಮಾರಿ — ನರಭಕ್ಷಕಿ, ಮೇಲಾಗಿ ಕ್ರೂರಿ, ಆದರೆ ಅವಳನ್ನು ತೃಪ್ತಿಪಡಿಸಬಲ್ಲರೆ ಆ ಪುರಕ್ಕೆ ಅವಳೇ ಕಾವಲುದೇವಿ. ಈ ವಿಷಯ ಮಾರಿಯ ಉಗಮದ ಆಶಯವನ್ನು ಸ್ಪಷ್ಟವಾಗಿಯೇ ತಿಳಿಸುತ್ತದೆ. ಕ್ರೂರತೆಯ ತೃಪ್ತಿಯಿಂದ ರಕ್ಷಣೆ ಪಡೆವ, ಅದಕ್ಕಾಗಿ ಜಾತ್ರೆ ನಡೆಸಿ ಬಲಿ ಕೊಡುವ ಪದ್ಧತಿ ಆಚರಣೆಗೆ ಬಂದಿರುವ ಸಾಧ್ಯತೆಯತ್ತ ಇದು ಸುಳಿವನ್ನು ನೀಡುತ್ತದೆಯೇ ಹೊರತು ವರ್ಣ ವಿದ್ವೇಷದ ಕಥೆಯ ಸುಳಿವನ್ನು ನೀಡುವುದಿಲ್ಲ. ಮೇಲಾಗಿ ಈ ಗ್ರಂಥದಲ್ಲಿ ಚಂಡಮಾರಿ ಅಭಯ ರುಚಿ ಮತ್ತು ಅಭಯಮತಿಯರಿಂದ ಮತಾಂತರ ಹೊಂದಿ ಜೈನ ಧರ್ಮ ದೀಕ್ಷೆಪಡೆದು ಅಹಿಂಸಾ ವ್ರತಿಯಾಗುವುದು — ಧರ್ಮಾಂತರದ ಅಂದಿನ ಪ್ರಕ್ರಿಯೆಗಳ ಸುಳಿವು ನೀಡುತ್ತದೆ. ಅದೇ ರೀತಿ ವೈದಿಕದ ಕಡೆಗೂ ಒಲವು ಮತ್ತು ಅದರಿಂದ ಮಾರ್ಪಾಡನ್ನು ಪಡೆದಿರುವ ವಿಷಯ ಅಲ್ಲಗಳೆಯುವಂತದಲ್ಲ. ಇದನ್ನು ಬಸವಣ್ಣನವರ ಮಾರಿಮಸಣಿಯ ವಿಡಂಬನೆಯೂ ಸಮರ್ಥಿಸುತ್ತದೆ.

ಅಲ್ಲದೆ 'ವರ್ಣ ವಿದ್ವೇಷದ' ಕಥೆಯ ಇತಿಹಾಸ ನಾವು ವಿಚಾರ ಮಾಡಿದಂತೆಲ್ಲ 12 ನೇ ಶತಮಾನದ ಈಚೆಗೆ ಬೆಳೆದಂತೆ ಕಾಣುತ್ತದೆ. ಏಕೆಂದರೆ 12ನೇ ಶತಮಾನ ಅಂತ್ಯ ಹಾಗೂ 13ನೇ ಶತಮಾನದ ಆದಿಯವನಾದ ಜನ್ನನವರೆಗೂ 'ಮಾರಿ' ಕೇವಲ ಕ್ರೂರದೇವತೆಯೇ ಹೊರತು ಬ್ರಾಹ್ಮಣ-ಶೂದ್ರ ಸಂಬಂಧದ ಪ್ರತೀಕವಲ್ಲ. ಹಾಗಾಗಿ 12 ನೇ ಶತಮಾನದ 'ವರ್ಣಸಂಕರ'ದ ಐತಿಹಾಸಿಕ ಘಟನೆಯ ಪ್ರತಿಫಲನವನ್ನೇನಾದರೂ ಇದರಲ್ಲಿ ನೋಡಬಹುದಾದ ಸಾಧ್ಯತೆಗಳಿವೆ. ಅಧ್ಯಯನದಿಂದ ವಿದ್ವಾಂಸರು ಇದನ್ನು ಸ್ಪಷ್ಟಪಡಿಸಬಹುದೆಂದು ತೋರುತ್ತದೆ.

GERTRUDE JOBES ಎಂಬ ವಿದ್ವಾಂಸರು MAREMMA ಎಂಬ ಪದವನ್ನು ಈ ರೀತಿ ಅರ್ಥೈಸಿದ್ದಾರೆ.

"A wild and swampy region. Especially one noted for maleria. from the marshy unhealthy region near The seashore in Tuscany mentioned by Dante in the Inforno " 9

ಜೌಗುಪ್ರದೇಶದಲ್ಲಿನ ಅನಾಗರೀಕರ ಕಲ್ಪನೆಯಿಂದಲೂ ಇದು ಮಲೇರಿಯಾವನ್ನು ಸೂಚಿಸುತ್ತದೆಂದು ಹೇಳುತ್ತಾರೆ. ಅಂದರೆ ಅನಾಗರಿಕ ಜನರಲ್ಲಿನ ಮಲೇರಿಯಾ ಕುರಿತ ಕಲ್ಪನೆಯನ್ನು ಅಂದರೆ ರೋಗದ ಕಲ್ಪನೆಯನ್ನು ತಿಳಿಸುತ್ತದೆ. ಇದೇ ವಿದ್ವಾಂಸರು ಮುಂದೆ MARIAMMA (MARAMMA,MARI-MATHA)ಎಂಬ ಪದವನ್ನು 'A goddess worshipped near madras. A malignant disease bringer, She personifies Cholera, smallpox and other fatal diseases, feared more than loved, her whorship consists of propitiatory sacrifices, she is of recent origin and is said to be named after virgin mary "(ಅದೇ)

ಇಲ್ಲಿ ಮಾರಿಯಮ್ಮ, ಮಾರಮ್ಮ, ಮಾರಿದೇವತೆ ಎಂಬುದು ವಿನಾಶಕಾರಿಯಾದ ರೋಗದ ಅಥವಾ ಮತ್ತೆ, ಮತ್ತೆ, ಕಾಣಿಸುತ್ತಲೇ ಹೋಗುವ ಮರಣಾಂತಿಕ ರೋಗದ ಮೂರ್ತರೂಪವೆಂದು ಅರ್ಥೈಸಿರುವುದನ್ನು ಮತ್ತು ಸಣ್ಣನೊಣಗಳಿಂದ ಹರಡುವ ಕಾಲರಾ ಮೊದಲಾದ ವಿನಾಶಕಾರಿ ರೋಗಗಳ ಮೂರ್ತರೂಪವೆಂತಲೂ ಅದರ ಆರಾಧನೆ ಪ್ರೀತಿಗಿಂತ ಭಯದಿಂದ ಪ್ರೇರಿತವಾಗಿರುತ್ತದೆಂದು ಹೇಳಿರುವ ಈ ವಿವರಣೆ 'ಮಾರಿ' ಮೂಲತಃ ರೋಗದ, ಸಾವಿನ, ಭೀಕರತೆಯ ಅನುಭವದಲ್ಲಿ ಅದರ ರೂಪವಾಗಿ ಕಂಡುಕೊಂಡ ದೇವತೆಯೆಂತಲೂ ಅದರ ತೃಪ್ತಿಗಾಗಿ ಮಾನವ ನಡೆಸಿದ ಆಚರಣೆಗಳೇ 'ಬಲಿ' ಮೊದಲಾದವೆಂತಲೂ ತಿಳಿಯಬಹುದು.

ಡಾ: ಎನ್.ಆರ್.ನಾಯಕರು ಮಾರಮ್ಮನನ್ನು ಮರದಮ್ಮನಾಗಿ ಮರದ ಮೂಲಕನಾಗಿ ನೋಡುವ ಪ್ರಯತ್ನ ಮಾಡಿದ್ದಾರೆ. ಅವರು ಮಾರಮ್ಮ ಪದದ ಉತ್ಪತ್ತಿಯನ್ನು ಹೀಗೆ ಸೂಚಿಸುತ್ತಾರೆ.

ಮರಕೆ + ಅಮ್ಮ — ಮರಕೆಯಮ್ಮ { ಮರಕೆಯಂಬ > ಮಾರಿಕಾಂಬೆ
ಮರ್ಕೆಯಮ್ಮ > ಮಕ್ಕೆಮ್ಮ

ಎಂದರೆ ಮೂಲತಃ ಇದು ಮರದ ದೇವತೆ—ಮರದಮ್ಮ—ಮರಗಮ್ಮ, ಶ್ರೀ ಮಾರಿಕಾಂಬೆಯ ಜಾತ್ರೆಯ ಕಾಲಕ್ಕೆ ಶ್ರೀ ದೇವಿಗೆ ಬೇವಿನಸೊಪ್ಪಿನ ಸೇವೆಸಲ್ಲಿಸುವ ಪದ್ಧತಿ, ತೀರಾ ಹಿಂದುಳಿದವರಲ್ಲದೆ. ಸಾಂಕ್ರಾಮಿಕರೋಗ ಉಲ್ಬಣಿಸಿದಾಗ ಶ್ರೀದೇವಿಗೆ ಈ ಸೇವೆಯ ಹರಕೆ ಹೊರುವ ಸಂಪ್ರದಾಯ, ಹರಕೆ ಹೊತ್ತವರು, ವಿವಸ್ತ್ರರಾಗಿ ಬೇವಿನಸೊಪ್ಪನ್ನು ದೇಹಕ್ಕೆ ಕಟ್ಟಿಕೊಂಡು, ದೇವರ ಪ್ರದಕ್ಷಿಣೆಯನ್ನು ಹಾಕಿ ಹರಕೆಯನ್ನೊಪ್ಪಿಸುತ್ತಾರೆ. ಈ ಹರಕೆಗೆ ಕಾರಣವೆಂದರೆ, ಬೇವಿನ ಮರವು ಶ್ರೀದೇವಿಯ ಸ್ಥಾನವೆಂಬ ತಿಳುವಳಿಕೆ. ಅನೇಕರು ಬೇವಿನ ಮರವನ್ನೇ ದೇವಿಯೆಂದು ತಿಳಿದು ಪೂಜಿಸುವುದಿದೆ. ಬೇವಿನಸೊಪ್ಪು ಕಟ್ಟಿಕೊಳ್ಳುವುದೆಂದರೆ ಶ್ರೀ ದೇವಿಯನ್ನೇ ರಕ್ಷಾಕವಚವಾಗಿ ತೊಟ್ಟುಕೊಂಡಂತೆ ಎಂಬುದು ಅವರ ನಂಬಿಕೆ'' 10 (ಪುಟ 147–48)

ಇಲ್ಲಿ ಬೇವಿನ ಮರದ ಪೂಜೆಯ ಮೂಲಕ ಮರದಮ್ಮ—ಮಾರಮ್ಮನಾದ ವಿಷಯ ಹೇಳಲಾಗಿದೆ. ರೋಗದೇವತೆಯೊಬ್ಬಳನ್ನು ಪೂಜಿಸತೊಡಗಿನ ಜನ—ಆರೋಗ್ಯಕ್ಕೆ ಮದ್ದಾಂದ ಮದ್ದಾಗಬಹುದಾದ ರೋಗನಿವಾರಕ ವಸ್ತುವನ್ನು ತಾಯಿಯಾಗಿ ಪೂಜಿಸತೊಡಗಿರಬಹುದು. ರೋಗದೇವಿಯೊಡನೆ ರೋಗ ನಿವಾರಕ ದೇವಿಯನ್ನು ಪೂಜಿಸಿದ್ದು ಊಹಿಸಲಾರದ ವಿಷಯವೇನಲ್ಲ. ಆದರೆ ನಂತರದಲ್ಲಿ ಅಂದರೆ ಆಕಾರವಿಲ್ಲದ ಮರವನ್ನೇ ಮಾರಮ್ಮನಾಗಿ ಪೂಜಿಸುವಾಗ ಅದು ಸ್ಫುರಿಸುವ ಅರ್ಥವನ್ನು ಹೀಗೂ ಊಹಿಸುವ ಸಾಧ್ಯತೆಯಿದೆ; 'ಮಾರಿ' ಅಂದರೆ ರೋಗ. ಮಾರಿ + ಅಮ್ಮ — ಮಾರಿಯಅಮ್ಮ — ಮಾರಮ್ಮನಾಗಿ ತೆಗೆದುಕೊಂಡರೆ ರೋಗಗಳ ತಾಯಿ ಎಂದು ಕರೆದು ಆ ರೋಗವನ್ನು ತಡೆಯಲು ಅವುಗಳ ಅಮ್ಮನನ್ನ ಪೂಜಿಸಿ ತಮ್ಮನ್ನ ರಕ್ಷಿಸಿಕೊಳ್ಳುವ ವಿಧಾನವಿರಬಹುದು. ಇದಕ್ಕೆ 'ಕರಗದ' ಆಚರಣೆಯೂ ಪುಷ್ಟಿನೀಡುತ್ತದೆ. ಒಟ್ಟಾರೆ 'ಮಾರಿ' ಮೂಲತಃ ರೋಗ ಮತ್ತುರೋಗ ನಿವಾರಣೆಯ ಆಶಯದಲ್ಲಿ ಸೃಷ್ಟಿಯಾಗಿ ರೋಗ ನಿಯಂತ್ರಣದ ಕಾವಲು ತಾಯಿಯಾಗಿ ಆಚರಣೆಗೆ ಬಂದಿದ್ದು, ಏಕೆಂದರೆ ಆಗಿನ ಮನುಷ್ಯ ತನ್ನ ಸಮಸ್ತ ರೋಗಗಳಿಗೂ ಯಾವುದೇ, ಕ್ಷುದ್ರ ದೈವದ ಕಾಟವೆಂದೇ ನಂಬಿದ್ದರಿಂದ ಅವುಗಳನ್ನ ತಮ್ಮ ಹಟ್ಟಿಗೆ ಅಥವಾ ಬೀಡಿಗೆ ಲಗ್ಗೆ ಹಾಕದಂತೆ ತಡೆಯಲು ಈ 'ತಾಯಿಯ ಪೂಜೆಯನ್ನು ಕೈಗೊಂಡ: ನಂತರದ ಕಾಲಘಟ್ಟದಲ್ಲಿ 'ವರ್ಣವ್ಯವಸ್ಥೆ'ಯನ್ನ ವೈದಿಕರು ಈ ಜನಗಳ ಮೇಲೆ ಹೇರಲಾರಂಭಿಸಿದ್ದು, ಅವರು ಈ 'ವರ್ಣಸಂಕರ'ವನ್ನು ರೋಗವೆಂದೇ ಗಣಿಸಿದ್ದು, 'ಮಾರಿ'ಯ ಭಿನ್ನ ಆಶಯ ಸೃಷ್ಟಿಗೆ ಕಾರಣವಾಯಿತು. ಮಾರಿಗೆ ಚಾಮುಂಡಿಯ ಮಾದರಿಯ ಉಗ್ರರೂಪ ಕೊಟ್ಟಾಗ ತಮ್ಮ ಹಿತಾಸಕ್ತಿಯನ್ನು ಇನ್ನು ಚೆನ್ನಾಗಿ ಸಾಧಿಸಿಕೊಂಡ

ವೈದಿಕರು ಭಿನ್ನ ಮೂಲ ಆಶಯವನ್ನ ಮರೆತುಬಿಟ್ಟಿರಬೇಕು. ದಿನಗಳೆದಂತೆ ಪ್ರಭಾವಿತವಾದ ವೈದಿಕತೆಯಲ್ಲಿ ಅದು ಮುಚ್ಚು ಹಾಕಿದ ಐತಿಹ್ಯ ಬೆಳೆಯ ತೊಡಗಿ – ವಿನಾಶವಾಗುತ್ತಾ, ಸಾಗಿದ ಸಂಸ್ಕೃತಿಯೊಂದರ ಆಶಯವೂ ನಿರ್ನಾಮವಾಗತೊಡಗಿತು.

''<u>ಮಾರಿ ವಿಧಗಳು</u>'' :-

ಮಾರಿ ಹಬ್ಬದ ಆಚರಣೆಗೆ ಹಿನ್ನೆಲೆಯಲ್ಲಿ ನೋಡಿದಾಗ 'ಊರುಮಾರಿ' ಮತ್ತು 'ಬಿಡುಮಾರಿ' ಎಂಬ ಎರಡು ರೀತಿಯ ಆಚರಣೆಗಳಿದ್ದು ಈ ವಿಷಯವನ್ನು ಈಗಾಗಲೇ ಚರ್ಚಿಸಲಾಗಿರುವುದರಿಂದ ಇಲ್ಲಿ ಆ ಬಗೆಗೆ ಹೆಚ್ಚು ಚರ್ಚೆಗೆ ತೊಡಗಲಿಲ್ಲ. ಆದರೆ ಸಂಕ್ಷಿಪ್ತವಾಗಿ ತಿಳಿಸಲಾಗಿದೆ.

1) '<u>ಬಿಡುಮಾರಿ</u>':- ಮಾರಿಹಬ್ಬದ ಅಥವಾ ಜಾತ್ರೆಯ ಸಂದರ್ಭದ ಭಿನ್ನ ಗ್ರಹಿಕೆಯಲ್ಲೊಂದಾಗಿದೆ. 'ಬಿಡು ಮಾರಿ' ಎಂದರೆ ಬಿಟ್ಟು ಬರುವುದು ಎಂದರ್ಥವಾಗುತ್ತದೆ. ಇಲ್ಲಿ ಪ್ರತೀ ಬಾರಿಯ ಹಬ್ಬದಲ್ಲೂ ಮಾರಿಯ ಮೂರ್ತಿಯನ್ನು ಹೊಸದಾಗಿ ಮಾಡಲಾಗುತ್ತದೆ. ಮತ್ತು ಹಬ್ಬದ ಅಂತ್ಯದಲ್ಲಿ ಈ ವಿಗ್ರಹವನ್ನು ವನದಲ್ಲಿಯೇ ಬಿಟ್ಟು ಬರಲಾಗುತ್ತದೆ. '[illegible]'ಯನ್ನು [illegible] ಕಳುಹಿಸಲಾಗುತ್ತದೆ. ವಿಗ್ರಹಕ್ಕೆ [illegible] ಕ್ರಿಯೆಯಿಂದ ಇಲ್ಲಿ ಹಬ್ಬದ ಕ್ರಿಯೆಯನ್ನು [illegible]. ಇದಕ್ಕೆ ಸಂಬಂಧಪಟ್ಟ ಆಚರಣೆಗಳು, 'ಊರುಮಾರಿ' ಗಿಂತ ಭಿನ್ನವಾಗಿ [illegible]. ಇವುಗಳಲ್ಲಿ ಮಾರಿಯನ್ನು [illegible] ಮಾರಕ ಕೆಟ್ಟ, [illegible] ಹೋಗುತ್ತದೆ. [illegible] ಕಾಡಿನ [illegible] ಮತ್ತು [illegible]ಗಳು, ರೋಗಗಳ ಬಗೆಗಿನ ಗ್ರಹಿಕೆ ಇಲ್ಲಿ ಕೆಲಸ ಮಾಡಿದಂತೆಯೇ ಅನಿಸುತ್ತದೆ. ಕಾಡಿನಲ್ಲಿರುವವರು 'ಊರು' ಕಟ್ಟಿಕೊಂಡಾಗ ಅಲ್ಲಿ ತಾವು ಕಲ್ಪಿಸಿಕೊಂಡಿದ್ದ ದೈವ [illegible] ಆ ದೈವ ಮತ್ತೆ ಮತ್ತೆ ಬಂದು ತೊಂದರೆ ಕೊಡದಂತೆ ಅವಳನ್ನು ಕರೆದು ತಂದು ಸಂತೃಪ್ತಿ ಪಡಿಸಿ ಕಳುಹಿಸುವಂತಿದೆ. ಇಲ್ಲೆಲ್ಲ 'ಕಳೆಯುವ' ಭಾವನೆ ಕೆಲಸ ಮಾಡುವಂತಿದೆ.

'ವರ್ಣಸಂಕರದ' ಐತಿಹ್ಯದ ಹಿನ್ನೆಲೆಯಲ್ಲೂ ಈ 'ಮಾರಿ' ಅರ್ಥ ಪಡೆಯುತ್ತಾಳೆ. ಬ್ರಾಹ್ಮಣ [illegible]ಯನ್ನು ಮದುವೆ [illegible] ಕಾಡಿಗಟ್ಟಿದ್ದು 'ಕತೆ' ಕಾಡಿನಿಂದ ಊರಿಗೆ ಬಂದು ಪೀಡಿಸುವ ಕ್ರಿಯೆಗೆ ಪೂರಕವಾಗುತ್ತದೆ. ಮಾರಿ ಕುರಿತ [illegible] ಬೈಗುಳದ ಪದ್ಯಗಳೂ ಇದಕ್ಕೆ ಬೆಂಬಲ ನೀಡುತ್ತವೆ. ಆದರೆ ಈ ದೇವತೆ ಸುತ್ತಿನ ಆಚರಣೆಗಳು ಈ ಒಂದೇ ಅಂಶಕ್ಕೆ ದುಡಿಯುವುದಿಲ್ಲ. ಅನೇಕ [illegible]ಗಳ ಸಂಕೀರ್ಣ ಚೌಕಟ್ಟೊಂದನ್ನು ಇದು ಪಡೆದುಕೊಂಡಿದೆ. ಕಾಡಿಗೆ ಬ್ರಾಹ್ಮಣರಿಂದ ತಿರಸ್ಕೃತಳಾಗಿ ಬಂದ ಹೆಣ್ಣೊಬ್ಬಳು, ಕಾಡಿನ ವೃತ್ತಿನಿರತ ಜನಗಳಲ್ಲಿ ಪೂಜ್ಯಳಾದುದು ಆಶ್ಚರ್ಯವೇನಲ್ಲ. ಈ ಸಂದರ್ಭದಲ್ಲಿ ಅವಳನ್ನು ಅವರು ಗ್ರಹಿಸಿ ಪೂಜಿಸಿದ ರೀತಿಗಳಿಗೂ ಊರಲ್ಲಿ ವೈದಿಕರು ಕಂಡ ದೃಷ್ಟಿಗಳಿಗೂ ವೈರುಧ್ಯಗಳಿವೆ. ಆದರೆ ಕಾಡಿನ ಅವರು ಊರಿಗೆ [illegible]ವ ಸಂದರ್ಭ 'ದೇವಿ' ರೂಪ (ಮಾರಿ) ಆರಾಧನೆ ಕಾಡು ಮತ್ತು ಊರುಗಳ ವೈರುಧ್ಯ ಅಂಶಗಳನ್ನೊಳಗೊಂಡ ಆಚರಣೆಗಳಿಂದ ಸಂಕೀರ್ಣಗೊಂಡಿರಬಹುದಾದ ಸಾಧ್ಯತೆಗಳನ್ನು ಅಲ್ಲಗಳೆಯಲಾಗದು. ಈ ಬಲಿ, ವೈಧವ್ಯಗಳು ಒಂದರೊಡನೊಂದು ಸ್ಫುರಿಸುವ ಅರ್ಥಕ್ಕೂ, [illegible]ಪೂಜೆ — ಬಲಿ — ಬರಗ — ಹುಲುಸು ಗಳೊಂದಾಗಿ ಸ್ಫುರಿಸುವ ಅರ್ಥಗಳಿಗೂ ಭಿನ್ನತೆ ಇರುವುದು ಕಂಡು ಬರುತ್ತದೆ.

ಒಟ್ಟಾರೆ 'ಬಿಡುಮಾರಿ' ಮತ್ತು 'ಊರುಮಾರಿ'ಗಳ ಆಚರಣೆಗಳು ಸಾಮಾನ್ಯವಾಗಿ ಒಂದೇರೀತಿ [illegible] 'ಬಿಡುಮಾರಿ'ಯಲ್ಲಿ ಕೆಲವು ಹೆಚ್ಚಿನ [illegible] ಅಷ್ಟೆ ಎನ್ನಬಹುದು. ಪ್ರಸ್ತುತ ಪ್ರಬಂಧ 'ಊರುಮಾರಿ' ಗೆ ಮಾತ್ರ ಸಂಬಂಧ ಪಟ್ಟಿರುವುದರಿಂದ ಅದರ ಬಗ್ಗೆ ಅಷ್ಟಾಗಿ ಗಮನ ಕೊಡಲಾಗಿಲ್ಲ.

2) <u>ಊರು ಮಾರಿ</u>' :- 'ಊರುಮಾರಿ' ಹಬ್ಬದಲ್ಲಿ ಪ್ರತೀಬಾರಿ ವಿಗ್ರಹ ಕೆತ್ತಲಾಗುವುದಿಲ್ಲ ಮತ್ತು ಹಬ್ಬದ ಅಂತ್ಯದಲ್ಲಿ ವಿಗ್ರಹವನ್ನು ವನದಲ್ಲೇ ಬಿಟ್ಟು ಬರಲಾಗುವುದಿಲ್ಲ. ಇನ್ನುಳಿದ ಆಚರಣೆಗಳು ಬಹುತೇಕ '<u>ಬಿಡುಮಾರಿ</u>' ಯಲ್ಲಿನಂತೆಯೇ ನಡೆಯುತ್ತದೆ. ಊರುಮಾರಿ ಎಂಬುದಕ್ಕೆ ನಿರ್ದಿಷ್ಟವಾದ ಗುಡಿಯಿರುತ್ತದೆ. ಊರುಮಾರಿಯ ಹಬ್ಬ ಆರಂಭವಾಗುವುದು ಕೋಣನನ್ನು ಹಿಡಿಯುವ ಮೂಲಕವಾಗಿದೆ. ಅಮ್ಮನಿಗೆ [illegible]ತ್ತಾನೆ. ಹಳೆಯ ವಿಗ್ರಹಕ್ಕೆ ಹೊಸತನದ ಮೆರುಗು ನೀಡಲಾಗುತ್ತದೆ. ಇಲ್ಲಿಂದ

[illegible] ಗ್ರಾಮದಲ್ಲಿ [illegible] ಕಲ್ಲು ಸ್ಥಾಪಿಸಲಾಗುತ್ತದೆ. [illegible] ಕುಂಕುಮ, [illegible] ಸಾಕಲು ಕಷ್ಟ ಹೇಳಲಿ, ರೋಗ ನಿವಾರಿಸುವ ಕಷ್ಟ ಹೇಳಲಿ ಒಟ್ಟಾರೆ ಇವಳ ಕೆಲಸ ಗ್ರಾಮವನ್ನು ಅಲ್ಲಿನ ವ್ಯವಸ್ಥೆಯನ್ನು ಕಾಪಾಡುವ ಆಡಳಿತ ಕೆಲಸವಾಗಿದೆ. 'ಬಿಡುಮಾರಿ' ಅತೀ ಕ್ರೂರ ಸ್ವರೂಪದವಳೆಂದೂ 'ಊರು ಮಾರಿ' ಅಂತಹ ಕ್ರೂರಳಲ್ಲವೆಂದೂ ಹಿರಿಯರು ಹೇಳುವಲ್ಲಿ ಕಾಡು ಮತ್ತು ನಾಡಿನ [illegible] [illegible] ಮಾರಿ ನೆಲೆಗೊಳಿಸಿದ್ದು ನಾಡಿನ ಮನೆಗಳವರ ಅವಳನ್ನು ಕುಂಕುಮ, ಬಳೆ, [illegible], ಮುಂದಿನ ಹಬ್ಬ [illegible] ಈ ಹಬ್ಬದ [illegible] [illegible]

ಇಲ್ಲಿ ಮಾರಿ ಹಬ್ಬದ ಆಚರಣೆಗಳಿಗನುಗುಣವಾಗಿ ಕಾಣಬರುವಂಥಾದ ಎರಡು ಭಿನ್ನ ಪರಂಪರೆಗಳಾದರೆ, [illegible] ಅಧ್ಯಯನದ ಸಂದರ್ಭದಲ್ಲಿ ಅಧ್ಯಯನಕ್ಕೆ ಒಳಪಡುವಂಥ ಪ್ರಾದೇಶಿಕ ಮಿತಿಯಲ್ಲಿ ಚಾಲ್ತಿಯಲ್ಲಿರುವ ಮಾರಿಯರು ಇಂತಿದ್ದಾರೆ.

ಪ್ಲೇಗುಮಾರಿ, ಕಾಗುಮಾರಿ, ಗಾಳಿಮಾರಿ/ ಅಥವಾ ಬುರೆ ಬುರೆ ಮಾರಿ, ಗುಳ್ಳೆಮಾರಿ, ಗಡಿಮಾರಿ, ... ಎಂಬುದಾಗಿ ಹಲವು ರೀತಿಯಲ್ಲಿವೆಯಲ್ಲದೇ ಇವುಗಳಿಂದ ರಕ್ಷಣೆ ಪಡೆಯಲು ಆರಾಧನೆಯೂ ಚಾಲ್ತಿಯಲ್ಲಿದೆ. ಮಾರಿಯರೆಂದು ಕರೆಯುವ ಕೆಲವು ಅಮ್ಮಂದಿರ ಪೂಜೆಯೂ ಇದೆ. ಇಲ್ಲೆಲ್ಲ 'ಜೀವನಸೌಖ್ಯ' ಪ್ರಾಧಾನ್ಯತೆಯನ್ನು ಪಡೆಯುವುದು, 'ರೋಗನಿವಾರಕ' ಶಕ್ತಿಯೊಂದರ ಆರಾಧನೆ ಯು ದ್ಯೋತಕವಾಗಿದೆ. ಉದಾ:- ದಡಾರಮ್ಮ, ಅಮ್ಮನನ್ನು ಪೂಜಿಸುವುದು.

(1) ಪ್ಲೇಗುಮಾರಿ:-

ಹಿಂದೆ ವೈಜ್ಞಾನಿಕ ಅರಿವಿರದ ಸಂದರ್ಭದಲ್ಲಿ ಇಲಿಯಿಂದ ಹರಡಬಹುದಾದ ಈ ಭೀಕರ ರೋಗವನ್ನು ಮಾರಿಯ ಪೀಡೆಯಿಂದೇ ಜನ ಭಾವಿಸುತ್ತಿದ್ದರು. ದಿಢೀರನೇ ಮನೆಗಳಲ್ಲಿ ಇಲಿಗಳು ಸತ್ತು ಬೀಳುವುದು, ತೊಡೆಸಂದಿ, ಬಗಲುಗಳಲ್ಲಿ ಗಡ್ಡೆಗಳು ಆರಂಭವಾಗಿ ವಿಪರೀತ ಜ್ವರದಿಂದ ನರಳಿ ಕೆಲವೇ ದಿನಗಳಲ್ಲಿ ಮನುಷ್ಯರು ಸಾಯಲಾರಂಭಿಸುತ್ತಿದ್ದ ಸಂಗತಿ ಜನರಿಗೆ ಭಯ ಮೂಡಿಸುತ್ತಿತ್ತು. ಮತ್ತು ಕಾಯಿಲೆ ಯನ್ನು ಕ್ಷುದ್ರ ಗೊಂಡ ದೇವತೆಯೊರ್ವಳ ಪೀಡೆಯೆಂದೇ ತಿಳಿಯುತ್ತಿದ್ದ ಆ ಕಾಲದಲ್ಲಿ ಅದನ್ನು 'ಮಾರಿ' ಎಂದು ಕರೆಯುತ್ತಿದ್ದರು. ಒಂದೊಂದು ದಿನ ಊರ ಕಾಲುಭಾಗ ಜನ ಸಾಯುತ್ತಿದ್ದ ಆ ಭೀಕರ ಪರಿಸ್ಥಿತಿ ಯಲ್ಲಿ ಮಾನವ ಮನಸ್ಸು ವೈಚಾರಿಕತೆಗೆ ಕಿಂಚಿತ್ತು ಬೆಲೆ ನೀಡುವ ಸ್ಥಿತಿಯಲ್ಲಿರಲಿಲ್ಲ. ಹಾಗಾಗಿಯೇ ಆ ರೋಗವನ್ನು ತಾವು ಭಯದಿಂದ ರೂಪಿಸಿಕೊಂಡಿದ್ದ ಮಾರಿಗೆ ಅಂಟಿಸಲಾಯಿತು.

ಹೀಗೆ ಪ್ಲೇಗು ಬಡಿದ ತಕ್ಷಣ ಊರ ಜನರೆಲ್ಲ ಊರು ಬಿಟ್ಟು ಊರ ಹೊರ ವಲಯದಲ್ಲಿ ಬೀಡು ಬಿಡುತ್ತಿದ್ದರು. ಊರು ಹೊಕ್ಕಿರುವ ಮಾರಿಯ ಉಪಟಳ ಕಡಿಮೆಯಾಗಲೆಂದು, ಊರ ಹೊರಗೆ ಜನ ಸಿಗಬಾರದೆಂದು ರಕ್ಷಣೆಯ ಭಾವನೆಯಿಂದ ಊರ ಹೊರಗೆ ಬರುತ್ತಿದ್ದರಲ್ಲದೆ ಕೆಲವು ದಿನಗಳ ನಂತರ ಕ್ರಮೇಣ ಊರಿಗೆ ಸೇರಿಕೊಳ್ಳುತ್ತಿದ್ದರು. ಹೀಗೆ ಊರಿಗೆ ಬಂದ ವೇಳೆ ಮನೆಗಳ ನೆಲ ಸಾರಿಸಿ ಅಮ್ಮನನ್ನು ಪೂಜಿಸ

ಸಾರಿಸುತ್ತಾರೆ. ನೆಲ ಬಳಿಯುತ್ತಾರೆ. ಮತ್ತು ಮನೆ ಗೋಡೆಗಳಿಗೆ ಸುಣ್ಣ ಬಣ್ಣ ಬಳಿದು ಬೆಳಕು ಮೂಡಿಸುವುದು ಎಂಬುದು ಒಂದು ಗ್ರಹಿಕೆ. ಬಹುಶಃ ಬೆಳಕು ಅಮ್ಮನಿಗೆ ಇರುವ ಶಕ್ತಿ, ಕಿರಣಗಳು ಬಂದರೂ ನಾನಾ ರಾಕ್ಷಸರನ್ನು ಪ್ರತಿನಿಧಿಸುವ ತೊಂದರೆಯಿಂದಲೇ ಇರಬೇಕು. ಹೀಗೆ 'ನೆಲ' ಬಳಿದು ಗ್ರಾಮಸ್ಥರು ಕೂಡಲೇ ನಿರ್ಧರಿಸಿದಂತೆ ಮುಂದಿನ ವಾರ ಅಥವಾ ಐದು ವಾರ ಅಮ್ಮನನ್ನು ಪೂಜಿಸುವುದು ಆರಂಭವಾಗುತ್ತದೆ. ಸಾಮಾನ್ಯವಾಗಿ ಮಂಗಳವಾರ ಮತ್ತು ಶುಕ್ರವಾರ ಪೂಜಿಸಲಾಗುತ್ತದೆ. ಒಟ್ಟಾರೆ ಪೂಜೆ ಮಂಗಳವಾರ ಆರಂಭವಾದರೂ ಕೊನೆಯ ಪೂಜೆ ಮಾತ್ರ ಶುಕ್ರವಾರ ನಡೆಯಬೇಕೆಂದು ಸಾಮಾನ್ಯ ಕ್ರಮವಿದೆ.

ಪ್ರತೀ ಮನೆಗಳಲ್ಲಿ ಒಂದು ಮಡಿಕೆ ಅಥವಾ ಚೆಂಬುಗಳಿಗೆ ಐದು ಅಥವಾ ಮೂರು ವೀಳ್ಯದೆಲೆ ಕಟ್ಟಿ, ಬೇವಿನ ಸೊಪ್ಪನ್ನು ಸಿಕ್ಕಿಸಿ, ನೆಲದ ಮೇಲೆ ಒಂದು ವೀಳ್ಯದೆಲೆಯಲ್ಲಿ ಅಕ್ಕಿ ಹಾಕಿ ಅದರ ಮೇಲೆ ಈ '<u>ಕೇಲುವನ್ನು</u>' ಇಟ್ಟು ಪೂಜಿಸುತ್ತಾರೆ. ಪೂಜೆ ಬಹಳ ನಿಷ್ಠೆಯಿಂದ ನಡೆಯುತ್ತದೆ. ಮಾಂಸಾಹಾರಿಗಳೂ ಕೂಡ ಈ ಪೂಜೆಯಲ್ಲಿ ಸಸ್ಯಾಹಾರಿಗಳಾಗಿ ಮಡಿಯಿಂದ ಪೂಜಿಸುತ್ತಾರೆ. ಅಡಿಗೆಗೆ ಹೊರಗಿಂದ ಕಟ್ಟಿಗೆ ತಂದು ಕೊಡಲು ಸ್ನಾನ ಮಾಡಿ ಅದಕ್ಕೆ ಮಡಿನೀರು ಚಿಮುಕಿಸಿಕೊಂಡು ಒಳತರುತ್ತಾರೆ. ಅನ್ನ ಬೇಯಿಸುವಾಗ (ಅಮ್ಮನಿಗೆ ಎಡೆ ಮಾಡುವ ಅನ್ನ) ಬಾಯಲ್ಲಿ ಒಲೆ ಊದುವಂತಿಲ್ಲ ಬೀಸಣಿಗೆಯಲ್ಲಿ ಬೀಸಿ ಬೇಯಿಸಲಾಗುತ್ತದೆ. ಪ್ರತೀ ವಾರ ಪೂಜಿಸಿದಾಗ ಮೊಸರು ಅನ್ನ ಎಡೆ ಮಾಡಲಾಗುತ್ತದೆ. ಸುಮಾರು ಕಾಲ ಹೀಗೆ ಪೂಜೆ ನಡೆಯುತ್ತಿರುತ್ತಲೇ ಊರ ದೇವಸ್ಥಾನದ ಬಳಿಯಿರುವ ಒಂದು ಬಾವಿಯಿಂದ ಮಡಿಯ ಚಿತ್ರ ಹಾಕಿ ಬರಲಾಗುತ್ತದೆ. ಐದು ವಾರ ಪೂಜಿಸಲು ನಿರ್ಧರಿಸಿದರೆ ನಾಲ್ಕುವಾರ ಹೀಗೆ ಪೂಜೆ ಐದನೇ ವಾರ ವಿಶೇಷ ಪೂಜೆ ಜರುಗುತ್ತದೆ. ಅಂದು ಮನೆ ಮುಂದಿನಲ್ಲಿ ತುಂಬಾ ಕಟ್ಟು ನಿಟ್ಟಿನ ಮಡಿವಂತಿಕೆ ಇಟ್ಟಿರುತ್ತಾರೆ. ಅಂದು ಕುಂಬಾರನ ಮನೆಯಿಂದ ಹೊಸ ಅದಕ್ಕೆಂದೇ ತಯಾರಾದ ಚಿಕ್ಕ ಮಡಕೆಗಳನ್ನು ತರಲಾಗುತ್ತದೆ. ಈ ಮಡಕೆಗೆ ಪೆರೆರೆತಿಯಿಂದಲೇ ಸ್ನಾನ ಮಾಡಿದ ಹೆಂಗಸರು ಅಥವಾ ಗಂಡಸರು ಮಡಿ ನೀರಿನಿಂದ ತೊಳೆದು ಎಲೆಯ ಮೇಲೆ ಅಕ್ಕಿ ಹಾಕಿ ಅದರ ಮೇಲೆ ಮಡಕೆಯನ್ನಿಟ್ಟು, ಮೊದಲಿನಂತೆ ವೀಳ್ಯದೆಲೆ, ಬೇವಿನ ಸೊಪ್ಪನ್ನು ತೊಡಿಸುತ್ತಾರೆ. ಅಲ್ಲದೆ ಈಗ 'ಕಿರಿಗೆ' ಎಂಬ ಒಂದು ವಸ್ತ್ರವನ್ನು ಮಡಿಸಿ ಮಡಿಕೆಗೆ ಹಾಕಿ ಅದರ ಅಂದರೆ ವಸ್ತ್ರದ ಎರಡೂ ಬದಿಗೂ 'ಬಳೆ, ಬಟ್ಟಿವೋಲೆ' ತೊಡಿಸಿ ಪೂಜಿಸುತ್ತಾರೆ. ನಂತರ ಅದಕ್ಕೆ ಸಿಹಿ ಎಡೆ ಪ್ರಧಾನವಾಗಿ ಹೋಳಿಗೆಯ ಎಡೆ ಮಾಡಿ ಊರ ಹೊರಭಾಗದಲ್ಲಿರುವ ಒಂದು ಮರದ ಬುಡಕ್ಕೆ ಕಳುಹಿಸಿ ಬರಲಾಗುತ್ತದೆ. ಹೀಗೆ ಕಳುಹಿಸಲು ಹೋಗುವಾಗ ಮುಂದೆ ಯಾರಾದರೂ ಮಡಿ ನೀರೆರೆಯುತ್ತಾ ಸಾಗಬೇಕು. ಹೀಗೆ ಪ್ರತೀ ಮನೆಯಿಂದಲೂ ನೂರಾರು ಪೂಜಿಸಿದ ಮಡಕೆಗಳು ಆ ಮರದ ಬುಡದಲ್ಲಿ ಶೇಖರಣೆಯಾದ ಮೇಲೆ ಸಂಜೆ ಊರ ಹಿರಿಯರು ಮತ್ತು ಗ್ರಾಮಸ್ಥರೆಲ್ಲ ಸೇರಿ ಊರ ಪ್ರಧಾನ ದೇವಸ್ಥಾನದಲ್ಲಿ ಮೂರು ದೊಡ್ಡ ಮಡಕೆಯಲ್ಲಿ ಅಮ್ಮನ ಪೂಜೆ ನಡೆಸುತ್ತಾರೆ. ಊರ ಪ್ರಧಾನ ದೈವದ ಉತ್ಸವ ಮೂರ್ತಿ ನೆರೆದ ಜನರಲ್ಲಿ ಯಾರಾದರೂ ಮೂವರು ಮದುವೆಯಾಗದ 'ಕೋಲರು ಹುಡುಗರನ್ನು' ಸೂಚಿಸುತ್ತದೆ. ಅವರು ಆ ಗ್ರಾಮದಲ್ಲಿರುವ ಬಾವಿ, ಕೊಳ, ಎಲ್ಲಾದರೂ ಹೋಗಿ ತಣ್ಣೀರಲ್ಲಿ ಸ್ನಾನ ಮಾಡಿ, ಹಸಿ ಬಟ್ಟೆಯಲ್ಲೇ ಆ ಮೂರು ಮಡಿಕೆಯಲ್ಲಿ ಮಡಿ ನೀರನ್ನು ತುಂಬಿ ತರುತ್ತಾರೆ. ಹೀಗೆ ತಂದ ಮಡಕೆಗಳನ್ನು ದೇವರ ಮುಂಭಾಗದಲ್ಲಿಟ್ಟು ಅವಕ್ಕೆ ಬೇವಿನ ಸೊಪ್ಪನ್ನು ತೊಡಿಸಿ, ಪೂಜೆ ಮಾಡಲಾಗುತ್ತದೆ. ಈ ಪೂಜೆ ಮನೆಯಲ್ಲಿ ಪೂಜಿಸುವ ಕ್ರಮವನ್ನೇ ಹೋಲುತ್ತದೆ. ಅಷ್ಟರಲ್ಲಿ ದೇವಸ್ಥಾನದ ಹೊರಗೆ ಉತ್ಸವ ಮೂರ್ತಿ — ಊರಜನ ಕಳುಹಿಸಿದ ನೂರಾರು ಕೇಲುಗಳನ್ನು ಕೆಲವು ಸಾಮಾನ್ಯವಾಗಿ ಮೂರು ಅಥವಾ ಐದು ಹೊಸ ಬುಟ್ಟಿಗಳಿಗೆ ತುಂಬಿಸಿ ಅದನ್ನು ಹೊತ್ತೊಯ್ಯಲು ಇವರನ್ನು ನಿಯಮಿಸಿರುತ್ತದೆ. ಇದಕ್ಕೆ ಮದುವೆಯಾದವರೂ ಗಂಡಸರೂ ಆಗಬಹುದು. ಆದರೆ ಈ ಸಂದರ್ಭದ ಯಾವುದರಲ್ಲಿ ಯಾವ ಹೆಂಗಸರಿಗೆ ಸಾಧ್ಯವಿಲ್ಲ. ನಂತರ ಆ ಮೂರು ಮಡಕೆ ಪೂಜೆ ನಡೆಸುವಾಗ ಅದಕ್ಕೆ ಆ ಮೂವರು ಕೋಲರು ಹುಡುಗರೂ ಪೂಜಿಸುತ್ತಾರೆ. ಹೀಗೆ ಪೂಜೆಯಾದ ಮೇಲೆ ಅವರು ಆ

ಮುಡಿಕೆಗಳನ್ನು ಎರಡೂ ಕೈಲಿ ಹಿಡಿದು ಹೊರ ಬರುತ್ತಾರೆ. ಹೊರ ಬರುವ ವೇಳೆಗೆ ಬುಟ್ಟಿಯಲ್ಲಿ ಕೆಲವು ಗಳನ್ನು ಬಿಟ್ಟು ಹೊತ್ತು ನಿಂತಿರುತ್ತಾರೆ. ಹೀಗೆ ಹೊರಬಂದ ಆ ಮೂವರಿಗೆ ದೇವರು ಅಂದರೆ ಉತ್ಸವ ಮೂರ್ತಿ ಅಥವಾ ಗುಮುಗ ಮಂತ್ರಿಸಿ, ಅವರನ್ನು ಮೂರು ಸುತ್ತು ಸುತ್ತಿ ತಲೆಯ ಮೇಲಿಂದ ಲಿಂಬೆ ಹಣ್ಣುಗಳನ್ನು ಕೊಯ್ದು ಹಾಕುತ್ತಾನೆ. ಈ ವೇಳೆಗೆ ಆ ಮೂವರಿಗೂ ಅಥವಾ ಇಬ್ಬರಿಗಾದರೂ ಮೈ ಮೈದುಂಬಿರುತ್ತದೆ. ಅವರು ಕೈಯಲ್ಲಿ ಮುಡಿಕೆ ಹಿಡಿದು ನಡುಗಲಾರಂಭಿಸುತ್ತಾರೆ. ನಂತರ ಹೀಗೆ — ಹಲಗೆಯ ವಾದ್ಯದೊಂದಿಗೆ ಊರ ಗಡಿಯ ಕಡೆ ಹೊರಡುತ್ತಾರೆ, ಅವುಗಳ ಮುಡಿಕೆ ಅಥವಾ ಆ ಪ್ರಧಾನ ಕೆಲವನ್ನು ಹೊತ್ತ ಮೂವರು ಮುಂದೆ ಹೋಗದೇ ಮತ್ತೆ ಮತ್ತೆ ಹಿಂದೆ ಓಡುತ್ತಿರುತ್ತಾರೆ. ಆಗ ದೇವರು ಇದ್ದಗಟ್ಟ ಗಡಿಕಡೆಗೆ ಅಟ್ಟುವುದು ವಿಶೇಷವಾಗಿರುತ್ತದೆ. ಹೀಗಾಗುವಾಗೆಲ್ಲ ಪದೇ ಪದೇ ತೆಂಗಿನ ಕಾಯನ್ನು ನೀವಾಳಿಸಿ ಒಡೆಯುವುದು, ಲಿಂಬೆಹಣ್ಣನ್ನು ಕೊಯ್ಯುವುದು ಸಾಮಾನ್ಯ. ಒಟ್ಟಾರೆ ಆ ಇಡೀ ಸನ್ನಿವೇಶ ತೀರಾ ಭಯ ವಿಸ್ಮಿತ ಕುತೂಹಲದಿಂದ ಕೂಡಿದ್ದು, ಆ ಮೂವರು ಮತ್ತೆ ಹಿಂದಕ್ಕೆ ಓಡುತ್ತಿರುತ್ತಾರೆ ಎಷ್ಟು ಜನ ಎಳೆದರೂ ಮುಂಬರದೆ ಕಗ್ಗಲ್ಲಿನಂತೆ ಸೆಟೆಯುತ್ತಿರುತ್ತಾರೆ ಇದು ತೀರಾ ವಿಚಿತ್ರವೆನಿಸುತ್ತದೆ. ಬುಟ್ಟಿ ಹೊತ್ತವರೂ ಹೀಗೇ ಮಾಡುತ್ತಿರುತ್ತಾರಾದರೂ ಇವರಷ್ಟು ಉಗ್ರ ಆಗಿರುವುದಿಲ್ಲ. ಇನ್ನೊಂದು ವಿಶೇಷವೇನೆಂದರೆ ಹೀಗೆ ಹಿಂದಕ್ಕೆ ಓಡುವವರು ಹಿಂಬದಿಯಾಗಿ — ತೀರಾ ವೇಗವಾಗಿ ಓಡುವುದು ಆಶ್ಚರ್ಯ ತರುತ್ತದೆ. ಏಕೆಂದರೆ ಒಬ್ಬ ಆರೋಗ್ಯವಂತ ವ್ಯಕ್ತಿ ತೀರಾ ವೇಗವಾಗಿ ಹಿಂದಕ್ಕೆ ಓಡಬೇಕಾಗುತ್ತದೆ ಇದು ಇಡೀ ಸನ್ನಿವೇಶವನ್ನು ಆವೇಶದಿಂದ ಬಿಸಿಯಾಗಿಸಿರುತ್ತದೆ. [illegible] ಮನಶಾಸ್ತ್ರೀಯ ಅಧ್ಯಯನದ ಕುತೂಹಲಕಾರಿ ವಿಷಯಗಳನ್ನು ಹೊರಹಾಕುವ ಸಾಧ್ಯತೆಗಳಿವೆ

ಹೀಗೆ ಗಡಿ ಕಡೆಗೆ ಹೊರಟು ಊರ ಗಡಿ ಭಾಗದಲ್ಲಿರುವ ಅಂದರೆ ಊರ ಗಡಿಯಂಚ ಹೊರಗಿನ ಒಂದು ಬೇವಿನ ಮರದ ಬಳಿ ಆ ಕೆಲಗಳನ್ನು ಬಿಡಲಾಗುತ್ತದೆ. /ಇಲ್ಲಿಯೂ ಅಮ್ಮನ ಪ್ರಧಾನ ಕೆಲ ಹೊತ್ತವರು ಮೈದುಂಬಿ ಕೆಲವನ್ನು ಕೆಳಗೆ ಬಿಡುವುದಿಲ್ಲ ಮತ್ತೆ ಮತ್ತೆ ಜನರ ಕಣ್ಣು ತಪ್ಪಿಸಿಯೋ, ಅಥವಾ ಬಲಾತ್ಕಾರ ಮಾಡಿಯೋ ಊರ ಕಡೆ ಓಡಲು ಯತ್ನಿಸುತ್ತಾರೆ. ಆದರೆ ದೇವರು ಬಿಡುವುದಿಲ್ಲ ಅವರ ಕೈಯಲ್ಲಿನ ಹಾಗೂ ಹೊತ್ತಿರುವುದು ಬುಟ್ಟಿಯ ಕೆಲಗಳನ್ನು ಅಲ್ಲಿ ಇಳಿಸಿ ಅವರಿಗೆ ಮತ್ತೆ ಮಂತ್ರಿಸುತ್ತಾರೆ. ಹೀಗೆ ಮಾಡುವಾಗ ಮೈದುಂಬಿದವರು ಮತ್ತೆ ಮತ್ತೆ ಹಟ ಹಿಡಿದವರಂತೆ ವರ್ತಿಸುತ್ತಾರೆ. ಆಗ ಬೇವಿನ ಟೊಂಗೆಯಿಂದಲೋ, ಗುಮುಗನ ಬೆತ್ತದಿಂದಲೋ ಬಲು ಜೋರಾಗಿಯೇ ಹೊಡೆಯಲಾಗುತ್ತದೆ. ನೋಡುಗರಿಗೆ ಮೈನವಿರೇಳಿಸುವಂತೆ ಆ ಹೊಡೆತ ಮತ್ತು ವಾತಾವರಣವಿರುತ್ತದೆ. ಅಂತೂ ಕೊನೆಗೆ ಅಮ್ಮನನ್ನು ಕಳುಹಿಸಿ ಮನೆಗೆ ಹಿಂದಿರುಗುತ್ತಾರೆ. ಹೀಗಾದ ತಕ್ಷಣ ಈ ಊರ ಪಕ್ಕದ ಊರವರೂ ಪೂಜೆ ಕೈಗೊಂಡು ತಮ್ಮೂರಿಗೆ ಬಂದ ಮಾರಿಯನ್ನೇ ತಮ್ಮ ಗಡಿಯಿಂದ ಹೊರಹಾಕುತ್ತಾರೆ. ಹೀಗೆ ಈ ಮಾರಿ ಗಡಿಯಿಂದ ಗಡಿಗೆ ಸಾಗುತ್ತಲೇ ಹೋಗುತ್ತಾಳೆ.

ಇಲ್ಲಿ ನಮಗೆ ಬಹಳ ಮುಖ್ಯವಾಗುವುದು ಅಮ್ಮನನ್ನು ಗಡಿಯಿಂದ ಹೊರಗಟ್ಟುವ ಕ್ರಿಯೆ. ಊರಿಗೆ ಈ ಮಾರಿ ಬಂದಿದ್ದರಿಂದಲೇ ಊರಲ್ಲಿ ಪಿಡುಗು, ರೋಗ ಆರಂಭವಾಯಿತೆಂದು ಊರಿಗೆ ಈ ಮಾರಿ ಬಂದಿದ್ದರಿಂದಲೇ ಪಿಡುಗು, ರೋಗ ಆರಂಭವಾಯಿತೆಂದು ತಿಳಿದ ಜನ ಅವಳ ರೂಪವನ್ನು ಪ್ರತೀ ಮಾಡಿಯಲ್ಲೋ ಪೂಜಿಸಿ ಒಲ್ಲುಗೊಳಿಸಿ ಊರ ಹೊರಗಟ್ಟುವುದು ರೋಗವನ್ನು ಕಳೆಯುವ ಕ್ರಿಯೆಯಾಗಿದೆ. ಅಲ್ಲದೇ ಪೂಜಿಸುವ ಎಡೆ ಹಾಕುವ ಆಚರಣೆಗಳು ಅವಳನ್ನು ಸಂತೃಪ್ತಿಗೊಳಿಸುವ ವಿಧಾನಗಳೇ ಆಗಿವೆಯಲ್ಲದೇ ಮಾನವ ಸಹಜವಾದ ಒಲಿಸಿಕೊಂಡು ಕಾರ್ಯ ಸಾಧಿಸಿಕೊಳ್ಳುವ ಪ್ರವೃತ್ತಿಯನ್ನು ಸೂಚಿಸುತ್ತವೆ. ಇದು 'ಮಾರಿ' ಯು ಅಲೆಮಾರಿ ಪ್ರವೃತ್ತಿಯನ್ನು ಸೂಚಿಸುವುದು ರೋಗ ತರುವ ದೇವಿಯು ಸಂಪ್ರೀತಿಗೊಳಿಸುವ ಈ ಸಂದರ್ಭದಲ್ಲಿ ಬೇವನ್ನು ಬಳಸುವುದು 'ಬೆಟ್ಟುವದಿನ' ಆರಾಧನೆಯನ್ನೊಳಗೊಂಡಿದೆ.

<u>ಕೂಗುಮಾರಿ</u>:— ಇದು ಹಳ್ಳಿಗಳಲ್ಲಿರುವ ಒಂದು ನಂಬಿಕೆ. ಇದಕ್ಕೆಂದೇ ಯಾವುದೇ ವಿಶಿಷ್ಟ ಪೂಜಾ ವಿಧಾನಗಳಾಗಲೀ, ಹಬ್ಬಗಳಾಗಲೀ ಇಲ್ಲ. ಹಳ್ಳಿಗಳ ಜನರು ಹೇಳುವ ಹಾಗೆ ಇವಳು ಗಾಳಿಯ ಮೂಲಕ ಬರುವ ಮಾರಿ ಇವಳು ಬಂದು ಮನೆಯ ಮುಂದೆ ನಿಂತು ಮನೆಯ ಯಜಮಾನರಾದರೂ ಒಬ್ಬರ ಹೆಸರಿಡಿದು ಕೂಗುತ್ತಾಳೆ. ಹೀಗೆ ಕೂಗುವುದನ್ನು ಕೇಳಿದ ಮನೆಯವರು ಯಾರಾದರೂ ಪರಿಚಯಸ್ಥರು ಬಂದಿದ್ದಾರೆಂದು ತಿಳಿದು ಕದ ತೆರೆದರೆ ಆ ಕ್ಷಣವೇ ಬಾಯಲ್ಲಿ ರಕ್ತ ಕಕ್ಕಿ ಸಾಯುತ್ತಾರೆ. ಎನ್ನುತ್ತಾರೆ. ಇದಕ್ಕೆ ಮದ್ದೆಂದರೆ ಪ್ರತಿ ಮನೆಯವರೂ ಮನೆಯ ಮುಂಬಾಗಿಲ ಕದದ ಮೇಲೆ 'ನಾಳೆ ಬಾ' ಎಂದು ಬರೆಯುವುದು. ಹೀಗೆ ಬರೆದರೆ ಅದನ್ನೋದಿ ಮಾರಿ ನಾಳೆ ಬಂದು ನೋಡುತ್ತಾಳೆ ಮತ್ತೂ 'ನಾಳೆ ಬಾ' ಎಂಬುದರಿಂದ ವಾಪಸ್ಸಾಗುತ್ತಾಳೆ. ಹೀಗೆ ದಿನಾ ಬಂದು 'ನಾಳೆ' ಎಂದಿರುವುದನ್ನು ನೋಡಿ ವಾಪಸ್ಸಾಗಿ ಕೊನೆಗೆ ಬೇಸರಗೊಂಡು ಊರಿಂದ ಹೊರಟು ಹೋಗುತ್ತಾಳೆ. ಎಂಬುದು ಅವರ ತರ್ಕ. ಹೀಗೆ ಒಮ್ಮೆ ಹಳ್ಳಿಯಲ್ಲಿ ಸುದ್ದಿ ಹುಟ್ಟಿದರೆ ಸಾಕು, ಈ ರೀತಿಯ ಘಟನಾವಳಿಗಳ ಕಾಕತಾಳೀಯ ಸಂಬಂಧಗಳೇರ್ಪಟ್ಟು ಹೋದಲ್ಲಿ ಮಾರಿಯ ಅವತಾರವಾಗುತ್ತದೆ.

''<u>ಬುರ್ ಬುರ್ ಮಾರಿ</u>'':—

'ಬುರ್ ಬುರ್' ಎಂಬ ಪದ ಈ ಅಮ್ಮನನ್ನು ಊರೂರಿಗೆ ಹೊತ್ತು ತರುವಾಗ ಬಾರಿಸುವ ವಾದ್ಯದಿಂದ ಬಂದುದಾಗಿದೆ. ಆಗಾಗ ಊರಿಗೆ ಬಂದು ಹೋಗುವ ಈ ಮಾರಿಯನ್ನು 'ಗಾಳಿಮಾರಿ' ಎಂದೂ ಕರೆವ ವಾಡಿಕೆಯಿದೆ. ಈ ಮಾರಿಯನ್ನು ಹೊತ್ತು ಊರೂರು ತಿರುಗುವವರು 'ದುರುಗ ಮುರುಗಿ' ಎಂಬ ಜನಾಂಗದವರು.

ಒಂದು ಪೆಟ್ಟಿಗೆಯಲ್ಲಿ ಮರದ ಒಂದು ಹೆಣ್ಣುದೇವತೆಯ ವಿಗ್ರಹವಿರುತ್ತದೆ. ಅದಕ್ಕೆ ಲೋಹದ ಮುಖವನ್ನು ತೊಡಿಸಿರುತ್ತಾರೆ. ಪೆಟ್ಟಿಗೆ ಚಿಕ್ಕ ಒಂದು ಕೋಣೆಯಾಕಾರದಲ್ಲಿದ್ದು, ಅದಕ್ಕೆ ಬಾಗಿಲಿರುತ್ತದೆ. ಈ ವಿಗ್ರಹಮ್ಮನಿಗೆ ಹಸಿರು ಬಳೆ ತೊಡಿಸಿದ್ದು, ಬೇವಿನ ಸೊಪ್ಪನ್ನು ಕಟ್ಟಿರುತ್ತಾರೆ. ಜೊತೆಗೆ ಕಸಬರಿಕೆ ಇರುತ್ತದೆ. ಅರಿಸಿನ ಕುಂಕುಮವನ್ನು ಹಚ್ಚಿದ ಈ ದೇವತೆ ಮಾರಮ್ಮನ ರೂಪ. ಇದನ್ನು ಹೊತ್ತು ತರುವವನು ಒಬ್ಬ ಗಂಡಸು ಅವನೊಡನೆ ಒಬ್ಬ ಹೆಂಗಸು 'ಬುರ್ರ್, ಬುರ್ರ್' ವಾದ್ಯವೊಂದನ್ನು ಕೊರಳಿಗೆ ನೇತು ಹಾಕಿಕೊಂಡಿದ್ದು ಅದನ್ನು ಬಾರಿಸುತ್ತಿರುತ್ತಾಳೆ. ಅದರಿಂದ ಹೊರಡುವ ಬುರ್, ಬುರ್, ಎಂಬ ಶಬ್ದವೇ ಈ ಹೆಸರು ಬರಲು ಕಾರಣವಾಗಿದೆ. ಹೀಗೆ ಹೊತ್ತು ತಂದ ಅಮ್ಮನ ಪೆಟ್ಟಿಗೆಯನ್ನು ಊರ ಕೇರಿಗಳಲ್ಲಿ ಹಳ್ಳಿ ಬೀದಿಯಲ್ಲಿಟ್ಟು ಅಕ್ಕಪಕ್ಕದ ಮನೆಗಳಿಗೆ ಹೋಗಿ ಭಿಕ್ಷೆ ಹಾಕುವಂತೆ ಆತ ಕೇಳುತ್ತಾನೆ. ಅಲ್ಲದೇ ಅಮ್ಮನ ಮಹಿಮೆಯನ್ನು ಆತ ಹಾಡುತ್ತಿದ್ದಂತೆ ಅವನ ಹಾಡಿಗೆ ತಾಳವಾಗಿ ಹೆಂಗಸು ಆ ವಾದ್ಯ ನುಡಿಸುತ್ತಾಳೆ. ಹಾಡಿನ ರೀತಿಯಲ್ಲಲ್ಲದಿದ್ದರೂ ಒಂದು ರೀತಿಯಲ್ಲಿ ಹೊಗಳಿಕೆಯ ಮಾತುಗಳಂತೆ ಅವು ಹೊಮ್ಮುತ್ತವೆ. ಆತನೂ ಕೂಡ ಹಣೆಗೆ ಅರಿಸಿನ, ಕುಂಕುಮ ಬಳಿದುಕೊಂಡು ಸೊಂಟಕ್ಕೆ ಲಂಗದ ರೀತಿ ಬಟ್ಟೆ ಕಟ್ಟಿರುತ್ತಾನೆ. ಅದರ ಮೇಲೆ ತುಂಡು, ತುಂಡು ಬಟ್ಟೆಗಳನ್ನು ಇಳಿಬಿಟ್ಟು, ಸಿಕ್ಕಿಸಿಕೊಂಡಿರುತ್ತಾನೆ. ಅದರಂತೆ ಬರಿ ಮೈಯಲ್ಲಿರುವ ಆತ ಪದೇ ಪದೇ ಮೈಗೆ, ತೋಳಿಗೆ, ತನ್ನ ಕೈಯಲ್ಲಿರುವ ಚಾಟಿಯಿಂದ ಹೊಡೆದು ಕೊಳ್ಳುತ್ತಿರುತ್ತಾನೆ. ಕೆಲವೊಮ್ಮೆ ಚಾಕುವಿನಿಂದ ತನ್ನ ತೋಳನ್ನು ಕೊಯ್ದುಕೊಳ್ಳುತ್ತ ರಕ್ತ ತೋರಿಸುತ್ತಾನೆ. ಬಾಯಿಗೆ ತ್ರಿಶೂಲದಂತಹ ವಸ್ತು, ಅಥವಾ ದಬ್ಬಳದಂತಹ ವಸ್ತುವನ್ನು ಚುಚ್ಚಿಕೊಂಡಿರುತ್ತಾನೆ. ಹೀಗೆ ನಾನಾರೀತಿ ರೀತಿಯ ವರ್ತನೆಗಳಿಂದ ಜನರ ಗಮನ ಸೆಳೆಯುವ ಆತ ಅಮ್ಮನ ಸಾಮರ್ಥ್ಯವನ್ನು ಹೇಳುತ್ತ, ಮಕ್ಕಳು ಮರಿಗಳಿಗೆ ರೋಗ ಬರದಂತೆ ಕಾಪಾಡಲು ಈ ತಾಯಿಗೆ ಭಿಕ್ಷೆ ಹಾಕುವಂತೆ ಹೇಳುವಾಗ ಜನರಿಗೆ ಸಹಜವಾಗಿಯೇ ಆ ದೇವತೆಯ ಬಗ್ಗೆ ಭಯಮಿಶ್ರಿತ ಭಕ್ತಿ ಭಾವ ಬೆಳೆಯುತ್ತದೆ. ಆಗ ಜನರು ಮೊರದಲ್ಲಿ ಅಕ್ಕಿ, ಕಾಣಿಕೆಯನ್ನಿಟ್ಟು ಪೆಟ್ಟಿಗೆಯಿದ್ದ ಬಳಿಗೊಯ್ದು ಭಿಕ್ಷೆ ನೀಡುತ್ತಾರೆ.

ಜಾಗೆ ಬಂದ್ದು ಭಂಡಾರವನ್ನು ನೀಡುತ್ತಾಳೆ. ಹಾಗೆ ಬಂದ್ದ ಭಕ್ತರೆಳು ಭಯದಿಂದ ಕೇಳುತ್ತಾರೆ. ಇದು ಏನು ಹೀಗೆ ತಿರುಗುವ ಬಗ್ಗೆ ವಿಚಾರಿಸಿದರೆ ಆಕೆ ತನ್ನ ಮುತ್ತೈದೆಯಾದದ್ದು ತಾನು ಈ ದೇವಿಗೆ ನಡೆಸುವ ಸೇವೆಯೆಂದೂ ಹೇಳುತ್ತಾನೆ.

ಈ ಮಾರಿ ಆವೆಯಾಗಿ ಬಂದ ಪ್ರತೀಕವಾಗಿದ್ದಾಳೆ. ಊರಿಂದ ಊರಿಗೆ ಸಂಚರಿಸುವ ಈಕೆ ಹಳ್ಳಿಗರಲ್ಲಿ ಗೌರವದ ಭಕ್ತಿಯ ಭಾವನೆಯನ್ನು ಸೃಷ್ಟಿಸುತ್ತಾಳೆ. ಆದಿವಾಸಿ ಜನಾಂಗದ ದೇವತೆಯೆಂಬ ದೃಷ್ಟಿಯಿಂದ ಮಾತ್ರವಲ್ಲದೇ 'ಮಾರಿ' ಯ ಸಂಚಲನಾತ್ಮಕ ಗುಣದ ದೃಷ್ಟಿಯಿಂದಲೂ ಇವಳು ಬಹಳ ಮುಖ್ಯಳಾಗುತ್ತಾಳೆ. ಮುಂದೆ ಮಾರಿ ಶಬ್ದದ ಚರ್ಚೆಯಲ್ಲಿ 'ಚಾಟಿ' ಯವನ ಪಾತ್ರದ ವಿಷಯ ಪ್ರಸ್ತಾಪಿಸುವಾಗ ಇದನ್ನು ವಿವರಿಸಲಾಗುವುದು. ಒಟ್ಟಾರೆ ಈ ಗಾಳಿ ಅಥವಾ ಬೇರೆ ಬೇರೆ ಮಾರಿಯ ರೂಪದ ಕನ್ನಡ ಮಾರಿ ಶಬ್ದದ ಒಟ್ಟು ಚಲನಾತ್ಮಕ ಸಂಕೀರ್ಣತೆಯಲ್ಲಿ ಸೇರಿಕೊಂಡಿದೆ ಎಂಬುದಂತೂ ನಿಜ. ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಂಚರಿಸುವ ಈಕೆ ರೋಗ ಚಲನೆಯ ಒಂದು ಮಾದರಿಯಾಗಿದ್ದಾಳೆ. ಅಲ್ಲದೆ ಭಂಡಾರ ಎಂದರೆ ಇಲ್ಲಿ ರೋಗವನ್ನು ಅದನ್ನು ಗುಣಪಡಿಸಬಲ್ಲ ಬಲವನ್ನು 'ಹಿಡಿಯುವುದು ರೋಗತರುವ ಮತ್ತು ನಿವಾರಿಸುವ ಶಕ್ತಿಯಾಗಿ ಆವಳನ್ನು ಪರಿಚಯಿಸುತ್ತದೆ.' 'ದುರುಗ ಮುರುಗಿ' ಜನಾಂಗವನ್ನು ಅಧ್ಯಯನ ಮಾಡುವ ಮೂಲಕ ಈ 'ಮಾರಿ' ಯ ಹಿನ್ನೆಲೆಯನ್ನು ಕುರಿತು ಅಧ್ಯಯನ ಮಾಡುವ ಅಗತ್ಯತೆ ಕೂಡಾ ಇದೆ.

'' <u>ಗಳ್ಳೆ ಮಾರಿ</u>'' :-

ಗಳ್ಳೆ ಮತ್ತು ಚಪ್ಪೆರೋಗ ಎಂಬ ಎರಡು ರೋಗಗಳು ದನಗಳಿಗೆ ಅದರಲ್ಲೂ ಎಮ್ಮೆಗಳಿಗೆ ಬರುವ ದೊಡ್ಡ ರೋಗ. ಗಳ್ಳೆ ರೋಗ ಸಾಮಾನ್ಯವಾಗಿ ಎಮ್ಮೆಗೆ ಮಾತ್ರ ಬರುವ ಮರಣಾಂತಿಕ ರೋಗವಾಗಿದೆ. ಇದನ್ನು ಮಾರಿ ಬೇನೆ, ದೊಡ್ಡರೋಗ, ಎಂದೆಲ್ಲಾ ಕರೆಯುವ ವಾಡಿಕೆಯುಂಟು. ಇಂದಿನ ಮುಂದುವರೆದ ವೈಜ್ಞಾನಿಕ ಯುಗದಲ್ಲೂ ಇದಕ್ಕೆ ಔಷಧಿ ಕಂಡು ಹಿಡಿವಲ್ಲಿ ವಿಫಲವಾಗಿದೆ. ಒಮ್ಮೆ ಈ ರೋಗ ಬಂದು ಬಿಟ್ಟರೆ ವಾಸಿ ಮಾಡಲು ಸಾಧ್ಯವಿಲ್ಲ ಎಂಬ ಭಾವನೆಯುಂಟು. ಇದು ಸತ್ಯ ಕೂಡ. ಈ ರೋಗದ ಲಕ್ಷಣವೆಂದರೆ..... ಹೊರಗೆ ಕಾಣುವ ಲಕ್ಷಣಗಳತ ಮೊದಲು ಎಮ್ಮೆ ಜೊಲ್ಲು ಸುರಿಸಲಾರಂಭಿಸುತ್ತದೆ. ಜೊತೆಗೆ ಕಣ್ಣೀರು ಸುರಿಸುತ್ತದೆ. ಒಂದು ಹತ್ತು ನಿಮಿಷದಲ್ಲೇ ಗಂಟಲಲ್ಲಿ ಗೊರಗುಟ್ಟುವ ಸದ್ದು ಉಂಟಾಗುತ್ತದೆ. ಹೀಗೆ ಗೊರಗುಟ್ಟಲಾರಂಭಿಸಿದ ಒಂದೆರಡು ಗಂಟೆಯಲ್ಲೇ ಎಮ್ಮೆ ಉಸಿರುಕಟ್ಟಿ ಸಾವನ್ನಪ್ಪುತ್ತದೆ. ಒಮ್ಮೆ ಎಮ್ಮೆ ಗಂಟಲಲ್ಲಿ ಗುರುಗುಟ್ಟಲಾರಂಭಿಸಿದರೆ ಸಾಮಾನ್ಯವಾಗಿ ಡಾಕ್ಟರರ ಚಿಕಿತ್ಸೆಯೂ ಫಲ ನೀಡಲಾರದು. ಇದಕ್ಕೆ ಗ್ರಾಮೀಣರು ತಮ್ಮದೇ ಆದ ನಾಟೀ ವೈದ್ಯವನ್ನು ಅನುಸರಿಸುತ್ತಾರೆ. ಅವುಗಳಲ್ಲಿ ಮುಖ್ಯವಾದವೆಂದರೆ:

1) ಹೀಗಾದ ಎಮ್ಮೆಗೆ ಬೇವಿನ ತೊಗಟೆ ಅಥವಾ ಸೊಪ್ಪನ್ನು ಅರೆದು ಮಾಡಿದ ರಸವನ್ನು ಬಿಸಿ ನೀರಿನ ಜೊತೆ ಬೆರೆಸಿ ಹುಯ್ಯುವುದು.
2) ಸುಣ್ಣದ ನೀರು ಕುಡಿಸುವುದು.
3) ಬಾಳೆಯ ಕದನ್ನು ಸೀಳಿ ಅದರೊಳಗಿನ ದಂಟನ್ನು (ದಿಂಡು) ತಿನ್ನಿಸುವುದು.

ಹೀಗೆ ತಮ್ಮದೇ ಆದ ಔಷಧವನ್ನು ಕಂಡುಕೊಂಡಿದ್ದರೂ ಫಲ ನೀಡುವುದು ಕಡಿಮೆಯೆಂದೇ ಹೇಳಬೇಕು.

ಈ ಖಾಯಿಲೆಗೂ ಕಾರಣವನ್ನು ಅವರು ಕಂಡುಕೊಳ್ಳುವುದು ಮಾರಿಯಲ್ಲಿ.

ಇದಲ್ಲದೇ ಚಪ್ಪೆ ರೋಗ ಈ ರೋಗ ಎಮ್ಮೆ ಮತ್ತು ಹಸುಗಳೆರಡಕ್ಕೂ ಬರುವ ಖಾಯಿಲೆ. ಇದು ಗಳ್ಳೆ ರೋಗದಂತಹ ಅಪಾಯಕಾರಿಯಲ್ಲದಿದ್ದರೂ ತೀರಾ ಸಣ್ಣ ಖಾಯಿಲೆಯೇನೂ ಅಲ್ಲ. ಇದರ ಲಕ್ಷಣವೆಂದರೆ ಹಿಂಗಾಲು ಮತ್ತು ಮುಂಗಾಲಿನ ಚಪ್ಪೆಯ ಭಾಗ ಅಂದರೆ ತೊಡೆಯ ಮೇಲ್ಭಾಗ ಬಾತುಕೊಂಡು ಕಾಲಿಡಲು ಸಾಧ್ಯವಾಗದಂತಾಗದಿರುವುದು. ಇದಕ್ಕೆ ವೈದ್ಯರಿಂದ ಚಿಕಿತ್ಸೆ ಮತ್ತು ಸಾಮಾನ್ಯ

ಯಿಂದಾಗಿ ಔಷಧಿ ಪ್ರಯೋಗಗಳಿಂದಲೂ ಜನರಲ್ಲಿ 'ಮಾರಿ' ಯ ಬಗೆಗಿನ ಭಯದ ಹೆದರಿಕೆ ಹೋಗಿಲ್ಲ. ಗಳು ಮತ್ತು ದನದ ರೋಗಗಳು ಸಾಮಾನ್ಯವಾಗಿ ಏಕಕಾಲದಲ್ಲಿ ಕಾಣಿಸಿಕೊಳ್ಳುತ್ತವೆ. ಗಳ್ಳ ರೋಗಕ್ಕೆ ಮುಂಜಾಗ್ರತಾ ಕ್ರಮವು ವಹಿಸಿದರೂ ಹೊರಗಿನಿಂದ ಬಂದ ರೋಗ ಮಾತ್ರ ಯಾವತ್ತೂ ನಿಲ್ಲುವಂತಾಗಿಲ್ಲ.

ಈ ಸಂದರ್ಭದಲ್ಲಿ ಗ್ರಾಮದೇವತೆಯ ದನ ಮತ್ತು ಎಮ್ಮೆಗಳ ಹಿಂಭಾಗಕ್ಕೆ ಒಂದು ಕಡೆ ಕೆಮ್ಮಣ್ಣು ಒಂದು ಕಡೆ ಸುಣ್ಣ ಹಚ್ಚಿ ಊರಿನ ಬಿಡುತ್ತಾರೆ. ಅಲ್ಲದೇ ಈ ಕಾಯಿಲೆಗೆ ಕಾರಣವಾದ '<u>ಗಳ್ಳೆಮಾರಿ</u>' ಯನ್ನು ಪೂಜಿಸುತ್ತಾರೆ. ಈ ಮಾರಮ್ಮನ ಪೂಜೆ ಮತ್ತು ಆಚರಣೆಗಳು ಈ ಹಿಂದೆ ವಿವರಿಸಿದ 'ಪ್ಲೇಗು' ಮಾರಿಯ ಆಚರಣೆಗಳೇ ಆಗಿವೆ. ಆದರೆ ಅಲ್ಲಿನಷ್ಟು ಮಡಿವಂತಿಕೆ, ಇಲ್ಲಿರುವುದಿಲ್ಲ. ಅಲ್ಲದೇ ಅಲ್ಲಿ ಪೂಜೆಗೆ ಬಳಸುವ 'ಕಿಂಗೆ' ಎಂಬ ವಸ್ತುವಾಗಲೀ ಇಲ್ಲಿ ಬಳಸಲಾಗುವುದಿಲ್ಲ. ಉಳಿದಂತೆ ಅಮ್ಮನನ್ನು ಪೂಜಿಸುವ, ಕಳುಹಿಸುವ ಎಲ್ಲಾ ಕ್ರಿಯೆ ಮತ್ತು ಸಂಪ್ರದಾಯಗಳೂ ಅಲ್ಲಿನಂತೆಯೇ ನಡೆಯುತ್ತವೆ. ಬಹುಶಃ ಮನುಷ್ಯರದಲ್ಲವಾದುದು ಈ ಮಡಿ ಮೊದಲಾದ ಶ್ರದ್ಧೆಯ ತಾತ್ಸಾರಕ್ಕೆ ಕಾರಣವಿರಬಹುದು. ಆದರೆ ಮೊದಲ ಪೂಜೆಗಳಲ್ಲಿ ಮೊಸರನ್ನನ್ನಿಕ್ಕುವಲ್ಲಿ ಹೋಳಿಗೆಯ ಎಡೆ, ಮಾರಿಯ ಪ್ರಧಾನ ಕೇಲುಗಳು, ಬುಟ್ಟಿಯಲ್ಲಿ ತುಂಬಿದ ಕೇಲುಗಳು, ಅದನ್ನು ಹೊರುವವರು, ಹೊತ್ತೊಯ್ಯುವಾಗಿನ ಘಟನೆಗಳು ಅಲ್ಲಿನಂತೆಯೇ ಇರುತ್ತದೆ ಮಾತ್ರವಲ್ಲದೆ ಈ ಊರವರು ಇನ್ನೊಂದು ಗಡಿಗೂ ನಂತರ ಆ ಊರವರು ಮತ್ತೊಂದು ಗಡಿಗೂ ಅಲ್ಲಿನಂತೆಯೇ ಸಾಗಿಸುತ್ತಾರೆ.

ಹೀಗೆ ಇಲ್ಲೆಲ್ಲಾ ಬಹಳ ಮುಖ್ಯವಾಗುವುದು ಮಾರಮ್ಮ ಅಥವಾ ಮಾರಿಯರು ಅರ್ಥೈಸಲ್ಪಟ್ಟಿರುವ ರೀತಿ ಮತ್ತು ಅವರು ರೋಗ ತರುವ ಮತ್ತು ತಮ್ಮೊಡನೆ ಸಂತೃಪ್ತಿಗೊಂಡು ಅದನ್ನು ಕೊಂಡೊಯ್ಯುವ ದೇವತೆಯರಾಗಿ ಚಲನೆಯಲ್ಲಿರುವುದು. ರೋಗ ಹರಡುವಿಕೆಯ ಕ್ರಿಯೆಯನ್ನು ಇದು ಸೂಚಿಸುತ್ತದೆ. ಇದಲ್ಲದೇ ಅಲೆಮಾರಿತನದ ಘಟ್ಟವೊಂದರ ಪ್ರಸರಣವನ್ನು ತಿಳಿಸುತ್ತದೆ. ಈ ಪ್ರಚಲನಶೀಲವಾದ ಪ್ರಸರಣಾ ಗುಣವೇ ಹಟ್ಟಿ ಹಟ್ಟಿಗಳ ಕದ ತಟ್ಟಿ ಮಾರಿಯರ ಪ್ರಭಾವವನ್ನು ಹರಡಿರಬಹುದಲ್ಲದೆ, ಅದು ಅಲ್ಲಿನ ಕಾವಲಮ್ಮನ ಕಲ್ಪನೆಯೊಂದಿಗೆ ಬೆರೆತುಕೊಂಡು ಇನ್ನಷ್ಟು ಸಂಕೀರ್ಣಗೊಂಡಿರುವುದೂ ಸುಸ್ಪಷ್ಟ. ಇಲ್ಲಿ ಮತ್ತೊಂದು ವಿಚಾರಣೀಯ ವಿಷಯವೆಂದರೆ ಎಲ್ಲಿಯೂ ಕೂಡ ಇವಳು ವೈದಿಕರ ಶ್ರೇಣೀಕೃತ ಅಥವಾ ವರ್ಣ ವ್ಯವಸ್ಥೆಯ ಆಶಯವನ್ನು ತೊಟ್ಟುಕೊಂಡಿರದೇ ಇರುವುದಾಗಿದೆ.

ಹೀಗೆ ಮಾರಿ ಎಂಬ ಹೆಸರಿನಿಂದಲೇ ಪೂಜಿಸುತ್ತಾ ಬಂದ ಆಚರಣೆಗಳು ಕೆಲವಿದ್ದರೆ '<u>ಮಾರಿ</u>' ಗ ಹೊರತಾದ ಕೆಲವು ಅಮ್ಮಗಳ ಆರಾಧನೆಯೂ ಇದೆ. ಮಾರಿ ಬಡಿತಕ್ಕೊಳಗಾದವರು ಅಲ್ಲಿ ಕೇವಲ ರೋಗಿಗಳಾಗಿ ಕಾಣಲ್ಪಟ್ಟರೆ, ಈ ಅಮ್ಮನಿಂದ ಪೀಡಿತರಾದವರನ್ನು ಬಹಳ ಗೌರವ, ಮಡಿವಂತಿಕೆಯಿಂದ ಕಾಣಲಾಗುತ್ತದೆ. ಅಂದರೆ ಅಮ್ಮನನ್ನು ಹೇಗೋ ಹಾಗೇ ಆ ರೋಗಿಗಳನ್ನೂ ಮಡಿವಂತಿಕೆಯಿಂದ ನಡೆಸಿಕೊಳ್ಳಲಾಗುತ್ತದೆ.

ಉದಾ:- '<u>ದಡಾರಮ್ಮ</u>'

ಸಣ್ಣ ಮಕ್ಕಳಿಗೆ ದಡಾರಗಳಿದ್ದರೆ, ಆಗ ಹಿರಿಯರು ದಡಾರಮ್ಮನನ್ನು ಪೂಜಿಸುತ್ತಾರೆ. ಇಲ್ಲಿ ಒಂದು ಹೊಸ ಮಡಕೆಯಲ್ಲಿ ವೀಳ್ಯದೆಲೆ ಮತ್ತು ಬೇವಿನಸೊಪ್ಪನ್ನು ತೊಡಿಸಿ ಅಕ್ಕಿಯ ಮೇಲಿಟ್ಟು ಪೂಜೆ ಮಾಡುವ ಈ ಅಮ್ಮನಿಗೆ ಕೇವಲ ಕಂಡಬಲ್ಲಿ, ಬಾಯಲ್ಲಿ ಹಾದರೆ, ಬೇಸಣಿಗೆಯಿಂದ ಬೇಸಿ ಹುರಿಸಿದ ಬೆಂಕಿಯಲ್ಲಿ ಬೇಯಿಸಿ ಮೊಸರೊಂದಿಗೆ ಅನ್ನವನ್ನು ಎಡೆ ಮಾಡಲಾಗುವುದು. ಎರಡು ವಾರ ಹೀಗೆ ಪೂಜೆ, ಅಂದಂದೇ ಕಳುಹಿಸಿ, ಮೂರನೇ ವಾರ ಏನಾದರೂ ಸಿಹಿ ಮಾಡಿ ಎಡೆ ಹಾಕಿ ಕಳುಹಿಸಲಾಗುವುದು. ಇಲ್ಲಿ ಬಹುಪಾಲು ಊರವರು ಒಟ್ಟಿಗೆ ಅಮ್ಮನನ್ನು ಕಳುಹಿಸುವ ಪರಿಪಾಠ ಇರುವುದಿಲ್ಲ.

ಇದನ್ನು ಪಡೆದಿರುವ ಮಕ್ಕಳನ್ನು ಶುಚಿಯಾಗಿ, ಮಡಿಯಲ್ಲಿಡಲಾಗುವುದು. ಅವರನ್ನು ಮಲ ಮೂತ್ರದ ಪರಿಸರದಲ್ಲಿ ಅಸ್ಪೃಶ್ಯರಂತೆ ನಿಗ್ರಹಿಸಲಾಗುವುದು. ಮುಟ್ಟುದಟ್ಟಾದ ಹೆಂಗಸರು, ಮುಟ್ಟು ...ವರು ಅವರ ಹತ್ತಿರ ಸುಳಿವಂತಿಲ್ಲ. ಸದಾ ಬೇವಿನ ಸೊಪ್ಪಿನ ಹಾಸಿಗೆಯಲ್ಲಿ ಮಲಗಿರಬೇಕಾಗುತ್ತದೆ. ...ದಿನ ತಪ್ಪಯು ಕಳೆಸುವುದು, ಬೇವಿನ ಸೊಪ್ಪನ್ನು ಅರೆದು ಮೈಗೆ ಹಚ್ಚುವುದು ಮೊದಲಾದ ಚಿಕಿತ್ಸೆ ...ಯನ್ನು ನಡೆಸಲಾಗುವುದು.

...ಮ್ಮನನ್ನು ಪೂಜಿಸುವುದು: ಹಳ್ಳಿಗಳಲ್ಲಿ ಇಂದಿಗೂ ಕೂಡ ಅಮ್ಮನನ್ನು ಪೂಜಿಸುವ ಪರಿಪಾಠವಿದೆ. ...ಯಾವುದೇ ರೋಗ, ಯಾರಿಗೇ ಇರಲಿ ಬಿಡಲಿ. ಪೂಜೆ ಮಾಡುತ್ತಾರೆ. ಮನೆಯ ದನಕರುಗಳಿಗೆ ...ಮಕ್ಕಳಿಗೆ ಯಾವುದೇ ಖಾಯಿಲೆಗಳು ಬರದಿರಲೆಂಬ ಆಶಯದೊಂದಿಗೆ ಈ ಪೂಜೆ ನಡೆದುಬಂದಿದೆ.

ಪ್ರತೀ ವಾರದ ಮಂಗಳವಾರ ಮತ್ತು ಶುಕ್ರವಾರ ಈ ಪೂಜೆ ನಡೆಯುತ್ತದೆ. ಅವರವರ ಮನೆಗಳಲ್ಲಿ ...ದು ಚಿಕ್ಕ ತಂಬಿಗೆಯಾಕಾರದ ಗುಂಡನೆಯ ಲೋಟದಲ್ಲಿ ಮೂರು ವೀಳ್ಯದೆಲೆ ಕಟ್ಟಿ ಬೇವಿನಸೊಪ್ಪನ್ನು ಮುಡಿಸಿ ಅಕ್ಕಿಯ ಮೇಲಿಟ್ಟು ಬೆಳಗ್ಗೆ ಪೂಜಿಸುತ್ತಾರೆ. ಸಾಯಂಕಾಲ ತಮ್ಮ ಮನೆಯ ಹತ್ತಿರ ...ವ ಮುಂದೆಯ ಬಾಗಿಲಿನ ತೆಂಗು, ಮಾವಿನ ಗಿಡ, ಬೇವಿನ ಮರ, ಬನ್ನಿಮರ ಮೊದಲಾದವುಗಳ ಬುಡಕ್ಕೆ ...ಯನ್ನು ಸಲ್ಲಿಸಿ(ಸುರಿದು) ಊದುಬತ್ತಿ ಬೆಳಗಿ ಬರುತ್ತಾರೆ. ಪೂಜಿಸಿದ ಲೋಟ ಅಥವಾ ವಸ್ತು ...ವಾಪಸ್ಸು ತರುತ್ತಾರೆ. ಬೇವಿನಸೊಪ್ಪು, ಲೋಟದಲ್ಲಿ ತುಂಬಿದ ನೀರು, ಬೇವಿನ ಸೊಪ್ಪನ್ನು ಮಾತ್ರ ಸುರಿದು ಬರುತ್ತಾರೆ. ಈ ರೀತಿಯ ಪೂಜೆಗೆ ಯಾವುದೇ ವಿಶೇಷ ನಿಯಮಗಳಿಲ್ಲ ಎಡೆಯ ಪದ್ಧತಿ ಇಲ್ಲ. ಆದರೆ ಮಡಿ ಮೈಲಿಗೆಯ ವಿಷಯ ಮಾತ್ರ ಇಲ್ಲಿಯೂ ಪಾಲಿತವಾಗಿದೆ.

“ಮಾರಿ” ಆಚರಣೆಗಳಲ್ಲಿ ಗಳ್ಳೀ ಮಾರಿ, ಪ್ಲೇಗು ಮಾರಿ, ಮೊದಲಾದ ಆಚರಣೆಗಳು ಎಲ್ಲ ಜಾತಿ ...ಯವರೂ ಆಚರಿಸುತ್ತಿದ್ದು, ಆ ಸಮಯದಲ್ಲಿ ಅವರು ಕೂಡಾ ಸಸ್ಯಹಾರವನ್ನು ಮಾತ್ರ ಬಳಸಬೇಕಾಗು...ದೆ. ಅಲ್ಲದೇ ಬೇರೆ ಬೇರೆ ಜಾತಿಗಳು ಪ್ರತ್ಯೇಕವಾಗಿ ವಾಸಿಸುತ್ತಿದ್ದು ಅವರಿಗೂ ಪ್ರತ್ಯೇಕ ದೇವರು ...ದ್ದರೆ ಅವರೂ ಪ್ರತ್ಯೇಕ ಕೆಲಸಗಳನ್ನು ಪೂಜಿಸಿ, ಪ್ರತ್ಯೇಕವಾಗಿಯೇ ತಮ್ಮ ದೇವರ ಉತ್ಸವಮೂರ್ತಿ ...ಯ ಗುಂಪುಗಳೊಡನೆ ಕಳುಹಿಸುವ ರೂಢಿಯಿದೆ. ಹೊನ್ನಾಳಿ ತಾಲ್ಲೂಕಿನ ಬೇಲೂರು ಗ್ರಾಮದಲ್ಲಿ ...ದಿಗರು ಮತ್ತು ಉಳಿದ ಜನಾಂಗದವರು ಬೇರೆ ಬೇರೆ ಪೂಜಿಸುತ್ತಾರಾದರೂ, ಮಾದಿಗರು ಉಚ್ಚಂಗಮ್ಮನ ...ಗ ಮತ್ತು ಉತ್ಸವ ಮೂರ್ತಿಯೊಂದಿಗೆ ಕಳುಹಿಸಲು ಬಂದರೆ, ಉಳಿದ ಎಲ್ಲಾ ಜನಾಂಗದವರೂ ಸೇರಿ ...ನ ವೀರಭದ್ರ ಮತ್ತು ರಂಗನಾಥ ದೇವರೊಂದಿಗೆ ಪ್ರತ್ಯೇಕವಾಗಿ ಹೊರಟು ಊರ ಅಕ್ಷೆಯ ಬಾಗಿಲಲ್ಲಿ ...ರೂ ಒಂದಾಗಿ ಒಟ್ಟಿಗೆ ಹೋಗುತ್ತಾರೆ. ಇಲ್ಲಿ ರಂಗನಾಥ, ವೀರಭದ್ರನಂತರದ ಸೃಷ್ಟಿ ದೈವಗಳು ...ದಿಗರ ಕೆಲವು ಹೊತ್ತ ಹುಡುಗರನ್ನು ಉಚ್ಚಂಗಮ್ಮ–ಲಿಂಗಾಯತರಂತಹ ಸ್ಪೃಶ್ಯ ಕೆಲವು ಹೊತ್ತವರನ್ನು ...ಮುಟ್ಟುತ್ತಾ–ಅವರನ್ನು ಊರಗಡಿಕಡೆಗೆ ಅಟ್ಟುತ್ತಾ ಸಾಗುತ್ತವೆ. ಇಲ್ಲೆಲ್ಲ ಇವು ಸಂಚರಿಸುವ ಮಾರ್ಗಗಳು ...ಗಳೊಂದಿಗೆ ಪವಿತ್ರವಾಗುತ್ತಾ ಸಾಗುತ್ತದೆ. ಅಂದರೆ ಆ ಕ್ಷಣಗಳಲ್ಲಿ ಬರ್,ಬರ್ ಮಾರಮ್ಮನನ್ನು ಕೇರಿ...ಗೆ ತಂದಾಗ ಅದು ಎಷ್ಟೇ ಕನಿಷ್ಟ ಜಾಗವಾಗಿದ್ದರೂ ಆ ಪೆಟ್ಟಿಗೆಯಿರುವ ವೇಳೆವರೆಗೆ ಅದು ಪವಿತ್ರವಾಗುತ್ತದೆ ...ಗೆ ಯಾರೂ ಚಪ್ಪಲಿಗಾಲಲ್ಲಿ ಹೋಗುವಂತಿರಲಿಲ್ಲ. ಹೀಗೆ ಇವು ತಮ್ಮೊಂದಿಗೆ ಪವಿತ್ರತೆಯನ್ನು ...ಪ್ಪಿಸಿಕೊಳ್ಳುತ್ತಿರುತ್ತವೆ.

11.4 ಮಾರಿಯಮ್ಮನ ಬಗೆಗಿನ ಐತಿಹ್ಯಗಳು:-

ಐತಿಹ್ಯ : 1

ಬ್ರಾಹ್ಮಣರ ಮನೆಯಲ್ಲಿ ಮಾರಿ ಹುಟ್ಟುತ್ತಾಳೆ. ಅದು ಬಡಕುಟುಂಬ ಆದ್ದರಿಂದ ಮಗಳನ್ನು ಸರಿಯಾದ ವಯಸ್ಸಿನಲ್ಲಿ ಮದುವೆ ಮಾಡಲಾಗಲಿಲ್ಲ. ಹನ್ನೆರಡು ವರ್ಷದೊಳಗೇ ಮದುವೇ ಮಾಡಲಾಗ ಬೇಕು. ಅಷ್ಟರೊಳಗೆ ಅಂದರೆ ಮದುವೆಗೆ ಮೊದಲೇ ಮೈ ನೆರೆದ ಅಂತಹ ಹುಡುಗಿಯರನ್ನು ಕಣ್ಣು ಕಟ್ಟಿ ಕಾಡಿಗೆ ಬಿಡುತ್ತಿದ್ದರಂತೆ. ಹಾಗೆಯೇ ಈ ಬಡ ಬ್ರಾಹ್ಮಣರ ಕುಟುಂಬದ ಈ ಹುಡುಗಿ ಋತುಮತಿಯಾ ದರೂ ಮದುವೆ ಮಾಡಲಾಗದಿದ್ದುದರಿಂದ ಅವಳನ್ನು ಕಾಡಿಗೆ ಕರೆದೊಯ್ದು ಬಿಟ್ಟು ಬರುತ್ತಾರೆ. ಹೀಗೆ ಕಾಡಿನಲ್ಲಿ ಅನಾಥಳಾಗಿ ಅಲೆಯುತ್ತಿದ್ದ ಈ ಚೆಲುವಾದ ಬ್ರಾಹ್ಮಣ ತರುಣಿಯನ್ನು ಕಟ್ಟಿಗೆ ಕಡಿಯಲು ಬಂದ ಮಾದಿಗರ ಹುಡುಗನೊಬ್ಬ ನೋಡಿ ಮೋಹಿತನಾಗುತ್ತಾನೆ. ಕೊನೆಗೆ ಅವಳನ್ನು ಮದುವೆಯಾಗುವ ಸಲುವಾಗಿ ಬ್ರಾಹ್ಮಣನಾಗಿ ನಟಿಸುತ್ತಾನೆ. ಹೀಗೆ ನಟಿಸುತ್ತಾ ಅವಳೊಡನೆ ಸ್ನೇಹ ಬೆಳೆಸಿ ಕೊನೆಗೆ ತಾನು ಬ್ರಾಹ್ಮಣನೆಂದು ಅವಳನ್ನು ನಂಬಿಸಿ ಮದುವೆಯಾಗುತ್ತಾನೆ. ಹೀಗೆ ಜೀವನ ನಡೀತಾ ಅವರಿಗೆ ಮಕ್ಕಳು ಆಗುತ್ತಾರೆ. ಈತ ಹಗಲೆಲ್ಲಾ ಎಲ್ಲಿಗೋ ಕೆಲಸಕ್ಕೆ ಹೋಗುವವನಹಾಗೆ ಬಂದು ಕಾಡಲ್ಲಿ ಬಂದು ಒಂದು ಮರದ ಕೆಳಗೆ ಕುಳಿತು ಅವಳಿಗೆ ತಿಳಿಯದ ಹಾಗೆ ಚಪ್ಪಲಿಗಳನ್ನು ಹೊಲಿದುಕೊಂಡು ಹಳ್ಳಿಗಳಿಗೆ ಹೋಗಿ ಮಾರಿ ಬರುತ್ತಿರುತ್ತಾನೆ. ಇದನ್ನು ಕೆಲವಾರು ಬಾರಿ ನೋಡಿದ್ದ ಮಕ್ಕಳು ಮನೇಲಿ ಮುತ್ತುಗದ ಎಲೆಯನ್ನು ಅಪ್ಪ ಚಪ್ಪಲಿಗೆ ಚರ್ಮ ಕತ್ತರಿಸುತ್ತಿದ್ದ ಆಕಾರದಲ್ಲಿ ಕತ್ತರಿಸಿ ಚಪ್ಪಲಿ ಮಾಡುವ ಆಟ ಆಡುತ್ತಿರುತ್ತಾರೆ. ಅದನ್ನು ನೋಡಿ ಸಿಟ್ಟು ಬಂದ ಈಕೆ ಅವರಿಗೆ ಬೈದು, ಹೊಡೆದು, ಕೇಳಿದಾಗ, ''ಅಪ್ಪ ಹೀಗೇ ಕಾಡಲ್ಲಿ ಮಾಡ್ತಾನೆ– ಅದಕ್ಕೆ ನಾವು ಮಾಡಿದೆವು'' – ಎಂಬ ಉತ್ತರ ಬರುತ್ತದೆ. ಇದರಿಂದ ಗಂಡನ ಬಗ್ಗೆ ಅನುಮಾನಗೊಂಡ ಈಕೆ ಹುಡುಗರನ್ನು ಕರೆದುಕೊಂಡು ಅವರು ತೋರಿಸಿದ ಕಡೆ ಹೋಗಿ ನೋಡಿದಾಗ ಆತ ಚಪ್ಪಲಿ ಹೊಲಿಯುವುದು ಗೊತ್ತಾಗಿ ಭೀಕರವಾದ ಕೋಪಾವತಾರ ತಾಳಿ ಗಂಡನನ್ನು ಕೊಲ್ಲಲು ಮುನ್ನುಗ್ಗುತ್ತಾಳೆ. 'ಜಾತಿ' ಸುಳ್ಳು ಹೇಳಿ ತನಗೆ ಮೋಸ ಮಾಡಿದ್ದಕ್ಕಾಗಿ ಹೀಗೆ ಕೊಲ್ಲಲು ಮುಂದಾದಾಗ ಆತ ಕಾಡೆಲ್ಲೆಲ್ಲಾ ತಪ್ಪಿಸಿಕೊಂಡು ಓಡುತ್ತಾನೆ. ಎಲ್ಲಿ ಹೋದರೂ ಆಕೆ ಬಿಡುವುದಿಲ್ಲ. ಆಗ ಹತ್ತಿರದ ಹಳ್ಳಿಯ ಗೌಡನ ಮನೆಯ ಕೋಣವೊಂದು ಬರುತ್ತಿರುತ್ತದೆ. ಆ ಕೋಣ ಸಗಣಿ ಹಾಕಿ ಮುಗಿಸುವ ವೇಳೆಯಲ್ಲಿ ಅದರ ಗುದದ್ವಾರದಲ್ಲಿ ಈತ ಅವಿತುಕೊಂಡು ಬಿಡುತ್ತಾನೆ. ಅದನ್ನ ಕಂಡ ಮಾರಿ ಅಲ್ಲಿಂದಲೇ ಶಪಥ ಮಾಡುತ್ತಾಳೆ. ಕೋಣನಲ್ಲಿ ಅವಿತುಕೊಂಡ ನಿನ್ನನ್ನು [ಕೋಣನನ್ನ] ಬಲಿ ಪಡೆದು ನಿನ್ನ ನೆಣದ ದೀಪವನ್ನು ಉರಿಸುತ್ತೇನೆ ಎಂದು ಅಲ್ಲಿಂದ ಮುಂದೆ ಹಳ್ಳಿಗಳಿಗೆ ಬಂದು ಕೋಣನನ್ನು ಬಲಿ ಪಡೆಯುತ್ತಾಳೆ.

– ಹೇಳಿದ್ದು (ವ್ಯಕ್ತಿ ವಿವರ)
ಹೆಸರು: ದಾನೀಹಳ್ಳಿ ರಾಯಪ್ಪ
ವಯಸ್ಸು: 70
ಜಾತಿ : ಕುರುಬರು
ವೃತ್ತಿ : ವ್ಯವಸಾಯ
ಊರು : ಹೊನ್ನಾಳಿ
ದಿನಾಂಕ: 3–8–1997.
ಸ್ಥಳ : ಹೊನ್ನಾಳಿ,
ವೇಳೆ : ಸಂಜೆ 6 ಗಂಟೆ.

ಪಠ್ಯ : 2

ವ್ಯಕ್ತಿ : ಬೀರಲಿಂಗಪ್ಪ, ಜಾತಿ: ಎ.ಕೆ.
ವಯಸ್ಸು: 65, ಊರು : ಬೀರಗೊಂಡನಹಳ್ಳಿ.

ಒಂದೂರಾಗೊಬ್ಬ ಗೌಡನಿದ್ದ. ಅವ್ನು ಬೇಸಾಯ ಮಾಡ್ತಾ ಇದ್ದ. ಅವ್ನ ಕೆಲಸಕ್ಕೆ ಅಂತ ಮನೆಯವ್ರು ಪೈಕಿ ಒಬ್ಬ ಹುಡುಗನ್ನ ಸಂಬ್ಳ ಇಟ್ಕೊಂಡಿದ್ರು. ಆ ಗೌಡನಿಗೊಬ್ಬ ಮಗಳಿದ್ಲು, ಆ ಗೌಡನಿಗೊಬ್ಬಳೇ ಮಗಳಾದಾಗ, ಆ ಹರಿಜನನು ಹುಡುಗನೂ, ಆ ಗೌಡ್ನ ಮಗಳೂ ಸ್ನೇಹಿತ್ರು. ಸ್ನೇಹಿತರಾದಾಗ ಏನಾಗ್ಬಿಡ್ತು ? ಹಿಂಗೇ ಒಂದಿನ ಒಬ್ರು ಕಣ್ಣಿಗೆ ಬಿದ್ರು, ಇನ್ನೊಂದು ದಿನ ಇನ್ನೊಬ್ರು ಕಣ್ಣಿಗೆ ಬಿದ್ರು. ಹಿಂಗೇ ಅತ್ಯಂತ, ಅತ್ಯಂತ ವಿಷಯ ಬಾಯಿಬಾಯಿಗೆ ಬಿತ್ತು. ಹಿಂಗೆ ಬಂದಾಗ ಬಿದ್ದಾಗ ಗೌಡ ಮನುಷ್ಯದ ಹೆಂಡತಿ ಅವ್ನಿಗೆ ಕಟ್ಟಿಗೆ ಮಗಳಿಗೂ ಒಂದ್ಕಡೆ ಹೊಡಿಂದೆಳೆದು ಬಡಿದೆಳೆದು ಹೇಳಿದ್ಲು. ಇಬ್ರಿಗೂ ಒಂದ್ಕಡೆ ಹ್ವಂದ್ಕೊಳ್ಳದು ಹೆದ್ರಿಸೋದು ಮಾಡಿದ್ರು. ಏನಂದ್ರೂ, ಅವ್ರಿಬ್ರಿಗೂ ಬಿಡುಗಡೆ ಆಗ್ಲಿಲ್ಲ. ಅವ್ನಿಗೂ ಆ ಹುಡ್ಗಿಗೂ ಬಿಡ್ಗಡೆ ಆಗ್ಲಿಲ್ಲದ ಕಾಲಕ್ಕೆ ಏನಾಗ್ಬಿಡ್ತು ?:
'ಅಲೇ ಇಬ್ಬರೂ ಇನ್ನಾ ಇಂಗಾಗ್ಬಿಡ್ತಲಾ :' ಅಂತ ಅವ್ನಿಗೂ ಹೊಡೆದೆಳ್ದು ಬಡಿದೆಳ್ದು ಮಾಡಿ ಹೇಳಿದ್ರೂ ಬಿಡುಗಡೆ ಆಗ್ದಾಗ ''ಅಲಾ ಇವ್ನ ಇಂಗ್ಮಾಡ್ತಾನಲಾ ಇವನ ತಾಯಿನ ಅಡ ಕಟ್ರೆ ಒಂದ್ ಮರಕ್ಕೆ ಇವ್ನ'' –ಅಂದ್ರು, ಮರಕ್ಕಟ್ಟಿದ್ರು ಯಾರನ್ನ ? ಆ ಹುಡುಗಿನ, ಯಾ ಹುಡ್ಗಿನಾ ? ಆ ಗೌಡನ ಮಗಳನ್ನ. ಆ ಮಟ್ಗೆ ಯಾರಾರೇ ಕಡಿಬೇಕು ಇವ್ನ ಅಂದ್ರೆ ಅಲ್ಲೀಗೆ ನಮ್ಮ ಮಾಂತರ್ಗಟೆ ಸೆಕ್ಕಂತು ಅಂತ:

ಸರಿ ಒಂದ್ ಕುಂಟೀಗೆ ಸುಣ್ಣ, ಒಂದ್ಕುಂಟೀಗೆ ಕೆಮ್ಮಣ್ಣು, ಒಂದು ಗುಲ್ಲಕ್ಕೆ ಸುಣ್ಣ, ಒಂದ್ ಗುಲ್ಲಕ್ಕೆ ಕೆಮ್ಮಣ್ಣು ಹಚಿಗಂಡು, ಬೇವಿನಸೊಪ್ಪು, ಮಾವಿನಸೊಪ್ಪು ಕಟ್ಗೊಂಡು ಅವ್ನ ಒಂದು ಕಾಣ್ಣನ್ತರ ಮಾಡ್ಕೊಂಡು ಮಗ್ಗಾ ಕಟ್ಟಿ ಹಿಡ್ಕೊಂಡ್ ಬಂದ್ಬಿಟ್ರು ಎಲ್ಲಿಗೇ ? ಆ ಮಟ್ಗೆ ಕಟ್ಟಿದ್ ಜಾಗಕ್ಕೆ. ಆ ಮಟ್ಗೆ ಕಟ್ಟಿದ್ ಜಾಗಕ್ಕೆ ಅಂದ್ರೆ ದೇವಸ್ಥಾನ ಗೀವಸ್ಥಾನ ಏನೂ ಇಲ್ಲ ಒಂದ್ ಮರ ಅಷ್ಟೇ ಇತ್ತು. ಅಲ್ಲೀಗೆ ಆ ಮಾಮಾದ್ ಇಡ್ಕೊಂಬಂದ್ರು. ಆವಾಗ ಏನಾತು ? ಆ ಮಟ್ಗ, ನನ್ನಿಂದ ಇವ್ನ ಮಡುದ್ ಬಿಡ್ತಾರಲ್ಲಾ, ನನ್ನಿಂದ ಇವ್ನ ಕೊಂದ್ಬಿಡ್ತಾರಲ್ಲಾ ಅಂತಂದು ಗೋಳಾಡ್ತಂಗೆ. ಆವಾಗ ಆ ಗೌಡ ಅಲ್ಲಿನ ಮಾದ್ರುನೆಲ್ಲಾ ಸಪೋರ್ಟಿಗೆ ತದಂಡ. ''ಅಲೇ ಬರ್ರೀ ಇಲ್ಲ''.

''ಏನು ?''

''ಅಲೆ ಇವ್ನ ಕಡ್ದ್ ಬಿಡ್ರಲೆ, ತಗಳ್ರೀ ಒಂದ್ ಕಾಣ್ಣನ್ನ
ತಗಳ್ರೀ ಅಕ್ಕೀನ, ಜಾಳಾವ ಊಸ್ರೀ'' ಅಂದ್ರು

ಮತ್ತೆ? ಮಾದ್ರು ನಿರ್ಮಾಣಿಲ್ಲ. ಒಂದೊಂದೂರಿಗೆ ಒಂದೇ ಮನಿ ಎರಡನೇ ಮನಿ. ಆ ಅಲ್ಲಿಂದೂ ಯಾರೂ ಇಲ್ಲ. ಇವ್ರಿಗೆ ಬಲಾನೇ ಇಲ್ಲ ಅವ್ರ್ಮೇಲೆ ದಬ್ಬಾಳಿ ಮಾಡಕೆ ಯಾರ ಮೇಲೆ ಆ ಗೌಡ್ರುಗಳ ಮೇಲೆ. ಆವಾಗ್ಲು ಗೌಡ ಏಳ್ದಂಗೆ ಕೇಳಿದ್ರು. , ಮತ್ತೆ ಅವು ಕೊಟ್ಟೋರ್ಗೆ ವಿಷ್ಯ ಜೋಳ ತಗಂಡ್ರು. ಅವು ಕೊಟ್ಟೋರ್ ವಿಷ್ಯ ಅಕ್ಕಿ ತಂಗೊಂಡ್ರು, ಅವು ಕೊಟ್ಟೋರ್ದೊಂದು ಸೀರೆ ತಗೊಂಡ್ರು, ಅವು ಕೊಟ್ಟೋರ್ವಿಷ್ಯ ಇದುನ್ನ ತಗಂಡ್ರು. ಅಂತೂ ಆವಾಗ ಇವ್ರು ಅವ್ನ ಕಡುದ್ರು. ಆವಾಗ ಯಾಂಗಾಗ್ಬಿಡ್ತದು. ಅವ್ನ ಕಡುದ್ ಬಿಟ್ರಲ್ಲ : ಅಲ್ಲಿಂದ್ ಯಾಂಗಾತೆ ಇತ್ಲಾಗೆ ? ಏನ್ ಬಂತು ಅಂತ ಕೇಳಿದ್ರೆ. ಮುಂದಿನ ವರ್ಷಕೆ ಜನಕರುಗಳು, ಗೌಡ್ರು ಮಂತ್ರ್ಯಾಂಬಾಗ ಊರಿಂದೋಕೋಲ್ಲು ? ಮಾವನೆ ಸತ್ತೋಗೆ ಬೆಳೆಕೊಡಾಕೊಲ್ಲಂ. ಮಂತ್ರಾಕನಾಗಿ ಇದಾಗದು. ಇವು ಈ ಅವ್ನಮ್ಮನ ದೃಷ್ಟಿಯಿಂದ—ಅಂದ್ರೆ ಇವ್ನ ಶಾಪದಿಂದ : ಅಂದಮ್ಮನ ಶಾಪದಿಂದ ಅಂತೇನ್ರೀ ಅಂದಿದ್ದಲ್ಲಾ ಅಂದಮ್ಮ ಆ ಶಾಪಿಂದ :

[illegible]

[illegible] : [illegible] ದೇಶ, [illegible] ಕೆಲಸ [illegible] [illegible]. [illegible] ಶಾಲಾಚಿತ, ಇದರ ನಿರ್ವಹಣೆ ಮಾಡಬೇಕಾದ್ದು ಒಂದು ಕಲೆ [illegible] ಮಾಡಬೇಕು. [illegible] ಇದ್ದರೆ [illegible]. [illegible] ಕೊಡಬೇಕು, [illegible] [illegible] ಹೋಗಬೇಕು. [illegible] ಹೋಗಬೇಕು, [illegible] ಬಳಿ ಹೋಗಬೇಕು. [illegible] [illegible] ಅದಕ್ಕೆ [illegible].

[illegible] : ಇಲ್ಲಿ [illegible] ಅವನ್ನು [illegible]. ಅವನ್ನು ಒಂದೂವರೆ, [illegible] [illegible]. [illegible] ಮಾಡಬೇಕು [illegible] ಗೊಂದಲ [illegible], ಅದನ್ನು [illegible] [illegible] ಗೊಂಬೆಗಳಿಗೆ, [illegible] ನಿಜವಾಗಿ [illegible] ಆಗ [illegible] [illegible] ಗೊಂಬೆಗಳಿಗೆ. ಆ ವೇಳೆ ಆ [illegible] [illegible]. ಆ ವೇಳೆ ಬರೆಗೆಲಸ ಮನಸ್ಸಿಗೆ ಸ್ವಂತ ಅನುಭವವನ್ನು ಮಾಡಿಸಬೇಕು. ಅಲ್ಲಿಗೆ ಬರೆಗೆಲಸ [illegible]. [illegible]: [illegible] [illegible]. ಚಿತ್ರ ಪುಸ್ತಕ, ತಾರ, [illegible], ಸಾಮಾನ್ಯ ಅಲ್ಲಿಂದಲೇ ಬರಬೇಕು. ಆ ರೀತಿ ಅಲ್ಲಿಂದ [illegible]. ಅತ್ಯಂತ ಬಂದು ಈ [illegible].

ಪಠ್ಯ : ೩

ಈಕೆಯು ಸಿರಿಯ ಬಾಲಗಾರಿ. ಹುಟ್ಟಿದ್ದು ಬ್ರಾಹ್ಮಣರ ಮನೆಯಲ್ಲಿ. ತಂದೆ ತಾಯಿಯರಿಗೆ ಒಬ್ಬಳೆ ಮುದ್ದಿನ ಮಗಳು. ಗುಣವುಳ್ಳವಳಲ್ಲ. ಅವರ ಮನೆಗೆ ಮಾದಿಗರ ಹುಡುಗನಾದ ಕರಿಯ ಮನೆ ಬಿಟ್ಟು ಬ್ರಾಹ್ಮಣನಂತೆ ನಟಿಸಿ ಸೇರಿಕೊಂಡ. ತನ್ನ ಹೆಸರನ್ನು ಕರಿಯಮ್ಮಭಟ್ಟನೆಂದು ಸೇರಿಸಿಕೊಂಡ. ಅವನಿಗೆ ಮುಂದೆ ಬಾಲೆಯಲ್ಲಿ ಸಾಕಿದ ಬಳ್ಳಿಯಂತೆ ಬೆಳೆ ತುಂಬಿದ. ಹುಡುಗನ ನಡತೆ ಮೆಚ್ಚುಗೆಯಾಗಿ ಹುಡುಗ–ಹುಡುಗಿ ಪ್ರೀತಿಸಿದರು:ವಿವಾಹವಾದರು.

ಬಹಳಷ್ಟು ದಿನಗಳು ಕಳೆದ ಮೇಲೆ ಕರಿಯಮ್ಮಭಟ್ಟನ ತಾಯಿ ಮಗನನ್ನು ಹುಡುಕಿಕೊಂಡು ಅದೇ ಬ್ರಾಹ್ಮಣರ ಹೆಬ್ಬಾಗಿಲಿಗೆ ಬಂದಳು. ಅವಳು ಹುಡುಕುತ್ತಿರುವ ಮಗನ ವಿಚಾರವನ್ನು ಕರಿಯಮ್ಮಭಟ್ಟನ ಬಳಿ ಹೇಳಿದಾಗ ತಾನೇ ಅವನು ಎಂದು ಹೇಳಿದ. ಆಕೆ ಅಗಲಿದ ಮಗನನ್ನು ಕಂಡು ಆನಂದ ಕಣ್ಣೀರಿಟ್ಟಳು. ಆಗ ತಾಯಿಯನ್ನು ತನ್ನ ಮನೆಗೆ ಕರೆದುಕೊಂಡು ಹೋಗಲು ಮೊದಲೇ ಬ್ರಾಹ್ಮಣತಿಯಾಗಿರಬೇಕೆಂದು ಮೊದಲು ಹೇಳಿದನು. ವೇಷ ಬದಲಿಸಿ ಕರೆದುಕೊಂಡು ಹೋಗಿ ಊಟ ಮಾಡುವಾಗ ಊಟದ ರುಚಿ ಹೇಗಿದೆ ಎಂದು ತನ್ನ ತಾಯಿಯನ್ನು ಕೇಳಿದ ಆಕೆ: 'ನಮ್ಮದೊಂದು ಕೋಣನ ಕರುವಿನ ಕಾಲಿನ ಬೆಲೆಯಿಲ್ಲ' ಎಂದು ಅಖಂಡಿತವಾಗಿ ನುಡಿದುಬಿಟ್ಟಳು. ಅಪರೂಪವಾಗಿ ಬಂದ ಅತ್ತೆಗೆ ಊಟ ಬಡಿಸುತ್ತಿದ್ದ ಶ್ರೀಬಾಲಗಾರಿಗೆ ಈ ಮಾತನ್ನು ಕೇಳಿ ಬೆಂಕಿಯನ್ನು ತುಳಿದಂತಾಯಿತು. ನೇರವಾಗಿ ತಂದೆ ತಾಯಿಗಳ ಬಳಿಗೆ ಹೋಗಿ 'ನಾಯಿ ಮುಟ್ಟಿದ ಮಡಕೆಯನ್ನು ಏನು ಮಾಡಬೇಕು' ಎಂದು ಕೇಳಿದಾಗ ನಾಯಿ ಕೊರಳಿಗೆ ಕಟ್ಟಬೇಕೆಂದರು.

ಆತ ವಂಚನೆ ಮೋಸ ಮಾಡಿದ ತಪ್ಪಿಗಾಗಿ ಶ್ರೀ ಬಾಲಗಾರಿ ಬೆಂಕಿಗೆ ಆಹುತಿಯಾದಳು. ದೇಹತ್ಯಾಗ ಮಾಡುವ ಮೊದಲು ಗಂಡನಿಗೆ, ನಾನು ಮಾರಿಯಾಗಿ ಹುಟ್ಟುತ್ತೇನೆ. ನೀನು ಪಟ್ಟದ ಕೋಣವಾಗಿ ಹುಟ್ಟು. ಮುಟ್ಟು ಮಂಗಳವಾರ ಸರಿ ರಾತ್ರಿಗೆ ನಿನ್ನ ಬಲಿ ತೆಗೆದುಕೊಳ್ಳುತ್ತೇನೆ ಎಂದು ಹೇಳಿ ಕೆಂಡಕೊಂಡ ಹಾರಿದಳು.

ಶ್ರೀ ಬಾಲಗಾರಿ ಮಾರಮ್ಮನಾಗಿ ಹುಟ್ಟಿದಳು. ಕರಿಯಮ್ಮಭಟ್ಟ ಅವಳ ಶಾಪದಿಂದ ಕೋಣವೇಗೌಡನ ಮನೆಯಲ್ಲಿ ಪಟ್ಟದ ಕೋಣವಾಗಿ ಹುಟ್ಟಿದ. ಕೋಣ ಚೆನ್ನಾಗಿ ಬೆಳೆದು ವಯಸ್ಸಿಗೆ ಬಂತು. ಮಾರಿಯ ಕಣ್ಣು ಕೋಣನ ಮ್ಯಾಗೆ ಬಿತ್ತು. ಮಾರಿ ಗೌಡನಿಗೆ ಕೋಣವನ್ನು ಕೊಡು ಎಂದು ಪೀಡಿಸಿದಳು. ಗೌಡ ಅದಕ್ಕೆ ಲಕ್ಷ್ಯವೀಯದೆ ಅವಳಿಗೆ ಏಳುಜತೆ ಸೀರೆ ಉಡಿಸಿ, ಊರಮುಂದಲ ಕಂಬಕ್ಕೆ ಕಟ್ಟಿಸಿ ಎಣ್ಣೆ ಸುರಿಸಿ, ಬೆಂಕಿ ಹಚ್ಚಿಸಿದರೂ ಬೇಯಲಿಲ್ಲ. ಗೌಡನಿಗೇ ಬೆಂಕಿಹೊತ್ತಿಕೊಂಡಂತಾಯಿತು. ವಿವೇಕ ಮೂಡಿ ಕೋಣವನ್ನು ಕೊಡುವುದಾಗಿ ಒಪ್ಪಿದ.

ಮಂಗಳವಾರ ಮಾರಮ್ಮ ಗುಡಿಗೆ ಮೇಲೆ ಬಂದಳು. ಗಂಡನೇ ಕೋಣವಾದ. ಮಾವ ಗೋರಗುಂಬ ಕೋಣವನ್ನು ಕಡಿಯಲು ಬಂಧಿಸುವ ಕಂಬವಾದ. ಘಟಗಡಿಯಾದಳು. ಸರಿ ರಾತ್ರಿಗೆ ಸರಿಯಾಗಿ ಕೋಣನನ್ನು ಬಲಿ ತೆಗೆದುಕೊಂಡಳು. ಈಕೆಗೆ ಮಾರಿಯಾಗುವ ಮೊದಲು ಮಕ್ಕಳಾಗಿದ್ದವು. ಕಣ್ಣುಜನಸಲು ಮಾರಿ, ಧೂಳು ಮರಿ, ಎಲ್ಲಮರಿಗಳ ರೂಪದಲ್ಲಿ ಆ ಮಕ್ಕಳನ್ನು ಬಲಿ ತೆಗೆದುಕೊಂಡಳು.

— ಕರ್ನಾಟಕದ ಜನಪದ ಕಲೆಗಳ ಕೋಶ.
ಸಂಪಾದಕರು: ಹಿ.ಚಿ.ಬೋರಲಿಂಗಯ್ಯ
ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾನಿಲಯ, ಹಂಪಿ.

[illegible] : ೬

ಭಟ್ಕಳದ ಮುಂದಿಯ ಬಗ್ಗೆ ಪ್ರಚಲಿತವಿರುವ ಪುರಾಣವನ್ನು ನೋಡಿದರೆ ಇದು ಬೇರೆಯೇ ದೊರೆಯುವ ಉಪಾಖ್ಯಾನದ ಭಿನ್ನವಾಗಿ ಸಿಗುತ್ತದೆ. ಇಲ್ಲಿನ ಪುರಾಣ ಈ ರೀತಿಯಾಗಿ ವಿವರಣೆ ನೀಡುತ್ತದೆ. ‘‘ಒಂದು ದಿನ ಎಂದಿನ ಕೆಲಸ ಮಾಮೂಲು. ಆಚಾರಿಯ ಮನೆಯ ಮುಂದೆ ಆರು ವರ್ಷದ ಹುಡುಗಿಯೊಬ್ಬಳು ಮಲಗಿದ್ದಳು. ಆಚಾರಿಯ ಮನೆಯವರು ಬೆಳಗ್ಗೆಯೆ ಎದ್ದು ಬಾಗಿಲು ತೆರೆದಾಗ ಕುಳಿತಿದ್ದ ಹುಡುಗಿಯನ್ನು ಕಂಡರು. ಆಗ ಅವರು ಆಕೆಯನ್ನು ಯಾರು ನೀನು ? ಎಂದು ಪ್ರಶ್ನಿಸಿದರು. ಅದಕ್ಕೆ ಆಕೆ ‘ನಾನು ಬ್ರಾಹ್ಮಣರ ಹುಡುಗಿ, ನನಗೆ ತಂದೆ–ತಾಯಿ ಯಾರೂ ಇಲ್ಲ’ ಎಂದು ಉತ್ತರಿಸಿದಳು. ಆಚಾರಿ ಮನೆಯವರಿಗೆ ಆಕೆಯ ಬಗ್ಗೆ ಕರುಣೆಮೂಡಿ ಆಕೆಯನ್ನು ಮನೆಯೊಳಗಡೆ ಕರೆದುಕೊಂಡರು. ಅಂದಿನಿಂದ ಆ ಹುಡುಗಿ ಅವರ ಮನೆಯಲ್ಲೆ ಬೆಳೆದಳು. ಅವಳು ಮನೆಯ ಹೊರಗಡೆ ಓಡಾಡುವಾಗ ದಾರಿಯಲ್ಲಿ ಪ್ರತೀ ದಿನ ಒಬ್ಬ ಹುಡುಗ ಆಕೆಯನ್ನು ನೋಡಿ ನಗುತ್ತಾ ಹೋಗುತ್ತಿದ್ದನು. ಮೊದಲು ಒಂದೆರಡು ದಿನ ಅವನ ನಗೆಗೆ ಪ್ರತಿ ನಗೆ ಬೀರುತ್ತಾ ಹೋಗುತ್ತಿದ್ದಳು. ಹೀಗೆ ಕಾಲಕಳೆದಂತೆ ಅವಳು ಆ ಹುಡುಗನಲ್ಲಿ ಅನುರಕ್ತಳಾದಳು. ಅವರಿಬ್ಬರು ದಾರಿಯಲ್ಲಿ ಸಂಧಿಸಿದಾಗ ಮಾತನಾಡಿಕೊಳ್ಳುತ್ತಿದ್ದರು. ಅದನ್ನು ಕಂಡ ಜನರು ಆಕೆಯ ಮನೆಯವರಿಗೆ ಸುದ್ದಿ ತಿಳಿಸಿದರು. ಆಚಾರಿಯ ಮನೆಯವರು ಅವರಿಬ್ಬರು ಮಾತಾಡುವಾಗ ಕಣ್ಣಾರೆ ಕಂಡರು. ಆಕೆಯನ್ನು ಕರೆದು ಆ ಹುಡುಗನೊಡನೆ ಮಾತನಾಡುವುದನ್ನು ನಿಲ್ಲಿಸಲು ಹೇಳಿದಾಗ ಅವಳು ಅದನ್ನು ತಿರಸ್ಕರಿಸಿ ಆತನನ್ನು ತಾನು ಮದುವೆಯಾಗುತ್ತೇನೆಂದು ಹೇಳಿದಳು. ಮನೆಯವರು ಇನ್ನು ಹಟ ಹಿಡಿದರೆ ಸರಿಯಲ್ಲವೆಂದು ತಿಳಿದು ಅವರಿಬ್ಬರ ಮದುವೆ ನಿಶ್ಚಯ ಮಾಡಲು ಆ ಹುಡುಗನನ್ನು ಮನೆಗೆ ಕರೆದು ಅವನ ಜಾತಿ, ಮತ ಯಾವುದೆಂದು ಪ್ರಶ್ನಿಸಿದರು. ಅವನು ತಾನು ಬ್ರಾಹ್ಮಣನೆಂದು ಹೇಳಿಕೊಂಡನು. ಆಗ ಮನೆಯವರು ಇಬ್ಬರ ಜಾತಿಯೂ ಒಂದೇ ಆಗಿರುವುದರಿಂದ ಮದುವೆಯಾಗಲು ಅಡ್ಡಿಯಿಲ್ಲವೆಂದು ಮದುವೆ ಮಾಡಿಕೊಟ್ಟರು.

ಮದುವೆಯಾದ ನಂತರ ಆಕೆ ಗಂಡನ ಮನೆಗೆ ಹೋದಳು. ಅಲ್ಲಿನ ಪರಿಸರವನ್ನು ಓಡಾಡುತ್ತಲೇ ಗಮನಿಸುತ್ತಿದ್ದಳು. ಆ ಮನೆಯಲ್ಲಿ ಒಂದು ಕೋಣೆಗೆ ಯಾವಾಗಲೂ ಬೀಗ ಹಾಕೇಯಿರುತ್ತಿತ್ತು. ‘ಅದ್ಯಾಕೆ ಈ ಕೋಣೆಗೆ ಯಾವಾಗಲೂ ಬೀಗ ಹಾಕಿರ್ತಾರೆ’ ಎಂದು ಅವಳು ಯೋಚಿಸತೊಡಗಿದಳು. ಒಂದು ದಿನ ಗಂಡ ಮನೆಯಿಂದ ಹೊರಗೆ ಹೋಗುವಾಗ ‘ತಾನು ಸಂಜೆಗೆ ವಾಪಸ್ಸು ಬರುತ್ತೇನೆ’ ಎಂದು ಹೇಳಿ ಹೋದನು. ಇದೇ ಸಮಯವೆಂದ ಆಕೆ ಕೋಣೆಯ ಬೀಗ ಒಡೆದು ಒಳಹೊಕ್ಕಳು. ಅಲ್ಲಿ ಗೋಡೆಯ ಮೇಲೆ ಒಂದೆರಡು ದನದ ಚರ್ಮ ನೇತುಹಾಕಿದ್ದರು. ಇನ್ನೊಂದೆಡೆ ಡೋಲಿನ ಸಾಮಾನು ನೇತು ಹಾಕಿದ್ದರು. ಆಕೆ ಅವುಗಳನ್ನೆಲ್ಲ ಕಂಡ ಆಶ್ಚರ್ಯಪಟ್ಟಳು ಚರ್ಮದ ಸಾಮಾನುಗಳನ್ನು ಮನೆಯಲ್ಲಿಟ್ಟುಕೊಳ್ಳಲು ಕಾರಣವೇನು ? ತನ್ನ ಗಂಡ ಬ್ರಾಹ್ಮಣನಾಗಿದ್ದರೆ ಚರ್ಮವನ್ನೇಕೆ ಇಟ್ಟುಕೊಳ್ಳುತ್ತಿದ್ದ ? ಎಂದು ಯೋಚಿಸತೊಡಗಿದಳು. ಹೇಗೂ ಸಂಜೆಗೆ ಗಂಡ ಬರುತ್ತಾನೆ, ಆಗ ಅದರ ಬಗ್ಗೆ ವಿಚಾರಿಸಿಕೊಳ್ಳೋಣವೆಂದು ನಿಶ್ಚಯಿಸಿ ಬಾಗಿಲು ಭದ್ರಪಡಿಸಿದಳು. ಸಂಜೆಗೆ ಗಂಡ ಮನೆಗೆ ಬಂದ ಹೆಂಡತಿಯು ಮಾತನಾಡದೆ ಮುಖ ಗಂಟಿಕ್ಕಿಕೊಂಡು ಓಡಾಡುವುದನ್ನು ಗಮನಿಸಿದ. ಆತ ಏಕೆ ಹೀಗೆ ಮಾತಾಡದೆ ಕುಳಿತುಕೊಂಡಿರುವೆ ಎಂದು ಪ್ರಶ್ನಿಸಿದ. ಅದಕ್ಕೆ ಅವಳು ಕೈ ಹಿಡಿದು ಕೋಣೆಗೆ ಕರೆದುಕೊಂಡು ಹೋಗಿ ನೇತುಹಾಕಿದ ದನದ ಚರ್ಮ ತೋರಿಸಿ ಇದೆಲ್ಲಾ ಏನು ? ನಿಜ ಹೇಳು, ನೀನು ಯಾವ ಜಾತಿಯವನು ? ಎಂದು ಪ್ರಶ್ನಿಸಿದಳು. ದಿಕ್ಕು ತೋಚದ ಅವನು ಪೇಚಿಗೆ ಸಿಕ್ಕಿಕೊಂಡ ಕಾರಣ ಸುಳ್ಳು ಹೇಳಲಾಗದೆ ‘ತಾನು ಕೊರಗರವ’ ಎಂದನು. ಆಗ ತಕ್ಷಣ ಅವಳು ಗಂಡನ ಮನೆಯನ್ನು ಬಿಟ್ಟು ತನ್ನ ಸಾಕುತಂದೆಯ ಮನೆಗೆ ಬಂದು ತನ್ನ ತಂದೆಯನ್ನು ಕುರಿತು ‘ಅಪ್ಪ ನಾನು ಮುಟ್ಟಿದ ಮಡಕೆ ಹೇಗೆ ಶುದ್ಧ ಮಾಡಬಹುದು ?’’ ಎಂದು ಕೇಳಿದಳು. ಅದಕ್ಕೆ ಆತ ‘ಮಡಕೆಯನ್ನು ಬೆಂಕಿಯಲ್ಲಿ ಸುಟ್ಟು ಅದಕ್ಕೆ ಪಂಚಗವ್ಯ ಹಾಕಿದರೆ ಶುದ್ಧನಾಗುತ್ತೆ’ ಎಂದನು. ಅದನ್ನು

... ವಿ ಶಿಖಿ ವರೆ ಬಿಲ್ಲಿಸಿದಂತೆ ಹೋಗಿ ಬೆಂಕಿಯಲ್ಲಿ ಬಿದ್ದಳು. ಬೆನ್ನು ಹತ್ತಿದ್ದ ಬೆಂಕಿಯು ... ಮನೆ ಹೊರಗೆ ಓಡಿದಳು. ಕೊನೆಗೆ 'ಎಲ್ಲಮ್ಮ' ಎಂದು ಸಮುದ್ರಕ್ಕೆ ಬಿದ್ದು ಪ್ರಾಣ ...ಳು. ಇಂದಿಗೂ ಆ ಸ್ಥಳವನ್ನು 'ಮಾರಿಗುಡಿ' ಎಂದು ಕರೆಯುತ್ತಾರೆ. ಪ್ರತೀ ವರ್ಷದ ಮಾರಿ ...ಯಲ್ಲಿ ... ಮಾರಿಯನ್ನು ತೆಗೆದುಕೊಂಡು ಹೋಗಿ ಮಾರಿಗುಡಿಯಲ್ಲಿ ಹಾಕಿ ಬರುತ್ತಾರೆ.

ಕರ್ನಾಟಕ ಜನಪದ ಕಲೆಗಳ ಕೋಶ.
ಸಂ: ಪ್ರೊ. ಹಿ.ಚಿ.ಬೋರಲಿಂಗಯ್ಯ,
ಪ್ರಸಾರಾಂಗ: ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಪಠ್ಯ : 5

ವಕ್ತೃ: ಜೋಗವ್ವ,
ವಯಸ್ಸು : 85,
ಜಾತಿ: ದೇವಾಂಗ
ಊರು: ಅರಕೆರೆಗ್ರಾಮ ಭದ್ರಾವತಿ (ತಾ)

ಗಂಡ ಹೆಂಡತಿ ಇಬ್ಬರೂ ಲಿಂಗಾಯತರು. ಇವರಿಗೆ ಮಕ್ಕಳು ಆಗಿರುತ್ತಾರೆ. ಒಮ್ಮೆ ...ಗ ಬಂದು 'ಅಮ್ಮ ಅಪ್ಪ ಎಲ್ಲಿಗೋಗ್ಯಾನೆ ?' ಅಂತ ಕೇಳುತ್ತಾನೆ. 'ಏನೋ ಗೊತ್ತಿಲ್ಲಕಣಪ್ಪ' ...ದು ತಾಯಿ ಹೇಳುತ್ತಾಳೆ. ಆಗ ಮಗ ಅಪ್ಪನನ್ನು ಹುಡುಕುತ್ತಾ ಹೋದಾಗ ಆತ ಮಾದಿಗ ...ರೇಲಿ ಚಪ್ಪಲಿ ಹೊಲೀತಾ ಇರುತ್ತಾನೆ. ಹೀಗೇ ಅನೇಕ ದಿನ ಮಗ ಹೋದಾಗೆಲ್ಲಾ ಆತ ಚಪ್ಪಲಿ ...ಲೀತಾ ಇರುತ್ತಾನೆ. ಇದನ್ನು ನೋಡಿದ ಮಗ ಮನೆಗೆ ಬಂದು ಹಿತ್ತಲಲ್ಲಿ ಎಲೆ ತಗಂಡು ಅಪ್ಪ ...ಡುತ್ತಿದ್ದ ಹಾಗೇ ಈತನೂ ಚಪ್ಪಲಿ ಹೊಲಿಯಲು ಶುರುಮಾಡುತ್ತಾನೆ. ಇದನ್ನ ನೋಡಿದ ...ಯಿ ಮಗನಿಗೆ ಬೈದಾಗ ಅವನು 'ಅಪ್ಪನೂ ಹೀಂಗೆ ಅಲ್ಲ ಹೊಲೀತಾ ಇರ್ತಾನೆ' ಅಂತ ಹೇಳ್ತಾನೆ. ...ಗೆ ಮಗನಿಂದ ವಿಷಯ ತಿಳಿದ ತಾಯಿ ಮಾದಿಗರ ಕೇರಿಗೆ ಹೋಗಿ ನೋಡುತ್ತಾಳೆ. ಅಲ್ಲಿ ಗಂಡ ಚಪ್ಪಲಿ ...ಲೀಯುತ್ತಿರುವುದನ್ನು ನೋಡಿ ಕಿಡಿಕಿಡಿಯಾಗುತ್ತಾಳೆ. ಅಲ್ಲದೇ ಕತ್ತಿ ಹಿಡಿದುಕೊಂಡು ಕೊಲ್ಲಲು ...ದಾಗ ಅವನು ಓಡಿಹೋಗುವಾಗ ಎದುರಿಗೆ ಬರುತ್ತಿದ್ದ ಗಾಡನ ಕೋಣನಲ್ಲಿ ಅವಿತುಬಿಡುತ್ತಾನೆ. ...ಗ 'ಮಾರಿ' 'ಲೇ ನಿನ್ನ ನಾನು ಮಾರಿಯಾಗಿ ಬಂದು ಕಡಿಸಿಗಂಡು ನಿನ್ನ ನೆಣ ತೆಗೆದು ನಿನ್ನ ನೆತ್ತಿ ...ರುಡೆಯಲ್ಲಿ ಸಂಜೆ ಮಾಡಿಟ್ಟು ದೀಪ ಹಚ್ಚುತ್ತೇನೆ. ನಿನ್ನ ಕಾಲು ಕಡಿದು ಬಾಯಾಗಿಡ್ತೀನಿ' ಅಂತ ಶಪಥ ...ಡುತ್ತಾಳೆ. ಅಂದಿನಿಂದ ಅವಳು ಮಾರಿಯಾಗಿ ಕೋಣನ ರೂಪದಲ್ಲಿರೋ ಕ್ವಾಣನ್ನ ಹಿಡಿಸಿ ...ಡಿಸುತ್ತಾಳೆ. ಅದರ ಹೊಟ್ಟೆಯಾಗಿನ ನೆಣತಗುದ್ದ ದೀಪಮಾಡಿ ಕಾಲು ಕಡಿದು ಬಾಯಾಗಿಡುತ್ತಾರೆ.

ತಿಪಠ್ಯ : 6

ವ್ಯಕ್ತಿ: ಹೊನ್ನೂರಪ್ಪ,
ವಯಸು: 65, ಜಾತಿ : ಮಾದಿಗರು,
ಊರು : ಬೀರಗೊಂಡನಹಳ್ಳಿ.

'ಮಾರಿ' ಬ್ರಾಹ್ಮಣರವಳು. ಗಂಡ ಮಾದಿಗರವನು. ಅವಳಿಗೆ ಸುಳ್ಳು ಹೇಳಿ ಮದುವೆಯಾಗುತ್ತಾನೆ ...ಗನೂ ಹುಟ್ಟುತ್ತಾನೆ. ದಿನಾಲು ಗಂಡ ಹಗಲೊತ್ತು ಕಾಡಿಗೆ ಹೋಗಿ ಅಲ್ಲಿ ಒಂದು ಮರದ ಕೆಳಗೆ ಚಪ್ಪಲಿ ...ಲೀತಾ ಇರ್ತಾನೆ. ಆಡಾಕೆ ಅಂತ ಹೋದಾಗೆಲ್ಲಾ ಅಪ್ಪ ಮಾಡೋದನ್ನ ನೋಡಿಕಂಡು ಬಂದು ಹುಡುಗ ...ದು ದಿನ ತಾನೂ ಅವರಪ್ಪನಂಗೇ ಒಂದು ಎಲಿ ತಗಂಡು ಚಪ್ಪಲಿತರ ಮಾಡಿಕಂಡು ಹೊಲೀಯೋಹಂಗೆ ...ಡ್ತದೆ. ಇದನ್ನ ನೋಡಿದ ತಾಯಿ ಮಗನಿಗೆ ಬೈದಾಗ ಮಗ ಹೇಳ್ತಾನೆ : ಕಾಡಾಗೆ ಅಪ್ಪನೂ ಹಿಂಗೇ ...ಡ್ತಾನೆ ಅಂತಾನೆ. ಆವಾಗ ಹೆಂಡ್ತಿಗೆ ಅನುಮಾನ ಬಂದು ಕತ್ತಿ ತಗಂಡು ಕಾಡಿಗೆ ಮಗನ್ನ ಕರ್ಕಂಡು ...ತ್ತಾಳೆ. ಗಂಡ ಚಪ್ಪಲಿ ಹೊಲೀತ ಕುಂತಿರೋದನ್ನ ನೋಡ್ತಾಳೆ. ನೋಡಿ ಕಿಡಿಕಿಡಿಯಾಗಿ ಮಾರ ಅವ್ತಾರ ...ಳಿ ಬಿಟ್ಟು ಗಂಡನನ್ನು ಕೊಲ್ಲಾಕೆ ಅಂತ ಬೆನ್ನತ್ತಿ ಬಿಡ್ತಾಳೆ. ಇವಳ ಈ ಆಕಾರ ನೋಡಿದ ಗಂಡ ಮತ್ತು ...ಗ ಇಬ್ರೂ ಊರಕಡೀಕೆ ಓಡ್ತಾರೆ ಆಗ ಊರ ಅಗಸೆಬಾಗಿಲತ್ರ ಗೌಡ್ರ ಕ್ವಾಣ ಹೋಗ್ತಾ ಇತ್ತದೆ ಕೂಡ್ಲೆ ...ಡ ಕ್ವಾಣನಲ್ಲೂ ಮಗ ಕುರಿಮರಿಯಲ್ಲೂ ಅವಿತ್ಕಂಡ್ ಬಿಡ್ತಾರೆ. ಕುರಿಮರಿ ಯಾರದೋ ಮನೀ ...ಳಾಗೆ ಹೋಗಿ ಬಚ್ಕಂಬಿಡ್ತದೆ. ಆಗ 'ಮಾರಿ' ಕ್ವಾಣನ್ನಲ್ಲಿ ಹೊಕ್ಕಂಡಿರೋ ನಿನ್ನ ನಾನು ಕಡಿಸ್ಕಂತೀನಿ ...ತನೂ ಅವನ ಉತ್ರಕ್ಕೆ ಹುಟ್ಟಿದ ಮಗನ್ನ ಗಾವುಗುರಿ ಮಾಡಿಸ್ಕಂಡುತಿಗೀತಿನಿ ಅಂಥ ಶಪಥಮಾಡುತ್ತಾಳೆ.

11.5

ಆಸಾದಿ ಪದಗಳು –1

ಹೇಳಿದವರು:ಎ.ಕೆ.ಬಸಪ್ಪ ಬಿನ್.ಕರಿಬಸಪ್ಪ
ಜಾತಿ: ಆದಿ ಕರ್ನಾಟಕ.
ವಯಸ್ಸು: 45 ವರ್ಷ
ಊರು: ಬೇರಗೊಂಡನಹಳ್ಳಿ.

ಆಡು ಆಡು ಎಂದಾರೇ,
ನಾನೆಂಗೆ ಆಡಾಲೇ
ಕಾಡವರ ಬಳ್ಳೀ ಕರುತಿಂದೂ
ಕಾಡವರೆ ಬಳ್ಳೀ ಕರುತಿಂತು – ಮಾರಕ್ಕ ಅಪಾರ
ಬುದ್ಧಿವಂತನ ತುಣ್ಣೀ ಇಲಿ ನುಂಗ್ತೂ. : 1 :

ಕಪ್ಪಣ್ಣ ಇಡುದೀರೀ
ಮಾದಿಗನ ಕರುದೀರೀ
ಎಲೊಲ್ಲೀ ನನ ಮಗುನೇ ಬಿಗಿವುಣೀ
ಎಲ್ಲೀ ನನ ಮಗುನೆ ಬಿಗಿವುಣಿ – ಬಾರೀಕೋಲು
ಚಲ್ಲಾಡಿ ರಥುವಾ ಹರಿಸ್ಯಾಳೇ : 2 :

ಆ ಕಲ್ಲೀನ ತೇರೂ
ಜ್ಯೋತಿ ಲಿಂಗುನ ತೇರೂ
ಹಲ್ಲೀ ಬಸುವಣ್ಣನಾ ಹೊಸ ತೇರೂ
ಹಲ್ಲೀ ಭಸುವಣ್ಣನಾ ಹೊಸ ತೇರಿನ – ಮೇಲಿರುವ
ನೊತುಮುದ ಗೊಂಬೀ ನಗುತಾವೆ : 3 :

ಕಲ್ಲೀನ ಗುಡಿಂತುವ್ವಾ
ಎಲ್ಲೀಗೆ ಮುಡಿಂತುವ್ವಾ
ಎಲ್ಲೀ ನಡದೀಂತೋ ಹಡದವ್ವಾ
ಎಲ್ಲೀ ನಡದೀಂತೋ ಹಡುದವ್ವ – ನಿನಗುಡಿಗೆ
ಭಕ್ತುರು ಬಂದಾರೇ ದಂತುಮಾಡೇ : 4 :

ಮೂಡಲ ಗಿರಿಂತು ತಿಮ್ಮಂತುಯ್ಯ
ಮುದುಂ ಕೊಳ್ಳಲು ಬಂದ
ಬೇಲೂರ ಚೆನ್ನಿಗರಾಂತು ಬೆಲ ಮಾಡೋ
ಬೇಲೂರ ಚೆನ್ನಿಗರಾಂತು ಬೆಲಮಾಡೊ – ಲಕ್ಕುಮನ
ಕೋಣಿಲ್ಲ ರವುನಾ ಕೊರಡೀಗೇ : 5 :

ಸಣ್ಣ ಕಲ್ಲಾಡೀ
ಸಣ್ಣಕೆ ನೆನುದೀನೀ
ನಡುಗೇರೇಲಿರುವಾ ಗರತೀಂತೂ
ನಡುಗೇರೆಲಿರುವಾ ಗರತೀ – ದುರುಗಕ್ಕನ
ಸಣ್ಣ ಕಲ್ಲಾಡಿ ನೆನೆದೇನೇ : 6 :

ಹಳ್ಳದ ಅರುಗೀಲೀ
ಕೊರವಂಜಿ ತತಿಂತುನಿಟ್ಟೆ
ಎಲಿಂತೂ ಮೇಲೆಲಿಂತೂ ಮರೆಮಾಡೀ
ಎಲಿಂತೂ ಮೇಲೆಲಿಂತೂ ಮರೆಮಾಡಿ – ಪುಳಿಂತೋರ
ಮರಿ ಬಂದಾವುಡುಗೀ ಬೆರಿ ಮಾಡೀ : : 7 :

ಹಂಡೀ ಬಂಡೀ ಚೆಂದ
ಬಂಡೀ ನೆರಳೂ ಚೆಂದ
ಹಂಡೂರಿ ಚೆಂದಾ ಬಳಗಾಕೆ
ಹಂಡೂರಿ ಚೆಂದಾ ಬಳಗಾಕೆ – ಮಾರಕ್ಕನ
ಭಂಡಾರ ಚೆಂದಾ ಧರುಸಾಕೆ : 8 :

ಬಾಳೇಯ ಹಣ್ಣಾ
ಬಲಗ್ಯಯಾಗೆ ಹಿಡಕಂಡು
ಬಾಗೇರಿ ಗುಡ್ಡಾ ಇಳುದವ್ವಾ
ಬಾಗೇರಿ ಗುಡ್ಡಾ ಇಳುದವ್ವ – ಹನುಮಂತ
ಇಲ್ಯಾಡ ಲಂಕೇ ಹನುಮಂತಾ : 9 :

ಇಲ್ಲಿಲ್ಲ ನಿಂದವ್ವಾ
ಇಲ್ಲಿಲ್ಲ ಇಡೆನವ್ವಾ
ವಡತಂದೀ ರಥವಾ ವರಿಲಿಕ್ಕೀ
ವಡತಂದೀ ರಥವಾ ವರಿಲಕ್ಕೀ – ಬೇವಿನ
ಮರವಳ್ಳೀದವ್ವಾ ನೆನಿವಳ್ಳ : 10 :

ಅಕ್ಕ ತಂಗೇರವರು
ಲೆಕ್ಕಕ್ಕ ಮುವ್ವಾರು
ಅಕ್ಯಾಗೆ ಎಳ್ಳಾ ಬೆರೆದಂಗೇ
ಅಕ್ಯಾಗೆ ಎಳ್ಳಾ ಬೆರೆದು – ಕೂಡ್ಯದಾರ
ಚಕ್ಕಾ ಮಾರಕ್ಕನಾ ಮುಬುಬೀಗೇ : 11 :

ಗುಡಮ್ತಾದ ಓರ್ಯಾಗೆ
ಹೊತ್ತೀಲೆ ಬರುತ್ತಿದೆ
ಗುಬ್ಬೀಯ ಸೊಲ್ಲೀ ಮೊದಲಿಲ್ಲಾ
ಗುಬ್ಬೀಯ ಸೊಲ್ಲೀ ಮೊದಲಿಲ್ಲಾ – ಮಾರಕ್ಕ
ಗದುಂಲಿಸೆ ನಿನ್ನಾ ಗುಡಿಯಾಗೇ : 12 :

ಅವ್ವಾ ಐದಾಳಂತ
ಒಪ್ಪತಿಲೆ ನಾ ಬಂದೆ
ಅವ್ವಿಲ್ಲವಲ್ಲೀ ಗುಡಿಯಾಗೆ
ಅವ್ವಿಲ್ಲವಲ್ಲೀ ಗುಡಿಯಾಗೆ – ಮಾರಕ್ಕ
ಮಲ್ಲೀಗೊನದಾಗೆ ಶಿವಪೂಜೀ :13 :

ಆರಗರತಿ ನಿನ್ನಾ
ಮಾಯಾವೆ ತಿಳಿಯಾದೆ
ಮಾಯಾದ ಬೂದಿ ಮಡಿಲಾಗೇ
ಮಾಯಾದ ಬೂದೀ ಮಡಿಲಾಗೆ – ಇಟಗಂಡು
ಬಂದಾ ಮಾನರಿಗೇ ತಳಿಯವ್ವಾ : 14 :

ಅಸಾದಿ ಪದಗಳು

ವ್ಯಕ್ತಿ : ನಿಂಗಪ್ಪ
ಜಾತಿ : ಮಾದಿಗರು.
ವಯಸ್ಸು : 65
ಊರು : ರಾಂಪುರ
ಹೊನ್ನಾಳಿ (ತಾ)
ಶಿವಮೊಗ್ಗ (ಜಿ)(

(1) (ಹರಕೆ ಪದಗಳು (ಪ್ರಾರ್ಥನ ಪದಗಳು)

1 ....

ಗುಡಿಗಣ್ಣ ಮಾರಿ ನೆನುದೇವೆ
ಗುಡಿದಾರ ಕೋಟೆ ಸಲುವೊಳು
ಗುಡಿದಾರ ಕೋಟೆ ಸಲುವಳು – ಮಾರಮ್ಮನ
ಗುಡಿಯಂತುದಲಿ ಎದುರಾಂ ನೆನೆದೇವೋ : 1 :

ಮುಂಚೆಲ ನೆನೆದೇನವಳ
ಕಂಚಿನ ಕಾಲಸುರಿಂತೋ
ಲಕ್ಷ ಗೋಳಿಂತಾ ತಿರುವುಲೆ
ಲಕ್ಷ ಗೋಳಿಂತಾ ತಿರುವುಲೆ – ಪರ್ವತನ
ಅಂತರ ನಿರಿಗಂಗೇ ನೆನೆದೇನೇ : 2 :

ಎದುರಾಂ ನಿನ್ನ ಗ್ಯಾನ
ಬಿದುರಾಂ ನಿನ್ನ ಗ್ಯಾನ
ಸಿದ್ಧಾರ ಗ್ಯಾನ ಸಿವುಗ್ಯಾನ – ಮಾರಮ್ಮ
ಗದಾಂಲ ಗ್ಯಾನ ಮನುದಾಗೇ : 3 :

ಎದೆರಾಂನೆ ನೆನೆದೇನವಳ
ಮುದುಂ ಮುಡಲ ಗಿರಿಂತು
ಮುದಿಬ್ಬೇನ ಬಾಲೆ ಒಡೆಂತಾನ
ಮುದಾಂದ ಬಾಲೆ ಒಡೆಂತಾನ – ಗೋವಿಂದಾನ
ನಿದ್ರೆಗಣ್ಣೀಲೇ ನೆನೆದೇನೇ : 4 :

ಆರಗಿಲಗ್ಯೆತಮ್ಮ
ಬರಿಗಲ ಸಾರೀನ್ನಳ್ಳಿ
ಕಡುಗಾದ ಕೈವಳೇ ಮುತ್ತಮ್ಮ
ಕಡುಗಾದ ಕೈವಳೇ ಮುತ್ತಮ್ಮ – ತೇರೆಳುದಾರೆ
ಸಡುಗರದಿಂದಾ ಬರುತಾಳೋ, : 5 :

ತೇನೆ ಮುತ್ತಮ್ಮನವಳ
....
ನಂದೀಂತು ಮ್ಯಾಲೇ ಸಿವ ಬಂದಾ
ನಂದೀಂತು ಮ್ಯಾಲೇ ಸಿವ ಬಂದ– ರಾಂಪುರದ
ಇಂಬೋಳ್ಳ ಬಂದಾ ನೆಲಗೊಂಡ : 6 :

ಸತಿ ಮುತ್ತಮ್ಮದವಳ
ಸುಕುನರುದಾ ಪೊಂದೊತ್ತ
ಸುಕ್ರರುದ ಏರಿ ಶಿವು ಬಂದಾ
ಸುಕ್ರರುವ ಏರಿ ಶಿವು ಬಂದಾ – ರಾಂಪುರದ
ದಿಕ್ಕೊಳ್ಳ ಬಂದಾ ನೆಲೆಗೊಂಡೆ : 7 :

ಸುತ್ತೋಲೆ ಮಾರುದಂ
ಒತ್ತಿಲೆ ಇಟಗೊಂಡೆ
ಎತ್ತುವಲ್ಲ ನಿಮ್ಮ ಮೊದಲಿಂದಾ
ಎತ್ತುವಲ್ಲ ನಿಮ್ಮ ಮೊದಲಿಂದಾ – ಮುತ್ತಮ್ಮ
ತಪ್ಪೀದ ಪದುಗೋಳ ಬರುಕೊಡೇ : 8 :

ತುಂಗಾತ್ರಿ ಮಾತುಬ್ರವಳೆ
ತೋಲಿಗಳ ಇದುಕೊಂಡೆ
ಓದುಟಲ್ಲ ನಿಮ್ಮ ಮೊದಲಿಂದಾ
ಓದುಟಲ್ಲ ನಿಮ್ಮ ಮೊದಲಿಂದ – ಮುತ್ತ್ಯವ್ವ
ಬರೋ ಪದುಗೋಳಾ ಬರುಕೋಡೆ : 9 :

ಯಮಾ ನಿನ್ನ ಪಕ್ಕವಳೆ
ಸರಸಾಲಮಾ ನಾ ಬಂದೆ
ವರುಸಾಕ್ಕ ನೂರಾರಾ ಮುಂದಿ ಬಂದಮಾ
ವರುಸಾಕೆ ನಾರಮಾ ಮುಂದಿ ಬಂದು – ಮಾರವ್ವ
ಹರುಸೇ ನಿನ್ನಬ್ಬ ಐಭೋಗ : 10 :

ಸಪ್ಪುರದ ಕೇರೀ
ಎಪ್ಪತ್ತು ಗಾವುಂದ
ಅಕ್ಕೀ ಪೊಂತಾಂರೋ ಮುಲಿಕೇಲಿ
ಅಕ್ಕ ಪೊಂತಾಂತೋ ಮುಲಿಕಲಿ – ಮಾರವ್ವನ
ಶುಕ್ರಾರ ಮಾಡ್ಯರೊ ಮದು ಮಾಗಳ

ಅಂಬಿಗರ ಕೇರ್‍ಯಾಗವಳೆ
ಹನ್ನೊಂದು ಗಾವುದಲ
ರಂಗಾ ಪೊಂತಾಂರೊ ಮುಲಿಕೇಲಿ
ರಂಗಾ ಪೊಂತಾಂರೋ ಮುಲಿಕೇಲಿ – ಮಾರವ್ವನ
ಮುಂಗಳರ ಮಾಡ್ಯರೊ ಮದುಮುಗಳ.

ನ್ಯಾರೇ ? ಜೊತ್ತೀಗವಳೆ
ಂತಮಾರ್ಯರ ಬರಬೇಕೇ
ದಾರಾದ ಕೊರುಳಮಾ ಹರಿಂತುಣ್ಣ
ದಾರಾದ ಕೊರುಳಮಾ ಈರೇ – ಸೊದುರುಮಾವ
ದಾರೇ ಹೊತ್ತೀಗೆಳ ಬರುಬೇಕೇ : 13 :

ಧಾರೇ ವತ್ತೀಗೇ
ಬರುಬೇಕೇ ಮಾರವುಗ
ಅರುಶೇ ಬಾಸಿಂಗಾ ತರುಬೇಕಮಾ
ಅರುಶೇ ಬಾಸಿಂಗಾ ತರುಬೇಕಮಾ – ಮಾರವುಗ
ಅರನೀರು ಒಂತುಮಾಂ ತರುವಾರೆ : 14:

ಕಳಸಾ ಕುಲಕಾ ?
ಕಳಸಾ ವೇಲೆ ಕಾಂಬಾಕ ?
ಕರುಸಾ ರಾಂಪುರದ ಗಾಡಾರ
ಕರುಸವ ರಾಂಪುರದಾ ಗಾಡರ – ಪರಿಪಾಲುಕರ
ಇಳಿಂತುವ ತಂದೇವ ಬರವೆಳೆ : 15 :

ಆಲಾದ ಮರಿಕವಳೆ
ಮೋರಿ ಕೊಲ್ಲಣನ ಕಟ್ಟ
ಓಡ್ಯಡುತಾಳೋ ರಣ ಮಾರಿ
ಓಡ್ಯಡುತಾಳೋ ರಣಮಾರಿ – ರಾಂಪುರದ
ಮಾನದ ಗಾಡಮಾರ ಬರಹೇಳೀ : 16 :

ಹತ್ತೀಂತು ಮರಿಕವಳೆ
ಸುತ್ತಾ ಕೊಲ್ಲಣನ ಕಟ್ಟ
ಹತ್ಯಡುತಾಳೋ ರಣಮಾರಿ
ಹತ್ಯಡುತಾಳೋ ರಣಮಾರಿ – ರಾಂಪುರದ
ಪಟ್ಟದ ಗಾಡಾನಾ ಬರಹೇಳೀ : 17 :

ಹತ್ತು ವರುಷಾದವಳೆ
ಸುತ್ತುಂತಿ ಕುಂಣಾನ
ಹತ್ತಾ ವಿಟಿ ಹಚ್ಚೀ ಹಿಡಿಸ್ಯಾಳೇ
ಹತ್ತಾ ವಿಟಿ ಹಚ್ಚೀ ಹಿಡಿಸೀ—ಕಡಿಸ್ಯಾಡದಿರೆ
ಮುಕ್ಕಣ್ಣೊಬ್ಬೀಸುಟನಾ ಮಗಳೆಲ್ಲಾ : 18 :

ಏಳು ವರುಸಾದವಳೆ
ಹುಂಡ ಕ್ವಾಣನ್ನ
ಆರು ವಿಟಿ ಹಚ್ಚೀ ಹಿಡಿಸ್ಯಾಳೆ
ಆರು ವಿಟಿ ಹಚ್ಚೀ — ಕಡಿಸ್ಯಾಡುದಿರೆ
ಠಾಥೀಗೀಸುರುನಾ ಮಗುಳಲ್ಲ : 19 :

ಆರುಗಲಿ ಹಿಡಿದವಳೆ
ಸೂರಾಂವರ್ಜ ಬೆಲ್ಲಾ ನಿನಗೆ
ಗಾಪ್ಪುರಿ ಕುರಿ ಕೋಣಾ ನಿನಗವ್ವಾ
ಗಾಪ್ಪುರಿ ಕುರಿ ಕೋಣಾ ನಿನಗವ್ವಾ — ರಾಂಪುರದ
ಗ್ರಾವೂ ಕಾದಿರುವ ಗರತೀಗೇ : 20 :

ಹತ್ತು ಕೋಳಿಂಯುರಿವವಳೆ
ಹತ್ತೀ ಬೆಲ್ಲಾ ನಿನಗೆ
ಸುತ್ತಲ ಕುರಿಕೋಣಾ ನಿನಗವ್ವಾ
ಸುತ್ತಲ ಕುರಿಕ್ವಾಣಾ ನಿನಗಲ್ಲ — ರಾಂಪುರದ
ಅಷೀ ಕಾದಿರುವಾ ಗರತೀಗೆ : 21 :

ಊರ ಮುಂದಲ ವಾರವಳೆ
ಗಂಪೀನ ಮೂರವ್ವಾ
ಗಾವಾ ಬೇಡ್ಯಾಳೇ ಗಾಡರಾ
ಗಾವಾ ಬೇಡ್ಯಾಳೇ ಗಾಡರ — ಬೆಂದುರುಗಾಂಗೆ
ಲೋಲಾ ಬೇಡ್ಯಾಳೆ ಬಸುವ್ಯಾರ : 22 :

II

ಒಕ್ಕಲು ಕೇರ್ಯಾಗವ್ಳೆ
ಓಗ್ಯಾಳೆ ಮೂರವ್ವ
ಒಕ್ಕಲುರಣ್ಣಾನಾ ಕರಿಸ್ಯಾಳೆ
ಒಕ್ಕಲೂರಣ್ಣಾನಾ ಕರಿಸೀ — ಕೇಳ್ಯಾಳಲೊಲ್ಲೇ
ಚರುಗಾಕೆ ಜ್ವಾಳಾ ಕೊಡು ಬಾರೊ : 23 :

ಕುಂಬರ ಕೇರ್ಯಾಗವ್ಳೆ
ಓದಾಳೋ ಮೂರವ್ವಾ
ಕುಂಬಾರಣ್ಣಾನಾ ಕರಿಸ್ಯಾಳೆ
ಕುಂಬಾರಣ್ಣಾನ ಕರಿಸಿ ಕೇಳಿದಳಲೊಲ್ಲ — ರಂಗಾಕೆ
ಐದಾ ಮುಗಿ ಬೇಕೋ : 24 :

ಮ್ಯಾದರ ಕೇರ್ಯಾಗವಳೆ
ಓದಾಳೊ ಮೂರಕ್ಕ
ಮ್ಯಾದರಣ್ಣಾನಾ ಕರಿಸ್ಯಾಳೆ
ಮ್ಯಾದರಣ್ಣಾನಾ ಕರಿಸೀ — ಕೇಳಿದಳಲೊಲ್ಲ
ಚರುಗಾಕ ಐದಾ ಗುಡಿ ಬೋಕೊ : 25 :

ಮಾದರ ಕೇರ್ಯಾಗವ್ಳೆ
ಓದಾಳೋ ಮೂರಕ್ಕ
ಮಾದಿಗುರಣ್ಣಾನ ಕರಿಸ್ಯಾಳೇ
ಮಾದಿಗುರಣ್ಣಾನಾ ಕರಿಸೀ — ಕೇಳಿದುಳಲೊಲ್ಲ
ಚರುಗಾಕೆ ರಂಗಾ ಮಂದಾಬ್ಬರೋ : 26 :

ಕುರುಬರ ಕೇರ್ಯಾಗವ್ಳೆ
ಓದಾಳೋ ಮಾರವ್ವ
ಕುರುಬಾರಣ್ಣಾನಾ ಕರಿಸ್ಯಾಳೋ
ಕುರುಬಾರಣ್ಣನ ಕರಿಸೀ — ಕೇಳಿದಳಲ್ಲೋ
ಗದ್ದೀಗೆ ಮುಂತುಂ ಕೊಡು ಬಾರೋ : 27 :

ತಳುವರ ಕೇರ್ಯಾಗವ್ಳೆ
ಓದಾಳೋ ಮಾರವ್ವ
ತಳುವಾರಣ್ಣಾನಾ ಕರಿಸ್ಯಾಳೇ
ತಣುವಾರಣ್ಣನ ಕರಿಸೀ — ಕೇಳಿದಳಲ್ಲೋ
ಗದ್ದೀಗೆ ಮುಂತುಂ ಕಡಿ ಬಾರೋ : 28 :

III ಆರು ಗಾವುದಿಂದವಳೆ
ಬೇವುಟ್ಟು ಬರುವಾಗ
ಬೇವೆಲ್ಲಾ ಬಾಡೀ ತರುಗೆದುಂ
ಬೇವೆಲ್ಲಾ ಬಾಡೀ ತರುಗೆದೂಂ — ರಂಪುರದ
ಕಾಂತುವು ನಿಲ್ಲಾಕ ನೆರಳಿಲ್ಲಾ : 29 :

ಹತ್ತು ಗಾವುದಿಂದವಳೆ
ಸೊಪ್ಪುಟ್ಟು ಬರುವಾಗ
ಸೊಪ್ಪೆಲ್ಲಾ ಬಾಡೀ ತರುಗೆದುಂ
ಸೊಪ್ಪೆಲ್ಲಾ ಬಾಡೀ ತರುಗೆದುಂ — ರಾಂಪುರದ
ಸತ್ಯವ್ವ ನಿಲ್ಲಾಕ ನೆರುಳಿಲ್ಲಾ : 30 :

IV ಬಾಂದಿಂ ಬೀಗಮಾರಿರು
ಬೇವಿನಾಂತುರು ನೀರೇರು
ಮ್ಯಾಲೇಂದಂತುರುದಾ ಸಿಡಿಂತೋರೂ
ಮ್ಯಾಲೇಂದೆಂತುರುದಾ ಸಿಡಿಂತೋರು — ಬಂದಾರೆ
ಬಾಗೀಲ ತೆರಿಂತೇ ರಣುಮಾರೀ : 31 :

ಒಪ್ಪತ್ತಿನ ಊಟಾವವಳೆ
ಸುಕ್ಕಿದ ಬಾಂದು ಬೀಗ
ಉಕ್ಕಾ ಮುಳಲಾಗೇ ಬರುವಾಳೇ
ಉಕ್ಕ ಮುಳುಲಾಗೇ ಬರುವಾಳೇ — ಮಾರಕ್ಕ
ಒಪ್ಪಿಸಿಗಾಳೇ ಹರಕೆಂತೂ : 32 :

ಕಲ್ಲು ಗುಡಿಂತು ಕಟ್ಟೀಂತುವಳೆ
ಕಣ್ಣೆರಡು ಮುಂಜಾಗೀ
ಅಲ್ಲೀಗೆ ನಾನೂ ಬರಲಾರೇ
ಅಲ್ಲೀಗೆ ನಾನೂ ಬರಲಾರೆ — ಮಾರವ್ವಗೆ
ಇಲ್ಲಿಂದಲೆ ಕೈಂತೂ ಮುಗುದೇವೇ : 33 :

IIIII

ಬಂಧುವುಗಳ ಪದಗಳು

ತಡು ತಡೇಂಬಾರವಣಿ
ನಾನಂಗೇ ಬಡಾಲೇ
ಕಾಡವರೆ ಬಳ್ಳೇ ಕರುತಿಂತರಾ
ಕಾಡವರೆ ಬಳ್ಳೇ ಕರುತಿಂತರಾ — ಅಲೂರ
ಬುದ್ಧಿವಂತರ ತುಂಬ್ಳೇ ಇಲಿ ತಿಂತೆರಾ : 34 :

ಅಕ್ಕ್ಯನವಳಿರಾ ಮಾರವಾಗ್ವಳಿ
ಬೆದೆ ಬಡುಕ ಮುಂಡ್ಯಂತೆ
ಬೆಳಿಂತರಾ ಮುದ್ದ್ಣರ್ಲಾ ಕೆಡಿಸ್ಯಾಳರಾ
ಬೆಳಿಂತರಾ ಮುದ್ದ್ಣರ್ಲಾ ಕೆಡಿಸ್ಯಾಳರಾ — ತುಲ್ಲೆಗೆ
ಬಳಿನಡುಕನ ಹಾವಾ ಬಿಡುಬೇಕರಾ : 35 :

ತ ಮರ್ಸಂಗಾತುವಳಿ
ಅೞ ಮರ್ಸ ಇಂಗಾತು
ಕಬ್ಬೀನ ಗುದ್ಯಾಗೆ ಕೆಲುಸಾತೆರಾ
ಕಬ್ಬೀನ ಗುದ್ಯಾಗೆ ಕೆಲುಸಾತೆರಾ — ಮರಾಯ್ನ
ಮರಾವೀನ ಸೀರೆಲ್ಲಾ ಹ್ವಲುಸಾತೆರಾ : 36 :

ಹುಲ್ಲ ಕೆರಾಂತ್ರ್ಯಾಳವಳ್ಯಾರವ್ಳಿ
ತುಲ್ಲ ನೆರಾಡಿ ಕೇಳೇ
ಅಂತ್ರ್ಯಾ ನನ ತುಲ್ಲೇ ಬಡವಾತು
ಅಂತ್ರ್ಯಾ ನನ ತುಲ್ಲೇ ಬಡವಾತು — ಮರಾಬದಿಗ
ಅಕ್ಕೇ ಬಾಗುಲಿಗೆ ಕಡಿಂತರಾತೇ : 37 :

ಅಧ್ಯಾಯ: ೨

111 ' ಮಾರಿಹಬ್ಬ ' ಆಚರಣೆ ಮತ್ತು ಸಂಪ್ರದಾಯಗಳು:

ವಿಗ್ರಹ ಕೆತ್ತನೆ.

111·1 ಹಬ್ಬದ ಪೂರ್ವಭಾವಿ ತಯಾರಿ.

111·2 ಹಬ್ಬದ ಆರಂಭದ ವಿವರ.

ಅ) ಮಾರಿಗೆ ಸಂಬಂಧಿಸಿದಂತೆ.
ಆ) ಕೋಣನಿಗೆ ಸಂಬಂಧಿಸಿದಂತೆ,
ಇ) ' ಘಟ ' ಪೂಜುವುದು.

111·3 ' ಬಲಿ ' ಸಂದರ್ಭದ ವಿವರಗಳು:—

ಅ) ಅಮ್ಮ ಗದ್ದಿಗೆಗೆ ಬರುವುದು
ಆ) ' ಹುಲುಸಿನ ' ಪೂಜೆ
ಇ) ' ಘಟೆ 'ತರುವುದು
ಈ : ಕೋಣನ ಬಲಿ
ಉ) ಚರಗ ಚೆಲ್ಲುವುದು
ಊ) ಬೇವುಡೆ—ಒಂದು ಚರ್ಚೆ
ಋ) ಗಾವ ಮರಿ ಜಗಿವುದು.

111·4 ಹಬ್ಬದ ಮುಕ್ತಾಯದ ವಿವರ

ಅ) ಅಮ್ಮ ಹೊರಡುವುದು.
ಆ) ' ಮೋಜುವ ' ಆಚರಣೆ.

111·5 ಕೋಣನ ಬಿಡುವುದು ಮತ್ತು ಮಾಂ ಮುತ್ತೈದೆ ಯಾಗುವುದು.

ವಿಗ್ರಹಮಾಡುವ ಸಂಪ್ರದಾಯ:

ವಿಗ್ರಹಕ್ಕೆ ಮರಹುಡುಕಲು ಹೊರಡುವ ಮೊದಲು ಊರ ಪ್ರಧಾನ ದೇವರ ಉತ್ಸವ ಮೂರ್ತಿಯನ್ನು ಹೊರಡಿಸಿಕೊಂಡು ಅಪ್ಪಣೆ ಕೇಳಲಾಗುತ್ತದೆ. ಅದರನ್ವಯ ದಿನ ಗೊತ್ತುಪಡಿಸಿಕೊಂಡು ಪೂಜೆಯ ಸಾಮಾಗ್ರಿಗಳೊಂದಿಗೆ ಕಾಡಿಗೆ ಹೊರಡಲಾಗುತ್ತದೆ. ಹೀಗೆ ಹೋಗುವ ಗುಂಪಿನಲ್ಲಿ ಹೆಂಗಸರನ್ನು ಕರೆದೊಯ್ಯುವುದಿಲ್ಲ. ಏಕೆಂದರೆ ಮುಟ್ಟುಚಟ್ಟು ಈ ಸಂದರ್ಭದಲ್ಲಿ ಸಲ್ಲದು ಎಂಬ ಭಾವನೆಯಿದೆ. ಸಾಮಾನ್ಯವಾಗಿ ವಿಗ್ರಹ ಕೆತ್ತನೆಗೆ ಬಳಸುವ ಮರ 'ದೊಡ್ಡತಪ್ಪೆಮರ' ವಾಗಿದ್ದು, ಅದನ್ನು ಅರಸುತ್ತ ಜನಸಮೂಹ ಕಾಡಿನಲ್ಲಿ ತಿರುಗುತ್ತದೆ. ಹುಡುಕಿದ ನಂತರ ಮರವನ್ನು [illegible] ಪೂಜಿಸಲಾಗುತ್ತದೆ. ನಂತರ ಆ ಗುಂಪಿನಲ್ಲಿ ದೊಡ್ಡವರೆಲ್ಲ ನಿಗದಿ ಮಾಡಿಕೊಂಡು ಹೋಗಿದ್ದ ಎತ್ತರ ನಿಲುವಿನ ವ್ಯಕ್ತಿಯೊಬ್ಬ ಎರಡೂ ಕೈಗಳಲ್ಲಿ ಕೊಡಲಿ ಅಥವಾ ಮಚ್ಚನ್ನು ಹಿಡಿದು ಮರದ ಬುಡಕ್ಕೆ ಎತ್ತು ತನ್ನ ಕೈ ಸಿಗುವಷ್ಟು ಮೇಲಕ್ಕೆ ಹೀಗೆ ಎರಡು ಕಚ್ಚನ್ನು ಹಾಕುತ್ತಾನೆ. ನಂತರ ಬೇರೆಯವರೂ ರೀತಿ ಆ ಎರಡೂ ಕಚ್ಚುಗಳ ಮಧ್ಯದ ಭಾಗವನ್ನು ಕತ್ತರಿಸುತ್ತಾರೆ. ಈ ಎರಡೂ ಕಚ್ಚುಗಳ ಮಧ್ಯದ ಮರ ಮಾತ್ರ ವಿಗ್ರಹ ಕೆತ್ತನೆಗೆ ಬಳಸಲಾಗುತ್ತದೆ. ಹೀಗೆ ಕಡಿದ ಮರವೇನಾದರೂ ಮಧ್ಯ ಬಿರಿ ಬಂದರೆ — ಆಚರಣೆಗಳಲ್ಲಿ ಏನಾದರೂ ತೊಡಕಾಗಿದೆಯೆಂದು ಭಾವಿಸುತ್ತಾರೆ. ಹಾಗೇ ಇನ್ನೊಂದು ಮರವನ್ನು ಹುಡುಕುತ್ತಾರೆ. ಆ ಮರವಲ್ಲದೆ ಅಮ್ಮನ ಕೆತ್ತನೆಗೆ 'ರಕ್ತಬೂತಾಳಿ, ಹಾಲ್ ಬೂತಾಳಿ' ಹಾಗೂ ಬೇವಿನ ಮರವನ್ನು ಸೇರಿಸಿ ಮಾಡುವುದರಿಂದ ರೂಪು ಕಳೆ ಪ್ರಧಾನವಾಗಿ ಬರುತ್ತದೆ ಎಂದು ನಂಬಲಾಗುತ್ತದೆ. ಬಹುಪಾಲು ಅಮ್ಮನ ಮುಖದ ಭಾಗಕ್ಕೆ ರಕ್ತಬೂತಾಳ ಮರವನ್ನು ಬಳಸಲಾಗುತ್ತದೆ. ಹೀಗೆ ಕಡಿದ ಮರವನ್ನು ಗಾಡಿಮೇಲೆ ತರುವಂತಿಲ್ಲ. ಊರು ಮುಟ್ಟುವ ತನಕ ಹೆಗಲ ಮೇಲೆ ಹೊತ್ತು ತರಬೇಕು. ಮಧ್ಯ ಒಬ್ಬರಿಗೊಬ್ಬರು ಆಸರೆಯಾಗುತ್ತಾ ಹೆಗಲು ಬದಲಾಯಿಸುತ್ತಾರೆ. ಈಗೀಗ ಕೆಲವುಕಡೆ ಗಾಡಿಮೇಲೆ ತರುವ ಪರಿಪಾಠವಿದೆ. ಹೀಗೆ ತಂದ ಮರವನ್ನು ಬಡಗಿಯ ಮನೆಗೆ ಒಯ್ಯಲಾಗುತ್ತದೆ. ನಂತರ ಒಂದು ನಿರ್ದಿಷ್ಟ ಮುಹೂರ್ತದಲ್ಲಿ ಬಡಗಿ ಸ್ನಾನ ಮಾಡಿ, ಮುಟ್ಟುಚೈಲಿಗೆಯಿಂದ ಹೊರತಾಗಿ ವಿಗ್ರಹ ಕೆತ್ತನೆಗೆ ತೊಡಗುತ್ತಾನೆ. ವಿಗ್ರಹ ಕೆತ್ತನೆಗೆ ಬಡಗಿ ಆರಂಭಿಸುವ ಸಮಯದಲ್ಲಿ ಊರ ಪ್ರಮುಖರು ಅವನಿಗೆ ದಕ್ಷಿಣೆ ನೀಡಿ ಮರದ ಹಾಗೂ ಅವನ ಆಯುಧಗಳ ಪೂಜೆ ಮಾಡಿಸುತ್ತಾರೆ. ವಿಗ್ರಹ ಕೆತ್ತುವ ಬಡಗಿ ಕೇಳಿದಷ್ಟು ಹಣ ಅಥವಾ ಧವಸವನ್ನು ಕಿರಿಕಿರಿಮಾಡದೆ ಕೊಡಬೇಕೆನ್ನುವುದು ಗ್ರಾಮೀಣರ ನಂಬಿಕೆ. ಅವನು ವಿಗ್ರಹ ಕೆತ್ತುವಾಗ ಅಲ್ಲಿ ಯಾವುದೇ ಕಾರಣಕ್ಕೂ ಹೆಣ್ಣು ಮಕ್ಕಳು ಅಥವಾ ಮುಟ್ಟಬಾರದ(ಕೊಟಗರು) ಜನ ಬರಬಾರದು ಎಂಬುದು ನಿಯಮ. ಮುಟ್ಟು-ಚೈಲಿಗೆಯ ಅಸ್ಪೃಶ್ಯ ಭಾವನೆ ಈ ನಿಯಮದ ಕಾರಣವಿರಬಹುದು. ಹೀಗೆ ಅನೇಕ ದಿನಗಳವರೆಗೆ ಅಮ್ಮನ ವಿಗ್ರಹದ ಕೆತ್ತನೆ ನಡೆಯುತ್ತದೆ. ಕೆತ್ತನೆ ಮುಗಿದ ನಂತರ ಅಮ್ಮನಿಗೆ ಬಣ್ಣ ಬಳಿಯುವ ಕಾರ್ಯ ಆರಂಭವಾಗುತ್ತದೆ. ಅಮ್ಮನ ವಿಗ್ರಹದ ಮುಂದೆ ಪರದೆಯನ್ನು ಕಟ್ಟಲಾಗುತ್ತದೆ. ಪರದೆಯ ಹಿಂದೆ ಬಣ್ಣ ಬಳಿಯುವ ಕಾರ್ಯ ಆರಂಭವಾಗುತ್ತದೆ. ಮುಖ ಮೈಗೆಲ್ಲಾ ಬಣ್ಣ ಹಚ್ಚಿದ ಮೇಲೆ 'ಕಣ್ಣು' ಮತ್ತು 'ಕುಂಕುಮ' ಬರೆಯುವುದು ಮಾತ್ರ ತುಂಬಾ ವಿಶಿಷ್ಟವಾಗಿರುತ್ತದೆ. ಇದನ್ನು 'ದಿಟ್ಟಿ' ಬರೆವ ಕಾರ್ಯ ಎನ್ನುತ್ತಾರೆ. ಕಣ್ಣುಗುಡ್ಡೆ ಮತ್ತು ಕುಂಕುಮವನ್ನು ಬರೆಯುವಾಗ ವಿಗ್ರಹದ ಹಿಂಬದಿಯಲ್ಲಿ ನಿಂತು ವಿಗ್ರಹದ ಮುಂದೆ ಅಮ್ಮನಿಗೆ ನೇರಾಗಿ ಕನ್ನಡಿ ಹಿಡಿದುಕೊಂಡು ಅದರಲ್ಲಿ ನೋಡುತ್ತಾ ಬರೆಯಲಾಗುತ್ತದೆ. ಏಕೆಂದರೆ ಮೊದಲು ಅಮ್ಮನ ದೃಷ್ಟಿಗೆ ಬಿದ್ದವರು ಸುಟ್ಟುಹೋಗುತ್ತಾರೆ ಅಥವಾ ಸಾಯುತ್ತಾರೆ. ಎಂಬ ನಂಬಿಕೆಯಿದೆ. ಭದ್ರಾವತಿ ತಾಲ್ಲೂಕು ಅರಕೆರೆಯ 'ಮಾರಿ' ಗೆ ದಿಟ್ಟಿಯಿಡುವಾಗ ಎದುರಿಗೆ 'ಕುಮರಿ' ಕಟ್ಟಲಾಗುತ್ತದೆ. ಹಿಂದೆ ಇಂತಹ ಕುಮರಿ ದೇವಿಯ ದೃಷ್ಟಿ ಬಿದ್ದೊಡನೆ ಅದು ಸಾಯುತ್ತಿತ್ತು ಎನ್ನುತ್ತಾರೆ. ಹಳ್ಳಿಯ ಜನ. ಹಾಗೇ ಲಕ್ಕವಳ್ಳಿಯ ಮಾರಿಯ ದಿಟ್ಟಿಯಿಡುವಾಗ ಅದರೆದುರು ಒಣಹುಲ್ಲಿನ ಕಟ್ಟನ್ನು

[illegible]ಾಗುತ್ತಿದ್ದರು — ಎಲ್ಲ ದಿಬ್ಬ ಬಿದ್ದ್ವಾರ ಮನುಷ್ಯರೊಳಗು ಬೆರೆಯದ ಡಾ: ಬಸವರಾಜ ನೆಲ್ಲಿಸರ ಅವರು ಹೇಳುತ್ತಾರೆ. ಇದರ ಪ್ರಾಕೃತಿಕ ವಿನ್ಯಾಸದಿಂದ ಬಿಟ್ಟರೆ ಮಾರಿಗೆ ಬಣ್ಣ ಬಳಿವಾಗ ಈ ಕೆಲಸವನು ಮಾಡಿಸುವುದು ವಾಡಿಕೆಯಾಗುತ್ತದೆ. ಈ ಜಾತ್ರೆಗೆ ಎಲ್ಲಾ 'ಮಾರಿ' ಗಳ ವಿಷಯದಲ್ಲೂ ಸಾಮಾನ್ಯವಾಗಿ [illegible]ಲಾಗುತ್ತದೆ.

(ಜಾನಪದ ಸಂಕಲನ — ಬಸವರಾಜನೆಲ್ಲಿಸರ)

ಶಿವಮೊಗ್ಗ ತಾಲ್ಲೂಕಿನ ಹೊಳ್ಳಿ ಮತ್ತು ಬೀರಗೊಂಡನಹಳ್ಳಿಯ ಮಾರಿ ಹಬ್ಬದಲ್ಲೂ ಈ ಪದ್ಧತಿಯಿದೆ. ಇಲ್ಲಿ ಆ ಮರವನ್ನು ಆಮೇಲೆ ದಿಬ್ಬಗೆ ಹಿಡಿದ ಮರಿಯನ್ನು ಬಣ್ಣ ಬಳಿದವರಿಗೆ ಕೊಡಲಾಗುತ್ತದೆ. ಆ ಮರ ಕೆಲವೇ ದಿನಗಳಲ್ಲಿ ಸಾಯುತ್ತದೆ ಎಂದು ಹೇಳುತ್ತಾರೆ. ಇದರ ಈ ವಿಗ್ರಹ [illegible] ಮತ್ತೆ ಮತ್ತೆ ನಡೆಯುವುದು '<u>ಬಿತ್ತುಮಾರಿ</u>' ಹಬ್ಬದಲ್ಲಿಯೂ ಇಂದಿನ ಹಬ್ಬದ ಈ ಆಚರಣೆಗಳ ಬಗ್ಗೆ [illegible] ಈ ಹಬ್ಬದಲ್ಲಿ ಪ್ರತೀ ಭಾರಿಯೂ ಪುನರಾವರ್ತನೆಯಾಗುತ್ತದೆ. ಆದರೆ '<u>ಸೂರು ಮಾರಿ</u>' [illegible]ದಲ್ಲಿ ಈ ಆಚರಣೆಗಳು ಪ್ರತೀ ಹಬ್ಬದಲ್ಲಿ ನಡೆಯುವುದಿಲ್ಲ. ಆದರೆ ಬಣ್ಣ ಬಳಿಯುವ ಕಾರ್ಯ ಮಾತ್ರ ಎಂದಿನಂತೆ ನಡೆಯುತ್ತದೆ. 'ಸೂರು ಮಾರಿ' ಹಬ್ಬದಲ್ಲಿ ಅಮ್ಮನನ್ನು ಪ್ರತಿ ಹಬ್ಬದ ಅಂತ್ಯದಲ್ಲಿ ವಿಸರ್ಜಿಸಲ್ಪಡುವ [illegible] ಮತ್ತೆ ಕಾಪಾಡಲ್ಪಡುತ್ತದೆ. ಇಲ್ಲಿ ಮತ್ತೆ ಮಾರಿಯನ್ನು ಮತ್ತೆ ಮಾಡಲಾಗುತ್ತದೆ. ಆದರೆ 'ಬಿಡು ಮಾರಿ' ಹಬ್ಬದ ಅಂತ್ಯ ಪ್ರತೀಬಾರಿಯೂ ಅಮ್ಮನ ವಿಗ್ರಹವನ್ನು ವನದಲ್ಲಿ ಬಿಟ್ಟು — ಮತ್ತೆ ಹಬ್ಬಕ್ಕೆ ಹೊಸ ವಿಗ್ರಹ ಮಾಡಿಸಲಾಗುತ್ತದೆ. ಈ ವಿಗ್ರಹ ಬಾನುಂಡೆಯು [illegible]ವುದರಲ್ಲಿಯೂ ವೈದಿಕ ಪ್ರಭಾವದ ದ್ಯೋತಕವಾಗಿರುತ್ತದೆ.

<u>ನಿಷೇಧ ಅಥವಾ ಇತರೆ ಶಕುನ ಸೂಚಿಗಳು :</u>

) ಮನೆ ತೆರೆದು ಹೋಗುವಾಗ ಬೆಕ್ಕು ಅಡ್ಡ ಹೋಗಬಾರದು. ಹಾಗೇನಾದರೂ ಹೋದರೆ ಮತ್ತೆ ವಾಪಸ್ಸು ದೇವಸ್ಥಾನಕ್ಕೆ ಹೋಗಿ ಸ್ವಲ್ಪ ಹೊತ್ತು ಕಳೆದು ಹೋಗುತ್ತಾರೆ.

) 'ಬೆಕ್ಕು' ಎದುರಿಗೆ ಬರಬಾರದು ಹಾಗೆ ಬಂದರೆ ಹೋಗುವ ಕೆಲಸ ಆಗುವುದಿಲ್ಲ ಎಂಬ ನಂಬಿಕೆಯಿದೆ.

) ಕಾಗೆ ಬಲದಿಂದ ಎಡಕ್ಕೆ ಹೋಗಬಾರದು.

) ಕೆಲಸಕ್ಕೆ ಹೊರಟಾಗ ಒಂಟಿ ಸೀನು ಸೀನಬಾರದು. ಅದು ಅಶುಭ ಸೂಚನೆ ಎನ್ನುತ್ತಾರೆ.

) ಒಂಟಿ ಅಂತೆ್ರಾಳರು ಬರಬಾರದು ಅದೂ ಕೂಡ ಅಶುಭ ಸೂಚಿ.

III. ಹಬ್ಬದ ಆಚರಣೆ ಮತ್ತು ಸಂಪ್ರದಾಯ:

ಪ್ರಸ್ತುತ ಅಧ್ಯಯನಕ್ಕೆ ಆರಿಸಿಕೊಂಡಿರುವ 'ಮಾರಿಹಬ್ಬ'ವು ಸಾಮಾನ್ಯವಾಗಿ ಸುನೇವ ತಿಂಗಳುಗಳಲ್ಲಿ ನಡೆಯುವ ಹಬ್ಬವಾಗಿದ್ದು, ಈ ಹಿಂದೆ ಹೇಳಿರುವಂತೆ ಇದು '<u>ಬಲಿ</u>'ಯ ತೀವ್ರತೆಯುಳ್ಳ ಹಬ್ಬ. ಇಲ್ಲಿ ಹೊನ್ನಾಳಿ ತಾಲ್ಲೂಕಿನ ಬೇಲಗೊಂಡನಹಳ್ಳಿ ಮತ್ತು ಹೊನ್ನಾಳಿ ಗ್ರಾಮಗಳ ಊರು ಮಾರಿ ಹಬ್ಬಗಳನ್ನು ಮಾತ್ರ ವಿವರಿಸಲಾಗುವುದು. ಇವೆರಡೂ ಆಚರಣೆಗಳು ಒಂದೇ ರೀತಿಯಲ್ಲಿದ್ದು ಹೊನ್ನಾಳಿಯ ಹಬ್ಬ ಆಷಾಢದಲ್ಲಿ ನಡೆಯುತ್ತದಾದ್ದರಿಂದ ಅದನ್ನು 'ಆಷಾಢದ ಮಾರಿ' ಎಂದು ಕರೆಯಲಾಗಿದೆ. ಇದನ್ನು ಬಿಟ್ಟರೆ ಉಳಿದಂತೆ ಆಚರಣೆಗಳು ಒಂದೇ ರೀತಿಯಲ್ಲಿರುತ್ತವೆ. ಭಿನ್ನತೆಗಳೇನಾದರೂ ಕಂಡಲ್ಲಿ ಅದನ್ನು ವಿವರಿಸುವ ಸಂದರ್ಭಗಳಲ್ಲಿ ತಿಳಿಸಲಾಗುತ್ತದೆ. ಬಿಡುವಮಾರಿಯ ಸಂದರ್ಭದಲ್ಲಿ ಮಾತ್ರ ಪ್ರತಿ ಹಬ್ಬದಲ್ಲಿ ವಿಗ್ರಹ ಕೆತ್ತನೆ ಹೊಸದಾಗಿ ನಡೆಯುವುದರಿಂದಲೂ ಅದು 'ಊರು ಮಾರಿ'ಯ ಸಂದರ್ಭದಲ್ಲಿ ಇಲ್ಲದ್ದರಿಂದಲೂ 'ವಿಗ್ರಹ ಕೆತ್ತನೆ'ಯ ಆಚರಣೆಗಳನ್ನು ಪ್ರತ್ಯೇಕವಾಗಿ ಇಲ್ಲಿ ವಿವರಿಸಿದೆ. 'ಮಾರಿ ಹಬ್ಬ'ವನ್ನು ಹಳ್ಳಿಗರು ಅತೀಯಾದ ವಿಜೃಂಭಣೆಯಿಂದ ಆಚರಿಸುತ್ತಾರಾದರೂ ಅದರ 'ಬಲಿ'ಯ ಭೀಕರತೆಗೆ ಇತ್ತೀಚೆಗೆ ಕಾನೂನಿನ ಎಡರುಗಳು ಎದುರಾಗುತ್ತಿವೆ. ಮಾರಿಹಬ್ಬದ ಈ ಭೀಕರ ಆಚರಣೆಗಳ ಪ್ರಸ್ತುತತೆ ಎಷ್ಟು ಎಂಬುದು ವಿಚಾರಣೀಯ ಅಂಶವೇ ಆಗಿದೆ. ಆದರೆ ಗ್ರಾಮೀಣರ ಮುಗ್ಧ ಭಕ್ತಿಯ ಭಾವನೆಗಳು ಮಾತ್ರ ಆಚರಣೆಗಳನ್ನು ಉಳಿಸಿಕೊಂಡುಬರುವ ಮಾರ್ಪಾಟಿನ ವಿಧಾನಗಳನ್ನು ಬಳಸುತ್ತಲೇ ಅದನ್ನು ಉಳಿಸಿಕೊಂಡಿದ್ದಾರೆ.

ಇಲ್ಲಿ ಊರು ಮಾರಿಯ ಆಚರಣೆಗೆ ಸಂಬಂಧಪಟ್ಟ ಹಬ್ಬದ ವಿವರಗಳನ್ನು ಹಬ್ಬದ ಪೂರ್ವಭಾವಿ ತಯಾರಿ, ಹಬ್ಬದ ಆರಂಭದ ವಿವರ, ಬಲಿ ಸಂದರ್ಭದವಿವರ, ಹಬ್ಬದ ಮುಕ್ತಾಯದ ವಿವರ, ಎಂದು ಪ್ರಧಾನವಾದ ನಾಲ್ಕು ಭಾಗಗಳಾಗಿ ಒಂಗಡಿಸಿಕೊಂಡು ವಿವರಿಸಲಾಗಿದ್ದು ಪ್ರತಿ ಭಾಗದಲ್ಲೂ ಉಪ ವಿಭಾಗಗಳಾಗಿ ಅಲ್ಲಿನ ಆಚರಣೆಗಳನ್ನು ವಿವರಿಸಲಾಗಿದೆ. ಈ ಹಬ್ಬದ ಆಚರಣೆಗಳ ಜೊತೆಯಲ್ಲಿ ಅವುಗಳ ವೈಚಾರಿಕ ಚರ್ಚೆಯನ್ನು ನಡೆಸಲಾಗಿದ್ದು, ಇದು ಪ್ರಬಂಧದ ಒಟ್ಟಾರೆ ಉದ್ದೇಶಕ್ಕೆ ಪೂರಕವಾಗಿದೆಯೆಂದು ಭಾವಿಸಲಾಗಿದೆ.

III.1 ಹಬ್ಬದ ಪೂರ್ವಭಾವಿ ತಯಾರಿ :

ಈ ಹಿಂದೆ ಹೇಳಿರುವಂತೆ ಅಧ್ಯಯನ ವಸ್ತು 'ಊರು ಮಾರಿ'ಗೆ ಸಂಬಂಧಿಸಿದ್ದಾಗಿದೆ. ಇಲ್ಲಿ ಹಬ್ಬದ ಪೂರ್ವಭಾವಿತಯಾರಿ ಊರ ಪ್ರಮುಖರ ಸಭೆಯ ಮೂಲಕ ಆರಂಭವಾಗುತ್ತದೆ. ಹಬ್ಬಕ್ಕೆ ಹದಿನೈದು ದಿವಸ ಮೊದಲೇ ಹಬ್ಬ ಮಾಡುವ ದಿನವನ್ನು ನಿಷ್ಕರ್ಷೆ ಮಾಡಿ ನಿರ್ಧರಿಸುತ್ತಾರೆ. ಅಲ್ಲದೇ ಆ ವೇಳೆಯಲ್ಲಿ ಹಬ್ಬದ ಜವಾಬ್ದಾರಿಗಳನ್ನು ಹಂಚಲಾಗುತ್ತದೆ ಮತ್ತು ಹಬ್ಬಕ್ಕೆ ಅವಶ್ಯಕವಾಗಿ ಬೇಕಾಗಿದ್ದ ಅಸಾದಿ, ಜಾಟಿಯವರಿಗೆ ಹೇಳಿಕಳಿಸಲಾಗುವುದಲ್ಲದೆ, ಓಲಗ, ಹಲಗೆಯವರಿಗೆ ವೀಳ್ಯಕೊಡಲಾಗುತ್ತದೆ. ಇಂತಿಂಥ ಊರಿಗೆ ಇಂತಲ್ಲಿಂದಲೇ ಅಸಾದಿಗಳು ಬರಬೇಕೆಂಬ ಕಟ್ಟುಪಾಡಿದೆ. ಬೇಲಗೊಂಡನಹಳ್ಳಿಯ ಹಬ್ಬಕ್ಕೆ ಪಕ್ಕದ ರಾಂಪುರದ ಅಸಾದಿ ಬರುತ್ತಾನೆ. ಹೊನ್ನಾಳಿಗೆ ಸದಾ ತಾಲ್ಲೂಕಿನ ಬೆಳಗುತ್ತಿಯವರೇ ಆಗಬೇಕು. ಹೀಗೆ ಈ ಸಭೆಯಲ್ಲಿ ಹಲವಾರು ವಿಷಯಗಳು ಪ್ರಸ್ತಾಪವಾಗಿ ನಂತರ ಕೋಣನನ್ನು ಹಿಡಿವ ದಿನವನ್ನು ನಿರ್ಧರಿಸಲಾಗುವುದು. ಈ ಕೋಣನನ್ನು ಹಿಡಿವ ಜವಾಬ್ದಾರಿ ಮಾದಿಗರದು. ಬೇಲಗೊಂಡನಹಳ್ಳಿಯಲ್ಲಿ ಸುನೇವ ತಿಂಗಳಿನಲ್ಲಿ ಎರಡು ವರ್ಷಕ್ಕೊಮ್ಮೆ ನಡೆಯುವ ಈ ಹಬ್ಬದ ಆರಂಭ ಕೋಣನನ್ನು ಹಿಡಿಯುವ ಮೂಲಕವೇ ಆರಂಭವಾಗುತ್ತದೆ. ಅಂತೆಯೇ ಆಷಾಢದ ಸಮಯದಲ್ಲಿ ಹೊನ್ನಾಳಿಯಲ್ಲಿ ಆರಂಭವಾಗುತ್ತದೆ. ಹೀಗೆ ಕೋಣನನ್ನು ಹಿಡಿದು ಊರಲ್ಲಿ ಹಲಗೆಯೊಂದಿಗೆ ಸುತ್ತಿಸುವುದಕ್ಕೆ 'ಸಾರಾಕುವುದು' ಎನ್ನುತ್ತಾರೆ.

ಸಾರಾತ್ಮ್ಯವು:

ಹಬ್ಬ ಇನ್ನು ಎಂಟು ದಿನವಿರುವಾಗ ಊರ ಹೊಲಗಳಲ್ಲಿ ಸ್ವತಂತ್ರವಾಗಿ ತಿಂದು ಕೊಬ್ಬಿದ ಕೋಣವನ್ನು ಹಿಡಿಯಲು ಊರವರು ಮಾದಿಗರೊಂದಿಗೆ ಹೊರಡುತ್ತಾರೆ. ಕೋಣ ಊರಲ್ಲಿಯೋ ಇನ್ನಾವುದೋ ಊರಲ್ಲಿಯೋ ತಿರುಗುತ್ತಾ ಹೋಗಿರಬಹುದು. ಆ ಕೋಣವನ್ನು ಅನೇಕ ಜನರು ಸೇರಿ ಹಿಡಿಯುತ್ತಾರೆ ಕೋಣ ತೀರಾ ಬಲವಾಗಿದ್ದಲ್ಲಿ ಮುಕಹಿಡಿಯುವ 'ಬಲೆ' ಹಾಕಿ ಹಿಡಿಯಲಾಗುವುದು. ಸಾಮಾನ್ಯವಾಗಿ ಬಲವಾದ ಮಿಣಿಗಳಿಂದ ಕೋಣವನ್ನು ಹಿಡಿದು ತರಲಾಗುತ್ತದೆ. ಹೀಗೆ ಹಿಡಿದು ತಂದ ಕೋಣವನ್ನು 'ಮಾರಿ' ಗುಡಿಯ ಬಳಿ ಒಯ್ದು ಮೈಮೇಲೆ ನೀರಾಕಿ ತೊಳೆದು ಪೂಜಿಸಿ, ತಲೆಗೆ ಹರಳೆಣ್ಣೆ ಹಾಕಿ-ಕೊರಳಿಗೆ ಮಾವಿನಸೊಪ್ಪು ಮತ್ತು ಬೇವಿನಸೊಪ್ಪನ್ನು ಕಟ್ಟಿಕೊಂಡು ಹಲಗೆ ವಾದ್ಯದೊಂದಿಗೆ ಊರಲ್ಲಿ ಸುತ್ತಿಸುತ್ತಾರೆ. ಅಂದರೆ ಅಲ್ಲಿಗೆ ಹಬ್ಬದ ಆರಂಭವನ್ನು ಸೂಚಿಸಿದಂತಾಗುತ್ತದೆ. ಹೀಗೆ ಸುತ್ತಿಸಿದ ಕೋಣವನ್ನು ಮಾದಿಗರು ತಮ್ಮ ಕೇರಿಯ ಬಳಿಯಲ್ಲಿರುವ ಕೋಣನ ಗುಡಿಗೆ ಹತ್ತಿರ ತಂದು ಕಟ್ಟುತ್ತಾರೆ. ಬೀರಗೊಂಡನಹಳ್ಳಿಯಲ್ಲಿ ಇದಕ್ಕೆಂದೇ ಕೋಣನಗುಡಿಗೆಯಿದ್ದರೆ ಹೊನ್ನಾಳಿಯಲ್ಲಿ ಹಾಗೇನೂ ಇಲ್ಲ ಕೋಣವನ್ನು ಮಾದಿಗರ ಕೇರಿಯಲ್ಲೇ ಕಟ್ಟಿಕೊಳ್ಳಲಾಗುತ್ತದೆ. ಅಲ್ಲಿಂದ ಕೋಣವನ್ನು ಕಡಿವ ತನಕ ಅದರ ಜವಾಬ್ದಾರಿ ಅವರದ್ದೇ. ಹೀಗೆ ಸಾಕಾಕಿದ ನಂತರ ಊರ ಅಷ್ಟೆಗಳ ಬಳಿ ಕಾವಲಿರುತ್ತಾರೆ. ಅಲ್ಲದೆ ಊರ ಸುತ್ತ ಮುಳ್ಳನ್ನು ಹಾಕಿ ನಿರ್ಬಂಧಿಸುತ್ತಾರೆ. ಇದು ಸಾಮಾನ್ಯವಾಗಿ ಹಬ್ಬ ಮೂರುದಿನವಿರುವಾಗ ನಡೆಯುತ್ತದೆ. ಊರಿಗೆ ಬರುವ ದಾರಿಗಳಲ್ಲಿ ತಳವಾರ ಮತ್ತು ಮಾದಿಗರು ದೊಣ್ಣೆಗಳನ್ನು ಹಿಡಿದುಕೊಂಡು ಕಾವಲು ನಿಂತಿರುತ್ತಾರೆ. ಹೊರಗಿನವರು ಯಾರು ಬೇಲಿಯನ್ನು ದಾಟಿ ಒಳಗೆ ಪ್ರವೇಶ ಮಾಡುವಂತಿಲ್ಲ. ಹಾಗೇನಾದರೂ ಪ್ರವೇಶ ಮಾಡಿದರೆ ಕೋಣನನ್ನು ಕಡಿಯುವ ತನಕ ಅಲ್ಲಿಂದ ತಮ್ಮೂರಿಗೆ ಹೋಗುವಂತಿಲ್ಲ. ಹೊರಗಿನ್ನಾದರೂ ಹೋಗಲೇ ಬೇಕಾದ ಅನಿವಾರ್ಯತೆಯಿದ್ದಲ್ಲಿ ಹೋಗಬಹುದು ಆದರೆ ರಾತ್ರಿ ಮತ್ತೆ ಊರಿಗೆ ಹಿಂದಿರುಗಿಬಿಡಬೇಕು. ಹಿಂದಿರುಗದಿದ್ದರೆ ಅವರ ಪರವಾಗಿ ಭರವಸೆಕೊಟ್ಟಿದ್ದ ತಮ್ಮೂರಿನವರನ್ನು ಹೋದ ಆ ವ್ಯಕ್ತಿಯನ್ನು ಕರೆದುಕೊಂಡು ಬರುವಂತೆ ಒತ್ತಾಯಿಸುತ್ತಾರೆ. ಕೆಲವು ಸಾರಿ ಹೀಗೆ ಹೊರಹೋಗುವವರ ಬೆರಳಿಂದ ತಮ್ಮ ಊರಿನ ಬೇಲಿಯೊಳಗೆ ಒಂದೆರಡು ಹನಿ ರಕ್ತ ಬೀಳಿಸಿಕೊಂಡು ಕಳುಹಿಸುತ್ತಾರೆ. ಇವೆಲ್ಲಾ ಹುಲುಸುಹೋಗುವುದೆಂದು ನಂಬಿಕೆ ಕೆಲಸ ಮಾಡಿದೆ. ಈ ಆಚರಣೆ ಬೀರಗೊಂಡನಹಳ್ಳಿಯಲ್ಲಿ ನಡೆಯುತ್ತದೆ. ಆದರೆ ಹೊನ್ನಾಳಿಯಲ್ಲಿ ಆ ಆಚರಣೆಯಿಲ್ಲ. ಅದಕ್ಕೆ ಕಾರಣ ಹೊನ್ನಾಳಿ ಪಟ್ಟಣವಾಗಿ ಬೆಳೆದಿರುವುದು, ಮತ್ತು ತಾಲ್ಲೂಕಿನ ಪಟ್ಟಣವಾದುದರಿಂದ ಈ ರೀತಿಯ ನಿರ್ಬಂಧ ಸಾಧ್ಯವಿರುವುದಾಗಿದೆಯೇ ಹೊರತು — ಮಾಡಬಾರದೆಂದಲ್ಲ. ಹೊನ್ನಾಳಿಯಲ್ಲಿನ ಈ ಬದಲಾವಣೆ ಆಧುನಿಕತೆಯ ಚಲನೆಯಲ್ಲಿ ಸಂಪ್ರದಾಯಗಳು ಕಳೆಯುವ ತಳ ಸೂಚನೆಯನ್ನು ನೋಡಬಹುದು. ಈ ನಿರ್ಬಂಧ ಹಿಂದಿನ ಜನಾಂಗಗಳ ಗಾಪತ್ಯತೆಯನ್ನು ಕಾಪಾಡಿಕೊಳ್ಳುವ ರೀತಿಯನ್ನು ಮನಸ್ಸಿಗೆ ತರುತ್ತದೆಯಾದರೂ ಪ್ರಸ್ತುತದಲ್ಲಿ ಅದು ಹುಲುಸನ್ನು ಕಾಪಾಡುವ ಆಚರಣೆ ಮಾತ್ರವಾಗಿರುವುದು ಕಂಡುಬರುತ್ತದೆ.

ನಂತರದಲ್ಲಿ ಅಮ್ಮನಿಗೆ ಬಣ್ಣ ಹಚ್ಚುವ ಕಾರ್ಯ ನಡೆಯುತ್ತದೆ. ಹೋದ ಹಬ್ಬದ ನಂತರ ಮತ್ತೆ ಮುತ್ತೈದೆಯಾಗಿ ಗುಡಿಯಲ್ಲಿ ಪೂಜಿಸಿಕೊಳ್ಳುತ್ತಿದ್ದ ಅಮ್ಮನಿಗೆ ಬಣ್ಣ ಬಳಿಯುವ ಕಾರ್ಯವನ್ನು ಬಡಿಗಗೆ ವಹಿಸಲಾಗಿರುತ್ತದೆ. ಮಾರಿಗೆ ಬಣ್ಣ ಬಳಿಯುವುದು ಕೂಡ ವಿಶಿಷ್ಟ ನಂಬಿಕೆಗಳಿಂದ ಕೂಡಿರುತ್ತದೆ. ಬಣ್ಣ ಬಳಿಯುವಾಗ ಬಳಿಯುವಂತ ಶುಚಿಯಾಗಿ, ಮಡಿಯಿಂದ ಇರಬೇಕಾಗುತ್ತದೆ. ಇಲ್ಲದಿದ್ದರೆ ಬಣ್ಣ ಕೂರುವುದಿಲ್ಲವೆಂದು ನಂಬುತ್ತಾರೆ. ಮಾರಿಯ ಎದುರಿಗೆ ಬಿಳಿ ಪರದೆಯೊಂದನ್ನು ಕಟ್ಟಿಕೊಂಡು ಅದರ ಹಿಂಬದಿಯಲ್ಲಿ ಬಣ್ಣ ಹಚ್ಚುತ್ತಾರೆ. ಹೀಗೆ ಮಾರಿಯ ವಿಗ್ರಹಕ್ಕೆಲ್ಲ ಬಣ್ಣ ಬಳಿದು ನಂತರ ಕಣ್ಣುಗುಡ್ಡೆ ಮತ್ತು ಕುಂಕುಮವನ್ನು ಬರೆಯುವಾಗ ಮಾರಮ್ಮನ ಹಿಂಬದಿಯಲ್ಲಿ ನಿಂತ ಅವಳ ಎದುರಿಗೆ ಕನ್ನಡಿಯನ್ನು ಹಿಡಿದುಕೊಂಡು ಅದರಲ್ಲಿ ನೋಡುತ್ತಾ ಬರೆಯುತ್ತಾರೆ. ಎದುರಿಗೆ ನಿಂತು ಈ ಭಾಗವನ್ನು ಬರೆದರೆ ಅಮ್ಮನ ದಿಟ್ಟಿ ಬಿದ್ದು

ಸಾಯುತ್ತಾರೆ ಎಂಬ ನಂಬಿಕೆಯಿದೆ. ಹೀಗೆ ಬಣ್ಣ ಬಳಿದಾದ ಮೇಲೆ ಅಮ್ಮನ ಎದುರಿನ ಪರದೆಯ ಮುಂದೆ ಒಂದು ಕುರಿಯ ಮರಿಯನ್ನು ಕಟ್ಟಿ ಒಂದು ಬದಿಯಿಂದ ಪರದೆಯನ್ನು ಸರಿಸುತ್ತಾರೆ. ಅವಳ ದೃಷ್ಟಿ ಬಿದ್ದೊಡನೆ ಕುರಿಮರಿ ಒದರಿ ಸಾಯುತ್ತದೆ ಎಂದು ನಂಬುತ್ತಾರಾದರೂ ಈಗ ಆ ರೀತಿಯಿಲ್ಲ. ಆದರೂ ಆ ಕುರಿಮರಿ ಹೆಚ್ಚು ದಿನ ಬದುಕುವುದಿಲ್ಲ ಎನ್ನಲಾಗುತ್ತದೆ. ಆ ಮರಿಯನ್ನು ಬಣ್ಣ ಬಳಿದ ಬಡಿಗೆಗೆ ಕೊಡಲಾಗುತ್ತದೆ. ಇದನ್ನು 'ದಿಟ್ಟಮರಿ' ಎಂದು ಕರೆಯುತ್ತಾರೆ. ಈ ಪದ್ಧತಿ ಹೊನ್ನಾಳಿ ಮತ್ತು ಬೀರಗೊಂಡನಹಳ್ಳಿಗಳೆರಡರಲ್ಲೂ ಇದೆ. ಅಲ್ಲದೆ ಅರಕೆರೆ (ಭದ್ರಾವತಿ ತಾ.)ಯಲ್ಲೂ ಇದಿದೆ. ಲಕ್ಕವಳ್ಳಿಯ ಅಮ್ಮನ ಹಬ್ಬದಲ್ಲಿ ಮಾರಿಗೆ ದಿಟ್ಟಿ ಇಡುವ ಸಂದರ್ಭದಲ್ಲಿ ಕುರಿ ಮರಿಯ ಬದಲಿಗೆ ಒಳಹುಲ್ಲಿನ ಮೆಂಡಿಯನ್ನು ಇಡುತ್ತಾರೆಂದೂ — ಅದು ಅವಳ ದೃಷ್ಟಿ ಬಿದ್ದೊಡನೆ ಸುಟ್ಟುಹೋಗುತ್ತದೆಂದೂ ಡಾ. ಬಸವರಾಜನೆಲ್ಲೂರ ಅವರು ತಮ್ಮ 'ಜಾನಪದ-ಸಂಕಲನ'ದಲ್ಲಿ ಹೇಳಿದ್ದಾರೆ. (— 64.)

ಹೀಗೆ ಅಮ್ಮನ ಬಣ್ಣದ ಕಾರ್ಯ ಮುಗಿದ ಮೇಲೆ ಮಂಗಳವಾರ ಸಾಯಂಕಾಲದವರೆಗೆ ಅಮ್ಮನನ್ನು ಯಾರೂ ನೋಡದಂತೆ ಅದರ ಮುಂದೆ ಪರದೆ ಇಳಿಬಿಡುತ್ತಾರೆ. ಮಂಗಳವಾರ ಸಂಜೆ ಏಳು ಅಥವಾ ಎಂಟು ಗಂಟೆಗೆ ಪರದೆ ತೆಗೆದು ಪೂಜೆಗೆ ಆರಂಭ ಮಾಡಲಾಗುತ್ತದೆ.

<u>ಕೋಣನಿಗೆ ಸಂಬಂಧಿಸಿದಂತೆ</u> :

ಕೋಣವನ್ನು ಸಾರಿದ ಮೇಲೆ ಕೋಣವನ್ನು ಮಾದಿಗರು ಹಿಡಿದುಕೊಂಡು ಹೋಗಿ ಕೋಣನ ಗದ್ದಿಗೆ ಅಥವಾ ಉಚ್ಚಂಗೆಪ್ಪನ ಗುಡಿಬಳಿ ಕಟ್ಟಿಕೊಳ್ಳುತ್ತಾರೆ. ಹಬ್ಬ ಇನ್ನು ಮೂರುದಿನವಿರುವಾಗ ಪ್ರತೀ ದಿನ ಒಮ್ಮೆ ಕೋಣನನ್ನು ಊರಾಡಿಸುತ್ತಾ, ದವಸ, ಎಣ್ಣೆ, ಎತ್ತುತ್ತಾರೆ. ಹೀಗೆ ಸಂಗ್ರಹಿಸಿದ ದವಸವನ್ನು ಮಾದಿಗರು ಹಂಚಿಕೊಳ್ಳುತ್ತಾರೆ. ಪ್ರತೀ ಮನೆಯವರೂ ಕೋಣನ ನೆತ್ತಿಗೆ ಎಣ್ಣೆ ಸವರುತ್ತಾರೆ. ಅಕ್ಕಿ ತಿನ್ನಿಸುತ್ತಾರೆ. ಹೀಗೆ ಮೂರೂ ದಿನ ಕೋಣನನ್ನು ಊರಾಡಿಸುವಾಗ ಮೊದಲು ಮುತ್ತದ ಮನೆ, ಅನಂತರ ಊರಾಡಿಸುತ್ತಾರೆ. ಭಾನುವಾರ, ಸೋಮವಾರ, ಮಂಗಳವಾರ ಸಾಯಂಕಾಲದವರೆಗೆ ಹೀಗೆ ಆಡಿಸುತ್ತಾರೆ.

1.2 <u>ಹಬ್ಬದ ಆರಂಭದ ವಿವರ</u> :

ಮಾರೀ ಹಬ್ಬ ಅಧಿಕೃತವಾಗಿ ಮಂಗಳವಾರ ಆರಂಭವಾಗುತ್ತದೆ. ಮಂಗಳವಾರ ಊರ ಸಸ್ಯಹಾರೀ ಜನರ ಹಬ್ಬ ಅಂದರೆ ಸಿಹಿಹಬ್ಬ ಮಂಗಳವಾರದ ದಿನ ಊರ ಜನರೆಲ್ಲಾ ಹೋಳಿಗೆ, ಕರಿಗಡುಬನ್ನು ಮಾಡಿ ಸಡಗರ ಸಂಭ್ರಮದಿಂದ ಹಬ್ಬ ಆರಂಭಿಸುತ್ತಾರೆ. ಈ ವೇಳೆಗಾಗಲೇ ಬಣ್ಣ ಬಳಿದು ಪೂರ್ತಿಯಾದ ಮಾರಮ್ಮನ ವಿಗ್ರಹವನ್ನು ಅದಕ್ಕಾಗಿ ನಿರ್ಮಿಸಲಾದ ದೇವಸ್ಥಾನದಲ್ಲಿ ಅಥವಾ ಮಂಟಪದಲ್ಲಿ ಕೂರಿಸುತ್ತಾರೆ. ಆದರೆ ಸಾಯಂಕಾಲದವರೆಗೆ ಎದುರಿಗೆ ಪರದೆ ಕಟ್ಟಿರುತ್ತಾರೆ. ಬೀರಗೊಂಡನಹಳ್ಳಿಯಲ್ಲಿ ಅಮ್ಮನ ದೇವಸ್ಥಾನವೇ ಪ್ರತ್ಯೇಕವಾಗಿದ್ದು ಅದರ ಮುಂಭಾಗದಲ್ಲಿ ಮಂಟಪವನ್ನು ಕಟ್ಟಿ ಅಲ್ಲಿಗೆ ಅಮ್ಮನನ್ನು ತಂದು ಕೂರಿಸುತ್ತಾರೆ. ಹೊನ್ನಾಳಿಯಲ್ಲಿ ದುರ್ಗಮ್ಮನ ಗುಡಿಯ ಪಕ್ಕದಲ್ಲೇ ಅಮ್ಮನಿಗಾಗಿ ಇರುವ ಮಂಟಪದಲ್ಲಿ ಕೂರಿಸುತ್ತಾರೆ. ಮಂಗಳವಾರ ಸಾಯಂಕಾಲದಿಂದ ಆರಂಭವಾಗುವ ಅಮ್ಮನ ಬಗೆಗಿನ ಆಚರಣೆಗಳೆಲ್ಲ ವಿವಾಹಕ್ಕೆ ಸಂಬಂಧಿಸಿದಂತೆ ನಡೆಯುತ್ತದೆ. ಅಂದರೆ ಆ ದಿನ ಅಮ್ಮನ ಮದುವೆಯ ದಿನವೆನ್ನಬಹುದು.

<u>ಮಾರಿಗೆ ಸಂಬಂಧಿಸಿದ ಆಚರಣೆಗಳು: (ಮೊದಲ ಘಟ್ಟ)</u>

ಮಂಗಳವಾರ ಸಂಜೆ ಸುಮಾರು ಆರು ಅಥವಾ ಏಳುಗಂಟೆಯಿಂದ ಮಾರಿಯ ಪೂಜೆ ಆರಂಭವಾಗುತ್ತದೆ. ಊರ ಕೆಲವು ಪ್ರಮುಖರ ಗೌಡನಿಗೆ ತೆರಕಟ್ಟುತ್ತಾರೆ. ಇಲ್ಲಿ ಕೋಣ ಗೌಡನೆಂದೂ ಮಾರಿ ಅವನು ತಂದು ಕೊಳ್ಳುವ ಹೆಣ್ಣೆಂದೂ ಹೇಳುತ್ತಾರೆ. ಬಹುಶ: ಗಂಡಿನ ಕಡೆಯವರಿಗೆ ಕಾಣಿಕೆ ಕೊಡುವ ಸಂಪ್ರದಾಯ ಇದಿರಬಹುದು. ಹಾಗಾದರೆ ಇದು ವೈದಿಕದಿಂದ ಆರೋಪಿಸಲ್ಪಟ್ಟಿರುವ ಆಚರಣೆಯೆನ್ನಬೇಕಾಗುತ್ತದೆ. ವೈದಿಕ ವಿವಾಹ ಕ್ರಮದ ಪ್ರಕಾರ ಹೆಣ್ಣನ್ನು ವರೋಪಚಾರದೊಂದಿಗೆ ಧಾರೆಯೆರೆದು ಕೊಡಲಾಗುತ್ತದೆಯೇ ಹೊರತು ಹೆಣ್ಣಿಗೆ ಗಂಡಿನ ಕಡೆಯವರು ತೆರ ಕೊಡುವುದಿಲ್ಲ. ತೆರಕೊಟ್ಟು ಹೆಣ್ಣನ್ನು ತರುವುದೆಂದು ಅದು ಹೆಣ್ಣನ್ನು ಕೊಂಡಂತಾಗುವುದಲ್ಲದೆ 'ಅಂತಹ ವಿಕ್ರೀತ ಕನ್ಯೆಯೊಡಗೂಡಿ ಯಜ್ಞ ಯಾಗಾದಿಗಳನ್ನು ಮಾಡಕೂಡದೆಂದು

ಧರ್ಮಸೂತ್ರಕಾರರು ಹೇಳಿದ್ದಾರೆ.......... ಈ ಬಗೆಯ ವಿವಾಹವು ಇಂದಿಗೂ ಕೆಳಜಾತಿಗಳಲ್ಲಿ ಕೆಲವು ಆದಿವಾಸಿಗಳಲ್ಲಿ ಹಾಗೂ ಬಂಗಾಳದ ಕೆಲವು ಬ್ರಾಹ್ಮಣ ಪಂಗಡಗಳಲ್ಲಿ ಕಂಡುಬರುವುದು.11 (ಪುಟ 88) ಇದರ ಪ್ರಕಾರ ಹೆಣ್ಣಿನ ಕಡೆಯವರಿಗೆ ತೆರಕೊಡುವ ಪದ್ಧತಿಯನ್ನು ಕೀಳಾಗಿ ಕಾಣುತ್ತಿದ್ದ ವೈದಿಕ ಸಂಸ್ಕೃತಿ ವರೋಪಚಾರವನ್ನು ಬೆಳಸಿಕೊಂಡು ಬಂದಿದೆ. ಇದಾದ ನಂತರ ಕುರುಬರ ಮನೆಯಿಂದ ಅರಣಿ ಬಾಸಿಂಗ ಬರುತ್ತದೆ. ಗೌಡನ ಮನೆಯಿಂದ 'ತಾಳಿ' ತರಲಾಗುತ್ತದೆ. ಬಾಸಿಂಗ ಕಟ್ಟಿ, ತಾಳಿ ಕಟ್ಟಿ ದೇವಿಯನ್ನು ಅಲಂಕರಿಸಲಾಗುತ್ತದೆ. ಈ ಸಂದರ್ಭದಲ್ಲಿ 'ಬಡಿಗಿ' ದೇವಿಗೆ ಅಲಂಕಾರ ಮಾಡುತ್ತಾನೆ. ನಂತರ ನಾಡಿಗರು ಅಥವಾ ಊರ ಬ್ರಾಹ್ಮಣರ ಮನೆಯಿಂದ ಮಾರಮ್ಮನಿಗೆ ಉಡಿ ಯಕ್ಕಿ ಬರುತ್ತದೆ. ಅಮ್ಮನಿಗೆ ಉಡಿಯಕ್ಕಿ ನೀಡಿ ಅವರು ಪೂಜಿಸಿದ ನಂತರ, ಊರ ಗೌಡನ ಮನೆಯಿಂದ ಉಡಿಯಕ್ಕಿ ಬಂದು ಆತನೂ ಪೂಜಿಸಿದ ನಂತರ ಊರ ಗೌಡನ ಮನೆಯಿಂದ ಉಡಿಯಕ್ಕಿ ಬಂದು ಆತನೂ ಪೂಜಿಸಿದ ಮೇಲೆ ಮೂರನೆಯವರಾಗಿ ಬುದ್ಧಿವಂತರ ಮನೆಯ ಪೂಜೆ ಸಲ್ಲುತ್ತದೆ. ಹೀಗೆ ಆ ಮೂವರ ಮನೆಯಿಂದ ಅಮ್ಮನಿಗೆ ಪೂಜೆಯಾಗದ ಹೊರತು ಬೇರೆಯವರು ಯಾರು ಮೊದಲು ಪೂಜಿಸುವಂತಿಲ್ಲ. ಮೂವರನ್ನೂ ಪ್ರತ್ಯೇಕವಾಗಿ ಮೆರವಣಿಗೆಯಲ್ಲಿ ಕರೆತರಲಾಗುತ್ತದೆ. ಒಬ್ಬರೆ ಬೀಗರನ್ನು ಮದುವೆಯಲ್ಲಿ ಕರೆತರುವ ಸನ್ನಿವೇಶವನ್ನು ಇದು ನೆನಪಿಗೆ ತರುತ್ತದೆ.

ಆ ನಂತರ ಊರ ಇತರ ಜನರ ಪೂಜೆ ಆರಂಭವಾಗುತ್ತದೆ. ಒಂದೊಂದು ಕೇರಿಯವರನ್ನೂ ಪೂಜೆಗೆ ಮೆರವಣಿಗೆಯಲ್ಲಿ ವಾದ್ಯಗಳೊಂದಿಗೆ ಕರೆದು ತರಲಾಗುತ್ತದೆ. ಮಾದಿಗರೂ ಕೂಡ ಹಲಗೆ ವಾದ್ಯದೊಂದಿಗೆ ಬಂದು ಪೂಜೆ ನೆರವೇರಿಸುತ್ತಾರೆ. ಮಂಗಳವಾರ ಸುಮಾರು ರಾತ್ರಿ ಒಂದು-ಒಂದೂವರೆ ಗಂಟೆಯವರೆಗೆ ಈ ರೀತಿ ಪೂಜೆ ನಡೆಯುತ್ತದೆ. ಬೀರಗೊಂಡನಹಳ್ಳಿಯಲ್ಲಿ ಹೀಗೆ ಪ್ರತೀ ಕೇರಿಯ ಜನರನ್ನು ಮೆರವಣಿಗೆಯಲ್ಲಿ ಕರೆದುತರಲಾಗುತ್ತದೆ. ಆದರೆ ಹೊನ್ನಾಳಿಯಲ್ಲಿ ಈ ರೀತಿಯ ವಿಶೇಷತೆಯಿರುವುದಿಲ್ಲ-ಅವರವರು ಬಂದು ಪೂಜೆ ಮಾಡಿಸಿಕೊಂಡು ಹೋಗುತ್ತಾರೆ. ಅಲ್ಲದೆ ಈ ರಾತ್ರಿ ಕೋಣನಿಗೆ ಬೇವಿನಸೊಪ್ಪು ಮತ್ತು ಮಾವಿನಸೊಪ್ಪನ್ನು ಕುತ್ತಿಗೆಗೆ ಕಟ್ಟಿ ಪೂಜೆ ಮಾಡಿ ಮೆರವಣಿಗೆ ಮಾಡಲಾಗುತ್ತದೆ. ಮಂಗಳವಾರ ಬೆಳಗ್ಗೆಯಿಂದ ಎರಡು ಮೂರು ಬಾರಿ ಮನೆಮನೆಗೆ ಕೋಣನನ್ನು ಹಿಡಿದೊಯ್ದು-ಕಾಳು ಎತ್ತುತ್ತಾರೆ. ಈ ಕೆಲಸ ಮಾದಿಗರದ್ದು. ಹೀಗೆ ಎತ್ತಿದ ಕಾಳನ್ನು ಅವರು ಊಟಕ್ಕೆ ಬಳಸುತ್ತಾರಾದರೂ 'ಹುಲುಸಿನಕಾಳು' ಎಂದು ಪ್ರತ್ಯೇಕವಾಗಿ ಸಂಗ್ರಹಿಸಿದ್ದು-ಮೂರಿಗದ್ದಿಗೆಗೆ ಬಂದಾದಮೇಲೆ ಅವಳಮುಂದೆ ರಂಗಹೊಯ್ದು -ಅಲ್ಲಿ ಅವನ್ನು ಸುರಿದು ಪೂಜಿಲಾಗುತ್ತದೆ. ಅವನ್ನು ಹುಲುಸಿನ ಕಾಳು ಎನ್ನಲಾಗುತ್ತದೆ. ಈ ವಿವರ ಮುಂದೆ ನೀಡಲಾಗುವುದು. ಕೋಣವನ್ನು ಹೀಗೆ ಮನೆಮನೆಗೆ ಹಿಡಿದೊಯ್ಯುವಾಗ, ಅದರ ತಲೆಗೆ ಹರಳೆಣ್ಣೆ ಹೊಯ್ದು ಅಕ್ಕಿ ತಿನ್ನಿಸಲಾಗುವುದು. ಇದರಿಂದಾಗಿ ಕೋಣ ಮಂದವಾಗುತ್ತದೆ. ಜೊತೆಗೆ ಕುತ್ತಿಗೆಯ ಭಾಗವೂ ಎಣ್ಣೆಯಲ್ಲಿ ನೆನೆಯುವುದರಿಂದ ಕಡಿಯಲು ಸುಲಭವಾಗುವುದು ಬಹುಶಃ ಕೋಣನ ಚುರುಕುತನದಿಂದ ಆಗಬಹುದಾದ ಅನಾಹುತಗಳಿಂದ ತಪ್ಪಿಸುವ ಸಲುವಾಗಿ ಕೋಣನಿಗೆ ಮದತರುವುದೂ ಎಣ್ಣೆಯ ಉದ್ದೇಶಗಳಲ್ಲಿ ಒಂದಾಗಿರಬಹುದು. ಅಮ್ಮ ಸುಮಾರು ಬುಧವಾರ ಬೆಳಗಿನ ಜಾವ ಮೂರು ಗಂಟೆಗೆ ಮಂಟಪದಿಂದ ಗದ್ದಿಗೆಗೆ ಹೊರಡಲು ತಯಾರಾಗುತ್ತದೆ. ಈ ಸಮಯಕ್ಕೆ ಸ್ವಲ್ಪ ಮುಂಚೆ ಅಮ್ಮನಿಗೆ ಹಾಕಬೇಕಾದ ಹಾರದ ಮೆರವಣಿಗೆಯಾಗುತ್ತದೆ (ಬೀರಗೊಂಡನಹಳ್ಳಿ) ಅಲ್ಲದೆ ಅಕ್ಕಿ ಬಲಿ, ಗದ್ದಿಗೆ ಬಲಿಗಳೆಂದು ನಿಗದಿಪಡಿಸಲಾದ ಕುರಿಮರಿಗಳನ್ನು ಮೇಲಕ್ಕೆ ಎತ್ತಿಹಿಡಿದು-ಕೈಗಳಲ್ಲಿ ದೊಡ್ಡ ದೊಡ್ಡ ಬಡಿಗೆಗಳನ್ನು ಹಿಡಿದು ಹಲಗೆ ವಾದ್ಯದೊಂದಿಗೆ ಮಾಂಸಾಹಾರಿ ಜನಗಳು ಊರಲ್ಲಿ ಅಬ್ಬರಿಸುತ್ತ, ಕೇಕೆಹಾಕುತ್ತ ಸುತ್ತುತ್ತಾರೆ. ಈ ಇಡೀ ಸನ್ನಿವೇಶ 'ಬಲಿಯ' ತೀವ್ರತೆ ಮತ್ತು ಕಠೋರತೆಯನ್ನು ಕಣ್ಣಿಗೆ ಕಟ್ಟುತ್ತದೆ. ಬಲಿಯ ಪ್ರಾಣಿಗಳು ಹೆದರಿಕೆಯಿಂದ ಅರಚುತ್ತಿದ್ದರೆ, ಕೆಲವು ಭಯಭೀತವಾಗಿ ಮುದುಡಿಬಿಟ್ಟಿರುತ್ತದೆ. ಈ ಮರಿಗಳ ಕಾಲುಗಳನ್ನು ಹಿಡಿದು ಎತ್ತಿಎತ್ತಿ ಕುಪ್ಪಳಿಸುತ್ತಾ, ಕುಣಿಯುತ್ತಾ, ಹೋಗುವ ಉನ್ಮತ್ತ ಜನಗಳ ಗುಂಪು-ಕೈಯಲ್ಲಿ ಬಡಿಗೆಗಳನ್ನಿಡಿದ ಜನರೊಟ್ಟಿಗೆ ಊರಲ್ಲಿ ಒಮ್ಮೆ ಸುತ್ತುವಾಗ- ಆದಿಮ ಸ್ಥಿತಿಯ ಒಂದು ನಿರ್ದಿಷ್ಟ ಹಬ್ಬದ ಅಥವಾ ಸಂತೋಷದ ಸಮಾರಂಭದ, ಕಾಡಲ್ಲಿನ ಬೇಟೆಯ ಅಂದರೆ ಗುಂಪುಬೇಟೆಯ ಸನ್ನಿವೇಶವನ್ನು ನೆನಪಿಗೆ ತರುತ್ತದೆ. ಮತ್ತು ಬಡಿಗೆ

ಇರಲೇಬೇಕಾದುದು ಒಂದು ಸಂಪ್ರದಾಯವಾಗಿ ಬೆಳೆದು ಬಂದಿದ್ದರೂ ಅದು ಯಾವುದೇ ಒಂದು ಹಂತದ ಮಾನವ ವಿಕಾಸದ ಬೇಟೆಯ ಸ್ಥಿತಿಯ ದ್ಯೋತಕವೇನೋ ಎನ್ನಬಹುದು.... ಇದಲ್ಲ 'ಮಾರಿ' ಯ 'ಭೀಷಣತೆ' ಯನ್ನು ವಾತಾವರಣದ ಔಚಿತ್ಯವನ್ನು ಚೆನ್ನಾಗಿಯೇ ನೆರವೇರಿಸುತ್ತದೆ. 'ಮಾರಿ' ಮಂಟಪದಲ್ಲಿರುವಾಗಲೇ ಇತ್ತ ಊರ ಹೊರ ಬಲಯಕ್ಕೆ ಸಮೀಪದಲ್ಲಿ 'ಗದ್ದಿಗೆಯ' ಮಂಟಪ ತಯಾರಾಗುತ್ತದೆ.

<u>ಗದ್ದಿಗೆ ತಯಾರಿ</u> :

'ಮಾರಿ ಗದ್ದಿಗೆ' – ಎಂಬುದು ಸಾಮಾನ್ಯವಾಗಿ ಮಾರಿಹಬ್ಬ ಮಾಡುವ ಎಲ್ಲಾ ಊರುಗಳಲ್ಲಿಯೂ ಒಂದು ನಿರ್ದಿಷ್ಟ ಪ್ರದೇಶ ಗುರುತಿಸಲ್ಪಟ್ಟಿರುತ್ತದೆ. ಅಲ್ಲಿ ಒಂದು ಚೌಕಾಕಾರದ ಕಟ್ಟೆಯಿದ್ದು ಅದನ್ನೇ 'ಗದ್ದಿಗೆ' ಎಂದು ಗುರುತಿಸಲಾಗಿರುತ್ತದೆ. ಹೊನ್ನಾಳಿಯಲ್ಲಿ ಗದ್ದಿಗೆಗೆ ಒಂದು ಚಿಕ್ಕ ಗುಡಿಯನ್ನೇ ಕಟ್ಟಿಸಲಾಗಿದೆ. ಈ ಗದ್ದಿಗೆ ಸಾಮಾನ್ಯವಾಗಿ ಊರ ಹೊರಬಲಯದಲ್ಲಿರುತ್ತದೆ. ಹೊನ್ನಾಳಿಯಲ್ಲಿಯೂ ಅದು ಹಿಂದೆ ಊರ ಹೊರಬ್ಬಲಯಕ್ಕೇ ಇದ್ದು, ಈಗ ಪಟ್ಟಣವಾಗಿ ಬೆಳೆದಂತೆಲ್ಲ ಗದ್ದಿಗೆ ಊರ ಒಳಭಾಗಕ್ಕೆ ಬಂದಂತಾಗಿದೆ. ಇಲ್ಲಿ ಮೂರು ಊರುಗಳು ಒಟ್ಟಿಗಿದ್ದು, ಇದಕ್ಕೆ ಕಾರಣವಾಗಿರಬಹುದು. ಆದರೆ ಬೀರಗೊಂಡನಹಳ್ಳಿಯಲ್ಲಿ 'ಗದ್ದಿಗೆ' ಕೇವಲ ಒಂದು ಚೌಕಾಕಾರದ ಸುಮಾರು ಒಂದೂವರೆ–ಎರಡು ಅಡಿ ಎತ್ತರದ ಒಂದು ಕಟ್ಟೆಯಾಗಿದ್ದು ಇದು ಊರ ಅಕ್ಷ ಬಾಗಿಲ ಬಳಿಯಲ್ಲಿದೆ.

ಈ 'ಮಾರಿಗದ್ದಿಗೆ' ವರ್ಷದ ಬೇರೆ ದಿನಗಳಲ್ಲಿ ಕೇವಲ ಒಂದು ಸಾಮಾನ್ಯ ಕಟ್ಟೆಯಂತೆ ಬಳಸಲ್ಪಡುತ್ತದೆ ಅಂದರೆ ಈ ದಿನಗಳಲ್ಲಿ ಅದಕ್ಕೆ ಯಾವುದೇ ಪವಿತ್ರತೆಯಿರುವುದಿಲ್ಲ. ಆದರೆ ಹಬ್ಬದ ದಿನದಲ್ಲಿ ಅದು ಪವಿತ್ರತೆಯನ್ನು ಪಡೆದುಕೊಳ್ಳುತ್ತದೆ. ಊರ ಹೊರಭಾಗಕ್ಕೆ ಇದನ್ನು ನಿರ್ಮಿಸಿರುವುದು ಮತ್ತು ಮಾರಿ ಅಲ್ಲಿಗೆ ಬಂದು ಬಲಿಯನ್ನು ಪಡೆಯುವಂತದ್ದು ಅದರದೇ ಆದ ಆಶಯಗಳನ್ನು ಹೊಂದಿದೆಯೆನ್ನಬಹುದು. ಮಾರಿ ಇಲ್ಲಿಗೆ ಬರುವಂತದ್ದು ಮತ್ತು ಊರ ಹೊರಗೆ ಕಳುಹಿಸುವ ಸೂಚನೆಯಂತೆಯೇ ಊರ ಗಡಿಯನ್ನು ಕಾಯುವ ಆಶಯಕ್ಕೂ ಅನ್ವಯಿಸುತ್ತದೆ, ಗಡಿಯ ಭಾಗ ಗದ್ದುಗೆಗೆ ಬರುವಂತದ್ದು ಮತ್ತು ಅಲ್ಲಿ ಬೇವಿನ ಸೊಪ್ಪಿನ ಗುಡಿಸಲಲ್ಲಿ ಕುಳಿತುಕೊಳ್ಳುವುದೂ ಕೂಡ ಊರ ಗಡಿಗೆ ಕರೆತಂದು ಅವಳನ್ನು ತೃಪ್ತಿ ಪಡಿಸಿ ಕಳುಹಿಸುವ ಆಶಯವನ್ನೇ ಹೊಂದಿರುವುದು. ಇದು ವರ್ಣಸಂಕರದ ದೃಷ್ಟಿಯಿಂದಲೂ ಊರ ಮಧ್ಯದ ಸ್ಪೃಶ್ಯ ಕುಟುಂಬದಿಂದ ಊರ ಹೊರಭಾಗದ ಅಸ್ಪೃಶ್ಯ ಸ್ಥಾನಕ್ಕೆ ಅಂದರೆ ಆ ಗಂಡನ ಮನೆಗೆ ಹೋಗುವ ಸೂಚನೆಯನ್ನೂ ಇದು ನೀಡುತ್ತದೆ. ಇದಕ್ಕೆ ಹಬ್ಬದ ಆಚರಣೆಗಳು ಪುಷ್ಟಿ ನೀಡುತ್ತವೆ.

ಈ ಗದ್ದಿಗೆಯನ್ನು ಮಾರಿ ಇನ್ನೂ ಮಂಟಪದಲ್ಲಿರುವಾಗಲೇ ಸ್ವಚ್ಛಗೊಳಿಸಿ ಅದರ ಸುತ್ತ ಕಂಬಗಳನ್ನು ನೆಟ್ಟು ಚಪ್ಪರ ಕಟ್ಟುತ್ತಾರೆ. ಗದ್ದಿಗೆಯ ಸುತ್ತ ನೆಟ್ಟಿರುವ ಮರದ ಕಂಬಗಳಿಗೆ ಬೇವಿನ ಸೊಪ್ಪಿನಿಂದ ಅಲಂಕರಿಸುತ್ತಾರೆ. ಒಟ್ಟಾರೆ ಗದ್ದಿಗೆಯ ಮಂಟಪ ಬೇವಿನ ಸೊಪ್ಪಿನಿಂದಲೇ ನಿರ್ಮಾಣವಾಗುತ್ತದೆ. ಎಂದು ಹೇಳಬಹುದು. ಆದರೆ ಹೊನ್ನಾಳಿಯಲ್ಲಿ ಈ ರೀತಿಯಲ್ಲಿಲ್ಲ ಅಲ್ಲಿ ಸಿದ್ಧ ದೇವಸ್ಥಾನವಿದ್ದು, ಮುಂದಿನ ಮಂಟಪ ಪೆಂಡಾಲ್‌ಗಳಿಂದ, ವಿದ್ಯುದ್ದೀಪಗಳಿಂದ ಭವ್ಯ ಬಂಗಲೆಯಂತೆ ನಿರ್ಮಾಣವಾಗುತ್ತದೆ. ಆಧುನಿಕತೆ– ಯಂತ್ರ ನಾಗರಿಕತೆಯ ಸ್ಪಷ್ಟ ಅರಿಕೆಯಿರುವ ಪಟ್ಟಣವಾಗಿರುವ ಇಲ್ಲಿ 'ಗದ್ದಿಗೆಯ ಬೇವಿನ ಗುಡಿಸಲ' ಔಚಿತ್ಯ ಕಣ್ಮರೆಯಾಗಿದೆ. ಆಧುನಿಕತೆಯೊಂದಿಗೇ ಸವಾರಿ ಹೊರಡುವ ಶಿಷ್ಟವೆನ್ನಿಸಿಕೊಳ್ಳುವ ಜೀವನ ಕ್ರಮ ಮತ್ತು ಸಂಸ್ಕೃತಿಗಳ ಪ್ರಭಾವದಲ್ಲಿ 'ಗ್ರಾಮ ಸಮಾಜದ ಸಂಸ್ಕೃತಿ' ಯ ಅನೇಕ ಆಚರಣೆಗಳು ಹೇಗೆ ಅರ್ಥ ಕಳೆದುಕೊಂಡು ಕಣ್ಮರೆಯಾಗಿ ಅಲ್ಲಿ ಆಡಂಬರತೆ ಮತ್ತು ಯಾಂತ್ರಿಕತೆ ನೆಲೆಯೂರುತ್ತದೆ ಎಂಬುದಕ್ಕೆ ಹೊನ್ನಾಳಿಯಲ್ಲಿನ ಈ ಮಾರ್ಪಾಟು ಸಾಕ್ಷಿಯೆನಿಸುತ್ತದೆ.

ಹೀಗೆ ಬೇವಿನ ಸೊಪ್ಪಿನ ಮಂಟಪದ (ಗದ್ದಿಗೆ) ಮುಂದೆ ಸ್ವಲ್ಪ ದೂರದಲ್ಲಿ ರಂಗವನ್ನು ಬರೆಯಲಾಗುತ್ತದೆ. ಇದು ಕುಂಕುಮ, ಅರಿಶಿನ, ರಂಗೋಲಿಯಿಂದ ರಚಿಸಲಾಗಿದ್ದು ಇದರಲ್ಲಿ ಅಮ್ಮ ಬಂದ ನಂತರ ಹುಲುಸಿನ ಕಾಳನ್ನು ಸುರಿದು ಪೂಜಿಸಲಾಗುತ್ತದೆ. ಹೀಗೆ ಅಮ್ಮ ಗದ್ದಿಗೆಗೆ ಬರುವ ಮೊದಲು ಇದರ ತಯಾರಿ ನಡೆಯುತ್ತದೆ. ಮತ್ತು ಬುಧವಾರ ಬೆಳಗಿನ ಜಾವ ಎರಡು ಗಂಟೆಯ ವೇಳೆಗೆ ಅಂದರೆ ಅಮ್ಮ ತನ್ನ ಮೊದಲ ಮಂಟಪದಿಂದ ಹೊರಡುವ ಮೊದಲೇ ಗದ್ದಿಗೆಯ ಅಲಂಕಾರ ಮುಗಿದಿರುತ್ತದೆ.

<u>ಕೋಣನಿಗೆ ಸಂಬಂಧಿಸಿದಂತೆ</u>:- ಈ ಮೊದಲೇ ತಿಳಿಸಿರುವಂತೆ ಮಂಗಳವಾರ ಊರನ್ನು ಸುತ್ತಿದ ಕೋಣ ಮಾದಿಗರ ಕೇರಿಯಲ್ಲಿರುವ ಕೋಣನ ಗದ್ದಿಗೆಯಲ್ಲಿ ಅಥವಾ ಮಾದಿಗರ ಕೇರಿಯಲ್ಲಿ ಕಟ್ಟಿ ಹಾಕಲ್ಪಡುತ್ತದೆ. ಮಂಗಳವಾರ 'ಕೋಣ' ಮೊದಲು ಮಠದ ಮನೆಗೆ ಹೋಗುತ್ತದೆ ಅಲ್ಲಿ ಕೋಣನಿಗೆ ಅಕ್ಕಿ ತಿನ್ನಿಸಿ ತಲೆಗೆ ಎಣ್ಣೆ ಹಾಕುತ್ತಾರೆ. ನಂತರ ಗೌಡನ ಮನೆಗೂ ಆಮೇಲೆ ಬುದ್ಧಿವಂತರ ಮನೆಗೂ ಕೋಣ ಹೋಗುತ್ತದೆ. ಅಲ್ಲಿಯೂ ಇದೇ ರೀತಿ ಕೋಣನನ್ನು ಪೂಜಿಸುತ್ತಾರೆ. ಇಲ್ಲೆಲ್ಲ ಕೋಣ ಮದುಮಗನಾಗಿ ಕಾಣಿಸಿಕೊಳ್ಳುತ್ತದೆ. ಬೀರಗೊಂಡನ ಹಳ್ಳಿಯ ಹೊನ್ನೂರಪ್ಪ ಎಂಬ ಮಾದಿಗರ ವೃದ್ಧರು ಹೇಳುವಂತೆ ;- '' ಇಲ್ಲಿ ಕೋಣ ಮದುಮಗ – ಮದುವೆಯಲ್ಲಿ ಮದುಮಗನಿಗೆ ದೇವಸ್ಥಾನಕ್ಕೆ ಕರೆದುಕೊಂಡು ಹೋಗಿ ಗಂಧ ಹಚ್ಚುವಂತೆ, ಮತ್ತು ಗೌಡನ ಮನೆಯ ಮಗನಾದ ಕೋಣ – ಬುದ್ಧಿವಂತರ ಮನೆಗೆ ಬೀಗರಮನೆಗೆ ಹೋದಂತೆ ಹೋಗುತ್ತದೆ. ಎನ್ನುತ್ತಾರೆ. ಒಟ್ಟಾರೆ 'ಕೋಣ' ಇಲ್ಲಿ ಮದುಮಗನಾಗಿದ್ದು ಮದುವೆ ನಡೆಯುವ ಮುನ್ನ ಆಚರಿಸುವ ಆಚರಣೆಗಳಲ್ಲಿ ಪಾಲ್ಗೊಳ್ಳುತ್ತದೆ ಎನ್ನಬಹುದು. ಹೀಗೆ ಮಠ ಗೌಡ, ಬುದ್ಧಿವಂತರ ಮನೆಗೆ ಹೋದ ಮೇಲೆ ಊರಾಡುತ್ತದೆ. ನಂತರ ಮಾದಿಗರ ಕೇರಿಯಲ್ಲಿರುವ ಕೋಣನ ಗದ್ದಿಗೆ ಅಥವಾ ದೇವಸ್ಥಾನದ ಬಳಿ ಕಟ್ಟಲ್ಪಡುತ್ತದೆ. ಬೀರಗೊಂಡನಹಳ್ಳಿಯಲ್ಲಿ ಮಂಗಳವಾರ ಸಂಜೆ ಮತ್ತೊಮ್ಮೆ ಕೋಣವನ್ನು ಹಲಗೆಯೊಂದಿಗೆ ಮೆರವಣಿಗೆ ಮಾಡಲಾಗುತ್ತದೆ. ಈಗೀಗ ಕೋಣನ ಬಲಿಯ ಮೇಲೆ ಸರ್ಕಾರ ನಿರ್ಬಂಧವನ್ನು ಹೇರುತ್ತಿರುವುದರಿಂದ ಕೋಣನಿಗೆ ಸಂಬಂಧಿಸಿದ ಆಚರಣೆಗಳು ತೀರಾ ಸಂಕ್ಷಿಪ್ತಗೊಳ್ಳುತ್ತಿವೆ. ಕೆಲವು ಕಡೆ ಕೋಣನನ್ನು ಎಲ್ಲಿಯೋ ಮುಚ್ಚಿ ಕಟ್ಟಿದ್ದು ಯಾವುದೋ ಕ್ಷಣದಲ್ಲಿ ದಿಢೀರನೆ ಹಿಡಿದು ತಂದು ಕಡಿಯಲಾಗುತ್ತದೆ.

ಈ ಆಚರಣೆಗಳಲ್ಲಿ ಪಾಲುಗೊಳ್ಳುವ ಕೋಣ ಅಮ್ಮನ ಪಟ್ಟದ ಕೋಣವೆಂದು ಕರೆಯಲ್ಪಡುತ್ತದೆ. ಇದಲ್ಲದೆ ಇನ್ನೂ ಕೆಲವಾರು ಕೋಣಗಳು ಬಲಿಯಾಗುವುದಿದ್ದರೂ ಅವು ಈ ಯಾವ ಆಚರಣೆಗಳಲ್ಲೂ ಪಾಲ್ಗೊಳ್ಳುವುದಿಲ್ಲ. ಅಲ್ಲದೆ ಇಂತಹ ಪಟ್ಟದ ಕೋಣನ ಅರ್ಹತೆಗಳೂ ವಿಶೇಷವಾಗುತ್ತವೆ. ಕೋಣನಿಗೆ ಹಣೆಚುಕ್ಕಿ, ಹೂಬಾಲ ಇರಬಾರದು, ಕಿವಿ ಕೊಯ್ದಿರಬಾರದು, ಮುಂತಾಗಿ. ಹೀಗೆ ಕೋಣ ಊರಾಡಿ ರಾತ್ರಿ ಕಟ್ಟಿ ಹಾಕಲ್ಪಡುತ್ತದೆ.

<u>ಕೋಣ ಕಡಿಯುವವನಿಗೆ ಸಂಬಂಧಿಸಿದಂತೆ</u> :- ಊರಲ್ಲಿ ಕೋಣವನ್ನು ಕಡಿಯುವವ ಮತ್ತು 'ಘಟಕುಂಭ' ಹೊರುವವರು ನಿಗದಿಯಾಗಿರುತ್ತಾರೆ. ಕೋಣನನ್ನು ಕಡಿಯುವವನು ಮಂಗಳವಾರ ಒಪ್ಪೊತ್ತಿರುತ್ತಾನೆ. ಬುಧವಾರ ಬೆಳಿಗ್ಗೆ ಕೋಣನನ್ನು ಕಡಿದು ಚರಗ ಚೆಲ್ಲುವವರೆಗೆ ಆತ ಉಪವಾಸವಿರುತ್ತಾನೆ. ಇತ್ತೀಚೆಗೆ ಇದು ಕಡ್ಡಾಯವಾಗುತ್ತಿಲ್ಲ. ಈತ ಬೆಳಗ್ಗೆ ಏನನ್ನಾದರೂ ತಿಂದು, ನಂತರ ಸ್ನಾನ ಮಾಡಿ ಶುಚಿಯಾಗಿರಬೇಕಾಗುತ್ತದೆ. ಅಲ್ಲದೆ ತಾನು ಕೋಣನನ್ನು ಕಡಿಯಲು ಬಳಸುವ 'ಮಚ್ಚನ್ನು' ಆತ ತೊಳೆದು ಪೂಜಿಸುತ್ತಾನೆ. ಈ ಮಚ್ಚು ಗೋಣವನ್ನು ಕಡಿಯಲೆಂದೇ ಇರುವಂತಾಗಿದ್ದು ಗಾತ್ರದಲ್ಲಿ ಸಾಮಾನ್ಯ ಮಚ್ಚುಗಳಿಗಿಂತ ತೀರಾ ದೊಡ್ಡದಾಗಿರುತ್ತದೆ. ಈ ಮಚ್ಚನ್ನು ಮಸೆಯುವಂತಿಲ್ಲ. ಪ್ರತೀಬಾರಿಯೂ ಕೇವಲ ರಂಬೆ ಹಣ್ಣಿನ ರಸದಿಂದ ಉಜ್ಜಿ ತೊಳೆಯಬೇಕು ಮಾತ್ರ. ರಾತ್ರಿ ಅಮ್ಮ ತನ್ನ ಮೂಲ ಮಂಟಪದಿಂದ ಹೊರಡುವ ವೇಳೆಗೆ ಈತ ಈ ಮಚ್ಚನ್ನು ಪೂಜಿಸಿ ತಾನು ತಯಾರಾಗಿರುತ್ತಾನೆ. ಈ 'ಘಟ'ಯೊಂದಿಗೇ ಮೆರವಣಿಗೆಯಲ್ಲಿ ಕೋಣನ ಜೊತೆಯಲ್ಲಿ 'ಕರಿ ಕಂಬಳಿ' ಯ ಗೊಪ್ಪೆಯನ್ನು ಹಾಕಿಕೊಂಡು ಮಚ್ಚನ್ನು ಎತ್ತಿ ಹಿಡಿದುಕೊಂಡು ಬರಬೇಕಾಗುತ್ತದೆ.

<u>ಘಟ ಪೂಜೆ</u> :- ಘಟ ಎಂದರೆ ಮಣ್ಣಿನ ಮಡಕೆ. ಇದನ್ನು ಪೂಜುವವರು ಮಾದಿಗರ ಜನಾಂಗದವರು. ಕೋಣವನ್ನು ಕಡಿಯಲು ನೇಮಿಸಲ್ಪಟ್ಟ ಮನೆಯವರು ಈ ಘಟೆಯನ್ನು ಪೂಜಿಸುತ್ತಾರೆ. ಘಟ ಪೂಜಿಸುವವರು ಕೂಡ ಒಂದೊತ್ತಿರುತ್ತಾರೆ. ಅಮ್ಮ ತನ್ನ ಮಂಟಪದಿಂದ ಗುಡಿಗೆಯ ಕಡೆಗೆ ಹೊರಡುವ ಸಮಯಕ್ಕೆ ಸರಿಯಾದಿ ಇಲ್ಲಿ ಪೂಜೆ ಆರಂಭವಾಗುತ್ತದೆ. ಅಕ್ಕಿ ನಿದೆ ಹೊಯ್ದು, ಅಂದರೆ ಮಾದಿಗರ ಮನೆಯಲ್ಲಿ ದೇವರ ಜಗಲಿಯ ಮೇಲೆ ಅಕ್ಕಿಯನ್ನು ಹಾಕಿ ಅಕ್ಕಿಯ ಮೇಲೆ ಬಾಯಿ ಮಡಕೆಯನ್ನಿಡುತ್ತಾರೆ. ಆ ಮಡಕೆಯಲ್ಲಿ ಹೆಂಡವನ್ನು ತುಂಬಿದ್ದು, ಅದಕ್ಕೆ ಸ್ವಲ್ಪ ಸಕ್ಕರೆ ಹಾಕಿರುತ್ತಾರೆ. ಈ ಹೆಂಡ ಆಗ ತಾನೆ ಈಚಲು ಮರದಿಂದ ಇಳಿಸಿಕೊಂಡು ಬಂದುದಾಗಿರುತ್ತದೆ. ಕೆಲವು ಕಡೆ ಮಡಿನೀರು, ಎಳನೀರು ತುಂಬಿ ಪೂಜುವ ಸಂಪ್ರದಾಯವಿದೆ. ಆದರೆ ದೀರಗೊಂಡನಹಳ್ಳಿ ಮತ್ತು ಹೊನ್ನಾಳಿಯಲ್ಲಿ ಹೆಂಡವನ್ನು ಬಳಸಲಾಗುತ್ತದೆ. ಹೀಗೆ ಹೆಂಡ ತುಂಬಿದ ಮಡಕೆಯ ಮೇಲೆ ಬೇವಿನಸೊಪ್ಪು, ತೆಂಗಿನಕಾಯಿಯನ್ನಿಟ್ಟು ಅದನ್ನು ಘಟೆಯೆಂದು ಕರೆಯುತ್ತಾರೆ. ಇದನ್ನು ಒಂದು ಮನೆಯಲ್ಲಿ ಪೂಜಿದರೂ ಕೇರಿಯ ಎಲ್ಲರೂ ಪೂಜೆಯಲ್ಲಿ ಪಾಲ್ಗೊಳ್ಳುತ್ತಾರೆ. ಐದು ಜನ ಮುತ್ತೈದೆಯರು ಕಂಕಣ ಕಟ್ಟಿಕೊಂಡು ಪೂಜೆಯ ಮೇಲುಸ್ತುವಾರಿ ವಹಿಸುತ್ತಾರೆ. ಘಟ ಪೂಜುವಾಗ ಪ್ರಾರ್ಥನೆಯ, ಸೋಬಾನೆಯ ಹಾಡುಗಳನ್ನು ಹಾಡುತ್ತಾರೆ. ಈ 'ಘಟ' ಎಂದರೆ ಅವರ ಪ್ರಕಾರ 'ಅಮ್ಮ'ನೇ ಆಗಿರುತ್ತದೆ.

ಮಾರಿಹಬ್ಬದ ಆಚರಣೆಯ 'ಘಟ' ಪೂಜೆ ವಿಶೇಷವಾಗಿ ಪರಿಗಣಿಸಬೇಕಾಗುತ್ತದೆ. ಮಾರಿಯ ದೇವತಾರಾಧನೆಗೂ ಮತ್ತು 'ಘಟ' ಯ ಆರಾಧನೆಗೂ ಸೂಕ್ಷ್ಮವಾದ· ಕಂದಕವಿದೆ. ಏಕೆಂದರೆ ಮಾರಿಹಬ್ಬದ ಅನಿವಾರ್ಯ ಅಥವಾ ಆ ಮೂರ್ತಿ ಆರಾಧನೆಗೆ ಸಂಬಂಧವಿಟ್ಟುಕೊಂಡು ಈ ಆರಾಧನೆ ಇಲ್ಲ. ಬಿ೦ ಇಲ್ಲಿ ಮಾದಿಗರ 'ಘಟ' ಆರಾಧನೆ ಅವರದೇ ಆಅಮ್ಮನ ಆರಾಧನೆಯಾಗಿ ಕಾಣುವುದರಿಂದ ಇದನ್ನು ಅಮ್ಮನ ವಿಗ್ರಹಾರಾಧನೆಯ ಶಿಷ್ಟ (ವೈದಿಕ) ಪೂಜಾ ಕ್ರಮಕ್ಕೆ ಪರ್ಯಾಯವಾದ ಪೂಜಾ ಕ್ರಮವಾಗಿಯೇ ಗ್ರಹಿಸಬೇಕಾಗುತ್ತದೆ. ಘಟ ಹೊರುವ ಹೆಣ್ಣು ಮಗಳು ಬೇವುಡುಗೆಯನ್ನು ತೊಟ್ಟಿದ್ದರೆ ಅವಳು ಸಾಕ್ಷಾತ್ ಅಮ್ಮನೇ ಆಗುತ್ತಾಳೆ. ಅವರ ಪ್ರಕಾರ 'ಕೋಣ' ಅಮ್ಮನಿಗೆ ಬಲಿಯಾಗಬೇಕಾದ 'ಪ್ರಾಣಿ' ಆದರೆ ವಿಗ್ರಹದ ಆರಾಧನೆಯೊಂದಿಗೆ ವಿವಾಹದ ಐತಿಹ್ಯವೊಂದು ಏರ್ಪಟ್ಟುದರಿಂದ — ಕೋಣದ 'ಬಲಿ' ಭಿನ್ನ ಆಶಯವನ್ನು ಕಟ್ಟಿಕೊಂಡು, ಈ ಅಮ್ಮನಿಂದ ತೆರವಾಗಿ — ವಿಗ್ರಹಕ್ಕೆ ಬಂದಿಯಾದಂತೆ ತೋರುತ್ತದೆ. 'ಹೆಂಡ' ದ ಮಡಕೆಯ ಆರಾಧನೆ ಉನ್ಮತ್ತತೆಯ ಪ್ರತಿಮೆಯಂತೆ ಕಾಣುವುದೂ, 'ಕೋಣ' 'ಫಲ' ದ ಪ್ರಾಣಿಯಾಗಿರುವುದೂ ಒಟ್ಟಾರೆಯಾಗಿ 'ಫಲವಂತಿಕೆಯ' ಆರಾಧನೆಯಲ್ಲಿ ಸಾಧನ <u>ಪಡೆಯಬಹುದು.</u> ಈ ಬಗ್ಗೆ ಆಳವಾದ ಅಧ್ಯಯನ ಮತ್ತು ಚಿಂತನೆ ನಡೆಯಬೇಕಾದ ಅವಶ್ಯಕತೆಯಿದ್ದು, ವಿದ್ವಾಂಸರಿಂದ ಚರ್ಚಿತವಾಗಬೇಕಿದೆ. ಈ ಬಗ್ಗೆ ಕೋಣನ ಬಲಿಯ ಸಂದರ್ಭದ ವರ್ಣನೆಯಲ್ಲಿ ಇನ್ನಷ್ಟು ಚರ್ಚಿಸಲಾಗುವುದು.

'ಹೆಂಡ' ಮತ್ತು <u>ಮಾಂಸ</u> ಗಳನ್ನು ದೈವಕ್ಕೆ ಎಡೆ ಮಾಡುವ ಪದ್ಧತಿ ಪ್ರಾಚೀನ ಕಾಲದಿಂದಲೂ ಕೆಲವು ಜನಾಂಗಗಳಲ್ಲಿರುವುದನ್ನು ಕೆಲವು ವಿದ್ವಾಂಸರು ತಿಳಿಸಿರುತ್ತಾರೆ. ಒಬ್ಬರು ತಮ್ಮ ಕುಲದೇವತೆ 'ಎಲ್ಲಮ್ಮ' ನ ಆರಾಧನೆಯಲ್ಲಿ ಹೆಂಡ ಮತ್ತು ಮಾಂಸದ ನೈವೇದ್ಯ ಮಾಡುವುದನ್ನು ಎಡ್ಗರ್ ಥರ್ಸ್ಟನ್ ತಿಳಿಸುತ್ತಾರೆ. 12 (ಪುಟ – 432). ಅಲ್ಲದೆ ಇದೇ ಲೇಖಕರು ತೆಲುಗು ಈಡಿಗರಲ್ಲಿ ಹೆಂಡದ ಗಡಿಗೆಯನ್ನು 'ಎಲ್ಲಮ್ಮ' ನಾಗಿ ಪೂಜಿಸುವುದನ್ನೂ ವಿವರಿಸುತ್ತಾರೆ. 13.ಒಟ್ಟಾರೆ 'ಹೆಂಡದ ಮಡಕೆ' ತಮ್ಮದೇ ಆದ ಒಂದು ಪ್ರಮುಖ ದೈವವಾಗಿ ಕೆಲವು ಜನಾಂಗಗಳಲ್ಲಿ ಪೂಜೆಗೊಳ್ಳುತ್ತಿತ್ತು ಎಂಬುದನ್ನು ನಾವು ತಿಳಿಯಬಹುದಾಗಿದ್ದು, ಒಂದು ಕಾಲದಲ್ಲಿ 'ಘಟ' ಪೂಜೆಯೂ ಇಂತಹುದೇ ಆರಾಧನೆಯಾಗಿರುವ — ಈ ಆರಾಧನೆಯಲ್ಲಿ 'ಕೋಣ' ನ ಬಲಿ ಸಾಮಾನ್ಯವಾದ ಆದರೆ ಶ್ರೇಷ್ಠವಾದ 'ಬಲಿ' ಮಾತ್ರವಾಗಿರುವ ಸಾಧ್ಯತೆಗಳಿದ್ದು, ನಂತರದ ಜನಾಂಗಗಳ ಸಮ್ಮಿಶ್ರದಲ್ಲಿ ಅದು ಬೇರೆ ಬೇರೆಯವರ ಪ್ರಭಾವದಲ್ಲಿ ಭಿನ್ನ ಆಶಯವನ್ನು ಕಟ್ಟಿಕೊಳ್ಳತೊಡಗಿರಬೇಕು. ಆದರೆ ಬಲದ ಮೂಲಕ ಸಾಮ್ಯ ಸ್ಥಾಪಿಸಿದ ವರ್ಗ ಸಂಸ್ಕೃತಿಯೊಂದರ ದಬ್ಬಾಳಿಕೆ ಮತ್ತು ತಾತ್ಸಾರದಿಂದ ಆ ಪೂಜೆ ಗೌಣವಾಯಿತಾದರೂ 'ಕೋಣ' ನ ಬಲಿ ಅದರಿಂದ ಭಿನ್ನವಾಗಿ ಬಲಕಾಲ ಸಂಸ್ಕೃತಿಯೊಂದರ ಆಶಯಕ್ಕೆ ಬದ್ಧವಾಗಿರಬಹುದು. ಅಥವಾ ಹೀಗೆ ಸಮ್ಮಿಲನಗೊಂಡ ಸಂಸ್ಕೃತಿಯಲ್ಲಿ 'ಕೋಣನ ಬಲಿ' ಯನ್ನಾದರು

ಸಾಮಾನ್ಯೀಕರಣಗೊಂಡು ಬೆಳೆದು ನಂತರದ ವೈದಿಕರ ಪ್ರಭಾವಕಾರಿ ಸ್ಥಿತಿಯಲ್ಲಿ ಅದು ತೀರಾ ಭಿನ್ನವಾದ ಅರ್ಥಕ್ಕೆ ಒಳಗಾಗುವ ಸಾಧ್ಯತೆಯೂ ಇದೆ. ಅದೇನೆಂದರೂ 'ಘಟ ಪೂಜೆ' ಅಮ್ಮನ ಆರಾಧನೆಯ ಮೂಲದ ಬಗೆಗೆ ಸುಳಿವು ನೀಡುವುದಲ್ಲದೆ ಮಾರಿ ಹಬ್ಬದ 'ಜಾತಿಸಂಕರದ ಆತಂಕಾತ್ಮಕ ಆಚರಣೆಗಳನ್ನು ಒಡೆದು ತೋರಲು ಪ್ರೇರಕವಾಗಿದೆ.

ಈ ಮೇಲಿನ ಆಚರಣೆಗಳೆಲ್ಲ ಹಬ್ಬದ ಮೊದಲ ಘಟ್ಟದಲ್ಲಿ ನಡೆಯುವಂತಹವು ಮತ್ತು ಸಸ್ಯಾಹಾರಕ್ಕೆ ಬದ್ಧವಾಗಿ ನಡೆಯುವಂತಹವುಗಳು ಅಂದರೆ ಈ ದಿನ (ಮಂಗಳವಾರ) ಅಮ್ಮ ಮಂಟಪದಲ್ಲಿರುವವರೆಗೆ ಸಾತ್ವಿಕವಾದ ಆಚರಣೆಗಳಿದ್ದು ಆ ದಿನದ ಹಬ್ಬವನ್ನು ಸಿಹಿ ಅಡುಗೆಯಲ್ಲಿ ಆಚರಿಸಲಾಗುತ್ತದೆ. '<u>ಮಾರಿ</u>' ಇಲ್ಲಿ ಮದುಮಗಳು ಮತ್ತು ಅವಳು ಬ್ರಾಹ್ಮಣ ಅಥವಾ ಮೇಲ್ವರ್ಗದ ಹೆಣ್ಣು ಹಾಗೂ ಅವಳ ಮದುವೆ. ನಂತರದ ಹಬ್ಬದ ಎರಡನೆ ಘಟ್ಟದ ವೇಳೆಗೆ ಈ ಸಾತ್ವಿಕ ಹೆಣ್ಣು 'ಮಾರಿ'ಯಾಗಿ ಭೀಕರಳಾಗುತ್ತಾಳಲ್ಲದೆ 'ಬಲಿ' ಪ್ರತಿಜ್ಞೆಯಿಂದ ಪ್ರೇರಿತಳಾಗಿ ಗದ್ದುಗೆಗೆ ಹೊರಡುತ್ತಾಳೆ ಈ ಗದ್ದುಗೆಗೆ ಹೊರಡುವಲ್ಲಿಂದ ಅವಳು ಮೋಕುವ ತನಕದ ಆಚರಣೆಗಳೆಲ್ಲ ಹಿಂದೂ ಸ್ವರೂಪದ, ಬಲಿಯ ತೀವ್ರತೆಯಲ್ಲಿ ನಡೆಯುವ ಕ್ರಿಯೆಗಳಾಗಿರುತ್ತವೆ. ಇಲ್ಲಿಂದ ಮೇಲ್ವರ್ಗ ಒಂದು ರೀತಿಯಲ್ಲಿ 'ಮಾರಮ್ಮನ' ಪೂಜೆಯಿಂದ ಸಂಪರ್ಕ ಕಳೆದುಕೊಳ್ಳುತ್ತದೆಯೆನ್ನಬಹುದು, ಅಲ್ಲದೆ ಅವರು ನಂತರದ ಆಚರಣೆಗಳಿಂದ ಬಹುತೇಕ ನಿರ್ಗಮಿಸಿರುತ್ತಾರೆ. ಇಲ್ಲಿ ಮಾರಮ್ಮನಿಗೆ ಮತ್ತು ಅವಳ ಆಚರಣೆಗಳಲ್ಲಿ ಸ್ಥಾನ ಪಡೆಯುವವರು ಕಾಟುಗರು. ಇಲ್ಲಿ ನಾವು ಸ್ಪಷ್ಟವಾಗಿ ಎರಡು ಭಿನ್ನ ಪೂಜಾಕ್ರಮಗಳ ವಿಧಾನಗಳನ್ನು ಗುರುತಿಸಬಹುದು. 'ಅಮ್ಮ' ಮಂಗಳವಾರ ಸಾಯಂಕಾಲದಿಂದ ಮಂಟಪವನ್ನು ಬಿಡುವವರೆಗೆ ಊರಿನ ಮೇಲ್ವರ್ಗದ ಜನ ಪೂಜಾದಿ ಆಚರಣೆಗಳಲ್ಲಿ ಪಾಲ್ಗೊಳ್ಳುತ್ತಾರಲ್ಲದೆ ಈ ವೇಳೆಯಲ್ಲಿ ಅಮ್ಮನನ್ನು ಪೂಜಿಸುವವನು ಕೂಡ '<u>ಬಡಗಿ</u>' ಅಂದರೆ ಸ್ಪೃಶ್ಯನೆನಿಸಿಕೊಂಡವನು. ಅಮ್ಮ ಗದ್ದುಗೆಗೆ ಬಂದ ನಂತರ ಅಗಸ, ಸುಣ್ಣಗಾರ, ಮೊದಲಾದ ಕೆಳ ಜಾತಿಯವರು ಅವಳ ಪೂಜೆಗೆ ತೊಡಗುತ್ತಾರೆ. ನಂತರ ಅಮ್ಮ ಮೋಚಲು ಹೊರಡುವಾಗ ಅವಳನ್ನು ರಥಕ್ಕೆ ಕೂರಿಸಿದಾಗಿಂದ ಅವಳನ್ನು ಮೋಚಿಸಿ ತರುವವರೆಗೆ ಮತ್ತೆ ಬಡಿಗ ಬರುತ್ತಾನೆ. ಇಲ್ಲಿ ಗಮನಿಸಬೇಕಾದ ಪ್ರಮುಖಾಂಶವೆಂದರೆ, ಎಲ್ಲೆಲ್ಲಿ ವೈದಿಕ ಪರವಾದ ಆಚರಣೆಗಳಿರುತ್ತವೆಯೋ ಅಲ್ಲೆಲ್ಲ ಈ ಸ್ಪೃಶ್ಯ ಬರುತ್ತಾನೆ. ಎಲ್ಲೆಲ್ಲಿ ಅಮ್ಮನ ಅವೈದಿಕದ ಆಚರಣೆಗಳಿರುತ್ತವೆಯೋ ಅಲ್ಲೆಲ್ಲ ಅಸ್ಪೃಶ್ಯರು ಬರುತ್ತಾರೆ, ಬಹುಶಃ ಮೇಲ್ವರ್ಗ ಸೃಷ್ಟಿಸಿದ ಒಬ್ಬ ದೇವತೆಯ ರೂಪವನ್ನು ಅಸ್ಪೃಶ್ಯ ಸಮಾಜದಿಂದ ಪಡೆದುಕೊಂಡದ್ದು ಮತ್ತೆ ಅದನ್ನು ಸ್ಪೃಶ್ಯಗೊಳಿಸಿ ತಮ್ಮದಾಗಿಸಿಕೊಳ್ಳುವ ಮೇಲ್ವರ್ಗ ಸಂಸ್ಕೃತಿಯ ತಾಕಲಾಟಗಳನ ಸೂಕ್ಷ್ಮ ಸುಳಿವುಗಳಿದ್ದಿರಬೇಕು ಎನಿಸುತ್ತದೆ. ಅಥವಾ 'ಮಾರಿ'ಯ ಆರಾಧನೆಯ ಈ ಅಂಶಗಳು ಕೆಲವೊಮ್ಮೆ ಬ್ರಾಹ್ಮಣ ಅಥವಾ ವೈದಿಕ ಸಮಾಜದಿಂದ ತಿರಸ್ಕೃತಳಾಗಿ ಬೀದಿಗೆ ಬಿದ್ದ ಒಬ್ಬ ವೈದಿಕ ಹೆಣ್ಣನ್ನು – ವೈದಿಕ ವಿರೋಧಿ ಸಮಾಜವೊಂದು ಪೂಜಿಸಿದ್ದಿರುವ ಸಾಧ್ಯತೆಗಳೂ ಇವೆ. ಇವೆಲ್ಲ ಪೂರ್ವದ ಸಂಸ್ಕೃತಿ ಸಂಘರ್ಷಗಳ ಸ್ವರೂಪಗಳ ಬಗ್ಗೆ ಸುಳಿವೀಯಬಹುದು.

.11.3 <u>ಬಲಿ ಸಂದರ್ಭದ ವಿವರಗಳು (ಹಬ್ಬದ ಎರಡನೇ ಘಟ್ಟ)</u>)–

'<u>ಬಲಿ</u>' ಸಂದರ್ಭದ ಆಚರಣೆಗಳು ಮತ್ತು 'ಬಲಿ'ಗಳು ಅಮ್ಮ ಮಂಟಪದಿಂದ ಬೆಳಗಿನ ಜಾವ ಸುಮಾರು ಮೂರು ಘಂಟೆಗೆ ಹೊರಟಾಗಿಂದ ಆರಂಭವಾಗುತ್ತವೆ.

) <u>ಅಮ್ಮ ಗದ್ದುಗೆಗೆ ಬರುವುದು</u>:– ಈ ಹಿಂದೆ ಪ್ರಸ್ತಾಪಿಸಿರುವಂತೆ, ಮಾರಿಯ ಗದ್ದುಗೆ ಊರ ಹೊರಭಾಗದಲ್ಲಿ ರುತ್ತದೆ. 'ಬಲಿ'ಯನ್ನು 'ವಧೆ'ಯನ್ನು ನಡೆಸುವ ಸ್ಥಳವನ್ನು ಊರ ಹೊರಗಿಟ್ಟಿರುವ ಹಿನ್ನೆಲೆ ಬಹುಶಃ ಮಾಂಸಾಹಾರವನ್ನು ಅಸ್ಪೃಶ್ಯವೆಂದು ಪರಿಗಣಿಸಲ್ಪಡುವ ಸ್ಥಿತಿ ಆರಂಭವಾದ ಹಿನ್ನೆಲೆಯನ್ನು ಸೂಚಿಸಬಹುದು. ಹುತೇಕ ಬಲಿ ಬೇಡುವ ದೇವತೆಗಳು ಮತ್ತು ಬಲಿ ಪೀಠಗಳು ಊರ ಹೊರಭಾಗದಲ್ಲಿರುವುದನ್ನು ಕಾಣಬಹುದು. ದಕ್ಕೆ ಮಾಂಸಾಹಾರವನ್ನು ಅಸ್ಪೃಶ್ಯವಾಗಿ ಕಾಣುವ ಪ್ರವೃತ್ತಿ ಮತ್ತು ಅದರ ಹಿಂದಿರುವ 'ಮಡಿ'ಯ ರಣಗಳು ಕಾರಣವಾಗಿರಬಹುದು.

ಹೊನ್ನಾಳಿ ತಾಲ್ಲೂಕಿನ ಸುರಹೊನ್ನೆ ಎಂಬ ಗ್ರಾಮದಲ್ಲಿ 'ಕರಿಯಮ್ಮ' ಹಬ್ಬ ಮತ್ತು ಅಲ್ಲಿನ ಬಲಿ ಗದ್ದಿಗೆಗಳನ್ನು ಇಲ್ಲಿ ಉದಾಹರಿಸಬಹುದೆಂದು ಕಾಣುತ್ತದೆ. ಇಲ್ಲಿ 'ಕರಿಯಮ್ಮ' ಎಂಬ ದೇವತೆ ಊರ ಹೊರಭಾಗದಲ್ಲಿ ಇದೆ. ಇದಕ್ಕೆ ಪ್ರತಿವರ್ಷ ಹಬ್ಬ ನಡೆಯುತ್ತದೆ–ಒಂದುಕಡೆ–ಮಾಂಸಾಹಾರಿಗಳು ಪ್ರಾಣಿ ಬಲಿಯಲ್ಲಿ ಪಾಲ್ಗೊಂಡರೆ, ಸಸ್ಯಹಾರಿಗಳು ಸಿಹಿಯನ್ನು ಮಾಡುತ್ತಾರೆ. ಮೂಲತ: 'ಕರಿಯಮ್ಮ' ಎಂಬುದು ಮಾಂಸಹಾರಿಗಳ ದೇವತೆ ಆದರೆ, ಇಲ್ಲಿ ಆ 'ದೇವತೆ' ಸ್ಪೃಶ್ಯರ ಅಧಿಪಲಕಕ್ಕೆ ಒಳಗಾಗಿದೆ. ದೇವತೆಯ ಗುಡಿಯಿರುವುದು ಒಬ್ಬ ಸ್ಪೃಶ್ಯರ ಜಮೀನಿನಲ್ಲಿ. ಹಾಗಾಗಿ ಆ ಜಮೀನಿನ ಆವರಣದೊಳಗೆ 'ಬಲಿ'ಗೆ ಅವಕಾಶವಿಲ್ಲ. ಬೇವುಡೆ ಉಡುವವರು ಬೇವನ್ನು ಅರ್ಪಿಸುವ– ಹರಕೆಯೊಪ್ಪಿಸುವ, ಪೂಜಿಸುವ ಎಲ್ಲಾ ಕಾರ್ಯಗಳು ಇಲ್ಲಿ ನಡೆದರೂ ಪ್ರಾಣಿಗಳ 'ಬಲಿ' ಮಾತ್ರ ಜಮೀನಿನ ಹೊರಭಾಗದಲ್ಲಿರುವ 'ಕರಿಯಮ್ಮನಗದ್ದಿಗೆ'ಯ ಮುಂದೆ ನಡೆಯುತ್ತದೆ. (ಚಿತ್ರ [illegible]) ಇಲ್ಲಿ ಮೈಲಿಗೆ ಪ್ರಶ್ನೆ ಕೆಲಸ ಮಾಡಿದೆ ಮಾತ್ರವಲ್ಲ 'ಮಾಂಸಾಹಾರಿ' ದೇವತೆಯೊಂದು ಲಿಂಗಕಟ್ಟಿಕೊಳ್ಳುವ ಮೂಲಕ – ಸ್ಪೃಶ್ಯವಾಗಿರುವುದು, ಮೇಲ್ವರ್ಗ–ಕೆಳವರ್ಗದ ದೇವತೆಯನ್ನು ಕಸಿದುಕೊಂಡು ತಮಗೆ ಬಗ್ಗಿಸಿಕೊಳ್ಳುವ ಆಕ್ರಮಣಕಾರಿ ಕಥೆಯನ್ನು ಹೇಳುತ್ತದೆ. ಆದರೆ ತಮ್ಮ ದೇವಿಯೊಬ್ಬಳ ಆರಾಧನೆಯನ್ನು ನಿಲ್ಲಿಸಲಾರದ ಜನ ತಮ್ಮದೇ ಆದ 'ಗದ್ದಿಗೆ' ಪೂಜೆಯನ್ನು ಉಳಿಸಿಕೊಂಡಿದ್ದಾರೆ. ಮರಿಯ ಜಗನ್ನಾಥನ ಸೃಷ್ಟಿ, ಧರ್ಮಸ್ಥಳದ ಅಣ್ಣಪ್ಪ ಮಂಜುನಾಥನ ಸ್ಥಿತಿಗತಿಗಳು–ಇಂಥ ಪ್ರವೃತ್ತಿಯನ್ನು ಸಾದರಪಡಿಸುತ್ತವೆ ಮಾತ್ರವಲ್ಲ, 'ಮಾರಿ'ಯ ಇಂದಿನ ಆಶಯಗಳಿಗೆ ಈ ದೃಷ್ಟಿಯೂ ಕಾರಣವಾಗಿದೆ;ಎನ್ನಬಹುದು. ಅಲ್ಲೆಲ್ಲ ಈ ಸ್ಪೃಶ್ಯ ಬರುತ್ತಾನೆ. ಅಮ್ಮನ ಅವೈದಿಕದ ಆಚರಣೆಗಳಿರುತ್ತವೆಂತೋ ಅಲ್ಲೆಲ್ಲ ಅಸ್ಪೃಶ್ಯರು ಬರುತ್ತಾರೆ. ಬಹುಶ: ಮೇಲ್ವರ್ಗ ಸೃಷ್ಟಿಸಿದ ಒಬ್ಬ ದೇವತೆಯ ರೂಪವನ್ನು– ಅಸ್ಪೃಶ್ಯ ಸಮಾಜವೊಂದು ಪಡೆದುಕೊಂಡದ್ದು ಮತ್ತೆ ಅದನ್ನು ಸ್ಪೃಶ್ಯಗೊಳಿಸಿ ತಮ್ಮದಾಗಿಸಿಕೊಳ್ಳುವ ಮೇಲ್ವರ್ಗ ಸಂಸ್ಕೃತಿಯ ತಂಕಲಾಟಗಳ ಸಾಕ್ಷ್ಯ ಸುಳಿವುಗಳಿದ್ದಿರಬೇಕೆನಿಸುತ್ತದೆ. ಅಥವಾ 'ಮಾರಿ'ಯ ಆರಾಧನೆಯ ಈ ಅಂಶಗಳು ಕೆಲವೊಮ್ಮೆ–ಬ್ರಾಹ್ಮಣ ಅಥವಾ ವೈದಿಕ ಸಮಾಜದಿಂದ ತಿರಸ್ಕೃತಳಾಗಿ–ಬೀದಿಗೆ ಬಿದ್ದ ಒಬ್ಬ ವೈದಿಕ ಹೆಣ್ಣನ್ನು–ವೈದಿಕ ವಿರೋಧಿ ಸಮಾಜವೊಂದು ಪೂಜಿಸಿದ್ದಿರುವ ಸಾಧ್ಯತೆಗಳು ಇವೆ. ಇವೆಲ್ಲ ಪೂರ್ವದ ಸಂಸ್ಕೃತಿ ಸಂಘರ್ಷಗಳ ಸ್ವರೂಪಗಳ ಬಗ್ಗೆ ಸುಳಿವೀಯಬಹುದು.

ಬುಧವಾರ ಬೆಳಗಿನ ಜಾವ ಸುಮಾರು ಮೂರು ಘಂಟೆಯ ವೇಳೆಗಾಗಲೇ, ಊರವರ ಪೂಜಾದಿಗಳು ಮುಗಿದಿರುತ್ತವೆ ಮತ್ತು ಕೋಣ, ಕುರಿಗಳ ಮೆರವಣಿಗೆಗಳು ಮುಗಿದಿರುತ್ತವೆ. ಇತ್ತ ಊರ ಹೊರ ಭಾಗಕ್ಕಿರುವ ಗದ್ದಿಗೆ ಮಂಟಪ ಕೂಡ ಸಿದ್ಧವಾಗಿರುತ್ತದೆ. ಅಮ್ಮನಿಗೆ ಬಡಿಗ ಮತ್ತೊಮ್ಮೆ ಮಂಗಳಾರತಿ ಮಾಡುತ್ತಾನೆ. ಅಮ್ಮನ ಮೆರವಣಿಗೆಗೆಂದೇ ಸಿದ್ಧವಾಗಿದ್ದ ರಥದಲ್ಲಿ ಅಮ್ಮನನ್ನು ಕೂರಿಸಲು ಎಲ್ಲಾ ಸಿದ್ಧತೆಗಳೂ ನಡೆಯುವಾಗ ಊರ ಸಾವಿರಾರು ಜನ ನೆರೆದಿರುತ್ತಾರೆ. ಅಮ್ಮನನ್ನು ಮಂಟಪದಿಂದ ಎತ್ತಿ–ರಥಕ್ಕೆ ಕೂರಿಸುವ ಸಮಯದಲ್ಲಿ ಒಂದು ಕುರಿಮರಿಯನ್ನು ಬಲಿಕೊಡಲಾಗುತ್ತದೆ.ಅದನ್ನು 'ಬೋಳುಮರಿ' ಎಂದು ಕರೆಯಲಾಗುತ್ತದೆ. ನಂತರ ಅಮ್ಮನನ್ನು ರಥದಲ್ಲಿ ಕೂರಿಸಿಕೊಂಡು ಗದ್ದಿಗೆ ಕಡೆಗೆ ಮೆರವಣಿಗೆ ಸಾಗುತ್ತದೆ. ಕೇಕೆ, ಅರ್ಭಟ, ವಾದ್ಯಗಳೊಂದಿಗೆ ಹೊರಟ ಅಮ್ಮನ ಮೆರವಣಿಗೆ ಊರ ಪ್ರಮುಖ ಬೀದಿಗಳಲ್ಲಿ ಸುತ್ತಿ ಅಷ ಬಾಗಿಲ ಬಳಿಗೆ ಬರುವಾಗ ಅಲ್ಲಿ 'ಅಷಮರಿ' ಎಂದು ಒಂದು ಕುರಿ ಮರಿಯನ್ನು ಬಲಿಕೊಡುತ್ತಾರೆ ? ನಂತರ ಮಾರಮ್ಮ 'ಗದ್ದಿಗೆಯ' ಒಳಗೆ ಬರುತ್ತದೆ. ಈ ವೇಳೆ

ತೆಂಗಿನಕಾಯಿ ರಂಗಬರೆವ ಉಪಕರಣಗಳು ಎಲ್ಲ ಸಿದ್ಧವಾಗಿರುತ್ತದೆ. ಅಮ್ಮನನ್ನು ರಥದಿಂದ ಕೆಳಗೆ ತರುವ ಮುನ್ನ ಬಡಗಿ ಮತ್ತೊಮ್ಮೆ ಪೂಜಿಸುತ್ತಾನೆ. ಇದು ಅವನ ಕೊನೆಯ ಪೂಜೆ, ನಂತರ ಅಮ್ಮನನ್ನು ಗದ್ದುಗೆಯ ಬಳಿ ತಂದು ಗದ್ದುಗೆ ಮೇಲೆ ಕೂರಿಸುತ್ತಾರೆ. ಹೀಗೆ ಕೂರಿಸಿದ ತಕ್ಷಣ 'ಗದ್ದುಗೆ ಮರಿ' ಎಂದು ಒಂದು ಕುರಿಯನ್ನು ಬಲಿಕೊಡಲಾಗುತ್ತದೆ. ಬೀರಗೊಂಡನಹಳ್ಳಿಯಲ್ಲಿ ಹೀಗೆ ಕಡಿದ ಕುರಿ ತಲೆಯನ್ನು ಅದರ ಬಾಯಲ್ಲಿ ಕಾಲೊಂದನ್ನು ಕಡಿದು ಸಿಕ್ಕಿಸಿ ಗದ್ದುಗೆಯ ಮೇಲಿನ ಮೂರಿಯೆದುರು ಇಡಲಾಗುತ್ತದೆ (ಫೋಟೋ ೧ ನ್ನು ನೋಡಿ) ಆದರೆ ಹೊನ್ನಾಳಿಯಲ್ಲಿ ಹೀಗೆ ಮಾಡಲಾಗುವುದಿಲ್ಲ. ಹೀಗೆ ಕಡಿದ ಕುರಿಯನ್ನು ಇಲ್ಲಿ ಕಾಟಿಗರು ಒಯ್ಯುತ್ತಾರೆ. ಹೀಗೆ ಅಮ್ಮ ಗದ್ದುಗೆಗೆ ಬಂದಾಗ ಅವಳನ್ನು ಪೂಜಿಸುವವನು–ಸುಣ್ಣಗಾರ(ಹೊನ್ನಾಳಿ)ನೆನ್ನುತ್ತಾರೆ. ಹೀಗೆ ಅಮ್ಮ ಗದ್ದುಗೆಯಲ್ಲಿ ಕುಳಿತು–ಗದ್ದುಗೆ ಮರಿ ಬಲಿಯಾದ ಮೇಲೆ ಅಮ್ಮನೆದುರಿಗೆ ಸ್ವಲ್ಪದೂರಕ್ಕೆ ನೆಲಸಾರಿಸಲಾಗಿದ್ದು ಅಲ್ಲಿ ಅರಿಶಿನ, ಕುಂಕುಮ ರಂಗೋಲಿಪುಡಿಗಳಿಂದ ರಂಗವನ್ನು ಬರೆಯಲಾಗುತ್ತದೆ. ಈ ರಂಗ ಬರೆಯುವುದು ಬಹುತೇಕ ಮಾಟ, ಮಂತ್ರಗಳಂತಹ ಆದರಲ್ಲೂ ಗ್ರಾಮ ಸಂಸ್ಕೃತಿಯ ವಿಶೇಷ ಆರಾಧನಾ ವಿಧಾನ, ವೈದಿಕಕ್ಕೆ ಹೊರತಾದ ಬಹುಪಾಲು ದ್ರಾವಿಡರದ್ದರಬಹುದಾದ ಪೂಜಾಕ್ರಮವಾಗಿರುವುದು ಸಾಧ್ಯವಿದೆ. ಈ ಬಗ್ಗೆ ವಿದ್ವಾಂಸರ ಅಧ್ಯಯನ ಪೂರ್ಣ ನಿಲುವು ಅಗತ್ಯವಾಗಿದೆ. ಹೀಗೆ ರಂಗ ಬರೆದು ಆ ರಂಗದಲ್ಲಿ – ಕೋಣನ ಮನೆಮನೆಗೆ ಅಲೆಸುವಾಗ 'ಹುಲುಸಿನಕಾಳಿಂದೇ' ಪ್ರತ್ಯೇಕವಾಗಿ ಮನೆಮನೆಗಳಿಂದ ಸಂಗ್ರಹಿಸಿದ್ದ ದವಸವನ್ನು ಸುರಿಯಲಾಗುತ್ತದೆ. ಧವಸಗಳು, ಜೋಳ, ರಾಗಿ, ಹೆಚ್ಚಿರುತ್ತದೆ. ಗೋಧಿಯೂ ಇರುತ್ತದೆ. ಈ ದವಸವನ್ನು ರಂಗದ ಮಧ್ಯದಲ್ಲಿ ರಾಶಿ ಸುರಿದು ಇನ್ನಷ್ಟನ್ನು ರಂಗದ ಎರಡು ರೇಖೆಗಳ ಮಧ್ಯೆ ಚೌಕಾಕಾರದಲ್ಲಿ ಸುತ್ತಲೂ ಹಾಕುತ್ತಾರೆ. ನಾಲ್ಕು ಮೂಲೆಗಳಲ್ಲಿ ಒಂದಿಷ್ಟು ಗುಡ್ಡೆ ಹಾಕುತ್ತಾರೆ. ಇದನ್ನು ಹುಲುಸು ಎನ್ನಲಾಗುತ್ತದೆ.

ಹುಲುಸಿನ ಪೂಜೆ :–

ರಂಗಬರೆದು ರಂಗದ ಮಧ್ಯದಲ್ಲಿ ಒಂದಷ್ಟು ಹೆಚ್ಚು ಭಾಗವನ್ನು ಗುಡ್ಡೆಹಾಕಿ ಅದರ ಮೇಲೆ ಒಂದು ಸ್ವಲ್ಪ ದೊಡ್ಡಗಾತ್ರದ ಮಡಕೆಯನ್ನು ಇಡಲಾಗುತ್ತದೆ. ಅದರ ಬಾಯಿಗೆ ವೀಳ್ಯದೆಲೆಗಳ್ಳದನ್ನು ಸುತ್ತಲೂ ಕಟ್ಟಿ ಅದರ ಮಧ್ಯೆ ತೆಂಗಿನ ಕಾಯನ್ನು ಇಡಲಾಗುತ್ತದೆ. ಅಲ್ಲದೆ ಇನ್ನಷ್ಟು ದವಸವನ್ನು ರಂಗ ಬರೆದ ಹಾಗೆ ಚೌಕಾಕಾರವಾಗಿ ಗೆರೆಗಳ ಮಧ್ಯೆ ಮತ್ತು ಅಚೀಚೆ ಹರಡಿ ಸುರಿಯಲಾಗುತ್ತದೆ. ನಾಲ್ಕು ಮೂಲೆಗಳಲ್ಲಿ ಒಂದೊಂದಿಷ್ಟು ಗುಡ್ಡೆ ಹಾಕಿ ಅವುಗಳ ಮೇಲೆ ಸ್ವಲ್ಪ ಸಣ್ಣ ಮಡಕೆಯನ್ನು ನಾಲ್ಕು ಕಡೆ ಇಟ್ಟು ಅವುಗಳಿಗೂ ವೀಳ್ಯದೆಲೆ ಕಟ್ಟಿ ತೆಂಗಿನಕಾಯಿ ಇಡಲಾಗುತ್ತದೆ. ಅಲ್ಲದೆ ಈ ಮಂಡಲದ ನಾಲ್ಕೂ ಪಾರ್ಶ್ವಗಳಲ್ಲಿ ಮಧ್ಯಕ್ಕೆ ಹೊರಭಾಗದಲ್ಲಿ ಒಂದೊಂದಿಷ್ಟು ಧಾನ್ಯ ಹಾಕಿ ಅದರ ಮೇಲೆ ಎಲೆಅಡಿಕೆ ಇಡಲಾಗುತ್ತದೆ. ಅನಂತರ ನಾಲ್ಕೂ ಮೂಲೆಗಳಲ್ಲಿದ್ದ ನಾಲ್ಕು ಮಡಕೆಗಳಿಗೆ 'ಸುರಗಿದಾರ' ಸುತ್ತಲಾಗುತ್ತದೆ. ಸುರಗಿಸುತ್ತುವುದನ್ನು ಮದುವೆಗಳಲ್ಲಿ ಪ್ರಮುಖವಾಗಿ ಪರಿಗಣಿಸುವುದನ್ನು ಇಲ್ಲಿ ನೆನೆಯಬಹುದು. ಸುರಗಿ ಎನ್ನುವುದು ಒಂದು ಆಚರಣೆಗೆ ಪ್ರಾಮುಖ್ಯತೆಯನ್ನು–ಮನ್ನಣೆಯನ್ನು ತಂದುಕೊಡುವುದಾಗಿದೆ. ನಂತರ ಅದನ್ನು ಪೂಜಿ ಹಣ್ಣುಕಾಯಿ ನೈವೇದ್ಯ ಮಾಡಲಾಗುತ್ತದೆ. ಇದನ್ನು ಹುಲುಸಿನ ಪೂಜೆ ಎನ್ನಲಾಗುತ್ತದೆ. ಫೋಟೋ ೨) ಈ ಸಂದರ್ಭದಲ್ಲಿ 'ಜೋಗಿ' ಮತ್ತು ಆಸಾದಿಗಳು' ಹಾಡುತ್ತಾರೆ. 'ಜೋಗಿ' ಮಾತೃದೇವತೆಯ ಭಕ್ತ. ಆತ ಅಮ್ಮನ ಮಹಿಮೆಯನ್ನು ಹೊಗಳಿ ಪ್ರಾರ್ಥಿಸಿ ಮೊದಲು ಹಾಡುತ್ತಾನಲ್ಲದೆ, ಹುಲುಸನ್ನು ಪೂಜಿಸಿ ಅದರ ಮೇಲೆ ತನ್ನ ಹತ್ತಿರವಿರುವ ಭಂಡಾರವನ್ನು ಹಾಕಿ ನಮಸ್ಕರಿಸುತ್ತಾನೆ. ನಂತರ ಆಸಾದಿ ಅಮ್ಮನನ್ನು ಅತ್ಯಂತ ಅಶ್ಲೀಲವಾಗಿ ಬೈಯುತ್ತೊಡಗುತ್ತಾನೆ. ಅವಳನ್ನು ಅತ್ಯಂತ ಕಾಮುಕಳನ್ನಾಗಿ ಚಿತ್ರಿಸುತ್ತಾ ಹಾಡತೊಡಗುತ್ತಾನೆ. ಈ ಹಾಡುಗಳು ತೀರಾ ಅವಾಚ್ಯವಾದ ಅಶ್ಲೀಲ ವಿವರಗಳಿಂದ ಕೂಡಿರುತ್ತವೆ. ಒಮ್ಮೊಮ್ಮೆ ಹಾಡುತ್ತಾ ಮಧ್ಯಮಧ್ಯೆ ಕಥೆಯ ಹಾಗೆ ವಿವರಿಸತೊಡಗುತ್ತಾನೆ. ಹೀಗೆ ಸ್ವಲ್ಪ ಹೊತ್ತು ನಡೆಯುತ್ತದೆ. ಇಲ್ಲಿಗೆ ಹುಲುಸಿನ ಪೂಜೆ ಮುಕ್ತಾಯವದಂತೆ. (ಫೋಟೋ – ೩ ನ್ನು ನೋಡಿ)

ಇಲ್ಲಿ 'ಜೋಗಿ' ಮತ್ತು 'ಆಸಾದಿ'ಗಳು ವಿಶೇಷವಾದ ಸ್ಥಾನ ಪಡೆಯುತ್ತಾರೆ. ಜೋಗಿ ನಮಗೆ ತಿಳಿದಿರುವಂತೆ 'ಎಲ್ಲಮ್ಮ'ನ ಭಕ್ತ. ಮಾತೃದೇವತಾರಾಧಕ 'ಆಸಾದಿ' ಮಾರಿ ಐತಿಹ್ಯ ಹೇಳುವಂತೆ ಮತ್ತು ಅವರೇ ತಿಳಿಸುವಂತೆ 'ಮಾರಿ'ಯ ಮಗ ಒಬ್ಬ ಸ್ವ ಇದ್ದುದರಿಂದ ದೇವಿಯ ಕಥೆಯನ್ನು ಸಾರುವ ಭುಟ. ಮತ್ತೊಬ್ಬ ತನ್ನ ಅವ್ವನಿಂದ ಆಜ್ಞೆ ಪಡೆದು 'ಮಾರಿ' ವೃತ್ತಾಂತ ಸಾರುವ ಮಗ: ಭುಟ ತಾಯಿಯನ್ನು ಭಕ್ತಿಯಿಂದ ಸ್ತುತಿಸುತ್ತಿರೆ ಮಗ ತನ್ನ ತಂದೆ ಮಾದಿಗನ ಪ್ರತಿನಿಧಿಯಾಗಿ ನಿಂತು 'ತಾಯಿ'ಯನ್ನು ಹೀನಾಯಮಾನವಾಗಿ ಬಯ್ಯುತ್ತಾನೆ. ತನ್ನ ತಂದೆಯನ್ನು ಕೊಂದುದಕ್ಕಾಗಿ ಅವಳ ಕಾಮುಕತೆಯನ್ನು ಹೀಗಳೆಯುತ್ತಾನೆ. ಈ ಮಾರಿಯ ಆಚರಣೆಯಲ್ಲಿ ಈ ಇಬ್ಬರೂ ಸ್ಥಾನ ಪಡೆದಿರುವುದು–ಮಾತೃದೇವತಾರಾಧನೆಯ ಅಂಶವನ್ನೇ ದೃಢಪಡಿಸುವುದಲ್ಲದೆ – ಭಿನ್ನ ಅಂಶಗಳ–ಭಿನ್ನ ಸಂಸ್ಕೃತಿಗಳ ಸಂಗಮದ ಸೃಷ್ಟಿಯಾಗಿ 'ಮಾರಿ'ಯನ್ನು ನೋಡಲು ಸಹಕಾರಿಯಾಗುತ್ತದೆ.

ಹೊನ್ನಾಳಿ ತಾಲ್ಲೂಕಿನ ಸುರಹೊನ್ನೆ ಮತ್ತು ಹೊನ್ನಾಳಿಗಳ ಕರಿಯಮ್ಮ ಮತ್ತು ದುರ್ಗಮ್ಮನ ಹಬ್ಬಗಳಲ್ಲಿ ಈ ಜೋಗಿ–'ಬಲಿ'ಯ ಸಂದರ್ಭದಲ್ಲಿ ಬಲಿಯಾಗುವ ಪ್ರಾಣಿಗಳಿಗೆ ಭಂಡಾರ ಹಾಕಿ ಹರಸುತ್ತಾನೆ. (ಚಿತ್ರ ೪೬) ಈತ ದೇವಿಯ ಪ್ರತಿನಿಧಿಯಂತೆ ಕಾಣುತ್ತಾನೆ. 'ಮಾರಿ'ಯ ಆಚರಣೆಯಲ್ಲಿ ಜೋಗಿ ಅಷ್ಟು ಪ್ರಮುಖನಾಗುವುದಿಲ್ಲ. ಇಲ್ಲಿ 'ಆಸಾದಿ' ಬಹಳ ಪ್ರಮುಖನಾಗುತ್ತಾನೆ. ಅವನ ಮಹತ್ವ ಹುಲುಸಿನ ಪೂಜೆಯಿಂದ ಆರಂಭವಾಗಿ ವೇಡುವ ಕ್ರಿಯೆ ತನಕ ವ್ಯಾಪಿಸಿರುತ್ತದೆ.

'ಹುಲುಸಿನ' ಪೂಜೆ – ಫಲವತ್ತತೆಯ ಅಂಶವನ್ನು ಒಳಗೊಂಡಿದೆ. ದೇವಿಯೆದುರು ಪೂಜುವ ಈ ಕಾಳುಗಳಿಗೆ ಫಲವತ್ತತೆಯ ಗುಣ ದೊರೆಯುತ್ತದೆಂಬುದು–ಗ್ರಾಮೀಣರ ಭಾವನೆ. ಧಾನ್ಯದ ಮೇಲಿನ ಮಡಕೆಗಳು ದೇವರ ಪ್ರತೀಕವಾಗಿರುತ್ತದೆ. ಇಲ್ಲಿನ ಮಂಡ ಶಕ್ತಿ ಆವಾಹನೆಯ ಕ್ರಮವನ್ನು ಹೊಂದಿರುತ್ತದೆ. ಇಲ್ಲಿ ದೇವಿಯ ಪೂಜೆ ಹುಲುಸನ್ನು ಅಂದರೆ ಭೂಮಿಗೆ ಫಲವತ್ತತೆಯನ್ನು ನೀಡುವ ಅಂಶವನ್ನು ಒಳಗೊಂಡಿದೆ. ಆಸಾದಿ: ಕೆಲವು ಭಾಗಗಳಲ್ಲಿ ಶಿಶ್ನದ ಸಂಕೇತವನ್ನು ಸೊಂಟಕ್ಕೆ ಕಟ್ಟಿಕೊಂಡಿರುವುದು, ಜೋಗಿ ಕವಡೆ ಸರ ಹಾಕಿಕೊಂಡಿರುವುದು (ಇಲ್ಲಿ ಎನ್.ಎಸ್.ಹಿರೇಮಠರು ತಮ್ಮ ಜಾತ್ರೆಗಳು–ಎಂಬ ಕೃತಿಯಲ್ಲಿ ಕವಡೆ–ಸ್ತ್ರೀಯ ಅಂದರೆ 'ಯೋನಿ'ಯ ಸಂಕೇತ ವೆಂಬುದನ್ನು ಪ್ರಸ್ತಾಪಿಸಿದ್ದಾರೆ) [illegible] ಈ ಇಬ್ಬರೂ ಪೂಜೆಯಲ್ಲಿ ಪಾಲ್ಗೊಳ್ಳುವುದು–ಫಲವಂತಿಕೆಯ ಅಂಶವನ್ನು ಇನ್ನಷ್ಟು ಬಲಪಡಿಸುತ್ತದೆ. ಜೋಗಿಯ 'ಶಕ್ತಿ'ಯ ಪ್ರಾರ್ಥನೆ ಹೊಗಳಿಕೆ ಆಸಾದಿಯ 'ಕಾಮ' ಪ್ರವೃತ್ತಿಯ ಪ್ರಸ್ತಾಪ ಇವು ಸೃಷ್ಟಿ ಮತ್ತು ಫಲವಂತಿಕೆ ಮೂಲವನ್ನು ಅಪ್ರಜ್ಞಾ ಪೂರ್ವಕವಾಗಿಯೋ– ಇವುಗಳ ವೈಚಿತ್ರ್ಯ ಪೂರ್ಣ ಸೃಷ್ಟಿಯನ್ನು ಸೂಚಿಸುವಂತಿದೆ.– ಆದರೆ ಈ ಎಲ್ಲ ಅರ್ಥಗಳನ್ನು ಈ ಆಚರಣೆಗಳು ಖಂಡಿತವಾಗಿಯೂ ಒಳಗೊಂಡಿವೆಯೆಂದೇನೂ ಅಲ್ಲ' ಊಹಿಸಲು ಸಾಧ್ಯತೆಗಳಿವೆಯೆಂಬುದು ಮಾತ್ರವಾಗಿದೆ.

ಈ 'ಹುಲುಸಿನ' ಪೂಜೆ ಮುಗಿದ ಮೇಲೆ–ಕೊನೆಯ ದಿನದವರೆಗೆ ಅವು ಹಾಗೇಯಿರುವುವು, ಅಮ್ಮ ಮೋಬಲು ಹೊರಡು ದಿನ ಅಂದರೆ ಗುರುವಾಗ ಸಾಯಂಕಾಲ ಅಮ್ಮ ಹೊರಡುವ ಮುನ್ನ ಇವನ್ನು ಜನರಿಗೆ ಹಂಚಲಾಗುತ್ತದೆ. ಹಂಚುವಾಗಲೂ ಕೂಡ ಒಂದು ಕ್ರಮವಿದೆ. ಈ ಕಾಳನ್ನು 'ಆಸಾದಿ'ಯೇ ಹಂಚಬೇಕು. ಆಸಾದಿ ಈ ಕಾಳನ್ನು ಮೊದಲು ಊರ ಗೌಡರಿಗೆ, ಆಮೇಲೆ ಬುದ್ಧಿವಂತರಿಗೆ, ದೇವಸ್ಥಾನದ ಪ್ರಮುಖರು ಮತ್ತು ಊರ ಪ್ರಮುಖರಿಗೆ ಹೀಗೆ ಕ್ರಮವಾಗಿ ಕೊಟ್ಟು ಮೇಲೆ ಉಳಿದ ಊರ ಜನಗಳಿಗೆ ಹಂಚುತ್ತಾನೆ. ಇಲ್ಲಿಯೂ ಆಸಾದಿ 'ಮಾರಿ'ಯ ಅಥವಾ ದೇವಿಯ ಪ್ರತಿನಿಧಿಯಂತೆ ಕೆಲಸ ನಿರ್ವಹಿಸುತ್ತಾನೆ.

ಘಟ ತರುವುದು:– ಹುಲುಸಿನ ಪೂಜೆ ಆದ ವೇಳೆ ಆಸಾದಿ, ಹಾಗೂ ಊರ ಪ್ರಮುಖರು, ಜನಗಳು, ಮಾದಿಗರ ಕೇರಿಗೆ 'ಘಟ' ಹಾಗೂ ಪಟ್ಟದ ಕೋಣವನ್ನು ತರಲು ಹೋಗುತ್ತಾರೆ. ಈ ವೇಳೆಗೆ ಆಗಲೇ ಮಾದಿಗರ ಕೇರಿಯಲ್ಲಿ ಕೋಣನನ್ನು ಕಡಿಯುವವ ಹಾಗೂ ಘಟ ಹೊರುವ ಹೆಣ್ಣುಮಗಳು ತಯಾರಿರುತ್ತಾರೆ. ಘಟ ತರುವ ಹೆಣ್ಣುಮಗಳು ಈ ಹಿಂದೆ ಹೇಳಿರುವಂತೆ ಅವತ್ತು, ಅಂದರೆ ಮಂಗಳವಾರ ಬೆಳಗ್ಗೆ ಉಂಡವಳು ಮತ್ತೆ ಏನನ್ನೂ ತಿಂದಿರುವುದಿಲ್ಲ. ಈಗ ಅವಳು ಮತ್ತೊಮ್ಮೆ ಸ್ನಾನ ಮಾಡಿ ಕಂಬಳಿಯನ್ನು ಮಾತ್ರ ದೇಹಕ್ಕೆ ಸುತ್ತಿಕೊಂಡು ತಯಾರಿರುತ್ತಾಳೆ. ಊರವರು ಘಟ ಒಯ್ಯಲು ಬಂದಾಗ ಅವಳಿಗೆ ಕಂಬಳಿಯನ್ನು ಕಳೆದು ಬೇವಿನ ಉಡಿಗೆಯನ್ನು ತೊಡಿಸಲಾಗುತ್ತದೆ. ಸಂಪೂರ್ಣವಾಗಿ ನಗ್ನಳಾಗಿದ್ದು ಕೇವಲ ಬೇವಿನ ಸೊಪ್ಪಿನ ಉಡಿಗೆಯನ್ನು ಮಾತ್ರ ಅವಳು ತೊಡುತ್ತಾಳೆ. ಪೂಜಿತ ಘಟೆಯನ್ನು ಮುತ್ತೈದೆ ಹೆಣ್ಣುಮಕ್ಕಳು ತಂದು ಅವಳಿಗೆ ಹೊರಿಸುತ್ತಾರೆ. ಅಲ್ಲಿಗೆ ಅವಳು 'ಅಮ್ಮನೇ' ಆದಂತೆ. ಬೇವುಡೆಯ ಹೆಂಗಸು ಒಂದು ರೀತಿಯಲ್ಲಿ ಮೈದುಂಬಿದಂತಾಗುತ್ತಾಳೆ. ಮೂರ್ನಾಲ್ಕು ಜನ ಹೆಂಗಸರು ಈಕೆಯನ್ನ ಬೇವುಡೆ ಮತ್ತು ತಲೆಯ ಮೇಲಿನ 'ಘಟ ಮಗೆ' ಜಾರದಂತೆ ಹಿಡಿದಿರುತ್ತಾರೆ. ಈ ವೇಳೆಗೆ ಕೋಣನಿಗೆ ಕೊರಳಿಗೆ ಬೇವಿನ ಸೊಪ್ಪನ್ನು ಕಟ್ಟಿ ತಯಾರು ಮಾಡಿಸುತ್ತಾರೆ. ಕೋಣನನ್ನು ಕಡಿಯಲು ನಿಯುಕ್ತವಾದ ವ್ಯಕ್ತಿ ತನ್ನ ಆಯುಧವನ್ನು ಪೂಜಿಸಿ ತಾನೂ ಕೂಡ ತಯಾರಾಗಿರುತ್ತಾನೆ. ಕಂಬಳಿಯ ಕೊಪ್ಪೆಯನ್ನು ಹಾಕಿಕೊಂಡು – ದೊಡ್ಡ ಮಚ್ಚನ್ನು ಎತ್ತಿ ಹಿಡಿದುಕೊಂಡು 'ಘಟ' ಹೊತ್ತವಳ ಜೊತೆಯಲ್ಲಿ ಅಥವಾ ಹಿಂದೆ ನಡೆಯುತ್ತಾನೆ. (ಚಿತ್ರ:2[illegible]) ಕೋಣನನ್ನು ಅವನ ಹಿಂದೆ ಹಿಡಿದುಕೊಂಡು ಬರುತ್ತಾರೆ. (ಚಿತ್ರ [illegible]). ಇವರನ್ನು ಹಲಗೆಯ ವಾದ್ಯದೊಂದಿಗೆ ಕರೆತರಲಾಗುತ್ತದೆ. ಈ ವೇಳೆಗಾಗಲೇ ಚರಗದ ಅನ್ನವೂ ಸಿದ್ಧವಾಗಿರುತ್ತದೆ. ಗೌಡರ ಮನೆಯಲ್ಲಿ ಸುಮಾರು 60 ಸೇರು ಅಕ್ಕಿಯ ಅನ್ನವನ್ನು ಚರಗಕ್ಕೆಂದು ಮಾಡಲಾಗಿರುತ್ತದೆ. ಈ ಅನ್ನವನ್ನು ಘಟಮಗೆ, ಕೋಣ, ನ ಜೊತೆಯಲ್ಲಿ ಅಥವಾ ಅದಕ್ಕೆ ಮೊದಲೇ ಕಂಬಳಿ ಗೊಪ್ಪೆ ಹಾಕಿದ ಮಾದಿಗರು ನಾಲ್ಕು ಬುಟ್ಟಿಗಳಿಗೆ ಸಮನಾಗಿ ಹಂಚಿಕೊಂಡು ಹೊತ್ತೊಯ್ದು ಅಮ್ಮನ ಗದ್ದುಗೆ ಬಳಿ ಇಟ್ಟುಕೊಂಡಿರುತ್ತಾರೆ. ಬೀರಗೊಂಡನ ಹೇಳಿಕೆಯಲ್ಲಿ ಇತ್ತೀಚೆಗೆ ಊರ ಜನರು ಪ್ರತೀ ಮನೆಯಿಂದ ಮಾಡಿಕೊಂಡು ತಂದು ಒಂದು ದೊಡ್ಡ ಹಡಗಿಗೆ ಹಾಕುತ್ತಾರೆ ಎನ್ನುತ್ತಾರೆ. ವ್ಯಕ್ತಿ ಹೊನ್ನೂರಪ್ಪ.

ಹೀಗೆ 'ಘಟ ಮಗೆ' 'ಕೋಣ' ಮತ್ತು ಕೋಣನನ್ನು ಕಡಿಯುವವನನ್ನು ಕರೆತಂದು – ಮಾರಿಯ ಗದ್ದುಗೆಯನ್ನು ಮೂರು ಸುತ್ತು ಸುತ್ತಿಸುತ್ತಾರೆ. ಹೀಗೆ ಸುತ್ತಿಸಿದ ವೇಳೆ 'ಘಟ' ಹೊತ್ತ ಹೆಂಗಸಿನ ಬೇವುಡೆಯನ್ನು ಬಿಚ್ಚಿ ಅವಳಿಗೆ ಹಸಿರು ಸೀರೆಯನ್ನು ಉಡಿಸಲಾಗುತ್ತದೆ. ಘಟಕುಂಭವನ್ನು ಮಾದಿಗರ ಗಂಡಸರು ತಂದು – ಹುಲುಸಿನ ಪೂಜೆಯ ಮುಂದೆ ಇಡುತ್ತಾರೆ. (ಚಿತ್ರ 2[illegible]). ಅಲ್ಲದೆ ಅವರ ಪಾಯವನ್ನು ಹಾಗೆ ಮುಚ್ಚಿ ಹಿಡಿದು ಕೂರುತ್ತಾರೆ. ಬೇವುಡೆ ತೆಗೆದು ಸೀರೆ ಕೊಟ್ಟ ಆ ಹೆಂಗಸನ್ನು ಕರೆತಂದು ಹುಲುಸಿನ ಮುಂದೆ ಅಂದರೆ 'ಮಾರಿ'ಯ ಹಾಗೂ 'ಹುಲುಸಿನ' ಮಧ್ಯ ಮಾರಿ ಕಡೆ ಮುಖ ಮಾಡಿ ಕೂರಿಸುತ್ತಾರೆ. ಅವರ ಪೈಕಿಯ ಹೆಂಗಸರು ಅವಳಿಗೆ ಆರತಿ ಬೆಳಗಿ ಅಕ್ಷತೆ ಹಾಕುತ್ತಾರೆ. (ಚಿತ್ರ [illegible]) ಊರವರಿಂದ ಸೀರೆ ಮತ್ತು ಮಡಿಲಕ್ಕಿ ಇವಳಿಗೆ ಸಂದಾಯವಾಗುತ್ತದೆ. ಈವರೆಗೆ ಮಾರಿಯ ಆರಾಧನೆ ಸಣ್ಣಗಾರನದಾಗಿದ್ದು ಈವರೆಗಿನ ಮಾರಿ ಪೂಜೆಗೆ ಬಂದ ಅಕ್ಕಿ, ಬಟ್ಟೆ, ಕಾಣಿಕೆ, ಎಲ್ಲ ಅವನದೇ ಆಗಿದ್ದು ಮುಂದೆ ಕೋಣನ ಬಲಿಯ ನಂತರ 'ಆಗಸ' ಈ ಸ್ಥಾನಕ್ಕೆ ಬರುತ್ತಾನೆ.

ಕೋಣನ ಬಲಿಯಾಗಿ, ಚರಗವನ್ನು ಚೆಲ್ಲ ಬರುವ ತನಕ 'ಘಟ ಮಗೆ'ಯ ಬಾಯಿ ತೆಗೆಯದಂತೆ ಅದರ ಮೇಲೆ ಇಬ್ಬರು ಗಂಡಸರು ಕೈಯಿಟ್ಟುಕೊಂಡೇ ಕುಳಿತಿರಬೇಕಾಗುತ್ತದೆ. ಹುಲುಸಿನ ಕಾಳಿನ ಮುಂದೆ ಈ ಮಗೆಯನ್ನು ಇಟ್ಟಿರುತ್ತಾರೆ. ಅಮ್ಮನ ಗದ್ದುಗೆಯ ಮುಂದೆ ಗದ್ದುಗೆ ಮರಿಯ ತಲೆ (ಹೊನ್ನಾಳಿಯಲ್ಲಿ ಈ ತಲೆಯಿರುವುದಿಲ್ಲ) ಅದರ ಮುಂದೆ 'ಘಟ' ತಂದ ಹೆಂಗಸು – ಅವಳ ಮುಂದೆ ಹುಲುಸಿನ ಕಾಳು – ಅದರ ಮುಂದೆ ಘಟ ಮಗೆ – ಅದರ ಮುಂದೆ ಕೋಣನ ತಲೆ ಇಡಲು ಸಿದ್ಧ ಮಾಡುವ ಸೊಪ್ಪಿನ ಗುಡಿಸಲಿರುತ್ತದೆ.

ಬರಗ ಚೆಲ್ಲಿ ಬಂದ ನಂತರ 'ಘಟೆ ಮಗೆ'ಯ ಬಾಯಿ ತೆಗೆಯಲಾಗುತ್ತದೆ. ಬಾಯಿ ತೆಗೆದು ಅದರಲ್ಲಿನ ನೈವೇದ್ಯವನ್ನು ಅಲ್ಲಿದ್ದವರು ಹಂಚಿಕೊಂಡು ಕುಡಿಯುತ್ತಾರೆ. ಆ ಹೆಂಗಸು ಆ ವೇಳೆಗೆ ಎದ್ದು ಮತ್ತೊಮ್ಮೆ ಅಮ್ಮನಿಗೆ ನಮಸ್ಕರಿಸಿ ಮನೆಗೆ ಹೋಗುತ್ತಾಳೆ.

'ಘಟೆ' ಪೂಜೆಯ ಬಗ್ಗೆ ಈಗಾಗಲೇ ಪ್ರಸ್ತಾಪಿಸಿರುವಂತೆ ಈ ಪೂಜೆ ಇದೇ ಮಾರಿಹಬ್ಬದಲ್ಲಿ ವಿಶೇಷವಾಗುತ್ತದೆ. ಮತ್ತು ಇದರೊಂದಿಗಿನ '<u>ಕೋಣನ ಬಲಿ</u>' ಪರಸ್ಪರ ಸಂಬಂಧ ಪಡೆಯುತ್ತದಾದರೂ, ವಿಗ್ರಹ ಮಾರಿಗೂ – ಈ ಪೂಜೆಗೂ ಅಂತಹ ಅನಿವಾರ್ಯ ಸಂಬಂಧಗಳೇರ್ಪಡುವುದಿಲ್ಲ. ಮಾತ್ರವಲ್ಲ ಬೇರೆಯದೇ ಒಂದು ಹಬ್ಬದಲ್ಲಿ ಇನ್ನೊಂದು ದೈವ ಪೂಜೆ ನೆರವೇರುವಂತೆ ತೋರುತ್ತದೆ. ಇದು ಒಟ್ಟಾರೆ ಮಾರಿಹಬ್ಬದ ಆಚರಣಾತ್ಮಕವಾದ ಅದೂ 'ವರ್ಣಸಂಕರ'ದ ಆಶಯದ ಮಹತ್ವದ ದೃಷ್ಟಿಯಲ್ಲಿ ಸಂಬಂಧ ವಂಚಿತವಾಗುತ್ತದೆ. ಮಾರಿ ವಿಗ್ರಹಾರಾಧನೆಯು ಎದುರು ಕೆಳ ಸ್ಥಾನದಲ್ಲಿ ಪೂಜಿತವಾಗುವ 'ಘಟೆಮಡಕೆ'ಯ ಪೂಜೆ ಮೂಲದಲ್ಲಿದ್ದಿರುವ ತನ್ನ ಸ್ಥಾನವನ್ನು ಕಳೆದುಕೊಂಡು ಅಧೀನವಾಗಿರುವ ಆಶಯವನ್ನು ಸೂಚಿಸುವಂತೆ ತೋರುತ್ತದೆ.

<u>ಕೋಣನ ಬಲಿ</u>:– ಘಟೆ ಮಗೆಯೊಂದಿಗೆ ಹಿಡಿದು ತಂದ ಪಟ್ಟದ ಕೋಣನನ್ನು ಅಮ್ಮನ ಗದ್ದುಗೆಗೆ ಮೂರು ಸುತ್ತು ಸುತ್ತಿಸಿ, ಕಡಿವ ಸ್ಥಳಕ್ಕೆ ಹಿಡಿದು ತರುತ್ತಾರೆ. ಮಾರಿ ವಿಗ್ರಹಕ್ಕೆ ಎದುರಾಗಿ ಅಲ್ಲಿಂದ ಒಂದತ್ತು – ಹದಿನೈದು ಮಾರು ದೂರದಲ್ಲಿ ಈ ಸ್ಥಳವಿರುತ್ತದೆ. ಇದಕ್ಕೆಂದೇ ಯಾವುದೇ ವಿಶೇಷ ಸ್ಥಳ ಸಿದ್ಧತೆಯಿರುವುದಿಲ್ಲ. ಅತ್ತ 'ಘಟೆ' ತಂದು ಇಟ್ಟ ಮೇಲೆ ಅಸಾದಿ ಒಂದು ಕೋಣವನ್ನು ಪೂಜಿಸುತ್ತಾನೆ. ಜೋಗಿ ಭಂಡಾರ ಹಾಕುತ್ತಾನೆ. ಹೀಗಾದ ತಕ್ಷಣ ಕೋಣವನ್ನು ಕಡಿಯಲೆಂದು ನಿಯುಕ್ತನಾಗಿದ್ದ ವ್ಯಕ್ತಿ ತನ್ನ ಮಚ್ಚಿನೊಂದಿಗೆ ತಯಾರಾಗಿದ್ದು, ಕೋಣನನ್ನು ಒಂದೇ ಏಟಿಗೆ ಹೊಡೆಯಬೇಕು. ಆದರೆ ತೀರಾ ಕೊಬ್ಬಿದ ಕೋಣವಾದ್ದರಿಂದ ಒಂದೇ ಏಟಿಗೆ ಕಡಿಯಲಾಗುವುದಿಲ್ಲ ಎರಡು ಮೂರು ಹೊಡೆತಕ್ಕೆ ಕಡಿಯುತ್ತಾನೆ. ಕಡಿಯುವ ಮೊದಲು ಮುಂಡಣಕ್ಕೆ ಮಚ್ಚಿನೊಂದಿಗೆ ನಮಸ್ಕರಿಸಿ ಕಡಿಯುತ್ತಾನೆ. ಹೀಗೆ ಕಡಿದ ತಕ್ಷಣ ಅದರ ತಲೆಯನ್ನು, ಅದರ ಮುಂಗಾಲೊಂದನ್ನು (ಎಡಗಾಲು) ಕಡಿದು ಬಾಯಲ್ಲಿ ಸಿಕ್ಕಿಸಿ, ತಂದು ಆಗಲೇ ನಿರ್ಮಿಸಿದ್ದ ಸೊಪ್ಪಿನ ಗುಡಿಸಲಲ್ಲಿ ಅಮ್ಮನಿಗೆ ಎದುರು ಮುಖ ಮಾಡಿಟ್ಟು – ಅದರ ಮೇಲೆ ದೀಪ ಇಟ್ಟು, ಕೋಣನ ಕರುಳುಗಳನ್ನು ತೆಗೆದು ಬತ್ತಿ ಮಾಡಿ ಹತ್ತಿಸಿಡುತ್ತಾರೆ. ಈ ದೀಪ ಅಮ್ಮ ಮೋಡಲು ಹೊರಡುವ ತನಕ ಕೆಡಬಾರದು. ಕೋಣ ಕಡಿದವನಿಗೆ ಊರವರು ಬಟ್ಟೆ, ಪಂಚೆ ಕೊಡುತ್ತಾರೆ. ಕೋಣನ ರಕ್ತವನ್ನು ತೆಗೆದುಕೊಂಡು ಈಗಾಗಲೇ ತಯಾರು ಮಾಡಿಕೊಂಡು ಇಟ್ಟಿದ್ದ ಬರಗದ ಅನ್ನಕ್ಕೆ ಬೆರೆಸುತ್ತಾರೆ. ಅಲ್ಲದೆ '<u>ಕರುಳ್ದ ಕುರಿ</u>' ಎಂದು ಒಂದು ಕುರಿಯನ್ನು ಹೊಟ್ಟೆ ಸೀಳಿ ಅದರ ರಕ್ತ ಮತ್ತು ಸಿಕ್ಕ ಒಂದಷ್ಟು ಮಾಂಸ, ಕರುಳುಗಳನ್ನು ಅನ್ನಕ್ಕೆ ಬೆರೆಸಿ ಕಲಸಿ ನಾಲ್ಕು ಜನ ಬುಟ್ಟಿಯಲ್ಲಿ ಹೊತ್ತುಕೊಂಡು ಕೆಲವರು ಅವರೊಡನೆ 'ಹೋರಿಗ್ಯಾ' ಎಂದು ಕೂಗುತ್ತಾ, ಬಡಿಗೆ ಹಿಡಿದು ಕೇಕೆ ಹಾಕುತ್ತಾ ಹೊರಡುತ್ತಾರೆ. (ಕರುಳ್ದ ಕುರಿ ಬಲಿ ಹೊನ್ನಾಳಿಯಲ್ಲಿ ಇದೆ).

'<u>ಕೋಣ</u>' ಇಲ್ಲಿ ಬಹಳ ಮುಖ್ಯವಾದ '<u>ಬಲಿ</u>'. ಇಡೀ ಮಾರಿ ಹಬ್ಬದ ಆಶಯ ಕೇಂದ್ರೀಕೃತವಾಗಿರುವುದು ಈ ಬಲಿಯ ಮೇಲೆಯೇ ಎನ್ನಬಹುದು. ಏಕೆಂದರೆ 'ಮಾರಿ ಹಬ್ಬ'ದ ಬಗೆಗಿನ ಐತಿಹ್ಯಗಳೆಲ್ಲ ಹೇಳುವಂತೆ ಕೋಣ ಮಾರಿಯ ಗಂಡ. '<u>ಮಾರಿ</u>' ಅವತರಿಸಿದ್ದೂ ಕೂಡ ಇದರ ಬಲಿಗಾಗಿ, ಅಲ್ಲದೆ ಹಬ್ಬದ ಆರಂಭದ ಆಚರಣೆಗಳಿಂದ ಹಿಡಿದು ಮೋಡುವ ಕ್ರಿಯೆತನಕ 'ಕೋಣನ ಆಶಯ ಮಹತ್ವದ ಪಡೆಯುತ್ತದೆ. ಒಂದೊಂದು ಐತಿಹ್ಯ ಒಂದೊಂದು ವಿವರ ಕೊಟ್ಟರೂ ಕೊನೆಯಲ್ಲಿ ಆ ಎಲ್ಲ ವಿವರಗಳೂ ಐಕ್ಯಸಾಧಿಸುವುದು '<u>ಕೋಣ</u>' ಮಾರಿಯ ಗಂಡನಾಗಿ ಬಲಿ ಅವಳಿಂದ ಹತವಾಗುವುದಿಲ್ಲ. ಇಲ್ಲೆಲ್ಲ '<u>ಕೋಣ</u>' ಮಾರಿಯ '<u>ಶೂದ್ರಗಂಡ</u>'ನಾಗಿ ಕಾಣಿಸಿಕೊಳ್ಳುತ್ತದೆ. 'ವರ್ಣಸಂಕರ'ದ ವಿರುದ್ಧ ಆಶಯವೊಂದು ಕೋಣನ ಬಲಿಯನ್ನು – 'ವಿಲೋಮ ವಿವಾಹ'ದ ... ಅಧರ್ಮ ಸಂಬಂಧವನ್ನು ಧಿಕ್ಕರಿಸಿ – ಹಾಗೇನಾದರೂ ಸಂಭವಿಸಿದಲ್ಲಿ ಆಗಬಹುದಾದ ಜೀವ ಹತ್ಯೆಯ ಭೀಕರತೆಯನ್ನು ತಿಳಿಸುವ ಎಚ್ಚರಿಕೆಯಾಗಿ ಕಂಡು ಬರುತ್ತದೆ. ಪ್ರಸ್ತುತದಲ್ಲಿ ಚಾಲ್ತಿಯಲ್ಲಿರುವ ಐತಿಹ್ಯಗಳೆಲ್ಲ ಸಾಮಾನ್ಯವಾಗಿ ಇದೇ ವಿಷಯವನ್ನು ಸಮರ್ಥಿಸುತ್ತವೆ.

ಆದರೆ ಇದೇ ನಿಜವೆಂದು ಹೇಳಲಾಗದು. 'ಕೋಣ' ನ ಬಲಿಗೆ ಇದೇ ಉದ್ದೇಶವೆಂದು ಹೇಳಲು ಸಾಧ್ಯವಿಲ್ಲ. ಕೋಣನ ಬಲಿ ಆವುಗಳ ಬಳಕೆ ಅತಿಯಾಗಿದ್ದ ಒಂದು ಪ್ರದೇಶದ 'ಮಾಂಸದೆಯ' ಸಂಪ್ರದಾಯದಲ್ಲಿ ಜಾರಿಗೆ ಬಂದಿರುವ ಒಂದು ಸಾಮಾನ್ಯವಾದ ಆದರೆ ಶ್ರೇಷ್ಠವಾದ 'ಬಲಿ' ಯಾಗಿರುವ ಸಾಧ್ಯತೆಗಳಿದ್ದು. ಅದು ನಂತರದಲ್ಲಿ ಈ ವರ್ಣ ಆಶಯವನ್ನು ಕಟ್ಟಿಕೊಂಡಿರುವ ಸಾಧ್ಯತೆಗಳಿವೆ.

ದಕ್ಷಿಣದ ಭಾಗವನ್ನು ಮಹಿಷಮಂಡಲ' ಎಂದೂ ಕರೆದಿರುವುದು, ಪ್ರಾಚೀನ ತಮಿಳು ಗ್ರಂಥಗಳಲ್ಲಿ ಇದನ್ನು 'ಎರುಮೈನಾಡು' ಎಂದು ಕರೆದಿರುವುದು. ಇಲ್ಲಿ ಪ್ರಾಚೀನ ಕಾಲದಿಂದಲೂ ಎಮ್ಮೆಗಳ ಸಾಕಾಣಿಕೆ ಬಹಳ ಜನಪ್ರಿಯವಾಗಿತ್ತೆಂದು ತಿಳಿಯಲು ಸಹಾಯವಾಗುತ್ತವೆ. ಅಲ್ಲದೆ ಆ ಕಾಲದಲ್ಲಿನ 'ಬಲಿ' ಸಾಮಾನ್ಯವಾಗಿ ಅವರಲ್ಲಿ ಬಳಕೆಯಲ್ಲಿರುವ ಪ್ರಾಣಿಗಳ ಮೂಲಕ ನಡೆದಿದ್ದರೂ ಶ್ರೇಷ್ಠತೆಯ ಪ್ರಶ್ನೆ ಬಂದಾಗ ಶ್ರೇಷ್ಠ ಪ್ರಾಣಿಯಾಗಿ ಮನುಷ್ಯನನ್ನೆ ಬಿಟ್ಟರೆ, (ನರ ಬಲಿಯೂ ಈ ದೇವತಾರಾಧನೆಯಲ್ಲಿ ಇದ್ದಿರುವ ಸಾಧ್ಯತೆಗಳಿವೆ. ಯಶೋಧರ ಚರಿತೆಯಲ್ಲಿ ಈ ಪ್ರಸ್ತಾಪವಿದೆ.) ತಮ್ಮಲ್ಲಿ ಬಹು ಉಪಯೋಗದಲ್ಲಿದ್ದ, ತಾವು ಸಾಕುವ ಪ್ರಾಣಿಗಳಲ್ಲಿ: ಉನ್ನತವೆಂದು ಗಣಿಸಿದ್ದ 'ಎಮ್ಮೆ' ಮುಖ್ಯವಾಗಿ ಕಂಡಿರಬಹುದು. ಆದರೆ ಎಮ್ಮೆ – ತಾಯ್ತನದ ಸಂಕೇತವಾಗಿದ್ದು ಅದನ್ನು ತಾಯಿ ದೇವರಿಗೆ ಬಲಿ ಅರ್ಪಿಸುವುದು ಸಮ್ಮತವಾಗಿ ಕಂಡಿರಲಿಕ್ಕಿಲ್ಲ. ಅಲ್ಲದೆ ಕೋಣ ಅಂದರೆ ಗಂಡು ಜೀವಿಯ 'ಬಲಿ' ಫಲವಂತಿಕೆಯ ದೃಷ್ಟಿಯಿಂದ ಬಹಳ ಪ್ರಾಮುಖ್ಯತೆಯನ್ನು ಪಡೆದಿರುವುದೂ ಸಾಧ್ಯವಿದೆ. ಉಪಯೋಗದ ದೃಷ್ಟಿಯಿಂದಲೂ ಎಮ್ಮೆಯನ್ನು ಉಳಿಸಿಕೊಳ್ಳುವ ಪ್ರಯತ್ನವೂ ಇದ್ದಿರಬಹುದು. ಆದರೆ ಜೇನು, ಜೇಡ, ಮೊದಲಾದ ಜೀವಿಗಳಲ್ಲಿನ 'ಗಂಡಿನ' ಕೇವಲ ಸಂತಾನದ ಉಪಯುಕ್ತತೆ ಮತ್ತು ನಂತರದ ಸಾವನ್ನು ಇಲ್ಲಿ ಗಮನಿಸಬಹುದು. ಅದೂ ಹೆಣ್ಣಿನಿಂದ. ಎಲ್ಲೆಲ್ಲಿಯೂ ಬಹುಪಾಲು ಸಾಮಾನ್ಯವಾಗಿ 'ಗಂಡು' ಪ್ರಾಣಿಯನ್ನೇ ಬಲಿ ಕೊಡುವ ಪದ್ಧತಿಯಿದ್ದು ಇದು ತಾಯಿಗೆ ಫಲವತ್ತತೆ ನೀಡುವ ಅಥವಾ 'ತಾಯಿ ಹತ್ಯೆಯ' ಪಾಪ ಪ್ರಜ್ಞೆಯಿಂದ ರೂಢಿಗೆ ಬಂದಿರುವ ಸಾಧ್ಯತೆಗಳಿವೆ. ಆರ್ಯ ಕೃತ ಪುರಾಣಗಳು ದ್ರಾವಿಡರನ್ನು ದಸ್ಯುಗಳೆಂದು ಕರೆದಿರುವುದು, ಅವರಿಗೆ ರಾಕ್ಷಸ, ಕರಡಿ, ಕೋಣಗಳ ರೂಪ ಕೊಟ್ಟಿರುವುದು, ಪುರಾಣಗಳಿಂದ ತಿಳಿಯುವ ಸತ್ಯವೇ ಆಗಿದೆ. ಇದಕ್ಕೆ ಅವರು ಸಾಕುತ್ತಿದ್ದ ಪ್ರಾಣಿಗಳು ಅವುಗಳೊಂದಿಗಿನ ಇವರ ಒರಟು ಜೀವನ ಕ್ರಮ ಕಾರಣವಿರಬಹುದು. ಆದರೆ ಇವರನ್ನೆಲ್ಲ ಅನಾಯಕರೂ, ಅನಾಗರಿಕರೂ, ಕೋಣಗಳೆಂದೂ ಕರೆದಿರುವುದು ಮಾತ್ರವಲ್ಲದೆ, ಇವರನ್ನು ನಾಶ ಮಾಡುವ ಆಶಯಗಳ ಕಥೆ ಹೆಣೆದಿರುವುದೂ ಕಾಣುತ್ತದೆ. ಈ ಕಥೆಗಳಲ್ಲಿ ಅವರ ದೇವ, ದೇವಿಯರಿಂದ ಇವರು ಹತರಾಗುತ್ತಾರೆ. ಚಾಮುಂಡಿ – ಮಹಿಷರ ಕಥೆ;ರಾಕ್ಷಸ ದೇವತೆಯ ನಡುವಿನ ಸಂಘರ್ಷದಲ್ಲಿ, ಆರ್ಯರಿಂದ ರಾಕ್ಷಸರಾಗಿ – ಕೋಣಗಳಾಗಿ ಕರೆಸಿಕೊಂಡು ಚಿತ್ರಿಸಲ್ಪಟ್ಟ ದ್ರಾವಿಡ ಹಾಗೂ ದ್ರಾವಿಡೇತರ ಅನಾಯಕ ಜನರೊಂದು ಇಲ್ಲಿನ ಸತ್ಯವಿರುವಂತಿದೆ. ಈ ಪುರಾಣ ಪ್ರಜ್ಞೆಯ ಜನ,'ಕೋಣ' ಬಲಿ ಪಡೆವ ಈ ಜನರ 'ದೇವತೆ' ಯನ್ನು ಚಾಮುಂಡಿಯ ಅವತಾರಕ್ಕೆ ಹೋಲಿಸಿ ಹೊರಟು ಕೈ ಬಿಟ್ಟರೂ – ಆ ರೂಪ ಕೊಡುವ ಮೂಲಕ ಕೋಣನ ಬಲಿಗೆ ಬೇರೆಯದೇ ಅರ್ಥ ಕಲ್ಪಿಸಿರುವ ಸಾಧ್ಯತೆಗಳು ಇವೆ.

ವೈದಿಕರ ದೃಷ್ಟಿಯಲ್ಲಿ ಈ ಅಮ್ಮನಿಗೆ ಬಲಿಯಾಗುವ ಪ್ರಾಣಿಗಳೆಲ್ಲ ಅದರಲ್ಲೂ, ಕೋಣ, ಶೂದ್ರಪ್ರಾಣಿಯೇ ಆಗಿದೆ. ಹೀಗಾಗಿ 'ಮಾರಿ' ಯ ಆರಾಧನೆಯನ್ನು ತಮ್ಮ ತೆಕ್ಕೆಗೆ ಒಗ್ಗಿಸಿಕೊಳ್ಳಲಾಗದಿದ್ದರೂ, ತಮ್ಮ ಆಶಯ ಬಿತ್ತಲು ಸಮರ್ಥವಾಗಿ ಬಳಸಿಕೊಂಡಿದ್ದಾರೆನ್ನಬಹುದು. 'ಕೋಣನ' ಬಲಿಯನ್ನು 'ವರ್ಣ ಸಂಕರದ' ಸೇಡಿನ ಫಲವಾಗಿ ರೂಪಿಸಿರಬಹುದು.

ಒಟ್ಟಾರೆ ಕೋಣನ 'ಬಲಿ' ದಕ್ಷಿಣ ಭಾರತ ಅದರಲ್ಲೂ ಕರ್ನಾಟಕದಲ್ಲಿ ಪ್ರಾಚೀನ ಕಾಲದಿಂದಲೂ ಆಚರಣೆಯಲ್ಲಿದ್ದು – ತಾಯಿ ದೇವತಾರಾಧನೆಯ ಸಂಪ್ರದಾಯವಾಗಿದ್ದು, ನಂತರದ ವೈದಿಕ ಪ್ರಭಾವದಲ್ಲಿ ಭಿನ್ನವಾದ ಕಥೆಯನ್ನು ಕಂಡುಕೊಂಡಿದೆ ಎನ್ನಬಹುದು. ಕೋಣನ ಬಲಿ ಈಗ ಕಾನೂನು ನಿಷಿದ್ಧವಾಗಿದೆ. ಅಲ್ಲದೆ ಅನೇಕ ಸಂಘಟನೆಗಳೂ ಕೂಡ ಕೋಣನ ಬಲಿಯನ್ನು ವಿರೋಧಿಸುತ್ತಿರುವುದರಿಂದ. ಕೋಣನ ರಕ್ತವನ್ನು ಇಂಜಕ್ಷನ್ ಮೂಲಕ (ಸಿರಿಂಜಿನಿಂದ) ತೆಗೆದು, ಸಂಪ್ರದಾಯ ನೆರವೇರಿಸುತ್ತಾರೆ (ಸಿರಸಿಮಾರಿ), ಬೀರಗೊಂಡನ

ಹಳ್ಳಿ, ಮತ್ತು ಹೊಸಳ್ಳಿಗಳಲ್ಲಿ ಕೋಣಗಳನ್ನು ಕಡಿಯುತ್ತಾರಾದರೂ, ಪೋಲೀಸರ ಕಣ್ಣು ತಪ್ಪಿಸಿ ಕಡಿಯಬೇಕಾಗಿರುವುದರಿಂದ (ಪೋಲೀಸರಿಗೆ ತಿಳಿದಿದ್ದರೂ – ಕಣ್ಣು ತಪ್ಪಿಸಿದಂತೆ ನಟಿಸುತ್ತಾರಷ್ಟೆ) ತೀರ ತರಾತುರಿಯಿಂದ ಈ ಬಲಿ ಪ್ರಸಂಗ – ಯಾವ ಆಚರಣೆ ಸಂಪ್ರದಾಯಗಳಿಗೂ ಅಷ್ಟಾಗಿ ಮಹತ್ವ ಕೊಡದೆ ಶೀಘ್ರನೇ ಕಡಿಯಲಾಗುತ್ತಿರುವುದು ಇತ್ತೀಚಿನ ಬೆಳವಣಿಗೆಯಾಗಿದೆ.

ಕೋಣನ ಬಲಿಯನ್ನು ಮಾತ್ರ ನಿರ್ಬಂಧಿಸುತ್ತಿರುವ ಕಾನೂನು – ಒಟ್ಟಾರೆ ಬಲಿಗಳನ್ನು ಏಕೆ ಪರಿಗಣಿಸುತ್ತಿಲ್ಲ ? 'ಕೋಣನ ಬಲಿ' ಯನ್ನು ಮಾತ್ರ ನಿಷೇಧಿಸುತ್ತಿರುವುದು ಏಕೆ ? ಹಾಗಾದರೆ ಕಸಾಯಿ ಖಾನೆಗಳಿಗೆ ಅದು ಸಾಗಿಸಲ್ಪಡುವಾಗ ? ಬಯಲಲ್ಲಿ – ಜನಗಳೆದುರು ಕಡಿವುದು ಮಾತ್ರ ಅಪರಾಧವೆ ? ಈ ಮೊದಲಾದ ಅನೇಕ ಪ್ರಶ್ನೆಗಳು ಎದುರಾಗುವುದು ಸಹಜ. ಇವಕ್ಕೆ ಕಾನೂನು ಪರಿಣತರೇ ಉತ್ತರಿಸಬೇಕಾಗುತ್ತದೆ. ಆದರೆ ವರ್ಣ ಸಂಕರದ ಹಿನ್ನೆಲೆಯಲ್ಲಿನ ಕೋಣ ಪದದ ಅರ್ಥದಿಂದ ಈ ನಿಷೇಧ ಸರಿ ಎನಿಸಿದೆ. ಕೇವಲ '<u>ಬಲಿ ಭೀಕರತೆ</u>' ಪದದ ಉದ್ದೇಶವಾಗಿದ್ದರೆ ಅದು ಅಸಮಂಜಸ ಮತ್ತು ನಗೆ ಪಾಟಲಾಗುವುದು ಸಹಜವಾಗುತ್ತದೆ. ಒಟ್ಟಲ್ಲಿ ಈ ಕಾನೂನಿನ ತಡೆ ಮಾತ್ರ 'ಕೋಣನ ಬಲಿ' ಯ ಆಚರಣೆಗಳ ಕ್ರಮೇಣ ಸಡಿಲಿಕೆಗೆ ಅವಕಾಶ ಮಾಡಿಕೊಡುತ್ತದೆ. ಕೋಣವನ್ನು ಕಡಿದ ಮೇಲೆ ಅಮ್ಮನ ಪೂಜಾರಿ ಬದಲಾಗುತ್ತಾನೆ. ಮೊದಲಿದ್ದ ಸುಣ್ಣಗಾರ ಈಗ ತೆರವಾಗಿ ಅಲ್ಲಿಗೆ ಅಗಸ ಬರುತ್ತಾನೆ.

<u>ಚರಗ ಚೆಲ್ಲುವುದು</u> :– ಕೋಣನನ್ನು ಕಡಿಯಲು ಗುಡಿಗೆ ಬಳಿ ಬರುವ ಮೊದಲೇ ಚರಗದ ಅನ್ನವನ್ನೇ ತಂದಿಟ್ಟುಕೊಂಡಿರುತ್ತಾನೆ. ಹೊಸಳ್ಳಿಯಲ್ಲಿ ಗೌಡನ ಮನೆಯವರು ಸುಮಾರು ಅರವತ್ತು ಸೇರು ಅಕ್ಕಿಯ ಅನ್ನವನ್ನು ಇದಕ್ಕಾಗಿ ಬೇಯಿಸಿರುತ್ತಾರೆ. ಈ ಅನ್ನವನ್ನು ಸಮನಾಗಿ ನಾಲ್ಕು ಬುಟ್ಟಿಗಳಿಗೆ ತುಂಬಿ ತಂದಿಟ್ಟುಕೊಂಡಿರುತ್ತಾರೆ. (ಚಿತ್ರ ೬:[illegible]) ಚರಗ ಚೆಲ್ಲುವವರು ಸಾಮಾನ್ಯವಾಗಿ ಕರಿ ಕಂಬಳಿಯ ಗೊಪ್ಪೆಗಳನ್ನು ಹಾಕಿಕೊಂಡಿರುತ್ತಾರೆ. ಜೊತೆಗೆ ಅನೇಕ ಜನರಿದ್ದು ಅವರು ಕೈಗಳಲ್ಲಿ ಬಡಿಗೆಗಳನ್ನು ಹಿಡಿದುಕೊಂಡಿರುತ್ತಾರೆ.

ಕೇಣನನ್ನು ಕಡಿದ ಮೇಲೆ ಅದರ ರಕ್ತವನ್ನು ಈ ಅನ್ನಕ್ಕೆ ಬೆರೆಸಲಾಗುತ್ತದೆ. ಹೊಸಳ್ಳಿಯಲ್ಲಿ ಕೋಣವನ್ನು ಕಡಿದು ಅದರ ರಕ್ತವನ್ನು ಚರಗದ ಅನ್ನಕ್ಕೆ ಬೆರೆಸುವುದು ಮಾತ್ರವಲ್ಲದೇ '<u>ಕರುಳ್ದ ಕುರಿ</u>' ಎಂದು ಒಂದು ಕುರಿಯ ಹೊಟ್ಟೆಯ ಸೀಳಿ – ಅದರ ಹೊಟ್ಟೆಯಲ್ಲಿನ ಮಾಂಸ, ರಕ್ತವನ್ನೂ ಅನ್ನಕ್ಕೆ ಬೆರೆಸಲಾಗುತ್ತದೆ. ಹೀಗೆ ಬೆರೆಸಿದ ಅನ್ನವನ್ನು ನಾಲ್ಕೂ ಜನ ಹೊತ್ತು ಊರಿನ ನಾಲ್ಕು ದಿಕ್ಕುಗಳ ಕಡೆಗೆ ಹೊರಡುತ್ತಾರೆ. ಹೀಗೆ ಹೋಗುವಾಗ ಮಾತ್ರ ಸ್ವಲ್ಪ ದೂರ ಒಂದೇ ದಾರಿಯಲ್ಲಿ ಹೋಗಿ ನಾಲ್ಕೂ ದಿಕ್ಕುಗಳೆಡೆ ದಾರಿಯಲ್ಲಿ ಹೊರಡುತ್ತಾರೆ. ಬುಟ್ಟಿ ಹೊತ್ತವರೊಂದಿಗೆ ಅನೇಕ ಜನಗಳೂ ಇದ್ದು, ಇವರು ದೊಡ್ಡ ಬಡಿಗೆಗಳನ್ನು ಹಿಡಿದುಕೊಂಡು 'ಹೂಲಿಗ್ಯಾ' ಎಂದು ಕೂಗುತ್ತಾ ಕೇಕೆ ಹಾಕುತ್ತಾ ಓಡುತ್ತಾರೆ. ಮುಂದೆ ಊರ ಸುತ್ತ ಬುಟ್ಟಿಯ ಅನ್ನ ತೆಗೆದು ಚೆಲ್ಲುತ್ತಾ ಹೋಗುವವರು ಇವರೆ ಆಗಿದ್ದಾರೆ. ಹೀಗೆ ಚರಗ ಚೆಲ್ಲುವುದಕ್ಕೆ ಹೋದಾಗ ನಾಲ್ಕೂ ಕಡೆಯ ಅಂಚುಗಳ ಭಾಗದಲ್ಲಿ ನಾಲ್ಕೂ ಕುರಿಮರಿಗಳು ಬಲಿಯಾಗುತ್ತವೆ. ಈ ಬಲಿಯಾದ ಕುರಿಗಳು ಅಗಸ, ಚಲವಾದಿ, ತಳವಾರ. . . . . ಹೀಗೆ ನಾಲ್ಕು ಜನ ಕಾಟಗರಿಗೆ ಕೊಡಲ್ಪಡುತ್ತವೆ. ಚರಗ ಚೆಲ್ಲುತ್ತಾ ಹೋಗುವಾಗ ಯಾರೂ ಎದುರಿಗೆ ಬರಬಾರದು. ಹಾಗೂ ಹೀಗೆ ಚೆಲ್ಲುವ ಚರಗದ ಅನ್ನವನ್ನು ಚೆಲ್ಲುತ್ತಿರುವಾಗ ಬೇರೆಯವರು ಅಥವಾ ಬೇರೆ ಊರಿನವರು ಒಯ್ಯುವಂತಿಲ್ಲ. ಹಾಗೇನಾದರೂ ಒಯ್ದರೆ ಅವರನ್ನು ಬೆನ್ನಟ್ಟಿ ಹೊಡೆಯಲಾಗುವುದು. ಕೆಲವೊಮ್ಮೆ ಸಾಯಿಸಲೂಬಹುದು. ಹೀಗೆ ಚರಗ ಚೆಲ್ಲಿದ ಮೇಲೆ ನಾಲ್ಕೂ ದಿಕ್ಕಿನವರೂ ಜೊತೆಯಾಗಿ ತಾವು ಎಲ್ಲಿಂದ ಚದುರಿದ್ದರೋ ಅಲ್ಲಿಂದ ಮತ್ತೆ ಒಟ್ಟಾಗಿ ಹೋದ ದಾರಿಯಲ್ಲೇ ಅಮ್ಮನ ಗುಡಿಗೆ ಬಳಿಬ ವಾಪಸ್ಸು ಬರುತ್ತಾರೆ. ಹೀಗೆ ಅವರು ವಾಪಸ್ಸು ಬರುವಾಗ ಅವರನ್ನು ಊರ ಹಿರಿಯರು ತರುಬಿ – 'ಒಳ್ಳೇದಕ್ಕೋ ಕೆಟ್ಟದಕ್ಕೋ' ಎಂದು ಕೇಳುವ ವಾಡಿಕೆಯಿದೆ. ಅವರು ಒಳ್ಳೇದಕ್ಕೆ ಎಂದು ಹೇಳಿ ಅಮ್ಮನ ಗುಡಿಗೆ ಬಳಿ ಬಂದು ಅದಕ್ಕೆ ಮೂರು ಸುತ್ತು ಪ್ರದಕ್ಷಿಣೆ ಹಾಕಿ ನಮಸ್ಕರಿಸುತ್ತಾರೆ. ಚರಗ ಚೆಲ್ಲಿ ಬರುವವರಿಗೆ ಎದುರಾಗಿ ಯಾರೂ ಹೋಗಬಾರದು ಎನ್ನುತ್ತಾರೆ.

ಚರಗ ವನ್ನು ಇಲ್ಲಿ 'ಹುಲುಸು' ಎಂದು ಕರೆಯುತ್ತಾರೆ. 'ಹುಲುಸು' ಎಂಬುದು ಹಬ್ಬದ ಬಹು ಮುಖ್ಯ ಅಂಶವಾಗಿದೆ. 'ಹುಲುಸನ್ನು ರಕ್ಷಿಸಲು ಈ ಹಬ್ಬದಲ್ಲಿ ಬಹಳ ಮಹತ್ವ ನೀಡಲಾಗುತ್ತದೆ. ಹಬ್ಬ ಆರಂಭವಾಗಿ ಊರನ್ನ ನಿರ್ಬಂಧಿಸಿದಾಗಿನಿಂದ ಕೋಣವನ್ನು ಕಡಿದು ಮಾರಿ ಮೋಡುವವರೆಗೆ ಅದನ್ನು ಕಾಪಾಡುವ ಹೊಣೆ ಗ್ರಾಮಸ್ಥರ ಮೇಲಿರುತ್ತದೆ. ತಮ್ಮೂರ ಹುಲುಸನ್ನ ಇನ್ನೊಂದು ಊರವರು ಕೊಂಡೊಯ್ದರೆ ತಮ್ಮೂರ ಸಮೃದ್ಧಿ ಅವರೂರಿಗೆ ಚಲಿಸುತ್ತದೆಯಲ್ಲದೆ ತಮ್ಮೂರು ಫಲ ಹೀನವಾಗುತ್ತದೆಂದು ಅವರು ನಂಬುತ್ತಾರೆ. ಊರಿನ ಯಾವುದೇ ವಸ್ತು ವಿರಬಹುದು, ಕೋಣನ ತಲೆಯ ಮೇಲಿನ ದೀಪವಿರಬಹುದು ಚರಗದ ಅನ್ನವಿರಬಹುದು. ಇದನ್ನು ತಮ್ಮೂರಿಗೆ ಕೊಂಡೊಯ್ಯಲು ಪಕ್ಕದ ಊರವರು ಸದಾ ಕಾಯುತ್ತಿರುತ್ತಾರೆ. ಒಂದು ವೇಳೆ ಹಾಗೇನಾದರೂ ಬೇರೆಯವರು ಕೊಂಡೊಯ್ಯುವಾಗ ಸಿಕ್ಕರೆ ತಮ್ಮೂರ ಗಡಿ ದಾಟುವುದರೊಳಗೆ ಅವರನ್ನು ಹೊಡೆದು, ಹುಲುಸನ್ನು ರಕ್ಷಿಸುತ್ತಾರೆ. ಕೆಲವೊಮ್ಮೆ ಕೊಂದಾದರೂ ಹುಲುಸನ್ನು ಕಾಪಾಡಿಕೊಳ್ಳುತ್ತಾರೆ. ಈ ಬಗ್ಗೆ ಹಬ್ಬ ಆಚರಿಸುವ ಪ್ರತೀ ಊರು ತನ್ನದೇ ಆದ ಕಥೆ ಯೊಂದನ್ನು ತನ್ನ ನೆರೆಯೂರಿನ ಹಬ್ಬದೊಂದಿಗೆ ಸಂಬಂಧವಿಟ್ಟು ಕಥೆ ಕಟ್ಟಿಕೊಂಡಿರುತ್ತದೆ. ಒಂದು ವೇಳೆ ಒಯ್ಯುವವ ಅವರೂರ ಗಡಿಯೊಳಗೆ ಹೋಗಿ ಬಿಟ್ಟರೆ ಏನೂ ಮಾಡುವಂತಿಲ್ಲ.

ಉದಾ:- ಭದ್ರಾವತಿ (ತಾ) ನ ಅರಕೆರೆ ಗ್ರಾಮದ ಹುಲುಸನ್ನು ಪಕ್ಕದ ಅರಬಿಳಚಿ ಗ್ರಾಮದವರು ಒಯ್ಯುವಾಗ ಅರಕೆರೆ ಗ್ರಾಮದವರು ಬೆನ್ನಟ್ಟಿ ಅವನನ್ನು ಕಡಿದರೆಂದೂ, ಅವನ ಮುಂಡ ಅರಬಿಳಚಿ ಗಡಿಗೆ ಬಿತ್ತೆಂದೂ, ರುಂಡ ಅರಕೆರೆ ಗಡಿಯಲ್ಲೇ ಬಿತ್ತೆಂದೂ ಅದ್ದರಿಂದ ಅರಕೆರೆಯಲ್ಲಿ ಹಬ್ಬವಾದ ಮಾರನೆ ವರುಷ ಅರಬಿಳಚಿಯಲ್ಲಿ ಹಬ್ಬ ಮಾಡಲಾಗುವುದೆಂದೂ ಅದಕ್ಕೆ ಮಾರಿಹಬ್ಬ ವೆನ್ನಲಾಗುವುದೆಂದೂ ಹೇಳುತ್ತಾರೆ. (ವ್ಯಕ್ತಿ : 1)

ಉದಾ:- ಬೀರಗೊಂಡನಹಳ್ಳಿಯ ಹುಲುಸನ್ನು ಬಿದಿರುಗಡ್ಡೆ (ಹೊನ್ನಾಳಿ ತಾ) ಗ್ರಾಮದವರು ಕದ್ದರೆಂದೂ ಆದರೆ ಬೀರಗೊಂಡನಹಳ್ಳಿಯವರು ಅವನನ್ನು ಹಿಡಿದು ಕೊಂದರೆಂದೂ, ಅದಕ್ಕೇ ಬಿದಿರುಗಡ್ಡೆಯಲ್ಲಿ ಊರ ಹೊರಗೆ ಹಬ್ಬ ಆಚರಿಸುವರೆಂದೂ ಹೇಳುತ್ತಾರೆ. (ವ್ಯಕ್ತಿ : 7) ಹೀಗೆ ಹುಲುಸನ್ನು ಕೊಂಡೊಯ್ಯುವಾಗ ಕೊಂಡೊಯ್ಯುವವರು ತಾವು ಒಯ್ಯುತ್ತಿರುವ ವಿಷಯವನ್ನು ಕೂಗಿ ಹೇಳಿ ಒಯ್ಯುತ್ತಾರೆ. ಮತ್ತು ಹಾಗೇ ಒಯ್ಯಬೇಕು. ಎಂಬುದು ನಿಯಮ.

ಹೊನ್ನಾಳಿ ತಾಲ್ಲೂಕಿನ ಈಸೂರು ಮತ್ತು ಮಾಸೂರಿನ ನಡುವಿನ ಕಥೆಯೂ ಹೀಗೆ ಇದೆ. ಈಸೂರಿನ — ಹುಲುಸು ಅಂದರೆ ಚರಗವನ್ನು ಮಾಸೂರವರು ಕದ್ದೊಯ್ದಾಗಿಯೂ, ಕದ್ದೊಯ್ಯುವವ ತನ್ನೂರಿನ ಗಡಿ ಮಾರು ದೂರವಿರುವಾಗ ತಾನಲ್ಲಿ ಸಿಕ್ಕಿ ಬೀಳುವೆನೋ ಎಂದು, ತಾನು ಸತ್ತರೂ ಚರಗ ತನ್ನೂರಿಗೆ ಮುಟ್ಟಲೆಂದು ತನ್ನ ಬೀಜವನ್ನೂ, ಚರಗವನ್ನೂ ಮಾಸೂರಿನ ಅಂದರೆ ತನ್ನೂರಿನ ಗಡಿಗೆ ಎಸೆದ ಕಥೆ ಹೇಳುತ್ತಾರೆ. (ಆಧಾರ ಗ್ರಂಥ: 13 ಪುಟ : 7)

ಇಲ್ಲೆಲ್ಲ 'ಹುಲುಸು' ಅಂದರೆ ಊರ ಶ್ರೇಯಸ್ಸನ್ನು — ಸಂಪತ್ತನ್ನು ಕಾಪಾಡುವ ಆಶಯವಿದೆ. ಹುಲುಸು ಕದ್ದೊಯ್ಯುವ ಕ್ರಿಯೆ ಪರವೂರಿನ ಸಂಪತ್ತನ್ನು ತನ್ನೂರಿಗೆ ಕೊಂಡೊಯ್ದು ತನ್ನೂರನ್ನು ಅಭಿವೃದ್ಧಿ ಪಡಿಸುವ ದ್ಯೋತಕವಾಗಿದೆ. 'ಹುಲುಸು' ಎಂದರೆ ಹೆಚ್ಚಳ ವೆಂಬ ಅರ್ಥದಲ್ಲಿಯೂ — ಈ ಅನ್ನ ಚೆಲ್ಲುವುದು, ಒಟ್ಟಾರೆ ಹಬ್ಬ ಮಾಡುವುದು ಊರನ್ನೇ — ಊರ ಬೆಳವಣಿಗೆಯನ್ನು ಕುರಿತ ಆಶಯದಲ್ಲಿದೆ ಯಾದಾಗ ಮಾರಿ ಹಬ್ಬ ವರ್ಣ ಸಂಕರದ ಆಶಯವನ್ನು ಹೊರತು ಪಡಿಸಿ ನಿಲ್ಲುತ್ತದೆ. ಈ ಹುಲುಸು ಕಾಪಾಡುವ ಅಥವಾ ಕೊಡುವ ದೇವಿಯಾಗಿ 'ಮಾರಿ' ಕಂಡು ಬರುತ್ತಾಳೆ.

ಆದರೆ ವರ್ಣ ಸಂಕರದಿಂದಾಗುವ ಭೀಕರತೆಯನ್ನು ಸೂಚಿಸುವ ಆಶಯವಾಗಿ ಇದನ್ನು ಅರ್ಥೈಸುವ ಪ್ರಯತ್ನ ವೂ ಇದೆ.

'' ಚರಗದ ಹಿಂದೆ ಸುಳಿಯಲು ಹೇಳಿ ಬ್ರಾಹ್ಮಣ ಕನ್ಯೆಯನ್ನು ಮದುವೆಯಾದವರು ಹೀಗೆ ಹಿಲ್ಲಾಡಿ ಹೋದರೂ ಅಥವಾ ಹೋಗುತ್ತಾರೆ. ಅಥವಾ ವಧೆಯಾಗುತ್ತಾರೆ. ಎಂಬುದೂ ಮೂಲೋದ್ದೇಶವಾಗಿಯೂ ಸಾಧ್ಯ. ಹಾಗೆಯೇ ಇಂತಹವರನ್ನು ಉಳಿಯ ಬಿಡಬಾರದು. ರಕ್ತ, ಸೊ, ಭೂಮಿಗೆ ತೋಯುಂ ಸಂತೃಪ್ತಿಗೊಳಿಸಬೇಕೆಂದು ಮೇಲ್ವರ್ಗದವರೆ ಇದನ್ನು ಹುಟ್ಟು ಹಾಕಿರಬಹುದಾದ ಸಾಧ್ಯತೆಯಿದೆ. (14 ಕುರುಬಸವರಾಜ).

ಈ ಹಿನ್ನೆಲೆಯನ್ನು ನಾವು ಮಾರಿಹಬ್ಬದ ಪ್ರಸ್ತುತದಲ್ಲಿನ ಐತಿಹ್ಯಗಳ ಹಿನ್ನೆಲೆಯಲ್ಲಿ ಕಂಡು ಕೊಳ್ಳಬಹುದಾದರೂ, '<u>ಚರಗ</u>'ದ ಮೂಲೋದ್ದೇಶ ಹುಲುಸು ಮತ್ತು ಅದಕ್ಕೆ ಪೂರಕವಾದ ಭೂತಾಯಿಗೆ ಬಲಿ ನೀಡುವ ಗತಿಯ ದೈವ ಅಥವಾ ಕ್ಷುದ್ರ ದೇವತೆಗಳಿಗೆ ಶಾಂತಿ ಮಾಡುವ ಆಶಯವನ್ನು ಹೊಂದಿದೆ ಎಂಬುದನ್ನೂ ಐತಿಹ್ಯಗಳಾಚೆಯ ಚರ್ಚೆಯಿಂದ ಅರಿಯಬಹುದಾಗಿದೆ.

'ಊರ ಹುಲುಸು ಕಾಪಾಡುವ' — ರಕ್ಷಿಸಲು ಹೋರಾಡುವ ಈ ಸನ್ನಿವೇಶಗಳು ಬುಡಕಟ್ಟಿನ ಹಟ್ಟಿ ರಕ್ಷಣೆಯ ಅಂದಿನ ಸಹಜತೆಯ ನಾಟಕೀಯತೆ ಇದ್ದಿರುವ ಸಾಧ್ಯತೆಯೂ ಇದೆ. 'ಚರಗ' ಚೆಲ್ಲುವುದು ಕೇವಲ ಮಾರಿ ಹಬ್ಬದಲ್ಲಿ ಮಾತ್ರವಲ್ಲ. ಭೂಮಿಗೆ ಆಹಾರ ಸಮರ್ಪಿಸುವ ಮೂಲಕ ಅವಳನ್ನು ಶಕ್ತಿಗೊಳಿಸುವ ಸಂಪ್ರದಾಯಗಳು ಬೇರೆ ಬೇರೆ ರೂಪದಲ್ಲಿ ಇಂದಿಗೂ ಆಚರಣೆಯಲ್ಲಿವೆ. ದೀಪಾವಳಿ ಹಬ್ಬದ ಮೊದಲ ದಿನ ಸಾಯಂಕಾಲ 'ತಿಪ್ಪೆ ಪೂಜೆ' ಯಲ್ಲಿ ತಿಪ್ಪೆಯಲ್ಲಿ ಗುಣಿ ತೆಗೆದು ಅದನ್ನು ಪೂಜೆ ಮಾಡಿ, ಅದರಲ್ಲಿ, ಎಡೆ ಇಟ್ಟು ಮುಚ್ಚುವದಿದೆ. ಮಾರನೆ ದಿನ ಬೆಳಗ್ಗೆ ಮನೆಯಲ್ಲಿ ಅದಕ್ಕೆಂದೆ ಸುಣ್ಣ, ಉರು ಮಂಜಿನಿಂದ ಪಟ್ಟಿ ಬಳಿದ ಮಡಕೆ ಅಥವಾ ದಬುಗಳಲ್ಲಿ ಮಜ್ಜಿಗೆ, ಹೋಳಿಗೆ ಮೊದಲಾದ ನೈವೇದ್ಯ ಗಳನ್ನೂ ಬಾಳೆಹಣ್ಣು, ಹಾಗೂ ಸ್ವಲ್ಪ ಬೂದಿಯನ್ನು (ಇದನ್ನು ಬಂಟಿ ಎನ್ನುತ್ತಾರೆ) ಬೆರೆಸಿಕೊಂಡು, ತಲೆಗೆ ಪೇಟ ಕಟ್ಟಿ, ಕೈಯಲ್ಲಿ ಕುಡುಗೋಲನ್ನು ಹಾಗೂ ಚರಗದ ಮಗೆಯನ್ನು ಹಿಡಿದುಕೊಂಡು ಹೋಗಿ ಬೆಳೆಯಿರುವ ಹೊಲದ ಸುತ್ತ, 'ಹುಲಗ್ಯ' ಎನ್ನುತ್ತಾ ಚೆಲ್ಲುವ ಸಂಪ್ರದಾಯ ಈ ಕಡೆಯಿದೆ. ಇಲ್ಲೆಲ್ಲ ಭೂಮಿಯನ್ನು ತೃಪ್ತಿ ಪಡಿಸುವ ಆಶಯವೇಯಿದೆ. ಚರಗ ಚೆಲ್ಲ ಬರುತ್ತಾ, ಹೊಲದ ಬದಿಯಲ್ಲಿ ಮೂಡಣಕ್ಕೆ ಹರಿವ ನೀರನ್ನು ತುಂಬಿಕೊಂಡು ಅದರಲ್ಲಿ ಹೊಲದಲ್ಲಿನ ಬೆಳೆಯ ತೆನೆಗಳನ್ನು, ಹೂವುಗಳನ್ನೂ ಹಾಕಿ ಕೊಂಡು ತಂದು ಊರ ಅಗಸೆ ಬಾಗಿಲಿಗೆ ಬಂದು ಬದಿಯಿಂದ ಇನ್ನೊಂದು ಬದಿವರೆಗೆ ಉದ್ದಕ್ಕೆ ಚೆಲ್ಲುವುದೂ ಕೂಡ ಇದೇ ಆಶಯದಲ್ಲಿದೆ ಎನ್ನಬಹುದು.

'ಮಾರಿಹಬ್ಬ' ದ ಸಮಯದಲ್ಲಿ ಮಾಂಸಾಹಾರದ ಪ್ರಾಮುಖ್ಯತೆಯಿರುವುದರಿಂದ ಅಲ್ಲಿ ರಕ್ತ ಮಿಶ್ರಿತ ಅನ್ನವನ್ನು ಹಾಕುತ್ತಿರಬಹುದೆಂದು ಕಾಣುತ್ತದೆ. ಅಲ್ಲದೆ ಈ ರಕ್ತದ ಅನ್ನ ಊರ ಗಡಿಯಲ್ಲಿನ ಕ್ಷುದ್ರ ದೇವತೆಗಳ ಶಾಂತಿಗೆ ಮುಖ್ಯವೆಂದು ಹೀಗೆ ಮಾಡಬಹುದೇನೋ. ಹಳ್ಳಿಗಳಲ್ಲಿ ಕಬ್ಬಳಿ ಮಾಡುವಾಗ, 'ನಿವಾಳಿ' ಪೂಜುವಾಗ ಅನ್ನಕ್ಕೆ ಕುಂಕುಮ ಬೆರೆಸಿ, ನಿವಾಳಿಸಿ ಬಕೆಯಲ್ಲಿಟ್ಟು ಊರಗಡಿಗೆ ಕಳಿಸುವ ಪದ್ಧತಿಯಿದೆ, ಇದು ಮನೆಗೆ ([illegible])

ಕಾಡುತ್ತಿರುವ ಕ್ಷುದ್ರ ದೇವತೆಗಳನ್ನು ಸಂತೃಪ್ತಿಪಡಿಸುವ ಮತ್ತು ಅವರು ಮನೆಗೆ ಪ್ರವೇಶಿಸದಂತೆ ಕಟ್ಟಿ ಮಾಡುವ ಕ್ರಿಯೆಯಾಗಿದೆ. ಅಂದರೆ ಮಾರಿಹಬ್ಬದ ಈ ಬಂಗದ ಕ್ರಿಯೆಯೂ ಈ ಆಶಯದಲ್ಲಿ ಊರನ್ನು ಕಾಪಾಡುವ ಹಿನ್ನೆಲೆಯಲ್ಲಿ ಬಂದದ್ದೆನ್ನಬಹುದು. 'ಮಾರಮ್ಮ'ನನ್ನು ಊರ ರಕ್ಷಣೆಯ ದೇವತೆಯಾಗಿ ನೋಡಿದಾಗ ಅವಳ ಆಗ್ರಹದಿಂದ ಊರ ಗಡಿಯಲ್ಲಿರುವ ಕ್ಷುದ್ರ ದೇವತೆಗಳು ಊರೊಳಕ್ಕೆ ಬರದಂತೆ ನಿರ್ಬಂಧಿಸಲು, ಅವನ್ನು ತೃಪ್ತಿ ಪಡಿಸಲು ರಕ್ತದನ್ನವನ್ನು ಚೆಲ್ಲುವ ಪರಿಪಾಠ ಬೆಳೆದಂತೆ ಕಾಣುತ್ತದೆ. ಬಂಗ ಚೆಲ್ಲುವಾಗ ಬಳಕೆಯಾಗುವ '<u>ಅಕ್ಷ ಬಲಿ</u>' ಗಳೂ ಇದಕ್ಕೇ ಪೂರಕವಾಗಿವೆ. ಅಲ್ಲದೆ ಜನರಿಗೆ ಈ ಬಂಗದ ವಿಷಯ ಕೇಳಿದಾಗ — 'ಶಾಂತಿಮಾಡಲು' ಎಂದೇ ಹೇಳುತ್ತಾರೆ.

'ಕೋಣ'ನ ರಕ್ತವೇ ಬೇಕಾಗಿತ್ತೇ ಎಂಬ ಪ್ರಶ್ನೆ ಇಲ್ಲಿ ಉದ್ಭವವಾಗಬಹುದು. ಈ ಹಿಂದೆ ಪ್ರಸ್ತಾಪಿಸಿರುವಂತೆ 'ಹೆಣ್ಣು' ದೇವತಾರಾಧನೆಯಲ್ಲಿ 'ಗಂಡು' ಬಲಿಯನ್ನು ಫಲವಂತಿಕೆಯ ಮುಖ್ಯ ಅಂಶವಾಗಿ ಪರಿಗಣಿಸಿರುವುದು, ಹೆಣ್ಣು ದೇವತಾರಾಧನೆ ಮಾತ್ರವಲ್ಲದೆ ಯಾವುದೇ ಬಲಿಯಲ್ಲೂ ಗಂಡು ಪ್ರಾಣಿಯಾಗಿ ಬಲಿಯಾಗಿರುವುದು ಮಾತ್ರವಲ್ಲದೆ, 'ಕೋಣ'ನ ಸಹಜ ಬಲ ಇದ್ದಿರಬಹುದಾದ ಸಂಗತಿಗಳು ಇಲ್ಲಿ ಗಮನಾರ್ಹ.

ಹೀಗೆ ಬಂಗದ ಮೂಲೋದ್ದೇಶ ಊರ ಗಡಿ ದೈವಗಳ ಶಾಂತಿಗೆ ಮತ್ತು ಭೂದೇವಿಯ ಫಲವತ್ತತೆಗೆ ಪೂರಕವಾಗಿ ಆಚರಣೆಗೆ ಬಂದಿದ್ದು, ನಂತರದಲ್ಲಿ 'ವರ್ಣಸಂಕರ' ದ ಆಶಯ ಕಲ್ಪಿತವಾದ ಮೇಲೆ ಇಲ್ಲಿನ ಎಲ್ಲಾ ಘಟನಾವಳಿಗಳು ಕಾಕತಾಳೀಯವೆಂಬಂತೆ ಅರ್ಥ ಕಲ್ಪಿಸಿಕೊಳ್ಳತೊಡಗಿವೆಯೆನ್ನಬಹುದು. ಈಗಲೂ 'ಬಂಗಕ್ಕೂ' ಮಾರಿಯ ಬಗೆಗಿನ ಐತಿಹ್ಯಕ್ಕೂ ಯಾವುದೇ ಸಂಬಂಧವನ್ನು ಗ್ರಾಮೀಣರು ಕಲ್ಪಿಸದಂತೆ ತೋರುವುದಿಲ್ಲ.

<u>ಬೇವುಡೆ ಮತ್ತು ಇತರ ಬಲಿಗಳು</u> :— ಬುಧವಾರ ಬೆಳಗಿನ ಜಾವ ಕೋಣನ ಬಲಿಯಾದ ಮೇಲೆ (ಹರಕೆ ಒಪ್ಪಿಸುವುದು).

ಬಂಗ ಚೆಲ್ಲಿ ಬಂದನಂತರ ಘಟಮುಗೆ'ಯ ಬಾಯಿ ತೆಗೆದು ಘಟದ ಹೆಂಡವನ್ನು ಹಂಚಿಕೊಂಡು ಕುಡಿಯಲಾಗುವುದು. ಆಮೇಲೆ ಊರ ಜನರು ತಾವು ಹೇಳಿಕೊಂಡಿದ್ದ ಹರಕೆಯನ್ನು ಒಪ್ಪಿಸಲು ಶುರು ಮಾಡುತ್ತಾರೆ. ಬುಧವಾರ ಇಡೀ ದಿನ ಈ ಹರಕೆಯೊಪ್ಪಿಸುವ ಕೆಲಸ ನಡೆಯುತ್ತದೆ. ಈ ಹರಕೆಗಳು ಮುಖ್ಯವಾಗಿ ಎರಡು ರೀತಿಯಲ್ಲಿ ನಡೆಯುತ್ತವೆ. ಬೇವುಡೆ ಎನ್ನುವುದು ಉಡುವುದು ಮತ್ತು ಪ್ರಾಣಿಗಳನ್ನು ಬಲಿ ಕೊಡುವುದು. ಇದಲ್ಲದೆ ಮಡಲಕ್ಕಿ, ಮೂಗುತಿ, ತಾಳಿ, ಸೀರೆ, ಹೀಗೆಲ್ಲಾ ಹರಕೆ ನೀಡುವ ಸಂಪ್ರದಾಯವಿದೆಯಾದರೂ ಇವು ಅಮ್ಮ ಗದ್ದುಗೆಗೆ ಬರುವ ಮೊದಲೇ ಅಂದರೆ ಮಂಗಳವಾರವೇ ಅರ್ಪಿತವಾಗಿರುತ್ತವೆ. ಬಲಿ ಮತ್ತು ಬೇವುಡೆಯಂತಹವು ಮಾತ್ರ ಬುಧವಾರ ನಡೆಯುವಂತಹವು.

ಸಾಮಾನ್ಯವಾಗಿ ಬೇವುಡೆ ಉಡುವಂತಹವರು ಕಾಟುಗರು, ಇವರು ವರ್ಷದ ಯಾವುದೇ ದಿನದಲ್ಲಿ ತಮಗೋ, ತಮ್ಮ ಮನೆಗೋ ಕಾಡುವ ಕೋಟಲೆಗಳ ನಿವಾರಣೆಗೆ ಆಗಿಯೋ, ಕಾಯಿಲೆಯ ನಿವಾರಣೆಗಾಗಿಯೋ, ಈ ಹರಕೆ ಮಾಡಿಕೊಂಡಿರುತ್ತಾರೆ. ಅಥವಾ ತಮ್ಮ ಮಕ್ಕಳಿಂದ ಮಾಡಿಸಲು ಹೇಳಿಕೊಂಡಿರುತ್ತಾರೆ. ಇಂತಹವರು ಅಮ್ಮನ ಹಬ್ಬದ ದಿನ ಬೇವುಡೆಯ ಹರಕೆಯೊಪ್ಪಿಸುತ್ತಾರೆ. ಈ ಹರಕೆಯನ್ನು ಹೆಂಗಸರು, ಗಂಡಸರು, ಮಕ್ಕಳು ಯಾರಾದರೂ ಒಪ್ಪಿಸಬಹುದು.

ಬೇವುಡೆ ಉಡುವಂತಹವರು ಸಾಮಾನ್ಯವಾಗಿ ಬೇರ್ಪಡಿಸುವವರೆಗೆ ಉಪವಾಸವಿರುತ್ತಾರೆ. ಬೆಳಿಗ್ಗೆ ಪೂಜೆ ಮಾಡಿಕೊಂಡು ಸಂಪೂರ್ಣ ಬೆತ್ತಲೆಯಾಗಿದ್ದುಕೊಂಡು, ಬೇವಿನ ಸೊಪ್ಪಿನ ಟೊಂಗೆಗಳನ್ನು ಹೆಣೆದು ಬಟ್ಟೆಯಂತೆ ಮಾಡಿ ಇಡೀ ದೇಹಕ್ಕೆ ಸುತ್ತಿಕೊಂಡಿರುತ್ತಾರೆ. ಹೀಗೆ ಸಂಪೂರ್ಣ ಬಟ್ಟೆಯಿಲ್ಲದೆ ಕೇವಲ ಬೇವಿನ ಸೊಪ್ಪಿನಿಂದಲೇ ಮೈ ಮುಚ್ಚಿಕೊಂಡು ಬರುವುದು ಹೆಂಗಸರು ಮಾತ್ರ. ಬೆಳಿಗ್ಗೆ ಕೋಣ ಬೀಳುವ ವೇಳೆಗೆ ಮನೆಯಲ್ಲಿ ಇವರಿಗೆ ಬೇವು ತೊಡಿಸಿಕೊಂಡು ನಾಲ್ಕಾರು ಹೆಂಗಸರು ಇವರನ್ನು ಹಿಡಿದುಕೊಂಡು

ಕೊಂಡು ಅಮ್ಮನ ಗುಡಿಗೆ ಬಳಿ ಕರೆತಂದು ಗುಡಿಯನ್ನು ಮೂರು ಸುತ್ತು ಸುತ್ತಿಸಿ, ನಂತರ ಬೇವುಡೆಯನ್ನು ಅಲ್ಲಿ ಒಂದು ಕಡೆ ಬಿಚ್ಚಿಸಿ, ಹೊಸ ಸೀರೆ, ಕುಪ್ಪಸಗಳನ್ನು ತೊಡಿಸುತ್ತಾರೆ. ನಂತರ ಅವರನ್ನು ಕೂಡಿಸಿ ಮಡಿಲಕ್ಕಿ ಹಾಕಿ, ಹಣೆಗೆ ಅರಿಶಿನ ಹಚ್ಚಿ, ಅಕ್ಷತೆ ಹಾಕಿ, ಕಳಶ ಬೆಳಗಿ ಗೌರವಿಸುತ್ತಾರೆ. ಮಾರಿಹಬ್ಬದಲ್ಲಿ ಮಾತ್ರ ಈ ವಿಶೇಷವಿದೆ. ಸಾಮಾನ್ಯವಾಗಿ ಎಲ್ಲ ಹಳ್ಳಿ ದೇವತೆಗಳ ಆರಾಧನೆಯಲ್ಲಿ ಇದು ಕಂಡು ಬರುತ್ತದೆ. ಹೊನ್ನಾಳಿಯ ದುರ್ಗಮ್ಮನ ಹಬ್ಬದಲ್ಲಿ, ಸುರಹೊನ್ನೆ (ಹೊನ್ನಾಳಿ (ತಾ))ಯ ಕರಿಯಮ್ಮನ ಹಬ್ಬದಲ್ಲಿಯೂ ಹೀಗೆ ಮಾಡುತ್ತಾರೆ. (ಚಿತ್ರ : ೧೦). ಗಂಡಸರೂ ಕೂಡ ಈ ಹರಕೆಯಲ್ಲಿ ಪಾಲ್ಗೊಳ್ಳುತ್ತಾರಾದರೂ ಅವರು ಪೂರ್ತಿ ಬೆತ್ತಲಾಗಿ ಬೇವುಡದೆ, ಪಂಚೆಯುಟ್ಟು, ತಲೆಯಮೇಲೆ ಒಂದಿಷ್ಟು ಬೇವಿನ ಸೊಪ್ಪನ್ನು ಇಟ್ಟುಕೊಂಡು ಬಂದು ಅಮ್ಮಗೆ ಹರಕೆಯೊಪ್ಪಿಸುತ್ತಾರೆ. ಇದೇ ರೀತಿ ಗಂಡು ಮಕ್ಕಳಿಗೂ ಮಾಡಲಾಗುತ್ತದೆ. ಇದು ಸಾಮಾನ್ಯವಾಗಿ ಮಾರಿಯ ಹಬ್ಬದಲ್ಲಿ ವಿರಳ. ಆದರೆ ದುರ್ಗಮ್ಮ ಮತ್ತು ಕರಿಯಮ್ಮನ ಹಬ್ಬದಲ್ಲಿ ಹೀಗೂ ಯಥೇಚ್ಛವಾಗಿ ನಡೆಯುತ್ತದೆ. ಬೇವುಡೆ ಅರ್ಪಿಸಿದ ಮೇಲೆ ಹೊಸ ಅಂಗಿ ತೊಟ್ಟು, ಹೊಸ ಟವಲ್ಲನ್ನು ತಲೆಗೆ ಸುತ್ತಿ, ಆರತಿ ಮಾಡಿ ಗೌರವಿಸುತ್ತಾರೆ. (ಚಿತ್ರ: ೧೧) ಇದು ಇತ್ತೀಚೆಗೆ ಮಾರ್ಪಟ್ಟ ರೂಪವಿರಬಹುದು.

ಈ ಬೇವುಡೆ ರೋಗ ನಿವಾರಣೆಯ ಔಷಧೋಪಚಾರದ ಹಿನ್ನೆಲೆಯನ್ನು ಹೊಂದಿದೆ. ಆದರೆ ಅದಕ್ಕೆ ದೈವದ ಅಂಕಿತವನ್ನು ಇಟ್ಟು ಆಚರಣೆಯಲ್ಲಿ ಉಳಿಯುವಂತೆ ಮಾಡಲಾಗಿದೆ ಎನ್ನಬಹುದು. ಜೊತೆಗೆ ಬೇವನ್ನು ಬಿಡುವಂತದ್ದು, ಕಳೆಯುವ ಕ್ರಿಯೆಯನ್ನು ಸೂಚಿಸುತ್ತದೆ. ತಮಗೆ ಬಂದ ರೋಗ ಅಥವಾ ಪಿಡುಗನ್ನು ಅವಳ ಆರಾಧನೆಯ ಮೂಲಕ ಕಳೆದುಕೊಳ್ಳುವ ಅಂಶವನ್ನು ತಿಳಿಸುತ್ತದೆ.

ಇದರೊಂದಿಗೆ ಅನೇಕ ಜನ 'ಬಲಿ ಅರ್ಪಿಸುವ ಹರಕೆ' ಯನ್ನೂ ಮಾಡಿಕೊಂಡಿರುತ್ತಾರೆ. ಆ ಪ್ರಕಾರ ತಮ್ಮ ಶಕ್ತ್ಯಾನುಸಾರ ಕೋಳಿ, ಕುರಿ, ಮೇಕೆಗಳನ್ನು ಬುಧವಾರ ಸಾಯಂಕಾಲದವರೆಗೆ ಅಮ್ಮನ ಗುಡಿಯ ಬಳಿ ತಂದು ಕಡಿಯುತ್ತಾರೆ. ಕಡಿದು ಮನೆಗೊಯ್ದು, ಅಡುಗೆಮಾಡಿ, ಊಟ ಮಾಡುತ್ತಾರೆ. ಹೀಗೆ ಪ್ರಾಣಿಗಳನ್ನು ಕಡಿಯುವ ಮೊದಲು ಅವರು ಅಮ್ಮನನ್ನು ಪೂಜಿಸಿ, ಜೋಗಿಯಿಂದ ತಾವು ಕಡಿಯಲಿರುವ ಪ್ರಾಣಿಗೆ ಭಂಡಾರ ಹಾಕಿಸಿ ಕಡಿಯುತ್ತಾರೆ. ಬುಧವಾರ ದಿನವೇ ಸುಮಾರು ಪ್ರಾಣಿಗಳು ವಧೆಯಾಗುತ್ತವೆ. ಈ ಬಲಿಗಳು ಭಕ್ತರು ಅಮ್ಮನಿಗೆ ತಮ್ಮ ಶಕ್ತ್ಯಾನುಸಾರ ಅರ್ಪಿಸುವಂತೇ ಆಗಿವೆ. ಕೋಳಿಯ ಬಲಿಯಲ್ಲಿ ಒಂದು ವಿಶೇಷ ರೀತಿಯ ಬಲಿಯೂ ನಡೆಯುತ್ತದೆ. '<u>ಹಾರಗೋಳಿ</u>' ಎಂಬುದಾಗಿ ಒಂದು ಕೋಳಿಯನ್ನು ಮೇಲೆ ಹಾರಿಸಿ ಅದು ನೆಲಕ್ಕೆ ಬೀಳುವ ಮೊದಲೇ ಅಂತರದಲ್ಲಿ ಕಡಿಯುತ್ತಾರೆ. ಒಟ್ಟಿನಲ್ಲಿ ಆ ಇಡೀ ದಿನ ಮಾರಿಯ ಗುಡಿಗೆ '<u>ವಧೆಯೂ</u>' ಸಾವಾಗಿದ್ದು ಅತೀವ ಭೀಕರತೆಯನ್ನು ಪಡೆದುಕೊಂಡಿರುತ್ತದೆ. ಪ್ರಾಣಿಗಳ ಅರಚುವ ಆರ್ತತೆ ದೇವಿಗೆ ಅದೆಷ್ಟು ಪ್ರಸನ್ನವುಂಟೋ : ಅಂತೂ ಬುಧವಾರ ದಿನ ಸಂಪೂರ್ಣವಾಗಿ ಬಲಿಗೆ ಮೀಸಲಾದ ದಿನ.

ಇಲ್ಲಿ ಬಲಿಯಾಗುವ ಪ್ರಾಣಿಗಳೆಲ್ಲ ವೈದಿಕರ ದೃಷ್ಟಿಯಲ್ಲಿ ಶ್ರೇಷ್ಠ ಅಥವಾ ಪೂಜ್ಯವಲ್ಲದವು ಎಂಬುದು ಮುಖ್ಯ. ಅಲ್ಲದೆ ಇವು ಅವರಿಂದ ಹೊರತಾದ ಜನಾಂಗಗಳಿಂದ ಸಾಕಲ್ಪಡುತ್ತದ್ದು, ಶೂದ್ರಪೋಷಿಸಿ ಕೊಂಡಿದ್ದ ಪ್ರಾಣಿಗಳು ಎಂಬುದು ಕೂಡ 'ಮಾರಿ'ಯ ಆಚರಣೆಯನ್ನು ವೈದಿಕ ಆಶಯದಿಂದ ದೂರ ಇಟ್ಟು ನೋಡಲು ಪೂರಕವಾಗುತ್ತದೆ.

<u>ಗಾವು ಸಿಗಿಯುವುದು</u> : ಮಾರಿ ಹಬ್ಬದ ವಿಶೇಷ ಆಚರಣೆಗಳಲ್ಲಿ ಇದೂ ಒಂದು. ಗುರುವಾರ ಬೆಳಗ್ಗೆ ಅಥವಾ ಮಧ್ಯಾಹ್ನ ಈ ಬಲಿ ನಡೆಯುತ್ತದೆ. ಈ ಬಲಿ ಮಾಡುವವ '<u>ಚಾಟಿಯವ</u>' ಎಂಬುವ ವ್ಯಕ್ತಿ. ಮಾರಿಹಬ್ಬದಲ್ಲಿ ಮುಖ್ಯವಾಗುವ ಮತ್ತು ವಿಶೇಷವಾಗಿ ಪರಿಗಣಿಸುವ ಆಸಾದಿಯಂತೆ ಈತ ಕೂಡ. ಈತ ಉತ್ತರ ಕರ್ನಾಟಕ ಅಥವಾ ಬೀದರ ಪ್ರದೇಶದ ಸುತ್ತಮುತ್ತ '<u>ದುರುಗಮುರುಗಿ</u>' ಯ ಜನಾಂಗದವನಾಗಿರುತ್ತಾನೆ. ಎನ್ನಲಾಗಿದೆ. ಆದರೆ ಹೊನ್ನಾಳಿಯಲ್ಲಿ ಕುರುಬರ ಪೈಕಿಯ ಒಂದು ನಿರ್ದಿಷ್ಟ ಮನೆಯವರು ಈ ಕೆಲಸ ಮಾಡುತ್ತಾರೆ.

'ಗಾವವು' ಬಲಿಯಲ್ಲಿ ಕೆಲವು ವಿಧಗಳಿವೆ. ಅವುಗಳೆಂದರೆ: ಮುಚ್ಚುಗಾವು, ಬಯಲುಗಾವು, ಗುದ್ದುಗಾವು, ಎಂಬು. ಮುಚ್ಚುಗಾವು ಎಂದರೆ ಆ ವ್ಯಕ್ತಿ ಕುರಿಮರಿಯನ್ನು ಕಂಬಳಿಯನ್ನು ಮೈಮೇಲೆ ಹಾಕಿಕೊಂಡು ಅದರೊಳಗೇ ಕುರಿಮರಿಯನ್ನು ಬಾಯಲ್ಲಿ ಕಚ್ಚಿ ಕಚ್ಚಿ ಸಾಯಿಸುವುದು.

'ಬಯಲುಗಾವು' ನಲ್ಲಿ ಹುಡುಕಿ ತಂದ ಕುರಿಮರಿಯನ್ನು ಎಲ್ಲರೆದುರೇ ಅಮ್ಮನ ಗದ್ದಿಗೆಯ ಎದುರು ಬಾಯಲ್ಲಿ ಕಚ್ಚಿ ಸಾಯಿಸುವುದು. ಕೆಲವು ಕಡೆ ಕುರಿಯನ್ನು ಹುಡುಕಿ ತಂದು ಅಮ್ಮನ ಗದ್ದಿಗೆಯ ಬಳಿ ನೆಲದ ಮೇಲಿಟ್ಟು, ಅದರ ಕಾಲುಗಳನ್ನು ತನ್ನ ಕಾಲಿನಿಂದ ಮೆಟ್ಟಿ ಹಿಡಿದು, ಅದರ ಬಾಯಿಯ ಮೇಲ್ಭಾಗವನ್ನು ತನ್ನ ಬಾಯಲ್ಲಿ ಕಚ್ಚಿ ಒಂದೇ ಏಟಿಗೆ ರಭಸವಾಗಿ ಮೇಲಕ್ಕೆ ಬಗೆದೆಳೆದು ಎಸೆವ ಪದ್ಧತಿಯಿದೆ. (ಬೀದರ ಕಡೆ). ಆದರೆ ಹೊನ್ನಾಳಿ ಪ್ರದೇಶ ಮತ್ತು ಬೀರಗೊಂಡನಹಳ್ಳಿಗಳಲ್ಲಿ ಈ ಪದ್ಧತಿಯಿಲ್ಲ. ಇಲ್ಲಿ ಹುಡುಕಿ ತಂದ ಕುರಿ ಮರಿಯನ್ನು ಅಮ್ಮನೆದುರು ಬಾಯಲ್ಲಿ ಕಚ್ಚಿ ಸಾಯಿಸುತ್ತಾರೆ.

'ಗುದ್ದುಗಾವು' ನಲ್ಲಿ ಅಮ್ಮನ ಗದ್ದಿಗೆಯ ಎದುರು ಒಂದು ಎರಡು ಅಡಿ ಅಗಲ ಎರಡಡಿ ಉದ್ದ ಗುಂಡಿಯನ್ನು ತೆಗೆದು ಅದನ್ನು ಪೂಜಲಾಗುತ್ತದೆ. ನಂತರ ಹುಡುಕಿ ತಂದ ಕುರಿಮರಿಯನ್ನು ಚಾಟಿಯವ ಗುಂಡಿಯಲ್ಲಿ ಹಾಕಿ ಅದು ಜೀವಂತವಿರುವಾಗಲೇ ಅದರ ಮೇಲೆ ತುಳಿದಾಡುತ್ತಾನೆ. ಕೇಕೇ ಹಾಕುತ್ತ ಭೀಕರವಾಗಿ ಹಿಂಸಿಸುತ್ತಾನೆ. ಕೈಯಲ್ಲಿ ಅಥವಾ ಬಾಯಲ್ಲಿ ಕುರಿಯನ್ನು ಮುಟ್ಟುವುದಿಲ್ಲ. ಅರಚಿ ಅರಚಿ ಸತ್ತ ಕುರಿಯನ್ನು ಗುಂಡಿಯಲ್ಲಿ ಹಾಗೇ ಬಿಟ್ಟು ಮಣ್ಣು ಮುಚ್ಚುತ್ತಾರೆ. ಹೊನ್ನಾಳಿ ಮತ್ತು ಬೀರಗೊಂಡನಹಳ್ಳಿಯಲ್ಲಿ ಈ ಪದ್ಧತಿಯಿಲ್ಲ.

ಇಲ್ಲಿ ಗುರುವಾರ ಬೆಳಿಗ್ಗೆ ಆಗ ತಾನೇ ಹುಟ್ಟಿದ ಅಥವಾ ಒಂದೆರಡು ದಿನವಾದ ಚಿಕ್ಕ ಕುರಿಮರಿಯನ್ನು ಹುಡುಕಿ ಊರಗೌಡ ಮೊದಲಾದ ಮುಖಂಡರು ಅದನ್ನು ಎಲ್ಲಿಯಾದರೂ, ಅಂದರೆ ಯಾರದೋ ಮನೆ ಅಥವಾ ಗುಡಿಸಲಲ್ಲಿ ಮುಚ್ಚಿಟ್ಟು ಬುತ್ತಾರೆ. ನಂತರ ಎಲ್ಲಿಯಾದರೂ, ಅಂದರೆ ಯಾರದೋ ಮನೆ ಅಥವಾ ಗುಡಿಸಲಲ್ಲಿ ಬಚ್ಚಿಟ್ಟು ಬರುತ್ತಾರೆ. ನಂತರ ಚಾಟಿಯವ ತಾನು ಸ್ನಾನ ಪೂಜೆ ಅಮ್ಮನ ಗದ್ದಿಗೆ ಬಳಿ ಬಂದು ಪೂಜಿಸಿ, ಅಮ್ಮನ ಭಂಡಾರವನ್ನು ಧರಿಸಿದ ಮೇಲೆ ತನ್ನ ಕೈಲಿರುವ ಚಾಟಿಯಿಂದ ಮೈಗೊಮ್ಮೆ ಬಾರಿಸಿಕೊಳ್ಳುತ್ತಾನೆ. ಈ ವೇಳೆಗೆ ಅವನ ಮೈಮೇಲೆ ಬಂದಿದ್ದಾಳೆಂದು ಹಳ್ಳಿಗರು ಭಾವಿಸುತ್ತಾರೆ. ನಂತರ ಆತ ಮತ್ತೆ ಮತ್ತೆ ಚಾಟಿಯನ್ನು ಗಾಳಿಯಲ್ಲಿ ಬೀಸುತ್ತ, ಮೈಗೆ ಹೊಡೆದುಕೊಳ್ಳುತ್ತ, ಅಬ್ಬರಿಸುತ್ತ, ಊರಲ್ಲಿ ಸುತ್ತಿ, ಕೊನೆಗೆ ಬಚ್ಚಿಟ್ಟ ಮರಿಯನ್ನು ಹುಡುಕಿ ತರುತ್ತಾನೆ. ಹೀಗೆ ಮರಿಯನ್ನು ಹುಡುಕಿ ತಂದು ಅದನ್ನು ಎತ್ತಿ ಹಿಡಿದು ಕೇಕೆ ಹಾಕುತ್ತಾ ಅಮ್ಮನ ಗದ್ದಿಗೆಯ ಬಳಿ ಬರುತ್ತಾನೆ. ಅಲ್ಲಿಗೆ ಬಂದು ಅಮ್ಮನ ಎದುರಲ್ಲಿ ಅದನ್ನು ಈ ಹಿಂದೆ ಹೇಳಿರುವಂತೆ ಕಚ್ಚಿ ಸಾಯಿಸುತ್ತಾರೆ. ಹೊನ್ನಾಳಿಯಲ್ಲಿ ಮುಚ್ಚುಗಾವು ಪದ್ಧತಿಯಿದ್ದರೆ, ಬೀರಗೊಂಡನಹಳ್ಳಿ ಯಲ್ಲಿ ಕುರಿಮರಿಯ ಬಾಯನ್ನು ಕಚ್ಚಿಕಿತ್ತು ನಂತರ ಅದರ ನಾಲಗೆ ಕುತ್ತಿಗೆಯನ್ನು ಕಚ್ಚಿ ಸಾಯಿಸುತ್ತಾನೆ. ಹೀಗೆ ಸಾಯಿಸಿದ ಕುರಿಮರಿಯನ್ನು ಎಂಟೂ ಊರುಗಳಲ್ಲೂ ಅಮ್ಮನ ಗದ್ದಿಗೆಯೆದುರು ಹುಗಿಯುತ್ತಾನೆ. '<u>ಚಾಟಿಯವ</u>'ನೆಂದು ಕರೆಸಿಕೊಳ್ಳುವ ಈತ ಬುರ್ರ, ಬುರ್ರ, ಮಾರಿಯ ಆರಾಧಕನೇ ಇರುವಂತಿದ್ದು, ಅಲ್ಲಿನಂತೆಯೇ ಈ ಚಾಟಿ ಹಿಡಿದಿರುತ್ತಾನಲ್ಲದೆ ಮತ್ತೆ ಮೈಗೆ ಬಾರಿಸಿಕೊಳ್ಳುತ್ತಾನೆ. ಅಲ್ಲದೆ ಬುರ್ರಬುರ್ರ ಮಾರಿಯವರು ಬಹುತೇಕ 'ದುರುಗ ಮುರುಗಿ' ಯವರೇ ಆಗಿದ್ದು 'ಚಾಟಿ' ಯವನೂ ಕೂಡ ಅವರೇ ಆಗಿರುವುದು ಕಂಡು ಬರುತ್ತದೆ. ಆದರೆ ಹೊನ್ನಾಳಿ ಕಡೆಯವರು ಸಿಗದಿರುವ ಕಾರಣದಿಂದ ಬಹುಶಃ ತಮ್ಮಲ್ಲಿಯವರನ್ನೇ ಆ ಕೆಲಸಕ್ಕೆ ನೇಮಿಸಿರುವಂತಿದೆ. ಬೀರಗೊಂಡನಹಳ್ಳಿಯಲ್ಲಿ ಈ ಕೆಲಸವನ್ನು ತಳವಾರ ಪೈಕಿಯವರು ಮಾಡುತ್ತಾರೆಂದು ಹೇಳುತ್ತಾರೆ. (ವ್ಯಕ್ತಿ : 2).

'ದುರುಗ ಮುರುಗಿ' ಯವರ ಆರಾಧ್ಯ ದೇವಿಯಾದ ಮಾರಮ್ಮನ ಪ್ರಭಾವ ಇಲ್ಲಿರುವುದು ಕಾಣುತ್ತದೆ. ಮಾಯಿಹಬ್ಬದಲ್ಲಿ ಘಟೆಯ ಆಶಯದ ಭಿನ್ನ ಸಂಸ್ಕೃತಿ; ಚಾಟಿ ಯವನು ಆರಾಧಿಸುವ ಭಿನ್ನ ಸಂಸ್ಕೃತಿ ಹೀಗೆ ಒಟ್ಟಾರೆ ಇಲ್ಲಿ ವಿಭಿನ್ನವಾದ ಸಂಸ್ಕೃತಿಗಳ ಸಂಗಮವಿದೆ. ವಿಭಿನ್ನವಾದ ಸಂಸ್ಕೃತಿಗಳ ಸಂಗಮದಂತೆ, ವಿಭಿನ್ನ ಆಶಯಗಳೂ ಸೇರಿಕೊಂಡಿರುವಂತೆ ತೋರುತ್ತದೆ. ಒಂದು ಸ್ತ್ರೀ ದೇವತಾರಾಧನೆ

ಯನ್ನು ಆರಾಧಿಸುತ್ತ, ಅಲ್ಲಿ ಬೆರೆತ ಎಲ್ಲಾ ಭಿನ್ನ ಜನ ಸಂಸ್ಕೃತಿಗಳೂ ತಮ್ಮ ತಮ್ಮ ಆಚರಣೆ, ಆಶಯಗಳನ್ನು ಅದಕ್ಕೆ ಆರೋಪಿಸುತ್ತಾ ಬಂದ ವಿಚಾರವನ್ನು ಇಲ್ಲಿ ಅರಿಯಬಹುದೆಂದು ಕಾಣುತ್ತದೆ. ನಂತರದಲ್ಲಿ—ಈ ಪ್ರತೀ [illegible]ಯನ್ನೂ ಮಾನ ಆಶಯಕ್ಕೆ ಬದ್ಧವಾಗಿ ಹೊಸದು ಕಟ್ಟುವ ಕೆಲಸ ನಡೆದಿದೆಯೆನ್ನಬಹುದು. ಗಾವಮರಿಯ ಬಲಿಯ ಬಗ್ಗೆ ಗ್ರಾಮೀಣರು ಹೇಳುವುದು ಭಿನ್ನವಾಗಿದೆ. ಕೆಲವರು ಇದು ಅಮ್ಮನ ಶಾಂತಿಗಾಗಿ ಎಂದರೆ ಕೆಲವರು ಮಾರಮ್ಮ ತನ್ನ ಶೂದ್ರ ಗಂಡನನ್ನು ಬಲಿ ತೆಗೆದುಕೊಳ್ಳಲು ಪ್ರತಿಜ್ಞೆ ಮಾಡುವಾಗ ಗಂಡ ಕೋಣನಲ್ಲಿ ಅವಿತಿರುತ್ತಾನೆ. ಹಾಗಾಗಿ ಕೋಣವನ್ನು ಬಲಿ ಪಡೆಯುತ್ತಾಳೆ. ಅದರಂತೆ ಅವನಿಗೆ ಹುಟ್ಟಿದ ಮಗ ಮರಿಯಲ್ಲಿ ಅವಿತುಕೊಳ್ಳುತ್ತಾನೆ. ಆಗ ಅವಳು ನಿನಗೆ ಹುಟ್ಟಿದ ಮಗನನ್ನೂ '<u>ಗಾವ ಮರಿ</u>'ಯಾಗಿಸಿ ಬಲಿ ತೆಗೆದುಕೊಳ್ಳುತ್ತೇನೆ ಎಂದು ಪ್ರತಿಜ್ಞೆ ಮಾಡುತ್ತಾಳೆ.

ಒಟ್ಟಾರೆ ಗಾವ ಮರಿ ಎಂಬುದು ಕೂಡ ಆದಿಮ ಸ್ಥಿತಿಯ ಬೇಟೆಯ ಬಲಿಯ ಒಂದು ಅವಶೇಷವೆಂದೇ ಹೇಳಬಹುದು ಎಂದು ಕಾಣುತ್ತದೆ. ನಂತರದಲ್ಲಿ ಅದು ಕೂಡ ಈ ಐತಿಹ್ಯದಲ್ಲಿ ತನ್ನ ಪಾತ್ರವನ್ನು ಮಾರ್ಪಡಿಸಿಕೊಂಡು ನಡೆದುಕೊಂಡು ಬಂದಿದೆ. ಮಾರಿ ಹಬ್ಬದಲ್ಲಿ ಜಾತಿ ವಿಶೇಷತೆ ಮತ್ತು ಮಹತ್ವವನ್ನು ಪಡೆಯುವ ಆಸಾದಿ. ಹಾಡಿಯವರು ಭಿನ್ನ ಸಾಂಸ್ಕೃತಿಕ ಲೋಕದ ಪ್ರತಿನಿಧಿಗಳೇನೋ ಎಂದು ಕಾಣುತ್ತದೆ. ಆದರೆ [illegible] ಇತ್ತೀಚಿನ ದಿನಗಳಲ್ಲಿ ಕೆಲವು ಕಡೆ ಅಂತಹ ನಿರ್ದಿಷ್ಟ ಮಹತ್ವವನ್ನು ಪಡೆದಂತೆ ಕಾಣುವುದಿಲ್ಲ. ಇದಕ್ಕೆ ಕಾರಣ ಅವರ ದೊರೆಯುವಿಕೆಯು ವಿರಳ ಮತ್ತು ಎಲ್ಲಾ ಕಡೆ ಅವರ ಸಂಬಂಧದ ಕೊರತೆ ಎನ್ನಬಹುದು.

<u>ಹಬ್ಬದ ಮುಕ್ತಾಯದ ವಿವರ:—</u>

ಶುಕ್ರವಾರ ಮಧ್ಯಾಹ್ನ ಗುಡಿಯಿಂದ ಅಮ್ಮ ರಥದಲ್ಲಿ ಕೂತು ಮೆರವಣಿಗೆ ಹೊರಡುತ್ತದೆ. ಹೀಗೆ ಮೆರವಣಿಗೆ ಹೊರಡುವ ಮುನ್ನ ಅಮ್ಮನಿಗೆ ಅನೇಕ ಆಚರಣೆಗಳು ಜರುಗುತ್ತವೆ. ಶುಕ್ರವಾರ ಮಧ್ಯಾಹ್ನದ ನಂತರ ಅಮ್ಮನನ್ನು ಕಳುಹಿಸುವ ಏರ್ಪಾಡುಗಳು ನಡೆಯುತ್ತವೆ. ಅಮ್ಮನಿಗಾಗಿ ವಿಶೇಷವಾದ ರಥ ತಯಾರಾಗುತ್ತದೆ. ಆಗ ಊರ ಗೌಡನ ಮನೆಯಿಂದ ಅಮ್ಮನಿಗೆ 'ಹುಳಿಬುತ್ತಿ' ಬರುತ್ತದೆ. ಈ ಬುತ್ತಿಯನ್ನು ಅಮ್ಮನಿಗೆ ಎಡೆ ಮಾಡಲಾಗುತ್ತದೆ. ಹಾಗೆ ಅದನ್ನು ಅಮ್ಮನಿಗೆ ಒಪ್ಪಿಸಿದಂತೆ ಈ ಬುತ್ತಿಯನ್ನು ಆವೇಳೆ ಮಾದಿಗರು ಒಯ್ಯುತ್ತಾರೆ. ಗೌಡರ ಮನೆಯವರು ಈ ಹುಳಿ ಬುತ್ತಿಯ ಜೊತೆ '<u>ಅಕ್ಕಿಪಡಿ</u>' ಯನ್ನೂ ತಂದಿರುತ್ತಾರೆ. ಈ ಅಕ್ಕಿಪಡಿ ನಂತರ 'ಕೋಣನ ತಲೆ' ಹೊತ್ತೊಯ್ಯುವಾಗ ಬಳಸಲ್ಪಡುತ್ತದೆ. ಹೀಗೆ ಅಮ್ಮನ ಪೂಜೆಯಾದ ಮೇಲೆ ಅಮ್ಮ ಹೊರಡುವ ಸಮಯಕ್ಕೆ ಹುಲುಸಿನ ಕಾಳನ್ನು ಹಂಚುತ್ತಾರೆ. ಈ ಹುಲುಸಿನ ಕಾಳು ಹಂಚುವಾಗ ಮೊದಲು ಗೌಡ ಆವೇಳೆ ಬುದ್ಧಿವಂತರ ನಂತರ ದೇವಸ್ಥಾನದ ಮುಖ್ಯಸ್ಥ ಹಾಗೂ ಊರ ಇತರ ರೈತರಿಗೆ ಇದನ್ನು ಆಸಾದಿ ಹಂಚುತ್ತಾನೆ. ಹೀಗೆ ಹಂಚಲ್ಪಟ್ಟ ಕಾಳನ್ನು ಮುಂದೆ ಬಿತ್ತನೆಯಲ್ಲಿ ಬೆರೆಸಿ ಬಿತ್ತುವುದರಿಂದ ಬೆಳೆ ಹುಲುಸಾಗುತ್ತದೆ ಎಂಬ ನಂಬಿಕೆಯಿದೆ. ಇದಾದ ಮೇಲೆ ಅಮ್ಮ ಗುಡಿಯಿಂದ ರಥಕ್ಕೇರುತ್ತಾಳೆ. ಅದೇ [illegible] ವೇಳೆಗೆ ಆಸಾದಿ ಇದುವರೆಗೆ ಸೊಪ್ಪಿನ ಗುಡಿಸಲಿನಲ್ಲಿದ್ದ ಕೋಣನ ತಲೆಯನ್ನು ತಲೆ ಮೇಲೆ ಹೊರುತ್ತಾನೆ. ಕೋಣನ ತಲೆ ಮೇಲೆ ದೀಪವನ್ನು ಇಡಲಾಗುತ್ತದೆ. ನಂತರ ಅದನ್ನು ಗೌಡನ ಮನೆಯಿಂದ ತಂದ 'ಅಕ್ಕಿಪಡಿ' ಯಲ್ಲಿಟ್ಟು ಆಸಾದಿ ತಲೆಯ ಮೇಲೆ ಹೊರುತ್ತಾನೆ. 'ಅಕ್ಕಿಪಡಿ' ಎಂದರೆ; ಒಂದು ಮರದಲ್ಲಿ ಅಕ್ಕಿ, ಬೇಳೆ ಮೊದಲಾದ ಧಾನ್ಯಗಳನ್ನು ಇಟ್ಟಿರುತ್ತಾರೆ. ನಂತರ ಅಮ್ಮನ ರಥ ಹೊರಡುತ್ತದೆ. ಮುಂದೆ ಕೋಣನ ತಲೆ ಹೊತ್ತ ಆಸಾದಿ, ಹಿಂದೆ ಅಮ್ಮನ ರಥ ಹೊರಡುತ್ತದೆ. ಹೀಗೆ ಹೊರಟ ಮೆರವಣಿಗೆ ಊರಲ್ಲಿ ಸುತ್ತಿ ಸಾಯಂಕಾಲದ ವೇಳೆಗೆ ವನದ ಕಡೆ ತೆರಳುತ್ತದೆ. ಇಲ್ಲಿ ಆಸಾದಿ ಪ್ರಮುಖನಾಗುತ್ತಾನೆ. ಕೆಲವು ಕಡೆ ಆಸಾದಿ ವಿಶಿಷ್ಟ ಉಡುಗೆ – ತೊಡುಗೆ ಹೊಂದಿರುತ್ತಾನೆ. ಆತ ಶಿರವನ್ನು ಕೊಲ್ಲುವ ಚಿಹ್ನೆಯನ್ನು ಸೊಂಟಕ್ಕೆ ಕಟ್ಟಿಕೊಂಡಿರುತ್ತಾನೆ. ಆದರೆ ಹೊನ್ನಾಳಿ ಪ್ರದೇಶದಲ್ಲಿ ಇಂತಹ ವಿಶೇಷ ತೊಡುಗೆಗಳೇನೂ ಇರುವುದಿಲ್ಲ.

<u>ಅಮ್ಮ ಮೋಚುವುದು</u> :-

ಮೋಚುವುದು ಎಂದರೆ ವೈಧವ್ಯದ ಹೊಂದುವುದು ಎಂಬರ್ಥವಿದೆ. ಗಂಡನನ್ನು ಬಲ ತೆಗೆದುಕೊಂಡ ನಂತರ, ಹೆಂಡತಿ ವಿಧವೆಯಾಗುವ ಕ್ರಿಯೆಯ ಅನುಕರಣ ಇದಾಗಿರುತ್ತದೆ.

ರಥದಲ್ಲಿ ಕುಳಿತ ಅಮ್ಮನನ್ನು ಊರಲ್ಲಿ ಮೆರವಣಿಗೆ ಮಾಡಲಾಗುತ್ತದೆ. ಈ ಸಂದರ್ಭದಲ್ಲಿ ಆಸಾದಿ ಕೋಣನ ತಲೆಯನ್ನು ತಲೆ ಮೇಲೆ ಹೊತ್ತು ಮುಂದೆ ನಡೆಯುತ್ತಾನೆ. ಈಗ 'ಕೋಣನ ಬಲಿ'ಗೆ ಕಾನೂನಿನ ನಿರ್ಬಂಧವಿರುವುದರಿಂದ ಕೋಣನ ತಲೆಯನ್ನು ಹೀಗೆ ಹೊತ್ತು ಬರುವುದಿಲ್ಲ. ಅದನ್ನು ಮೊದಲೇ ಒಯ್ದು ವನದಲ್ಲಿ ಊರ ಗಡಿಭಾಗದಲ್ಲಿ ಒಂದು ಕಡೆ ಹುಗಿದು ಇರುತ್ತಾರೆ. ಮೆರವಣಿಗೆಯ ಸಂದರ್ಭದಲ್ಲಿ 'ಅಕ್ಕಿಪಡಿ'ಯ ಮರದಲ್ಲಿ ಕೋಣನ ತಲೆಯ ಮೇಲೆ ಇಟ್ಟಿದ್ದ ದೀಪವನ್ನು ಇಟ್ಟುಕೊಂಡು ಅದನ್ನು ತಲೆಯ ಮೇಲೆ ಹೊತ್ತು ತರಲಾಗುತ್ತದೆ. ಹೀಗೆ ಹೊರಟ ಮೆರವಣಿಗೆ ಕೊನೆಯಲ್ಲಿ 'ವನ' ಎಂದು ಕರೆಯುವ ಜಾಗದ ಕಡೆ ಇದು ಊರ ಹೊರವಲಯದಲ್ಲಿರುತ್ತದೆ. ಅಂದರೆ ಗಡಿಯಾಚೆ ಗಡಿಯ ಹತ್ತಿರಕ್ಕೆ ಮೆರವಣಿಗೆ ಹೋದೊಡನೆ ಜೊತೆಗೆ ಬಂದಿದ್ದ ಹೆಂಗಸರು, ಮಕ್ಕಳನ್ನು ಕೆಲವೊಮ್ಮೆ ಇತರರನ್ನು ವಾಪಸ್ಸು ಕಳುಹಿಸಲಾಗುತ್ತದೆ. ಇದಕ್ಕೆ ಕಾರಣ ಮೋಚುವ ಕ್ರಿಯೆಯನ್ನು ನೋಡಬಾರದು ಎಂಬ ನಂಬಿಕೆ.

ನಂತರ ಊರ ಗೌಡ, ಬುದ್ಧಿವಂತರ ತಳವಾರ, ಚಾಟಿಯುವ ಮತ್ತು ಆಸಾದಿಗಳು ಮೋಚಿಸುವ ಕ್ರಿಯೆಯಲ್ಲಿ ತೊಡಗುತ್ತಾರೆ. ಅಮ್ಮನ ಬಳೆ, ಬಾಸಿಂಗಗಳನ್ನು ತೆಗೆದು ಒಂದು ಮರ ಅಥವಾ ಬುಟ್ಟಿಯಲ್ಲಿ ಹಾಕಿಕೊಂಡು, ಅವರ ಹಣೆಯ ಕುಂಕುಮದ ಭಾಗವನ್ನು ಅಳಿಸಿ, ತೆಗೆದುಕೊಂಡು ಹೋಗುತ್ತಾರೆ. ಕೋಣನ ತಲೆಯನ್ನು ಹೊತ್ತು ಒಯ್ದವ ಪಕ್ಕದಲ್ಲಿ ಆಸಾದಿ ತಲೆಯನ್ನೂ ಈ ಕಳೆದ ಮುತ್ತೈದೆಯ ಕುರುಹುಗಳ ಜೊತೆ (ಬಳೆ, ತಾಳಿ, ಬಾಸಿಂಗ) ಹೊತ್ತುಕೊಂಡು ಹೋಗಿ ಊರ ಗಡಿಯಾಚೆ ಒಂದು ಜಾಗದಲ್ಲಿ ಗುಣಿ ತೆಗೆದು ಅದರಲ್ಲಿ ಮೊದಲು ಕೋಣನ ತಲೆಯನ್ನು ಇಟ್ಟು ಪೂಜಿಸಿ ಅದರೊಡನೆ ಅಮ್ಮನ ಬಳೆ, ತಾಳಿ, ಬಾಸಿಂಗಗಳನ್ನಿಟ್ಟು ಒಬ್ಬೊಬ್ಬರು ಮೊದಲು ಮೂರು – ಮೂರು ಹಿಡಿ ಮಣ್ಣನ್ನು ಹಾಕುತ್ತಾರೆ. ನಂತರ ಉಳಿದ ಮಣ್ಣನ್ನು ಮುಚ್ಚಿ, ಅದರ ಮೇಲೆ ಊದ ಬತ್ತಿ, ದೀಪ ಹಚ್ಚಿಟ್ಟು ಪೂಜೆ ಮಾಡಿ ಹಿಂದಿರುಗುತ್ತಾರೆ. ಅಲ್ಲಿ ಆ ಕೆಲಸ ಮುಗಿವ ವೇಳೆಗೆ ಸರಿಯಾಗಿ ಇಲ್ಲಿ ಅಮ್ಮನ ಮುಖ ಮುಚ್ಚಲಾಗುತ್ತದೆ. (ಹೊನ್ನಾಳಿ)

ಬೀರಂಗೊಂಡನಹಳ್ಳಿಯಲ್ಲಿ ಅಮ್ಮನನ್ನು ಬಿಚ್ಚಿ ಬುಟ್ಟಿಗಳಲ್ಲಿ ತುಂಬಿ ಹೊತ್ತು ತರಲಾಗುತ್ತದೆ. ಹೀಗೆ ಮುಖ ಮುಚ್ಚಿಕೊಂಡು ಅಥವಾ ಅವಯವಗಳನ್ನು ಬಿಚ್ಚಿ ತಂದ ಅಮ್ಮನನ್ನು ಅಮ್ಮನ ಗುಡಿಗೆ ತಂದು ಮುಖವನ್ನು ಕೆಳಗೆ ಮಾಡಿ ಇಡಲಾಗುತ್ತದೆ. ಇಲ್ಲಿಗೆ ಅಮ್ಮನು ಮೋಚಿದಂತೆ ಅಂದರೆ ವಿಧವೆಯಾದಂತೆ.

ಈ ಎಲ್ಲಾ ಆಚರಣೆಗಳು ಗಂಡನ ಸಾವು ಮತ್ತು ಹೆಂಡತಿಯ ವೈಧವ್ಯದ ಆಚರಣೆಗಳನ್ನೇ ಅನುಕರಿಸುತ್ತವೆ. ಕೋಣನ ತಲೆ ಹೂಳುವುದು ಅದರೊಂದಿಗೆ ಅಮ್ಮನ ಬಳೆ, ತಾಳಿ, ಬಾಸಿಂಗವನ್ನಿಟ್ಟು ಮೂರು – ಮೂರು ಹಿಡಿ ಮಣ್ಣು ಹಾಕುವುದು, ಶವ ಸಂಸ್ಕಾರದ ವಿಧಿ ವಿಧಾನಗಳನ್ನೇ ಹೋಲುತ್ತದೆಯಲ್ಲದೆ ಗಂಡ ಸತ್ತಾಗ ಹೆಂಡತಿಯನ್ನು ಮೋಚಿಸುವ ಕ್ರಿಯೆಯೇ ತಾಳಿ, ಬಳೆ, ಹುಗಿವಲ್ಲದೆ.

ಈ ಮೋಚುವ ಕ್ರಿಯೆ 'ವರ್ಣಸಂಕರ'ದ ಆಶಯಕ್ಕೆ ಪೂರಕವಾಗಿಯೇ ಇದೆ. ಆದರೆ 'ಮಾರಮ್ಮ'ನನ್ನು ಈ ವೈಧವ್ಯದ ಆಚರಣೆಯಿಂದ ಮುಕ್ತಗೊಳಿಸಿಯೂ ನೋಡಬಹುದು. ಅಮ್ಮನ ಜೊತೆ ಕೋಣನ ತಲೆ ಹೊತ್ತೊಯ್ಯುವುದು ಮತ್ತು ಅಮ್ಮನ ಬಳೆ, ತಾಳಿ ತೆಗೆದು ಹುಗಿಸುವುದನ್ನು ಬಿಟ್ಟರೆ ಆದರೆ ಉಳಿದ ಆಚರಣೆಗಳು ಅಮ್ಮನನ್ನು ಕಳಿಸುವ ಆಚರಣೆಗಳಾಗಿ ಮಾತ್ರ ಉಳಿಯುತ್ತದೆ. ಅಮ್ಮನನ್ನು ಕಳಿಸುವ ಪದ್ಧತಿ ಯಾವಾಗಲೂ ಇದ್ದು ಇದು ಕೇಲಿನ ರೂಪದಲ್ಲಿ ಆಚರಣೆಯಲ್ಲಿರುವುದನ್ನು ನಾವು 'ಮಾರಿ ವಿಧಗಳು' ಕುರಿತ ವಿವರಗಳಲ್ಲಿ ನೋಡಿದ್ದೇವೆ. ಮಾರಿಹಬ್ಬದ ಸಂದರ್ಭದ 'ಘಟಿ'ಯೂ ಕೂಡ ಈ ರೀತಿಯ ಕೇಲಿನ ಪೂಜೆಯೇ ಆಗಿದೆ. ಒಟ್ಟಿನಲ್ಲಿ 'ಕೇಲು' ಪೂಜುವ ಪದ್ಧತಿ ಅಮ್ಮನ ಆರಾಧನೆಯ ಪೂರ್ವ ಪದ್ಧತಿಯಾಗಿದೆ. ಇದರೊಟ್ಟಿಗೆ 'ಮಾರಿ' ಆರಾಧನೆಯೂ ಕೂಡಿ ನಂತರದಲ್ಲಿ ಪೂಜೆಗೊಳ್ಳುತ್ತಿರಬೇಕು ಎನ್ನಬಹುದು.

·5 ಕೋಣನ ಬಿಡುವುದು ಮತ್ತು ಮಾರಿ ಮುತ್ತೈದೆಯಾಗುವುದು :

ಹಬ್ಬದ ಕೊನೆಯಲ್ಲಿ ಮೇಚಿದ ಮಾರಿಯ ವಿಗ್ರಹವನ್ನು ಬಟ್ಟೆಯಿಂದ ಮುಚ್ಚಿಕೊಂಡು ಅಥವಾ ಅಂಗಾಂಗಗಳನ್ನು ಬಿಚ್ಚಿಕೊಂಡು ತಂದು ದೇವಸ್ಥಾನದಲ್ಲಿ ಮುಖವನ್ನು ಕೆಳಗೆ ಮಾಡಿ ಇಡುತ್ತಾರೆ. ನಂತರ ಬರುವ ಮಂಗಳವಾ ಒಂದು ಹೊಸ ಕೋಣವನ್ನು ಕೊಂಡು ತಂದು ಅಥವಾ ಭಕ್ತರಿಂದ ಪಡೆದು ತಂದು, ಮಾರಿಯ ವಿಗ್ರಹವನ್ನು ಮತ್ತೆ ಜೋಡಿಸಿ ಪ್ರತಿಷ್ಠಾಪಿಸಲಾಗುತ್ತದೆ. ಹೀಗೆ ಪ್ರತಿಷ್ಠಾಪಿಸಿ ಅವಳಿಗೆ ಮತ್ತೆ ಬಳೆ, ಕುಂಕುಮ,ವಿಟ್ಟು ಪೂಜಿಸಿ ಕೋಣನನ್ನು ಅಲಂಕರಿಸಿ ಪೂಜಿಸುತ್ತಾರೆ. ನಂತರ ಗಾಡನ ಮನೆಯಿಂದ ಮಡಿಲಕ್ಕಿ ಹಾಗೂ ತಾಳಿ ತಂದು ಪೂಜಿಸಿ ಅಮ್ಮನಿಗೆ ಕಟ್ಟಲಾಗುತ್ತದೆ. ಆಮೇಲೆ ಕೋಣನನ್ನು ಊರಲ್ಲಿ ಮೆರವಣಿಗೆ ಮಾಡಲಾಗುತ್ತದೆ. ಇಲ್ಲಿಗೆ 'ಮಾರಿ' ಮತ್ತೆ ಮದುವೆಯಾದಂತೆಯೂ, ಕೋಣ ಅವಳ ಗಂಡನಾಗಿಯೂ ನಿಯಮಿಸಲ್ಪಡಲಾಗುತ್ತದೆ. ಈ ಕೋಣವನ್ನು ಪಟ್ಟದ ಕೋಣವೆಂದು ಕರೆದು ಅದನ್ನು ಊರಲ್ಲಿ ಬಿಡಲಾಗುತ್ತದೆ. ಅದು ಎಲ್ಲಿ, ಯಾವಾಗ, ಹೇಗಾದರೂ ಇರಬಹುದು ಅದನ್ನು ಬೆದರಿಸಿ ಓಡಿಸಬಹುದೇ ಹೊರತು—ಯಾವ ರೀತಿಯಲ್ಲೂ ದಂಡಿಸುವಂತಿಲ್ಲ.

ಈ ಕ್ರಿಯೆ—ಆದಿಮಸ್ಥಿತಿಯ ಮರುವಿವಾಹ, ವಿಧವಾವಿವಾಹದ ಸಾಧ್ಯತೆಗಳ ಸೂಚಿಯುತ್ತದೆ ಹಾಗೂ 'ತಾಯಿ'ಯನ್ನು ವಿಧವೆಯಾಗಿ ಕಾಣಲಾರದ ಮತ್ತು 'ತಾಯಿದೇವತೆ'ಯನ್ನು ನಿತ್ಯ ಮುತ್ತೈದೆಯಾಗಿ ಕಾಣುವ ಆಸಕ್ತಿ ವ್ಯಕ್ತವಾಗುವಂತಿದೆ. ಅಲ್ಲದೆ ಗಂಡನ ಅಂಟಿಲ್ಲದೇ, ವೈಧವ್ಯದ ಆಚರಣೆಯಿಂದ ಮುಕ್ತವಾಗಿದ್ದು, ಯಾವತ್ತೂ ಅವಳನ್ನು ಹಾಗೇ ಉಳಿಸಿಕೊಳ್ಳುವ ಆಸಕ್ತಿಯಿದ್ದು, ಅದೇ ಪೂರ್ವದ ಸ್ಥಿತಿಯೂ ಆಗಿದ್ದು, ನಂತರದ ವರ್ಣ—ಸಂಕರದ ಆಶಯ ಹಬ್ಬದ ಆಚರಣೆಯಲ್ಲಿ ಹೇರಲ್ಪಟ್ಟು—ಹಬ್ಬ ಮುಗಿದ ತಕ್ಷಣ— ತನ್ನ ತಾತ್ಕಾಲಿಕ ಹೇರಿಕೆಯಿಂದ ಮುಕ್ತವಾದ 'ತಾಯಿ' ಹಳೆಯ ಆಶಯದೊಂದಿಗೆ ಪೂಜೆಗೊಳ್ಳುತ್ತಾಳೆನ್ನಬಹುದೇನೊ. ಹೀಗೆ ಒಟ್ಟಾರೆ ಮಾರಿಯ ವರ್ಣ ಸಂಕರದ ಇತ್ತೀಚಿನ ಆರೋಪವಾಗಿದೆಯೇ ಹೊರತು ಅದು ಮೂಲವಲ್ಲ ಎನ್ನಲು ಸಾಕಷ್ಟು ಆಧಾರಗಳು ದೊರೆಯುತ್ತವೆ.

ಅಧ್ಯಾಯ: ೪

1V '' ಮಾರಿ ಹಬ್ಬ'ದ — ತಾತ್ವಿಕ ಚರ್ಚೆ

ಮಾರಿ ಸಂಕರದ ಹಿನ್ನೆಲೆಯಲ್ಲಿ.

ರಕ್ಷಣೆ ಮತ್ತು ಫಲವಂತಿಕೆಯ ಹಿನ್ನೆಲೆಯಲ್ಲಿ

ಮಾರಿಹಬ್ಬದ ತಾತ್ವಿಕ ಚರ್ಚೆ :— ಇದುವರೆಗಿನ ಹಬ್ಬದ ಆಚರಣಾತ್ಮಕ ವಿವರಗಳ ಮತ್ತು ಐತಿಹ್ಯಗಳ ಮೂಲಕ ಮಾರಿ ಆಚರಣೆಯ ಹಿನ್ನೆಲೆಯನ್ನು ಕುರಿತು ಚರ್ಚಿಸಬಹುದು. ಮಾರಿಹಬ್ಬದ ಐತಿಹ್ಯಗಳ ಕಟ್ಟಿಕೊಡುವ ಒಂದು ತಾತ್ವಿಕತೆ — ವರ್ಣ ಪದ್ಧತಿಯ ಆಶಯವನ್ನು ಹೆಚ್ಚು ಪ್ರತಿಬಿಂಬಿಸಿದರೂ,—ಅದರಾಚೆಗಿನ ಚರ್ಚೆಗೆ ಮಾರಿಹಬ್ಬದ ಅನೇಕ ಆಚರಣೆಗಳು ನಮ್ಮನ್ನು ಪ್ರೇರೇಪಿಸುತ್ತದೆ. ಹಾಗಾಗಿ 'ಮಾರಿಹಬ್ಬ' ವನ್ನು ಈ ಎರಡೂ ದೃಷ್ಟಿಕೋನಗಳಿಂದಲೂ ಚರ್ಚಿಸಬೇಕಾದ ಮತ್ತು ಅವುಗಳಲ್ಲಿನ ಮೂಲ ಆಶಯಗಳನ್ನು ಹೆಕ್ಕುವ ಕೆಲಸ ತೀರಾ ಪ್ರಮುಖವಾಗುತ್ತದೆ. 'ಏಕೆಂದರೆ ಇಲ್ಲಿಯವರೆಗೆ 'ಮಾರಿಹಬ್ಬ' ದ ಐತಿಹ್ಯಾದಿಗಳ ಆಶಯಾನುಸಾರವಾದ ಚರ್ಚೆಗಳೇ ಹೆಚ್ಚು ಹೆಚ್ಚು ನಡೆದು, ಒಂದು ರೀತಿಯಲ್ಲಿ ಅಪ್ರತ್ಯಕ್ಷವಾಗಿ 'ವರ್ಣಪ್ರಜ್ಞೆ' ಹುಟ್ಟು ಹಾಕಿರುವ ಹಿತಾಸಕ್ತಿಗಳನ್ನೇ ಪ್ರಮುಖವಾಗಿಸಿಬಿಟ್ಟಂತೆ ಕಾಣುತ್ತದೆ. ಹೀಗಾದಾಗ ಪ್ರಭಾವಿತ ಸಂಸ್ಕೃತಿಯೊಂದರ ಆಶಯಗಳ ವೈಭವೀಕರಣ ಅಥವಾ ಪ್ರಾಮುಖ್ಯತೆಯ ಅಡಿಯಲ್ಲಿ ಪ್ರಭಾವಕ್ಕೊಳಗಾದ ಸಂಸ್ಕೃತಿಯೊಂದರ ಮೂಲ ಹಾಗೂ ಭಿನ್ನವಾದ ನೆಲೆಗಳನ್ನು ಶಾಶ್ವತವಾಗಿ ಮುಚ್ಚಿ ಬಿಡುವ ಅಪಾಯವಿದೆ ಎನಿಸುತ್ತದೆ. ಮಾರಿಹಬ್ಬದ ಬಗೆಗಿನ ಗ್ರಹಿಕೆಗಳೂ ಕೂಡ ಇಂತಹ ಸ್ಥಿತಿಯನ್ನು ನಿರ್ಮಾಣ ಮಾಡುತ್ತಿವೆ ಎನಿಸುತ್ತದೆ. ಆದ್ದರಿಂದ ಇಲ್ಲಿ ಇಂತಹ ಚಾಲ್ತಿಯಲ್ಲಿರುವ ವರ್ಣ—ಸಂಕರದ ಕಥೆಯಾಗಿ 'ಮಾರಿಹಬ್ಬ' ಎಷ್ಟರಮಟ್ಟಿಗೆ ಹುಟ್ಟು ಮತ್ತು ಅಸ್ತಿತ್ವವನ್ನು ಉಳಿಸಿಕೊಳ್ಳುತ್ತದೆ ಎಂಬ ವಿಷಯ ಮೂಲಕ ಅದಕ್ಕೆ ಭಿನ್ನವಾದ ನೆಲೆಗಳನ್ನು ಗುರುತಿಸಿ—ಆಲೋಚಿಸುವುದು ಮುಖ್ಯವಾಗಿದೆ. 'ವರ್ಣಸಂಕರ' ಹಿನ್ನೆಲೆಯಲ್ಲಿನ ಸದ್ಯ ಚೌಕಟ್ಟೊಂದನ್ನು ಒಡೆಯುವ ಆ ಮೂಲಕ ಕಾವಲು ತಾಯಿ ಅಥವಾ ರೋಗದ ದೇವಿ ಅಥವಾ ಫಲವಂತಿಕೆಯ ಆರಾಧನೆಯಾಗಿ ಗ್ರಹಿಸಬಹುದಾದ ಸಾಧ್ಯತೆಗಳನ್ನು ಗುರುತಿಸಬಹುದಾಗಿದೆ. ಕೆಲವೊಮ್ಮೆ ಈ 'ಹಬ್ಬ' ಇಂದಿನ ಸ್ಥಿತಿಯಲ್ಲಿ ಅನೇಕ ಆಶಯಗಳನ್ನೊಳಗೊಂಡ ಸಂಕೀರ್ಣ ಆಚರಣೆಯಾಗಿ ಗೋಚರಿಸಬಹುದು. ಆವಾಗೆಲ್ಲ ಆ ಹಬ್ಬಕ್ಕೆ ನೇಯ್ಕೊಂಡಿರುವ ಅಂದರೆ ಮೂಲ ಆರಾಧನೆಯ ಸಂದರ್ಭದಲ್ಲಿ 'ಏಕೀಕರಣಗೊಂಡಿರುವ ಅಥವಾ ಅದರ ಸುತ್ತ ತಮ್ಮ ತಮ್ಮ ಭಿನ್ನ ಆರಾಧನೆಗಳನ್ನು ಒಪ್ಪಿಸಿಕೊಂಡಿರುವ ಹಲವು ಸಂಸ್ಕೃತಿಗಳ ಭಿನ್ನತೆಯ ಹರವು ವ್ಯಕ್ತವಾಗುತ್ತದೆ.

ವರ್ಣಸಂಕರದ ಹಿನ್ನೆಲೆಯಲ್ಲಿ : ವೈದಿಕ ಧರ್ಮದ ಸಮಾಜ ರಚನೆಯ ತಳಹದಿ ವರ್ಣ—ವ್ಯವಸ್ಥೆಯಲ್ಲಿದೆ. ಭಾರತದ ಅನೇಕ ಭಿನ್ನ ತುಂಡು—ತುಂಡು ಸಂಸ್ಕೃತಿ, ಜನರನ್ನು ತನ್ನ ಬಲಿಷ್ಠ ತೆಕ್ಕೆಯಲ್ಲಿ ಬಾಚಿಕೊಳ್ಳುತ್ತಾ ಸಾಗಿದ ಈ ವೈದಿಕ ಸಂಸ್ಕೃತಿ ಅಂತರ್ಗತ ಆಕ್ರಮಣಕಾರಿ ನಿಲುವಿನ ದ್ಯೋತಕವೇ ಆಗಿದೆ. ಈ ಸಂಸ್ಕೃತಿ, ಎದುರಿನದನ್ನು ನಿರ್ನಾಮ ಮಾಡುತ್ತ, ಹಾಗೆ ಮಾಡಲಾಗದ್ದನ್ನು ತನ್ನ ಒಡಲಿಗೆ ಇಳಿಬಿಟ್ಟು, ಹೊಸ ರೂಪದಲ್ಲಿ ಅಥವಾ ಹೊಸ ಮುಖವಾಡದಲ್ಲಿ ಇಟ್ಟು—ಅದನ್ನು ತನ್ನ ಒಂದು ಭಾಗವಾಗಿಸಿಕೊಳ್ಳುವ ತಂತ್ರದ ವಿಷಯದಲ್ಲಿ ಬಹಳಷ್ಟು ಸಾಧಿಸಿದೆ ಎಂಬುದನ್ನು ಅವತಾರ ಕಲ್ಪನೆಗಳೇ ಸಾರುತ್ತವೆ. ಹೀಗೆ ತನ್ನ ಪ್ರಭಾವಕ್ಕೆ ಒಳಪಡಿಸಿಕೊಳ್ಳುತ್ತಾ ಸಾಗಿದ ಈ ಸಂಸ್ಕೃತಿಯ ಆಶಯಗಳಿಗೆ ಅನೇಕ ಬುಡಕಟ್ಟುಗಳು, ಜನಾಂಗಗಳು ತಮ್ಮ ತಮ್ಮ ರೀತಿ ನೀತಿ, ಆರಾಧನೆಗಳನ್ನು ಒಪ್ಪಿಸಿಕೊಳ್ಳುತ್ತಾ ಹೋದವು. ಹೀಗೆ ಒಪ್ಪಿಸಿಕೊಳ್ಳುವಾಗ ತಮ್ಮ ತಮ್ಮ ಕ್ರಮಗಳನ್ನು ಆದಷ್ಟು ಉಳಿಸಿಕೊಂಡವು. ಇಂತಹ ಅನೇಕ ಸಣ್ಣಪುಟ್ಟ ಬುಡಕಟ್ಟು, ಜನಾಂಗಗಳು ವೈದಿಕರ 'ಏಕ ಆಶಯಕ್ಕೆ ತಮ್ಮ ತಮ್ಮ ಆರಾಧನಾಕ್ರಮಗಳನ್ನು ಒಪ್ಪಿಸಿಕೊಂಡರೂ, ಆ ಆರಾಧನೆಗಳ ಆಶಯಗಳು ಮಾತ್ರ ಅವರಲ್ಲಿ ಉಳಿದುಕೊಂಡವು ಈ ವಿಷಯವನ್ನು ಇಂತಹ ಹಲವು ಭಿನ್ನ ಆಚರಣೆಗಳು ಮೇಳೈಸಿರುವ—ಪ್ರಧಾನ ಆರಾಧನೆಗಳ ಸೂಕ್ಷ್ಮ ಅಧ್ಯಯನದಿಂದ ತಿಳಿಯಬಹುದು. ಇಲ್ಲಿ ಆ ಸಣ್ಣಪುಟ್ಟ ಆರಾಧನೆಗಳು ಎಷ್ಟೇ ಸಹಜವಾಗಿ—ಪ್ರಧಾನ ಆಶಯದೊಂದಿಗೆ ಬೆರೆತರೂ ಒಟ್ಟಾರೆ ಪ್ರಧಾನ ಆರಾಧನೆಯ ಕ್ರಿಯಾದಿಗಳಿಂದ ಒಂದಷ್ಟು ಅಂತರವನ್ನು ಉಳಿಸಿಕೊಂಡೇ ಸಾಗಿರುತ್ತವೆ.

ಮಾರಿಹಬ್ಬದ ಆಚರಣಾದಿ ಕ್ರಿಯಾ ವಿಶೇಷಗಳೂ ಈ ಅಂಶವನ್ನು ಸ್ಪಷ್ಟಪಡಿಸುತ್ತವೆ. ವೈದಿಕ ಧರ್ಮವು ತನ್ನ ಪ್ರಮುಖ ಅಂಶವಾದ 'ವರ್ಣವ್ಯವಸ್ಥೆ'ಯ ಆಶಯವನ್ನು ಬಿತ್ತಲು ಮತ್ತು ಅದನ್ನು ಬೆಳೆಸಲು ತನ್ನ ತೆಕ್ಕೆಗೆ ಅನೇಕ ದೈವ, ಸಂಸ್ಕೃತಿಗಳನ್ನು ಚಾಚಿಕೊಂಡಿದೆ. ಆ ಮೂಲಕ ತನ್ನನ್ನು ವಿಸ್ತರಿಸಿಕೊಳ್ಳುತ್ತಾ ಸಾಗಿದೆ. ಈ ವರ್ಣ ವ್ಯವಸ್ಥೆಯ ಆಶಯ ಬಿತ್ತಲು ಗ್ರಾಮೀಣರ, ಬುಡಕಟ್ಟುಗಳ ದೈವಗಳನ್ನು ಬಳಸಿಕೊಂಡಿದೆ. ಅವರ ದೈವದ ಮೂಲಕವೇ ಅವರನ್ನು ತಮ್ಮ ಮೌಲ್ಯಗಳಿಗೆ ಬದ್ಧವಾಗಿಸುವ ತಂತ್ರವ್ಯೂಹವನ್ನು ರಚಿಸಿದೆ. ಹೀಗೆ ರೋಗದ, ಗ್ರಾಮ ರಕ್ಷಣೆಯ, ವೈದ್ಯದ, ಫಲವಂತಿಕೆಯ ಆಶಯದೊಂದಿಗೆ ಆರಾಧಿಸಲ್ಪಡುತ್ತಿದ್ದ ಮಾರಿ, ಅಮ್ಮ ಎನ್ನಲಾಗುವ ಈ ಹೆಣ್ಣು ಅಥವಾ ತಾಯಿ ದೇವತೆಗಳು ತಮ್ಮ ವಿವಿಧ ಜನಾಂಗದಲ್ಲಿನ ವಿಭಿನ್ನ ಆಶಯಗಳನ್ನು ತ್ಯಜಿಸಿ, ವರ್ಣಸಂಕರದ ಮೌಲ್ಯ ಬಿತ್ತಲು ತೊಡಗಿವೆಯೆನ್ನಬಹುದು.

ಮಾರಿಹಬ್ಬದ ಐತಿಹ್ಯ ಮತ್ತು ಆಚರಣೆಗಳು (ವಿಗ್ರಹದ ಸುತ್ತ ಜರುಗುವ ಆಚರಣೆಗಳು) ವರ್ಣ ವಿದ್ವೇಷದ ಕಥೆಯನ್ನು ಸಾರುತ್ತವೆ. ಇಲ್ಲಿ 'ಕೋಣ' ಮತ್ತು 'ಮಾರಿ' ಗಂಡ ಹೆಂಡತಿಯರು, ಮಾರಿ ಬ್ರಾಹ್ಮಣನ ಕನ್ಯೆ, ಕೋಣ ಮಾರಿಯ ಶೂದ್ರ ಗಂಡ. 'ಮಾರಿ'ಗೆ ಮೋಸಮಾಡಿ ಅಂದರೆ ಸುಳ್ಳು ಹೇಳಿ ಮದುವೆಯಾಗಿ ನಂತರ ವಿಷಯ ತಿಳಿದಾಗ ಮಾರಿಯಿಂದ ಹತನಾಗುತ್ತಾನೆ. ಈ ಪ್ರಬಂಧದಲ್ಲಿ ಸಂಗ್ರಹಿಸಿರುವ ನಾಲ್ಕೂ ಐತಿಹ್ಯಗಳು ಈ ವಿಷಯವನ್ನೇ ತಿಳಿಸುತ್ತವೆ. ಒಂದರಲ್ಲಿ ಮಾರಿ ಗೌಡನ ಮಗಳು, ಉಳಿದವಲ್ಲಿ ಅವಳು ಬ್ರಾಹ್ಮಣರ ಮಗಳು — ಆದರೆ ನಾಲ್ಕರಲ್ಲೂ ಕೋಣನ ರೂಪದಲ್ಲಿರುವ ಮಾರಿಯ ಗಂಡ ಮಾತ್ರ ಶೂದ್ರ. ಈ ಎಲ್ಲಾ ಐತಿಹ್ಯಗಳಲ್ಲಿ ಅಡಕವಾಗಿರುವ ಸಮಾನ ಕಥೆ ಎಂದರೆ ಮೇಲ್ಜಾತಿಯ ಹೆಣ್ಣು ಕೆಳ ಜಾತಿಯ ಗಂಡುಗಳ ನಡುವಿನ ಸಂಬಂಧ ಮತ್ತು ಅದರಿಂದಾದ ಅಪರಾಧದ ಪ್ರಜ್ಞೆ. ಅದಕ್ಕೆ 'ಬಲಿ' ಯ ಶಿಕ್ಷೆ. ಇಲ್ಲೆಲ್ಲಾ ಮಾದಿಗರ ಅಥವಾ ಶೂದ್ರ ತರುಣ ಮಾರಿಗೆ ಸುಳ್ಳು ಹೇಳಿ ಮೋಸದಿಂದ ಮದುವೆಯಾಗುತ್ತಾನೆ. ಹೀಗೆ ಶೂದ್ರ ಗಂಡು ಮತ್ತು ಸ್ಪೃಶ್ಯ ಹೆಣ್ಣುಗಳ ಸಂಬಂಧ ಯಾವತ್ತೂ ಸಾಧ್ಯವಾಗಬಾರದೆಂಬ ಪ್ರಜ್ಞೆ ಸೃಷ್ಟಿಸಿರುವ ಶಿಕ್ಷಾ ಸ್ವರೂಪ. ಇಡೀ ಹಬ್ಬದ ಆಚರಣೆ ಐತಿಹ್ಯಗಳನ್ನು ರೂಪಿಸಿರುವುದು. ಈ ರೀತಿಯ ಸಂಬಂಧ ಇಷ್ಟೊಂದು ತೀವ್ರವಾಗಿ ಪ್ರತಿಬಂಧಿಸಿರುವ ಕಾರಣವನ್ನು ಚರ್ಚಿಸುವಾಗ 'ವರ್ಣ ಸಂಕರ' ಎಂದರೇನು ಎಂಬುದನ್ನು ತಿಳಿಯುವುದು ಅಗತ್ಯವಾಗುತ್ತದೆ.

'ವರ್ಣ ವ್ಯವಸ್ಥೆ' ಎಂದರೆ ವೈದಿಕ ಧರ್ಮದ ಪ್ರಕಾರ ನಾಲ್ಕು ಜಾತಿಗಳು ಮತ್ತು ನಾಲ್ಕಕ್ಕೂ ಹೊರತಾದ ಶೂದ್ರ ವರ್ಗ. ಅವು ಇಂತಿವೆ, ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬ ನಾಲ್ಕು ಜಾತಿಗಳೂ ಪಂಚಮ ಎಂಬ ಅಸ್ಪೃಶ್ಯ ವರ್ಗ — ಈ ಯಾವುದೇ ಜಾತಿಗಳಲ್ಲಿ—ಎರಡರ ನಡುವೆ ವಿವಾಹ ನಡೆದರೆ ಅದನ್ನು 'ವರ್ಣ ಸಂಕರ' ಎಂದು ಕರೆಯಲಾಗಿದ್ದು, ಹೀಗಾಗದಂತೆ ಕಾಪಾಡಿಕೊಳ್ಳಲು ಈ ಸಮಾಜ ಕಟಿಬದ್ಧವಾಗಿರುತ್ತದೆ. ಹೀಗಾದಾಗಲೆಲ್ಲ—ಅದನ್ನು ಅಧರ್ಮ, ಪಾಪ, ನಿಕೃಷ್ಟವೆಂದೆಲ್ಲ ಹೇಳುತ್ತಾ—ಅದನ್ನು ತಡೆಯಲು ಹಿಂಸಾಪಿಪಾಸುವನ್ನೇ ಸೃಷ್ಟಿಸಿಕೊಂಡು ಬಂದಿರುವುದು ತಿಳಿದ ವಿಷಯವೇ.

ಈ ವರ್ಣ ಸಂಕರದಲ್ಲಿ ಪ್ರಧಾನವಾಗಿ ಎರಡು ವಿಧಗಳಿವೆ. 1) ವಿಲೋಮ 2) ಅನುಲೋಮ, ಪದ್ಧತಿಗಳು ವೈದಿಕ ಪುರಾಣಗಳಲ್ಲಿ 'ಅನುಲೋಮ' ವಿವಾಹ ಪದ್ಧತಿಗೆ ಅಷ್ಟಾಗಿ ವಿರೋಧವಿದ್ದಂತೆ ಕಾಣುವುದಿಲ್ಲ. 'ಅನುಲೋಮ ವಿವಾಹ' ಪದ್ಧತಿಯಲ್ಲಿ ಮೇಲ್ವರ್ಗದ ಗಂಡು ಕೆಳವರ್ಗದ ಹೆಣ್ಣನ್ನು ವರಿಸುವುದು. ಆದರೆ ಇದೇನೂ ಸಂಪೂರ್ಣ ವಿರೋಧದಿಂದ ಮುಕ್ತವಾಗಿರಲಿಲ್ಲ. ಸ್ಮೃತಿಕಾರ ಮನುವಿನ ಪ್ರಕಾರ : ''ದ್ವಿಜರೆನಿಸಿಕೊಂಡವರಿಗೆ ಅವರದೇ ವರ್ಣಕ್ಕೆ ಸೇರಿದ ಕನ್ಯೆಯರನ್ನು ವಿವಾಹವಾಗುವುದು ವಿಹಿತ: ಮಾತ್ರವಲ್ಲ ತಮ್ಮ ಆನಂದಕ್ಕಾಗಿ ಅವರು ಕೆಳಗಿನ ವರ್ಣಕ್ಕೆ ಸೇರಿದ ಕನ್ಯೆಯರನ್ನು ವಿವಾಹವಾಗುವುದಾದರೂ ಮಾನ್ಯತೆಯುಂಟು........ ಆದರೆ ಅಂತವರು ಶೂದ್ರ ಪತ್ನಿಯೊಂದಿಗೆ ನೀಡುವ ಹವಿಸ್ಸನ್ನು ಅಥವಾ ಪಿಂಡವನ್ನು ದೇವತೆಗಳು ಹಾಗೂ ಪಿತೃಗಳು ಕೂಡಾ ಸ್ವೀಕರಿಸುವುದಿಲ್ಲ'' ಎಂದು ಹೇಳುತ್ತಾನಲ್ಲದೆ ಅಂತಹ ಶೂದ್ರ ಪತ್ನಿಗೆ ಹುಟ್ಟಿದ ಮಗುವನ್ನು ಪಾರಶವ ಅಥವಾ ಜೀವಂತಶವ ಎಂದು ಕರೆಯಲಾಗಿದ್ದು, ಅಂತಹ ಪುತ್ರನಿಗೆ ತಂದೆಯ ಯಾವುದೇ ಆಸ್ತಿಯಲ್ಲಿ ಹಕ್ಕು ಧಾರಿಕೆಯಿಲ್ಲ ಎಂದಿದ್ದಾನೆ

11(ಪುಟ 99)

ಇಲ್ಲಿ ಯಾವುದೇ ಮೇಲ್ಜಾತಿಯ ಪುರುಷ—ತನ್ನ ಕೆಳಜಾತಿಯ ಯಾವುದೇ ಹೆಣ್ಣನ್ನು ತನ್ನ ಸಂತೋಷಕ್ಕಾಗಿ ವರಿಸಬಹುದಾದ ಅವಕಾಶ ನೀಡಲಾಗಿದೆ. ಈ ಅವಕಾಶ ಕೆಳಜಾತಿಯ ಗಂಡಿಗಿಲ್ಲ.

ಆದರೆ 'ವಿಲೋಮ ವಿವಾಹ'ವನ್ನು ಮಾತ್ರ ಧರ್ಮ ಸೂತ್ರಕಾರರು ಯಾವ ಕಾರಣಕ್ಕೂ ಸಹಿಸುವುದಿಲ್ಲ. ಇದು ಕೆಳ ಜಾತಿಯ ಗಂಡು, ಮೇಲ್ಜಾತಿಯ ಹೆಣ್ಣನ್ನು ವರಿಸುವುದಾಗಿದೆ. ಇದನ್ನು ಸಂಪೂರ್ಣವಾಗಿ ಧರ್ಮನಿಷಿದ್ಧವೆಂದು ಸಾರಲಾಗಿದೆ. ಇದು ಸಹಿಸಲಸದಳವಾದ ಧರ್ಮದ್ರೋಹವೆಂದೇ ವ್ಯಾಖ್ಯಾನಿಸಲಾಗಿದೆ. ಇಂತಹ ವಿವಾಹವನ್ನು ರಕ್ತ ಹರಿಸಿಯಾದರೂ ತಡೆಯುವ ಪ್ರಯತ್ನಗಳು ವೇದಗಳಿಂದಿಡಿದು ಬೆಳವಣಿಗೆಗಳ ಜೊತೆಯಲ್ಲಿ ಹೆಚ್ಚುತೊಡಗಿದಂತೆ ಕಾಣುತ್ತದೆ.

ಬಹುಶಃ ಇಲ್ಲಿ ಅಂದರೆ ಈ ವಿವಾಹ ಪದ್ಧತಿಗಳ ಗಂಡು–ಹೆಣ್ಣಿನ ಸಂಬಂಧಗಳು ಹೇಗೆ ನಿರ್ಣಯವಾಗಿವೆಯೆಂದರೆ ಹೆಣ್ಣನ್ನು ಒಂದು ಗಳಿಸಬಲ್ಲ 'ಆಸ್ತಿ' ಯಾಗಿ ಎನ್ನಬಹುದು. ಹಾಗಾಗಿಯೇ ಹೆಣ್ಣು ಯಾರಿಗೆ ಸೇರಬೇಕು ಎಂಬುದರ ಮೇಲೆ ಈ ವಿಭಾಗ ಮತ್ತು ವ್ಯಾಖ್ಯಾನಗಳು ನಡೆದಿವೆ. ಎಲ್ಲ ಜಾತಿಯವರಿಗಿಂತಲೂ ಶ್ರೇಷ್ಠರೆಂದು ಘಂಟಾಘೋಷವಾಗಿ ಸಾರಿಕೊಂಡ ಬ್ರಾಹ್ಮಣರು, ತಮ್ಮ 'ಹೆಣ್ಣು'ಗಳು ಕೆಳವರ್ಗದವರಿಗೆ ಧಕ್ಕದಂತೆಯೂ; ಆದರೆ ತಮ್ಮ ತೆವಲಿಗೆ ಬೇಕೆಂದಾಗ ಕೆಳವರ್ಗದ ಹೆಣ್ಣುಗಳನ್ನು ಬಳಸಿಕೊಳ್ಳುವ ಅವಕಾಶಗಳನ್ನು ತನ್ನ ಬ್ರಾಹ್ಮಣ ಶಕ್ತಿಯಿಂದ ಸಾಧಿಸಿಕೊಂಡಿರುವ ತಂತ್ರವಡಗಿದೆ. ಇಲ್ಲಿ 'ತೆವಲು' ಎಂದು ಬಳಸಿರುವುದರ ಉದ್ದೇಶವೆಂದರೆ ಈ 'ಹೆಣ್ಣು' ಕೇವಲ ಆ ಗಂಡಿನ ಕಾಮ ತೃಪ್ತಿಯ ಸಾಧನವಾಗುತ್ತಾಳೆಯೇ ಹೊರತು, ಅವನ ಆಸ್ತಿ, ಸ್ಥಾನಗಳಲ್ಲಿ ಪಾಲು ಪಡೆಯಲಾರಳು. ಆದರೆ 'ವಿಲೋಮ' ಪದ್ಧತಿಯಲ್ಲಿ ಕೆಳವರ್ಗದವರು ಮೇಲ್ವರ್ಗದ ಈ ಹೆಣ್ಣು ಎಂಬ ಆಸ್ತಿಯನ್ನು ಕಸಿದುಕೊಳ್ಳುವಂತದ್ದು ನಿರ್ಬಂಧಿಸಲಾಗಿದೆ. ಏಕೆಂದರೆ ಹೀಗಾದಾಗ ಬ್ರಾಹ್ಮಣರ 'ಹೆಣ್ಣು' ಶೂದ್ರರ ವಶವಾಗಬಹುದಾದ ಸಾಧ್ಯತೆಯಿದೆಯಲ್ಲ. ಬ್ರಾಹ್ಮಣರ ಆಸ್ತಿಯನ್ನು ಯಾವತ್ತೂ ಶೂದ್ರರು ಕೆ ಕೊಂಡುಕೊಳ್ಳಲು ಹಿಂಜರಿಯುವುದನ್ನು ನಾವಿಲ್ಲಿ ಗಮನಿಸಬಹುದು. ಇಲ್ಲೆಲ್ಲ ಅದೆಷ್ಟರ ಮಟ್ಟಿಗೆ ಸ್ವಾರ್ಥ ಹಿತಾಸಕ್ತಿ, ಸ್ವಪರ ಚಿಂತನೆ ಒಂದು ವ್ಯವಸ್ಥೆಯನ್ನು ರೂಪಿಸಿ ಜನಕ್ಕೆ ಬಗ್ಗಿಸಿಬಿಟ್ಟಿದೆ ಎಂಬುದನ್ನು ತಿಳಿಯಬಹುದು.

'ಮಾರಿ ಹಬ್ಬ' ದಲ್ಲಿ ಜರುಗಿರುವುದು ಈ 'ವಿಲೋಮ ವಿವಾಹ' 'ತಕ್ಕೆ 'ಮಾರಿ' ಹಬ್ಬದ ವಿವಾಹ ಸಂಬಂಧ' ಇಷ್ಟೊಂದು ಭೀಕರತೆಯನ್ನು ಸೃಷ್ಟಿಸಿತು. ಮತ್ತು ಅಪರಾಧವಾಯಿತು ಎಂಬುದಕ್ಕೆ ಕಾರಣ ಇದೇ ಆಗಿದೆ. ಇಲ್ಲಿ 'ಮಾರಿ' ಎಂಬ ಬ್ರಾಹ್ಮಣ ಹೆಣ್ಣು — ಇನ್ನೊಂದು ಕಡೆಯಿಂದ ಪುರುಷಪ್ರಧಾನವಾದ ವೈದಿಕ ಆಶಯವನ್ನೂ ಈಡೇರಿಸಿದೆ. ಧರ್ಮದ ನಿಲುವನ್ನು ಸಮರ್ಥಿಸಿದೆ. ಮಾರಿಹಬ್ಬದ ಬಲಿಗಳಲ್ಲಿನ ಪ್ರಾಣಿಗಳಲ್ಲಿ—ಬ್ರಾಹ್ಮಣರಿಂದ ಶೂದ್ರವೆಂದು ಗುರುತಿಸಲ್ಪಟ್ಟವೇ ಆಗಿವೆ. 'ಕೋಣ' ಯಾವತ್ತೂ, ದ್ರಾವಿಡರೂ ಸಾಕುವ ಪ್ರಾಣಿಯಾದ್ದರಿಂದ ಶೂದ್ರನೆಂದೂ, ರಕ್ಕಸನೆಂದೂ ಗುರುತಿಸುತ್ತಾ ಬಂದಿದೆ. ಅಂತರ್ಯ ವೈದಿಕ ವರ್ಗ ಮಾರಿ ಮತ್ತು ಕೋಣನ ಬಲಿಯನ್ನು ತನ್ನ ಪುರಾಣ ಪ್ರಕ್ರಿಯೆಯಲ್ಲಿ ಚೆನ್ನಾಗಿಯೇ ಸಂಯೋಜಿಸಿಕೊಂಡಿತು ಎನ್ನಬಹುದು.

ಚರಗ ಚೆಲ್ಲುವುದೂ ಕೂಡ ಮೇಲ್ವರ್ಣದ ಹೆಣ್ಣನ್ನು—ಕೆಳವರ್ಗದ ಗಂಡುಗಳು ವರಿಸಿದ್ದೇ ಆದರೆ ಹೀಗೆ ಚೆಲ್ಲಾಡಿ ಹೋದಾರು ಎಂಬುದನ್ನು ಸಂಕೇತಿಸುವಂತಿದೆ. (ಇದು ಈ ಆಶಯದ ಹಿನ್ನೆಲೆಯಲ್ಲಿ ನೋಡುವಾಗ ಮಾತ್ರ)

ಹಬ್ಬದ ಮದುವೆ ಸಮಾರಂಭದ ಆಚರಣೆಗಳಲ್ಲಿ ಸ್ಪೃಶ್ಯ ಸಮಾಜ ವಹಿಸುವ ಜವಾಬ್ದಾರಿ ನಂತರ ಬರುವ ಹೊಲೆಯ ಶೂದ್ರರ ಪ್ರಾಧಾನ್ಯತೆ—ಅಮ್ಮನ ಮೆರೆಸುವಿಕೆ, ಅಸಾದಿಯ ಬೈಗುಳಗಳು—ಇವೆಲ್ಲ ವರ್ಣಸಂಕರದ ಕಥೆಯನ್ನೇ ಬಿತ್ತುತ್ತವೆ.

ಕೆಲವೊಮ್ಮೆ ಅಸಾದಿಯ ಬೈಗುಳದ ಪದಗಳು ಮತ್ತು ಐತಿಹ್ಯ:1 ಹೇಳುವ ವಿಷಯ ಮಾರಿಯನ್ನು ಒಬ್ಬ ಕಾಮಾತುರದ ಉದ್ಧಟ ಹೆಣ್ಣಾಗಿ ಚಿತ್ರಿಸುತ್ತವೆ. ಬಯ್ಗುಳದ ಪದದಲ್ಲಿನ 'ಅಕ್ಕ್ಯವಳೋ ಮಾರವ್ವಾಂತ ಬದಿ ಬತುಕಿ ಮುಂಡ್ಯಂತೆ.......' ಎಂಬ ಪದ್ಯ ಹಾಗೂ ಐತಿಹ್ಯ:1 ರಲ್ಲಿನ 12 ವರ್ಷ ಬಾಲದ ಹುಡುಗಿಯನ್ನು ಬ್ರಾಹ್ಮಣರು ಕಾಡಿಗೆ ಬಿಡುವುದು. ಅಲ್ಲಿ ತನ್ನ ಯೌವನದ ಸಹಜ ಕಾಮದ ತೀವ್ರಾಸಕ್ತಿಯಿಂದ – ಶೂದ್ರ ಹುಡುಗನನ್ನು ಒಲಿವುದು (ಇಲ್ಲಿ ಹುಡುಗ ಸುಳ್ಳು ಹೇಳುತ್ತಾನೆ ಎಂದಿದೆ, ಆದರೆ ಅದನ್ನು ಸ್ವಲ್ಪ ಬಿಟ್ಟು ನೋಡೋಣ) ಬ್ರಾಹ್ಮಣರ ಒಬ್ಬ ಹುಡುಗಿ ತನ್ನ ಕಾಮ ಬಯಕೆಗಾಗಿ ಇವನನ್ನು ಬೆಂಬತ್ತಿದ ವಿಷಯ ತಿಳಿಸುತ್ತದಲ್ಲದೆ, ಅವಳ ಕಾಮಾತುರದ ತೀಕ್ಷ್ಣತೆಯನ್ನೂ ಹೇಳುತ್ತದೆ. ಆದ್ದರಿಂದ ಬಹುಶಃ ಹೀಗೆ ಕಾಮಾತುರಗೊಂಡ ಆ ಹೆಣ್ಣು ಒಮ್ಮೆ ಈ ಶೂದ್ರನಿಂದ ಸುಖಕಂಡ ಮೇಲೆ – ಮತ್ತೆ ಮತ್ತೆ ಊರಿಗೆ ಬಂದು ಕಾಡಿರಬಹುದಾದ ವಿಷಯವೂ ಊಹಿಸಲರ್ಹವಾಗಿದೆ. ಹಾಗಾಗಿ ಹೀಗೆ ಊರಿಗೆ ಪದೇ ಪದೇ ಬಂದು ಕಾಡುವ ಮಾರಿಯನ್ನು ತೃಪ್ತಿಪಡಿಸುವ ಆಚರಣೆಗಾಗಿ ಕೆಲವು ಶೂದ್ರ ಜನಾಂಗ ಆಚರಿಸುವ ಆಚರಣೆಗಳೂ ಇದ್ದಾವೆ ? ತಿಳಿಯ ಬೇಕಿದೆ.

ವೈದಿಕರು 'ವರ್ಣ–ಸಂಕರ' ಮಾಡಿದ್ದಕ್ಕಾಗಿ ತಮ್ಮವನಿಂದಲೇ ಶೂದ್ರ ಪತಿಯನ್ನು ಕಡಿಸುವ ತಂತ್ರ ಹೂಡಿದ್ದು. ಅದಕ್ಕೆ ಕಾರಣವಾದ 'ಮಾರಿ' ಯನ್ನು ಶೂದ್ರರೇ ದೇವತೆಯಾಗಿ ಪೂಜಿಸುವ ಔಚಿತ್ಯ ಪ್ರಶ್ನಾರ್ಹವಾದರೂ – ಸೂಕ್ಷ್ಮವಾಗಿ ಆಲೋಚಿಸಿದರೆ ಸಂಸ್ಕೃತಿ ಸಂಘರ್ಷದ ಸಂದರ್ಭದ ಸಹಜ ಪ್ರವೃತ್ತಿಯೊಂದು ಕಾಣಸಿಗುತ್ತದೆ. ವೈದಿಕ ಸಂಸ್ಕೃತಿ ಯಾವುದನ್ನು ಕಾಪಾಡುವ ಮೂಲಕ ತನ್ನ ಶ್ರೇಷ್ಠತೆಯನ್ನು ಉಳಿಸಿಕೊಳ್ಳಲು ಶತಪ್ರಯತ್ನ ಪಡುತ್ತಿತ್ತೋ ಅದೇ ಹೆಣ್ಣನ್ನು ಭ್ರಷ್ಟಳಾದಳೆಂದು ದಿಕ್ಕರಿಸಿದಾಗ–ಅವಳನ್ನು ತನ್ನ ಆರಾಧನೆಯಲ್ಲಿ ಬಳಸಿಕೊಳ್ಳುವ ಮೂಲಕ ಸ್ಪೃಶ್ಯವೆಂದು ಕರೆದುಕೊಂಡ ಮನಸ್ಸುಗಳಿಗೆ ಮೆಚ್ಚುಕೊಡುವ ಭಿನ್ನವಾದ ಸಂಸ್ಕೃತಿಯೊಂದರ ತಂತ್ರವೂ ಆಗಿರಬಹುದು. ಆದರೆ ವೈದಿಕರು ಈ ಎಲ್ಲಾ ತಮ್ಮನ್ನೇ ಹೀಗಳೆಯುವ ತಂತ್ರಗಳನ್ನು ಕ್ರಮೇಣ ಹತ್ತಿಕ್ಕಿ–ಅವುಗಳನ್ನು ತನ್ನ ಶ್ರೇಷ್ಠತೆಯನ್ನು ಉಳಿಸಿಕೊಳ್ಳಲು ಸಾಧನಗಳಾಗಿಯೇ ಬೆಳೆಸಿರಬಹುದು.

ಸುಮಾರು ಕ್ರಿ.ಶ.. 12 ನೇ ಶತಕದಿಂದೀಚೆಗೆ ಈ 'ಮಾರಿ' ಬಗೆಗಿನ ವರ್ಣಸಂಕರದ ಕಥೆಯನ್ನು ವಚನ ಕ್ರಾಂತಿಯಿಂದ ದೃತಿಗೆಟ್ಟ ವೈದಿಕ ಸಮಾಜ ಅದನ್ನು ಹತ್ತಿಕ್ಕುವ ಕ್ರಮವಾಗ ಗ್ರಾಮ ಸಮಾಜಗಳಿಗೆ ಬೆದರಿಸುವ ಈ ತಂತ್ರವಾಗಿ, ಗ್ರಾಮದೇವತೆಯಿಂದಲೇ ಬಿತ್ತಲು ಪ್ರಯತ್ನ ಪಟ್ಟಿರುವ ಸಾಧ್ಯತೆಯೂ ಇದೆ. ಅಲ್ಲದೆ ಇದರ ಇತ್ತೀಚಿನ ಕಥಾ ಬೆಳವಣಿಗೆ ಹಾಗೂ ಅದಕ್ಕಿಂತ ಹಿಂದಿನಿಂದಲೂ ಆಚರಣೆಯಲ್ಲಿರುವ 'ಅಮ್ಮನ ಪೂಜೆ' ಅದರ ಭಿನ್ನ ಆಶಯವನ್ನು ಸೂಚಿಸುತ್ತದೆ.

ಹಬ್ಬದ 'ಬಲಿ'ಯ ಸಂದರ್ಭದ ಮುಖ್ಯಾಂಶವೆಂದರೆ ಕೋಣ ನನ್ನು ಬಲಿ ಕೊಟ್ಟಾಗ 'ಮಾರಿ ಗಂಡನನ್ನು ಕಳೆದುಕೊಳ್ಳುತ್ತಾನೆ ಎನ್ನಲಾಗುವುದು ತಾನು ಶೂದ್ರ ಗಂಡನನ್ನು ನಿಜ ತಿಳಿದು ಕೊಲ್ಲಲು ಮುನ್ನುಗ್ಗಿದಾಗ ಆತ ಗೌಡನ ಮನೆಯ ಕೋಣನಲ್ಲಿ ಅವಿತುಕೊಂಡನೆಂದೂ, ಅದಕ್ಕಾಗಿ ಕೋಣನ ರೂಪದಲ್ಲಿರುವ ಅವನನ್ನು ಬಲಿ ತೆಗೆದುಕೊಳ್ಳುವೆನೆಂದೂ ಶಪಥ ಮಾಡಿ ಅದರಂತೆ ಹಳ್ಳಿಗರಿಂದ ಗಂಡನನ್ನು ಬಲಿ ತೆಗೆದುಕೊಳ್ಳುತ್ತಾಳೆ. ಈ 'ಕೋಣ' ಮತ್ತು 'ಮಾರಿ' ಯ ಐತಿಹ್ಯ ಹೇಳುವ ಸಂಬಂಧವೇ ಹಬ್ಬದ ಅದೂ 'ಮೂರ್ತಿ' ಗೆ ಸಂಬಂಧಿಸಿದ ಆರಾಧನಾ ಆಚರಣೆಗಳನ್ನು ನಿರೂಪಿಸುತ್ತದೆ. ಮಾರಿಗೆ ಮಡುಕ್ಕಿ, ತಾಳಿ, ಬಾಸಿಂಗ ಕಟ್ಟುವ ಕ್ರಿಯೆಗಳಿರಬಹುದು. ಈ ವೇಳೆಯಲ್ಲಿ ಕೋಣನನ್ನು ಮದುಮಗನ ರೀತಿ ಮೆರೆಸುವುದಿರಬಹುದು ಇವೆಲ್ಲ ಮಾರಿಯ ಮತ್ತು ಕೋಣನ ಮದುವೆಯಾಗಿಯೂ, ನಂತರದ ಅಮ್ಮ ಗುಡಿಗೆ ಹೊರಡುವ ಸನ್ನಿವೇಶ, ನಿಜ ತಿಳಿದ ಅಮ್ಮ ಕೋಣನನ್ನು ಬಲಿಗಾಗಿ ಹುಡುಕಿ ಹೊರಡುವ ಸ್ಥಿತಿಗೂ 'ಬಲಿ' ತಾನು ಪಡೆದ ತನ್ನ ಗಂಡನ ಬಲಿಗೂ ಪ್ರತೀಕಗಳಾದರೆ, ನಂತರದ ಅಮ್ಮನನ್ನು ವನಕ್ಕೆ ಕಳುಹಿಸುವ ಮತ್ತು ಅಲ್ಲಿ ಅಮ್ಮನಿಗೆ ಮಾಡುವ ಮೊರೆಯುವ ಕ್ರಿಯೆ – ಅವಳ ವೈಧವ್ಯ ಪ್ರಾಪ್ತಿಗೂ ಸಂಕೇತವಾಗುತ್ತದೆ.

ಹೀಗೆ ಈ ಇಬ್ಬದಿ ಆಶಯಗಳು ವರ್ಣ–ಅಂತರ ದ ವಿವಾಹ ಮತ್ತು ಅದರ ನಿಷಿದ್ಧದ ಪರವಾದ ನಿಲುವನ್ನು ಸಮರ್ಥಿಸುವಂತೆ ಕಂಡರೂ, ಅದರೊಡನೆಯೇ ಇರುವ ಕೆಲವಾರು ಆಚರಣೆಗಳು ಮತ್ತು ವಿಗ್ರಹಾರಾಧನೆಯ ಸುತ್ತಲಿನ ಆಚರಣೆ ಸಂಪ್ರದಾಯಗಳಿಗೂ ಅಥವಾ ಆಶಯಗಳಿಗೂ ಮತ್ತು ವರಗ, ಛವಿ, ಹುಲುಸು, ಬೇಟೆ ಮೊದಲಾದ ಸಂಪ್ರದಾಯಗಳಿಗೂ ಸಾವಯವ ಸಂಬಂಧವೇರ್ಪಡುವುದಿಲ್ಲ. ಇವೆಲ್ಲ ಯಾವಾವುದೋ ಬೇರೆ ಬೇರೆ ಆಚರಣೆಗಳಂತೆ ಕಾಣುತ್ತವೆ. ಈ ವಿಷಯ ಮಾರಿಯ ಆರಾಧನೆಯ ಬಗೆಗಿನ ಈ ವರ್ಣ–ಸಂಕರದ ಆಶಯವನ್ನು ಒಡೆದುನೋಡಲು ಸಹಕಾರಿಯಾಗುತ್ತವೆ. ಹಾಗಾಗಿ 'ಮಾರಿಹಬ್ಬ'ದ ಮೂಲ ಎಷ್ಟರಮಟ್ಟಿಗೆ ವರ್ಣ ಆಶಯಕ್ಕೆ ಬದ್ಧವಾಗಿದೆ ಎಂಬ ಪ್ರಶ್ನೆ ಮೂಡುತ್ತದೆ.

<u>ರಕ್ಷಣೆ ಮತ್ತು ಫಲವಂತಿಕೆಯ ಹಿನ್ನೆಲೆಯಲ್ಲಿ</u> :

ತಾಯಿ ದೇವತೆಯ ಬಗ್ಗೆ ಮತ್ತು ಮಾರಿ, ಮಾರಮ್ಮರ ಬಗ್ಗೆ ಈಗಾಗಲೇ ಚರ್ಚಿಸಿರುವಂತೆ, '<u>ಮಾರಿ ದೇವತಾರಾಧನೆ</u>' ವರ್ಣ ಸಂಕರದ ಆಶಯಗಳಾಚೆ ತನ್ನ ಮೂಲವನ್ನು ಹೊಂದಿದೆ. ಮಾರಿ ದೇವತೆಯ ಆರಾಧನೆ 'ತಾಯಿ'ಯ ಆರಾಧನೆಯ ಆಶಯವನ್ನೇ ಒಳಗೊಂಡಂತೆ ತೋರುತ್ತದೆ.

'ತಾಯಿ ದೇವತೆ'ಯ ಆರಾಧನೆ ಬಂದದ್ದೇ ಫಲ ನೀಡುವ ಅಥವಾ ಸೃಷ್ಟಿಸುವ ಶಕ್ತಿಯಾರಾಧನೆಯಲ್ಲಿ ಎಂಬುದು ನಿಶ್ಚಿತವಾದುದು. ತಾಯಿಯ ಗರ್ಭಧಾರಣಾ ಹಾಗೂ ಸೃಷ್ಟಿಸುವ(ಹೆರುವ) ಶಕ್ತಿಯನ್ನು ಪೂಜಿಸತೊಡಗಿದ ಮಾನವ ಆ ಸೃಷ್ಟಿ ಶಕ್ತಿಯನ್ನು ದೈವಶಕ್ತಿಯಾಗಿಯೂ, ಸೃಷ್ಟಿಸುವುದು ಹೆಣ್ಣಾಗಿಯೂ ಕಂಡು ಆತ ಹೆಣ್ಣುದೇವತಾರಾಧನೆಗೆ ಮೊದಲು ಮಾಡಿದ. ಈ ಪೂಜೆ ಮೂಲದಲ್ಲಿ ವಿಗ್ರಹ ರೂಪದಲ್ಲಿರಲಿಲ್ಲ ಎಂಬುದನ್ನು ಅನೇಕ ವಿದ್ವಾಂಸರ ಅಧ್ಯಯನಗಳು ತಿಳಿಸಿವೆ. 'ಸೃಷ್ಟಿಸುವ' ತಾಯಿ ಮಾನವನ ನೆಲೆನಿಂತ ಸ್ಥಿತಿಯಲ್ಲಿ ಮಹತ್ವ ಪಡೆಯತೊಡಗಿದಂತೆ. ಈ 'ಸ್ತ್ರೀ'ಯತ್ವದ ಪೂಜೆಗೆ ಇನ್ನಷ್ಟು ಜವಾಬ್ದಾರಿಗಳನ್ನು ಆರೋಪಿಸಲಾಗಿರಬೇಕು. ಹುಟ್ಟಿಸಿದ ತಾಯಿಗೆ ಕಾಪಾಡುವ ಗುಣವಿರುವುದು, ಆರೈಕೆಯ ಶಕ್ತಿಯಿರುವುದು ಆವನು ಕಂಡುಕೊಂಡ ವಿಶಿಷ್ಟ ಅಂಶಗಳಾಗಿರಬೇಕು, ಹಿನ್ನೆಲೆಯ ಚಿಂತನ ಶೀಲ ಮಾನವ ತಾನು ಬೇಟೆಯ–ಅಥವಾ ಹೋರಾಟದ ಸಂದರ್ಭಗಳಲ್ಲಿ ಅನುಭವಿಸಿದ ನೋವು, ಕಾಯಿಲೆ ಮೊದಲಾದ ವಿಪತ್ತುಗಳಿಗೆ ಅಲ್ಲಲ್ಲಿ ಸಿಕ್ಕ ಗಿಡ, ಮೂಲಿಕೆ, ತೊಗಟೆಗಳನ್ನು ಅರೆದು, ತೇದು ಉಪಯೋಗಿಸಿ–ಪರಿಹಾರ ಕಂಡುಕೊಂಡಾಗ ಅವುಗಳ ಆರೈಕೆ ಗುಣವೂ ಕೂಡ ತಾಯ್ತನದ ಆರಾಧನೆಗೆ ವಸ್ತುವಾಯಿತು. ಬೇವಿನ ಆರಾಧನೆ ಈ ನೆಲೆಯಲ್ಲಿ ರೂಪುಗೊಂಡಿರುವ ಸಾಧ್ಯತೆಗಳಿವೆ ಎನ್ನಬಹುದು, ಅಮ್ಮನ ಆರಾಧನೆಗಳಲ್ಲಿ ಬೇವಿನಸೊಪ್ಪಿನ ಪ್ರಾಧಾನ್ಯತೆಯನ್ನು ಗಮನಿಸಿದಾಗ ಇದು ಸ್ಪಷ್ಟವಾಗುತ್ತದೆ ಮತ್ತು 'ಕೆಲವು ಪೂಜೆ'ಗಳು ಇದನ್ನು ಸಮರ್ಥಿಸುತ್ತವೆ. 'ಮಾರಮ್ಮ' ಎಂಬ ಪದವನ್ನು 'ಮರದಮ್ಮ' ಎಂದು ಅರ್ಥೈಸಲು ಪ್ರಯತ್ನ ಪಟ್ಟಿರುವ ವಿದ್ವಾಂಸರ ಮತವನ್ನು ಒಪ್ಪಿಕೊಂಡರೆ, ಮರದ ಮೂಲಕ ತಾಯಿ ರೂಪದ ಆರಾಧನೆ ಆರಂಭಗೊಂಡ ಸ್ಥಿತಿ ಮನವರಿಕೆಯಾಗುತ್ತದೆ.

ತಾಯಿಯ ಆರಾಧನೆ – ಸಲಹುವ ಜವಾಬ್ದಾರಿ ಹೊತ್ತುಕೊಂಡದ್ದು, ಆದಿಮ ಕುಟುಂಬದ ತಾಯಿ ಪ್ರಾಧಾನ್ಯತೆಯ ಹಿನ್ನೆಲೆಯಲ್ಲಿಯೇ ಆದ್ದರಿಂದ 'ಹಳ್ಳಿ' ಕಾಯುವ, ಊರು ಕಾಯುವ, ಕಾಲಮ್ಮನಾದಳು. ಈ ಕಾಯುವಿಕೆ–ವಿಪತ್ತುಗಳಿಂದ, ಅಂದರೆ ರೋಗ–ರುಜಿನಗಳು ಹಳ್ಳಿಯ ಜನ–ದನ–ಪಶುಗಳಿಗೆ ತಗುಲದಂತೆ ಅವನ್ನು ಕಾಪಾಡುವ ಹೊಣೆಗಾರಿಕೆಯ 'ತಾಯಿ' ಅವಳಾದಳು ಎನ್ನಬಹುದು.

'ಮಾರಿ' ಎಂಬುದನ್ನು ಅನೇಕ ವಿದ್ವಾಂಸರ ಅಭಿಪ್ರಾಯದ ಪ್ರಕಾರ ದೊಡ್ಡ, ಭೀಕರ, ರೋಗ, ಎಂದು ಅರ್ಥಮಾಡಿಕೊಂಡರೆ, ಕಿಟೆಲ್, ಜಾಬ್ಸ್, ಮೊದಲಾದವರ ಅಭಿಪ್ರಾಯಗಳಿರಬಹುದು. ಅಥವಾ ಹಳ್ಳಿಗರು ಅರ್ಥಮಾಡಿಕೊಳ್ಳುವ ರೀತಿಗಳು ಇರಬಹುದು ಇವೆಲ್ಲ 'ಮಾರಿ'ಯನ್ನು ಮಾರಿಕಾಯಿಲೆ, ಮಾರಿಬೇನೆ ಎಂದೆಲ್ಲಾ ಹೇಳಲಾಗುತ್ತದೆ. ಅಲ್ಲದೆ ಈ ದೇವಿಯನ್ನು ಸಮುದ್ರ ತೀರಗಳ, ಸೊಳ್ಳೆಗಳಿಂದ ಬರುವ ರೋಗದ ನಿವಾರಣೆಗಾಗಿ ಪೂಜಿಸುವ ಉದಾಹರಣೆಗಳನ್ನು 'ಜಾಬ್ಸ್' ಎಂಬ ವಿದ್ವಾಂಸರು (ಗೆಟ್ರ್ಯೂಡ್ ಜಾಬ್ಸ್)[9] ಹೇಳಿದ್ದಾರೆ. ಅಲ್ಲದೆ ಕಿಟೆಲ್ ಕೂಡ ಹಾಗೇ ತಮ್ಮ ಶಬ್ದಕೋಶದಲ್ಲಿ ತಿಳಿಸಿರುವುದೂ; 'ಮಾರಿ'ಯಾರಾಧ

ನೆಂಬ 'ರೋಗ' ಹಾಗೂ 'ರೋಗ' ನಿವಾರಣೆ ಯ ಹಿನ್ನೆಲೆಯನ್ನು ತಿಳಿಸುತ್ತದೆ. ರೋಗತಡೆಯಲ್ಲಿ ತಾಯಿಯನ್ನು ತೃಪ್ತಿಪಡಿಸಿ ಅವಳ ಕೃಪೆಗೆ ಪಾತ್ರರಾಗುವ ಆಕಾಂಕ್ಷೆ ಇಲ್ಲದೇ ಹೀಗಾಗಿ 'ಮಾರಿ' ಯನ್ನು ಘೋರದೇವತೆಯಾಗಿ ನೋಡಬಹುದು — ಅವಳನ್ನು ಬೇವಿನಸೊಪ್ಪಿನೊಡನೆ ಅಥವಾ ಮರದಮ್ಮನಾಗಿ ಬೇವಿನ ಮರವನ್ನು ಪೂಜಿಸುವ ಪದ್ಧತಿಯನ್ನು, ರೋಗ ನಿವಾರಣಾ ಶಕ್ತಿಯ ಅವಳ ಸಾಮರ್ಥ್ಯ ಆರೋಪದ ನೆಲೆಯಲ್ಲಿಯೂ ಅರ್ಥೈಸಬಹುದಾಗಿದೆ. ಈ ಅಮ್ಮನ ಪೂಜೆಗಳು ಮಡಕೆ ಮತ್ತು ಬೇವಿನ ಸೊಪ್ಪಿನೊಂದಿಗೆ ಅಥವಾ ಬೇವಿನ ಮರದೊಂದಿಗೇ ಆರಂಭವಾಗಿರಬೇಕು.

ಎಂ.ಎ.ಶೆರ್ರಿಂಗ್ ಎಂಬ ವಿದ್ವಾಂಸರು ತಮ್ಮ 'ಹಿಂದೂ ಟ್ರೈಬ್ಸ್ ಅ್ಯಂಡ ಕ್ಯಾಸ್ಟ್ಸ್' ಎಂಬ ಗ್ರಂಥದ ಎರಡನೆ ಸಂಪುಟದಲ್ಲಿ ಬೆಟ್ಟಕುರುಬರ ಬಗ್ಗೆ ಬರೆಯುತ್ತಾ, ಅವರಲ್ಲಿ ಆಚರಣೆಯಲ್ಲಿದ್ದ 'ಮನೆ ಹೆಣ್ಣು ದೇವರು' ಅಥವಾ 'ಕುಲ ದೇವರು' — ಗಳ ಪ್ರಸ್ತಾಪ ಮಾಡಿದ್ದಾರೆ. ಇದೂ ಅಮ್ಮನಾರಾಧನೆಯ ಪ್ರಾಚೀನ ರೂಪವಾಗಿದೆ.

ಈ ಹಿನ್ನೆಲೆಯಲ್ಲಿ ಮಾತ್ರವಲ್ಲದೆ ಕಾಯುವ ತಾಯಿಯ ಕೋಪದ ಸ್ಥಿತಿಯನ್ನು ಮಾರಿಯಾಗಿ ಹಾಗೂ ಆ ಕೋಪಗೊಂಡ ತಾಯಿಯ ಶಿಕ್ಷಿಸುವ ಕ್ರಮಗಳನ್ನು ರೋಗಗಳಾಗಿ ಗ್ರಾಮಸ್ಥರು ತಿಳಿದಿದ್ದಾರೆ. ಹಾಗಾಗಿ ಅವಳನ್ನು ತಾಯಿಯಾಗಿ ಹೊಗಳಿ — ತೃಪ್ತಿ ಪಡಿಸಲು ಈ ಆರಾಧನಾ ಕ್ರಮ ಕೈಗೊಳ್ಳಬಹುದಾಗಿದ್ದು ಆ ಕ್ರಮಗಳೇ 'ಬಲಿ' ನೈವೇದ್ಯಗಳಾಗಿದೆ. ಇವನ್ನು ಊರ ಪೀಡೆಗಳಿಂದ ಕ್ಷುದ್ರ ದೈವ-ದೆವ್ವಗಳಿಂದ ತನ್ನ ಮಕ್ಕಳಿಗೊದಗುವ ತೊಂದರೆ ನಿವಾರಣೆಗೆ ಅಮ್ಮ ತನ್ನ ನೇತೃತ್ವದಲ್ಲಿ ಆ ಕ್ಷುದ್ರ ದೈವಗಳನ್ನು ತೃಪ್ತಿ ಪಡಿಸಲು ಮಾಡುವ ಆಚರಣೆಗಳದತ್ತ ಈ ಹಬ್ಬದಾಚರಣೆಗಳು ಗೋಚರಿಸುತ್ತವೆ. ಮಾರಿ ಹಬ್ಬದ 'ಚರಗ' ಇದಕ್ಕೆ ಪೂರಕವಾಗುತ್ತದೆ.

ಈ ಎಲ್ಲಾ ಚರ್ಚೆಗಳ ಹಿನ್ನೆಲೆಯಲ್ಲಿ ನೋಡತೊಡಗಿದಾಗ ಈ ರೀತಿಯ ರಕ್ಷೆ (ರೋಗ ಅಥವಾ ದೈವಗಳಿಂದ) ನೀಡುವ ಹಾಗೂ ಸಮೃದ್ಧಿ ನೀಡುವ ತಾಯಿಯ ಆರಾಧನೆಯಾಗಿ ಮಾರಿಹಬ್ಬ ಅರ್ಥ ಪಡೆದಂತಿಲ್ಲ. ವರ್ಣ ಸಂಕರದ ಆಶಯ ಹೊತ್ತ ಆಚರಣೆಗಳು ಅದರಿಂದ ಮುಕ್ತವಾಗ ತಾ ಹೋಗುತ್ತವೆ ಮತ್ತು ಅಲ್ಲಿನ ಆಶಯಗಳು ಅನೇಕ ಭಿನ್ನವಾದ ಉದ್ದೇಶ ಹೊಂದಿರುವಂತೆ ಕಂಡು — ಆ ಉದ್ದೇಶದ ಜನಗಳು ಒಂದಾಗಿ ನೆಲೆ ನಿಂತಾಗ ಅವನ್ನೆಲ್ಲಾ ರೂಢಿಸಿಕೊಂಡ 'ತಾಯಿದೇವತಾರಾಧನೆ' ಯಾಗಿ ಮಾರಿಹಬ್ಬ ಅರ್ಥ ಪಡೆಯುತ್ತದೆ. ಈಗ ಈ ಚರ್ಚೆಗಳ ಹಿನ್ನೆಲೆಯಲ್ಲಿ ಮಾರಿಹಬ್ಬದ ಆಚರಣೆಗಳನ್ನು ವಿವರಿಸುವ ಪ್ರಯತ್ನ ಮಾಡಬಹುದು.

ಮಾರಿಯನ್ನು ರೋಗ ನಿವಾರಿಸುವ ಅಥವಾ ರೋಗ ಪೀಡೆಗಳ ಕಾಟಗಳಿಂದ ಕಾಪಾಡುವ ಮತ್ತು ಊರಿನ ತನ್ನ ಮಕ್ಕಳ ಬೆಳೆ ಸಮೃದ್ಧಿಯನ್ನು ಕಾಪಾಡುವ ದೇವಿಯಾಗಿ ನೋಡಬಹುದು. ಬಹುಶಃ ಉಗ್ರಗೊಂಡ ಮತ್ತು ರೋಗಗಳನ್ನು ನಿವಾರಿಸುವ ದೇವತೆಯಾಗಿ ಗ್ರಾಮೀಣರು ಗ್ರಹಿಸಿದ್ದೇ — 'ವರ್ಣ — ಸಂಕರ' ವನ್ನು ರೋಗವೆಂದೇ ಗ್ರಹಿಸಿದ ವೈದಿಕರು ಅದರ ಕಥೆಯನ್ನು ಕಟ್ಟಿ ತಮ್ಮ 'ಮಹಾತ್ಮೆ' ಸಂಸ್ಕೃತಿಯ ತೆಕ್ಕೆಗೆ, ಅದನ್ನೂ ದಕ್ಕಿಸಿಕೊಳ್ಳಲು ಪಟ್ಟ ಪ್ರಯತ್ನ ಸಹಾಯಕವಾಗಿಬಹುದು.

ಮಾರಿ-ಆರಾಧನೆಯಲ್ಲಿ ನಮಗೆ 'ಘಟ', ಚರಗ, ಬೇಪಡೆ,ಗಳು ಒಟ್ಟಾಗಿ ಈ ಭಿನ್ನ ನಿಲುವಿಗೆ ಸಮರ್ಥನೆ ಒದಗಿಸುತ್ತವೆ. 'ಘಟ' ಪೂಜೆ ಆದಿಮಕಾಲದಿಂದಲೂ ಉಳಿದು ಬಂದಿರುವ ಅಮ್ಮನ ಆರಾಧನಾ ಕ್ರಮವಾಗಿರುವಂತೆ (ಕೆಲವು ಪೂಜೆ ಹಾಗೂ ಹಂಡದ ಮಗೆ ಪೂಜೆ_ ಕೋಣನ ಬಲಿಯೂ ಕೂಡ ಆ ಕಾಲಕ್ಕೆ ಈ ವರ್ಗಗಳಲ್ಲಿ, ಎಮ್ಮೆಯ ಸಾಕಾಣಿಕೆ ಹೇರಳವಾಗಿದ್ದುದರಿಂದ ಸಾಮಾನ್ಯವಾದ ಬಲಿಯಾಗಿರುವ ಸಾಧ್ಯತೆಗಳನ್ನು ತಿಳಿಸುತ್ತದೆ. 'ಹೆಣ್ಣು ದೇವತೆ' ಪೂಜಿಸತೊಡಗಿದ ಇವರು ಎಮ್ಮೆಯ ಕೊಲೆಯನ್ನು ಒಪ್ಪದೆ 'ಕೋಣ' ನನ್ನು ಕೊಲ್ಲಲು ಮುಂದಾಗಿರುವಂತಿದೆ. ಅಲ್ಲದೆ 'ಹೆಣ್ಣಿಗೆ' ಫಲವಂತಿಕೆ ನೀಡುವ ಮೂಲ 'ಪುರುಷ' ನೆಂದು ಕಂಡ ಅವರು 'ತಾಯಿಗೆ' ಫಲವಂತಿಕೆ ನೀಡುವ ಗಂಡು ಪ್ರಾಣಿಯ ಬಲಿಯನ್ನು ರೂಢಿಸಿಕೊಂಡಂತೆ ತೋರುತ್ತದೆ. ಭೂಮಿಯನ್ನು 'ತಾಯಿ' ಎಂದು ಪೂಜಿಸುತ್ತಿದ್ದ ಅವರು — ಭೂಮಿಗೆ ಕೋಣನ ರಕ್ತ ಬೆರತ ಅನ್ನವನ್ನು ಚೆಲ್ಲುವುದು ಈ ನಿಟ್ಟಿನಲ್ಲಿ ಅರ್ಥವಂತಿಕೆ ಪಡೆಯುತ್ತದೆ: 'ಘಟ' ಯೊಡನೆ 'ಕೋಣ'

ನ ಬಲಿಯು ಈ ನಿಟ್ಟಿನಲ್ಲಿ ಅರ್ಥವತ್ತಾದ ಸಂಬಂಧಪಡೆಯುತ್ತದೆ. ಕೋಣನನ್ನು 'ಭಟೆ' ಪೂಜಿಸುವ ಪ್ರಸಂಗದಲ್ಲಿ ಕಟ್ಟುವುದು ಮತ್ತು ಅದರೊಡನೆ 'ಬಲಿ' ಜಾಗಕ್ಕೆ ಹಿಡಿದು ತರುವುದು ಮೂರ್ತಿಯೊಂದಿಗಿನ ಅದರ ಸಂಬಂಧ ಆಳವನ್ನು ತಿಳಿಸುತ್ತದೆ. ಆದರೆ ಮೂರ್ತಿಯನ್ನೂ ಈ ಅರ್ಥದ ತಾಯಿಯಾಗಿಯೇ ತಿಳಿದ ಗ್ರಾಮೀಣರ ಭಾವನೆಯಲ್ಲಿ ಮೂರ್ತಿಗೆ ಮಾಡುವ ಆಚರಣೆಗಳು ಭಿನ್ನ ಅರ್ಥ ಪಡೆಯುತ್ತದೆ. ಉಳಿದಂತೆ ಮೂರ್ತಿ ಆರಾಧನೆ ಬಹುಪಾಲು 'ವರ್ಣ ಸಂಕರ' ದ ಆಶಯಕ್ಕಾಗಿಯೇ ಪೂಜೆಗೊಳ್ಳುವಂತೆ ಕಾಣುತ್ತದೆಯಾದರೂ — ಅಮ್ಮನನ್ನು ಸೊಪ್ಪಿನ ಗುಡಿಸಲಿಗೆ ಕರೆತರುವ ಮತ್ತು ಬೇವನ್ನು ಬಳಸುವುದು ರೋಗನಿವಾರಣೆಯ ಆಶಯವನ್ನು ಬಲಗೊಳಿಸುತ್ತದೆ. 'ಬೇವು' ಕೂಡ ಇದನ್ನು ಸಮರ್ಥಿಸುತ್ತದೆ. ಹೀಗಾಗಿ 'ಭಟೆ' ಅಥವಾ 'ಕೇಲುಪೂಜೆ' ಯ ಮೂಲಕ ಆರಂಭವಾದ ಈ ಹಬ್ಬ ಮುಂದೆ ವೈದಿಕ ಧರ್ಮ ಪ್ರಭಾವದಲ್ಲಿ ಮೂರ್ತಿಯಾಗಿ ಬೆಳೆದಾಗ ಅದರೊಟ್ಟಿಗೆ 'ವರ್ಣ—ಸಂಕರ' ದ ವಿರೋಧಿ ಭಾವನೆ ಬಿತ್ತುವ ಆಚರಣೆಯಾದಂತಿದೆ. 'ಮಾರಿ' ಹಬ್ಬದ 'ಚರಗ'; ಕಾಪಾಡುವ, ಕಾಯುವ ದೇವಿಯಾಗಿ ಮಾರಮ್ಮನನ್ನು ಗ್ರಹಿಸಲು ತೀರಾ ಅವಶ್ಯಕವಾಗುತ್ತದೆ; ಊರ ಗಡಿಯ ಪೀಡೆ ದೆವ್ವ ಅಥವಾ ಕ್ಷುದ್ರ ದೇವತೆಗಳಿಂದ ತನ್ನ ಗ್ರಾಮದ ಮಕ್ಕಳಿಗೆ ತೊಂದರೆಯಾಗದಂತೆ, ಆ ದೈವಗಳನ್ನು ತೃಪ್ತಿಪಡಿಸಲು — ಕೋಣನ ಅಥವಾ ರಕ್ತದ ಅನ್ನವನ್ನು ಗಡಿ ಭಾಗಗಳಿಗೆ ನೀಡುವಂತೆ ಈ ಚರಣ ಕಾಣುತ್ತದೆ. ರೋಗಾದಿ ವಿಪತ್ತುಗಳನ್ನು ಆದಿಯ ಅಥವಾ ಗ್ರಾಮ ಜನತೆ ದೇವರ ಕಾಟವೆಂದರೇ ನಂಬಿದ್ದು, ಇದರ ಬೆಳವಣಿಗೆ ಪೂರಕವಾಗಿದೆ. ಅಲ್ಲದೆ ಇಂತಹ ಮಾರಿಯರ —ಅಮ್ಮನಾಗಿಯೂ, ತಾನೇ ಕೋಪಗೊಂಡ 'ಮಾರಮ್ಮ'ನಾಗಿಯೂ ಪೂಜೆಗೊಂಡಿರಬಹುದು ಇಲ್ಲಿಲ್ಲ ದೊಡ್ಡತಾಯಿ, ಸರ್ವಶಕ್ತಳಾದ ತಾಯಿದೇವತೆಯಾಗಿ ಗ್ರಹಿಸಲಾಗಿದೆ ಎನಿಸುತ್ತದೆ.

'ಹುಲುಸು' ಪೂಜೆ ಮತ್ತು 'ಚರಗ' ಹಾಗೂ ಗಡಿ ನಿರ್ಬಂಧಗಳು ಊರ ಹುಲುಸನ್ನು ಅಥವಾ ಸಮೃದ್ಧಿಯ ಪೂಜೆಯಾಗಿ ತಿಳಿಯಲು ಸಹಾಯಕವಾಗುತ್ತವೆ. ಊರ ಸಮೃದ್ಧಿಗಾಗಿ ದೇವಿ ಬಲಿಯಿಂದ ಪೂಜಿಸುವಾಗ, ದೇವಿ ಒಲಿದು ಅವರಿಗೆ ಹುಲುಸನ್ನು ಪಾಲಿಸುತ್ತಾಳಲ್ಲದೆ, ಆ ಹುಲುಸನ್ನು ಬೇರೆಯವರು ಕದ್ದೊಯ್ಯದಂತೆ ತಡೆಯಲು ಗಡಿ ನಿರ್ಬಂಧಿಸಿದಂತೆ ತೋರುತ್ತದಲ್ಲದೆ—ಚರಗ ನೀಡುವ ಮೂಲಕ ಗಡಿದೈವಗಳೂ ತೃಪ್ತಿಹೊಂದಿ ಹಳ್ಳಿಗರ ಮೇಲೆ ವ್ಯಗ್ರರಾದರೆ ಅವರನ್ನು ಕಾಯಲು ಅಣಿಗೊಳಿಸುವ ಕ್ರಮದಂತೆ ಕಾಣುತ್ತದೆ.

ಅಮ್ಮನನ್ನು ಕಳಿಸುವ ಕ್ರಿಯೆಯನ್ನು, ಮೋಚಿಸುವ ಆಚರಣೆಗಳನ್ನು ಬಹಳ ಅರಿಯತೊಡಗಿದಾಗ ಸಾಮಾನ್ಯವಾಗಿ ಆರಾಧನೆಯಲ್ಲಿರುವ ವಿವಿಧ ಅಮ್ಮಗಳನ್ನು ಕೇಲು ಪೂಜಿಸಿ ಕಳಿಸುವ ಹಾಗೆ ತೋರುತ್ತದೆ. ಇಲ್ಲಿಲ್ಲ ರೋಗ ಕಳೆಯುವ, ಆಶಯವಿದೆಯೆನ್ನಬಹುದು. ಈ ಹಿಂದೆ ಹೇಳಿರುವಂತೆ 'ಕೋಣ' ದ್ರಾವಿಡ ವಾತಾವರಣದಲ್ಲಿ ಜನಪ್ರಿಯವಾದ ಸಾಕಾಣಿಕೆ ಹೊಂದಿದ ಪ್ರಾಣಿಯೇ ಆಗಿದ್ದು, ಮಾಂಸಾಹಾರದ ಸಹಜ ನೈವೇದ್ಯದ ಈ 'ಬಲಿ' ಯನ್ನು 'ಮಹಿಷ' ನ ರಾಕ್ಷಸಮಾನ ಸೃಷ್ಟಿಸಿದ ಮನಸ್ಸುಗಳು, ಇಲ್ಲಿ ಸುಳ್ಳು ಹೇಳಿ, ಜಾತಿ ಮುರಿದ ಶೂದ್ರನಾಗಿ ಚಿತ್ರಿಸಿ, ಬಳಸಿಕೊಂಡಿದೆ ಅಷ್ಟೇ. ಗ್ರಾಮೀಣರ ಗ್ರಾಮದ, ಆರೋಗ್ಯದ ಫಲವಂತಿಕೆಯ ಕಾಮು ಕಾಯುವ ತಾಯಿಯಾದ ಈಕೆ ವೈದಿಕರ 'ವರ್ಣ—ವ್ಯವಸ್ಥೆ' ಕಾಯುವ ಹಮ್ಮಾಯಿ ಯಾಗಿದ್ದಾಳೆ. ಅಷ್ಟೇ. ಬೇವು ಪ್ರಾಚೀನಕಾಲದಿಂದಲೂ ಔಷಧಿಯಾಗಿ ಬಳಕೆಗೊಂಡಿರುವುದು ಮತ್ತು ಅದು ಮಾರಿ ಹಬ್ಬದಲ್ಲಿ ಬಳಸಲ್ಪಡುವುದು, ರೋಗ ನಿವಾರಣೆಯ ಆಶಯವನ್ನು ಬಿತ್ತುವುದು ಮಾತ್ರವಲ್ಲ 'ಬಲಿ'ಗಳೂ 'ಶಾಂತಿಗಾಗಿ' ಎಂದು ಹೇಳುವ ಗ್ರಾಮೀಣರಲ್ಲಿ ಕೆಟ್ಟ ದೈವಗಳ ಕಾಟಗಳಾದ ರೋಗ ವಿಮುಕ್ತಿಗಾಗಿಯೇ ಎಂದು ತಿಳಿಯುತ್ತದೆ. ಹೀಗೆ 'ಮಾರಿ ಹಬ್ಬ' ದ ಮೂಲ ಆಶಯ ಎಲ್ಲದರಂತೆ: ವೈದಿಕರ ತಂತ್ರವ್ಯೂಹದಲ್ಲಿ ಹೊಸ ಅವತಾರವೆತ್ತಿದೆ ಎನ್ನಬಹುದು.

ಅಮ್ಮ ಗುಡಿಗೆ ಬರುವ ಮುನ್ನ ಬಡಿಗೆ ಹಿಡಿದು ಬಲಿಯ ಕುರಿಗಳನ್ನು ಎತ್ತಿ ಹಿಡಿದು ಅಬ್ಬರಿಸುತ್ತಾ ಊರಲ್ಲಿ ಸುತ್ತುವುದು ಹಿಂದಿನ ಬುಡಕಟ್ಟು ಸ್ಥಿತಿಯ ಗುಂಪು ಬೇಟೆಯನ್ನೇ ನೆನಪಿಗೆ ತರುತ್ತದೆ. ಈ ಅಂಶವೂ ಕೂಡ ಮಾರಮ್ಮನ ಆರಾಧನೆಯನ್ನು ವೈದಿಕ ಧ ಆಶಯದಿಂದ ದೂರ ಒಯ್ಯುತ್ತದೆ.

ಒಟ್ಟಾರೆ — ತಾಯಿ ಆರಾಧನೆಯಿಂದ ಅನೇಕ ಜನ ಪಂಗಡಗಳು — ಊರಲ ನೆಲೆ ನಿಂತ ಸ್ಥಿತಿಯು ಆ ಎಲ್ಲರ ಭಿನ್ನ ಆರಾಧನೆ ಮತ್ತು ಆಶಯಗಳ ಮೊತ್ತವಾಗಿ ಒಂದು ಸಂಕೀರ್ಣ ಮೊತ್ತವಾಗಿ ಕಾಣುತ್ತದೆಯೇ ಹೊರತು ಅದು ಕೇವಲ ವರ್ಣ ಸಂಕರದ ಆಶಯದ ನೆಲೆಯಲ್ಲಿಯೇ ರೂಪುಗೊಂಡ ಸಂಪ್ರದಾಯವಾಗುವುದಿಲ್ಲ.

ಇದೇ ಹಬ್ಬದಲ್ಲಿ ' ವೈದಿಕ ಪುರೋಹಿತರ ' ಯಾವುದೇ ರೀತಿಯ ಪಾಲ್ಗೊಳ್ಳುವಿಕೆ ಇಲ್ಲಿ ಇರುವುದಿಲ್ಲ. ಇದು ಬಹುಶ: ತಮ್ಮ ಜಾತಿಯಿಂದ ಭ್ರಷ್ಟಗೊಂಡ ದೇವಿಯ ಆಚರಣೆಯಿಂದಿರ ಬಹುದಾದರೂ ಅದಕ್ಕಿಂತ ಹೆಚ್ಚಾಗಿ ಆ ಹಬ್ಬ ಅವರ ಮೂಲದ್ದಲ್ಲವೆಂಬುದು.

ಉಪಸಂಹಾರ :

ಇದುವರೆಗಿನ ಮಾರಿ ಹಾಗೂ ಮಾರಿಯ ಆರಾಧನೆಯ ಕ್ರಮಗಳು ಮತ್ತು ಆರಾಧನೆಯ ವಿಧಗಳು, ಅದರ ಬಗೆಗಿನ ಐತಿಹ್ಯ, ಪದಗಳು...... ಇವುಗಳೆಲ್ಲವುಗಳ ಅಧ್ಯಯನ ನಮಗೆ ರೂಪಿಸಿಕೊಟ್ಟದ್ದು ಎರಡು ವಿಭಿನ್ನ ಸಾಂಸ್ಕೃತಿಕ ವಲಯಗಳ ಪರಿಕಲ್ಪನೆಗಳನ್ನ ಎನ್ನಬಹುದು. ಈಗಾಗಲೇ ನಾವು ಚರ್ಚಿಸಿರುವಂತೆ 'ವೈದಿಕ ಪರವಾದ ಆಶಯವೊಂದು' ಹಾಗೂ ವೈದಿಕೇತರ ಆರಾಧನಾ ಆಶಯಗಳು ಹಲವು — ಈ ರೀತಿಯ ವಿಚಿತ್ರವಾದ ಮತ್ತು ಸಂಕೀರ್ಣವಾದ ಚೌಕಟ್ಟೊಂದನ್ನು ಪಡೆದುಕೊಂಡಿರುವ ಈ ಹಬ್ಬ.... ಪ್ರಸ್ತುತದಲ್ಲಿಯೂ ಇಂತಹ ಭಿನ್ನ ಆಶಯಗಳನ್ನು ಗರ್ಭೀಕರಿಸಿಕೊಂಡೇ ಬೆಳೆದು-ಉಳಿದಿದೆ ಎನ್ನಬಹುದು.

ಹಬ್ಬದ ಅನೇಕ ಆಚರಣೆಗಳು ಯಾಂತ್ರಿಕವಾಗಿ ನಡೆಯುತ್ತಿದ್ದರೆ, ಅವನ್ನು ಕೆದಕುತ್ತಾ ಹೋದಂತೆ ನಮಗೆ ಗ್ರಾಮಸ್ಥರಿಂದ ಸಿಗುವ ಸುಳಿವುಗಳು ಮೊದಲನೆಯದಾಗಿ, 'ವರ್ಣ-ಸಂಕರ' ಆಶಯಗಳೇನೇ. ಇದಕ್ಕೆ ಹಬ್ಬದಲ್ಲಿ ಗಮನಸೆಳೆಯುವ ಮುಖ್ಯಕ್ಕೆ ಬೆಳೆದು ಪ್ರಧಾನವಾಗಿರುವ ಮೂರ್ತಿ ಸುತ್ತಲನ ಮದುವೆ ಮತ್ತು ವೈಧವ್ಯದ ಆಚರಣೆಗಳು ಕಾರಣವಿರುವಂತಿದೆ. ಆದರೆ ಇದಕ್ಕೆ ಹೊಂದಿಕೆಯಾಗದ, ಈ ಆಶಯಕ್ಕೆ ದುಡಿಯದ ಕೆಲವು ಆಚರಣೆಗಳೂ ಇಲ್ಲದ್ದು ಅವುಗಳ ವಿವರಗಳು ಹುಲುಸಿನ ಅಥವಾ ಸಮೃದ್ಧಿಯ, ಗಡಿ ಶಾಂತಿಯ, ರೋಗನಿವಾರಿಸುವ-ಆಶಯಗಳಿಗೆ ಬದ್ಧನಾಗಿರುವುದು ಕಂಡುಬರುತ್ತದೆ. ಈ ಆಯಗಳ ಹಿನ್ನೆಲೆಯಲ್ಲಿ ಚರ್ಚಿಸಿದಾಗ 'ಮಾರಿಯಾರಾಧನೆ' — ವರ್ಣ ವ್ಯವಸ್ಥೆಯ ಪರಿಧಿಯಾಚೆ ರೂಢಿಗ ಬಂದಿರುವ ಸಾಧ್ಯತೆಗಳನ್ನೇ ಬಲವಾಗಿ ಸಮರ್ಥಿಸುತ್ತದೆ. ಮಾರಿಹಬ್ಬದ ಗಡಿ ನಿರ್ಬಂಧ ಕಾವಲು ಕಾಯುವುದು ಮತ್ತು ಘಟಿ ಪೂಜೆ ಯಂತಹ ಮಾರಿಹಬ್ಬದ ಆಚರಣೆಗಳು ಆದಿಮ ಸ್ಥಿತಿಯಲ್ಲಿಯೇ ಆರಂಭದಲ್ಲಿದ್ದು ಅಮ್ಮನ ಪೂಜೆಯನ್ನು ಮತ್ತು ಅದರ ಸಮೃದ್ಧಿಯ ಮತ್ತು ಶುದ್ಧಿಯ (ಇಲ್ಲಿ ದೈವತಾಂತಿಯೂ ಶುದ್ಧಿಯ ರೂಪವಾಗಿದೆ) ಆರಾಧನೆಯನ್ನು ಸಮರ್ಥಿಸುತ್ತಿಲ್ಲದ-ವೈದಿಕೇತರವಾದ ದೈವ ಆರಾಧನಾ ಪದ್ಧತಿಯೊಂದನ್ನೂ ಸೂಚಿಸುತ್ತದೆ. 'ಕೋಣನ ಬಲಿ' ಯಂತಹ ವರ್ಣ ವ್ಯವಸ್ಥೆಯ ಆಶಯವನ್ನು ಇಂದು ಪ್ರಧಾನವಾಗಿ ಬಿತ್ತುವ ಆಚರಣೆಗಳು ಕೂಡ ವಿಚಾರದ ಆಳಕೆ ಇಳಿದಂತೆ ವೈದಿಕೇತರ ಸಂಸ್ಕೃತಿಯೊಂದರಲ್ಲಿನ ಸಾಕು ಪ್ರಾಣಿಯಾಗಿ ಮತ್ತು ವೈದಿಕರಿಂದ ಶೂದ್ರವಾಗಿ ಪರಿಗಣಿಸಲ್ಪಟ್ಟ ಪ್ರಾಣಿಯಾಗಿ ಕಾಣುತ್ತದೆ. ಇಂತಹ ಪ್ರಾಣಿ ಸಾಕುವ ಜನತೆಯನ್ನು ಕೂಡ ಅವರು ದಸ್ಯುಗಳೆಂದು ಕರೆದು ಪುರಾಣ ಪ್ರಪಂಚದಲ್ಲಿ ತಮ್ಮ ವರ್ಗದ ದೈವಗಳಿಂದ ಹತ ಮಾಡಿಸಿ ಅದನ್ನು ಧರ್ಮಾಧರ್ಮದ ವಿವೇಚನೆಯಲ್ಲಿ ತೂಗಿ ಬಲಿ ಕಟ್ಟ-ಪತಾಕೆ ಹಾರಿಸಲಾಗಿರುವುದೂ ಸರಿಯಷ್ಟೆ. ಇಲ್ಲೆಲ್ಲ ಕೋಣ ಮತ್ತು ಕೋಣನಿಗೆ ಸಂಬಂಧಿಸಿದ ಆಚರಣೆಗಳು ವೈದಿಕೇತರ ಸಂಸ್ಕೃತಿಯ ಸಮ್ಮಿಶ್ರ ಆಶಯಗಳನ್ನೇ ಅನಾವರಣಗೊಳಿಸುತ್ತದೆ. ಎನ್ನಬಹುದು. ಮಾರಿಯ ವಿಧಗಳು ಮತ್ತು ಅವುಗಳ ಆರಾಧನಾ ಪದ್ಧತಿಗಳನ್ನು 'ಘಟಿ' ಯೊಂದಿಗೆ ಹೋಲಿಸಿ ನೋಡಿದಾಗಲೂ ಈ ಪೂಜಾ ಪದ್ಧತಿಯ ಪ್ರಾಚೀನತೆಯ ಅರಿವಾಗುತ್ತದೆ. ಮತ್ತು ಕೋಣ ಹಾಗೂ 'ಘಟಿ' ಯ ಪರಸ್ಪರಾತ್ಮಕ ಸಂಬಂಧಗಳು ಈ ಬಲಿಯಾಚರಣೆಯ ವರ್ಣ-ಸಂಕರದ ಆಶಯವನ್ನು ಧಿಕ್ಕರಿಸುವಂತೆ ಕಾಣುತ್ತದೆ. ಆದರೆ ನಂತರದ ದಿನಗಳಲ್ಲಿ ಈ ಆಶಯಗಳು ಹಿಂದೆ ಸರಿದು ವೈದಿಕ ಸಂಸ್ಕೃತಿ ಬಿತ್ತುವ ಆಶಯ ಅದಕ್ಕೆ ಅಂಟಿಕೊಂಡದ್ದು ತೀರಾ ಕುತೂಹಲದ ವಿಷಯವಾಗಿದೆ. ಹೆಣ್ಣನ್ನು ಒಂದು ಧಾನದ ವಸ್ತುವಾಗಿ ಪರಿಗಣಿಸಿ ಅವಳ ಸ್ಥಾನ ಮಾನಗಳು ಗಂಡಿನಿಂದಲೇ ನಿರ್ಧರಿತವಾಗಬೇಕೆಂಬ ವೈದಿಕ ನಿಲುವು ತನ್ನ ಆಶಯವನ್ನು ಬಿತ್ತಲು ಮಾರಿಯನ್ನು ಬಳಸಿಕೊಂಡದ್ದು ವಿಚಾರ ಯೋಗ್ಯವಾಗಿದೆ.

ತನ್ನ ಹಿತಾವಕಾಶಗಳನ್ನು ಹೆಚ್ಚಿಸಿಕೊಳ್ಳಲು ಅನುಕೂಲಕರವಾದ ಹಾಗೂ ತನ್ನ ಶ್ರೇಷ್ಠತೆಯನ್ನು ರಕ್ಷಿಸಿಕೊಳ್ಳಲು ಪೂರಕವಾದ ಹಾಗೆ ವರ್ಣ ವ್ಯವಸ್ಥೆಯ ವಿವಾಹ ಪದ್ಧತಿಗಳನ್ನು ಅಂದರೆ ಅನುಲೋಮ ಮತ್ತು ವಿಲೋಮ ಪದ್ಧತಿಗಳನ್ನು ವ್ಯಾಖ್ಯಾನಿಸಿದ ಈ ವೈದಿಕ ವರ್ಗ, ನಂತರದಲ್ಲಿ ತನ್ನ ಈ ಹಿತಾಸಕ್ತಿಯನ್ನು ಛಿದ್ರಗೊಳಿಸಿರಬಹುದಾದ 'ವಿಲೋಮ ವಿವಾಹ' ದ ಘಟನೆಯೊಂದರಿಂದ ಕುಪಿತಗೊಂಡು ಉಪಾಯದಿಂದ ಅದನ್ನು ತಡೆಯುವ ಸನ್ನಾಹದಲ್ಲಿ ಈ ಹಬ್ಬದ ಆಶಯವನ್ನು ರೂಪಿಸಿರುವಂತೆ ಕಾಣುತ್ತದೆ. ಈ

ಉಚಿತವಾದ ತೀರ್ಮಾನ ಸಾಧ್ಯವಿಲ್ಲವಾದರೂ ವಿದ್ವಾಂಸರ ಅಧ್ಯಯನಗಳು ಈ ಬಗ್ಗೆ ಉಚಿತತೆಯನ್ನು ನೀಡುವ ಅವಶ್ಯಕತೆಯಿದೆಯೆನ್ನಬಹುದು. ವೈದಿಕರು ತಮ್ಮ ವ್ಯವಸ್ಥೆ ವೈದಿಕೇತರರಿಂದ ಅಂದರೆ ಈ ಅಮ್ಮನ ಆರಾಧನೆಯುಳ್ಳವ ಜನ ಪಂಗಡಗಳಿಂದ ಮುರಿಯುತ್ತಾಗಿದಾಗ ಅದನ್ನು ತಡೆಯುವ ಪ್ರಯತ್ನ ದಲ್ಲಿ — ತಾವು ಮೊದಲು ಅವರ ಅಮ್ಮನಿಗೆ ಮೂರ್ತಿಯ ರೂಪ ಕೊಟ್ಟು ಪ್ರಿಯರಾಗಿರುವಂತಿದೆ. ನಂತರದ ದಿನದಲ್ಲಿ ಆ ಮೂರ್ತಿಗೆ ಬಲ ಕೊಡುವ ದೋಣ ಮತ್ತು ಮೂರ್ತಿಯ ರೂಪಗೊಂಡ ಅಮ್ಮ ನಿಗೆ ಅವಳ ಆ ಉಗ್ರರೂಪಕ್ಕೆ ಈ ಐತಿಹ್ಯ ಅಂಟಿಸಿ — ತಮ್ಮ ವಿರೋಧಿಗಳನ್ನು ಅವರು ಪರಾಜಿಸುವ ಹಾಗೂ ಹೆದರುವ ದೈವದಿಂದಲೇ ತಮ್ಮ ವ್ಯವಸ್ಥೆಯನ್ನು ಕಾಪಾಡಿಕೊಂಡಿರುವಂತೆ ಕಾಣುತ್ತದೆ.

ಒಟ್ಟಿನಲ್ಲಿ ಮಾರಿಯ ಆರಾಧನೆ ಮೂಲದ ತನ್ನ ಆಶಯಗಳನ್ನು ಮರೆಸುವಷ್ಟರ ಮಟ್ಟಿಗೆ ವೈದಿಕ ಪ್ರಭಾವಕ್ಕೆ ಒಳಗಾಗಿರುವುದನ್ನು ನೋಡಿದರೆ; ನಂತರದ ಕಾಲಘಟ್ಟಗಳು ವೈದಿಕ ಧರ್ಮಾಭಿವೃದ್ಧಿಯ ಅಥವಾ ಆ ಧರ್ಮದ ಬೇರೂ ಬಲಗೊಂಡ ಕಾಲವೊಂದರಲ್ಲಿ ಎಲ್ಲಾ ವೈದಿಕೇತರ ಜನಗಳು ಅದಕ್ಕೆ ಸಹಜ ಅಥವಾ ಬಲಾತ್ಕಾರವಾಗಿ ಒಲಿಯುತ್ತಿದ್ದ ಸಂದರ್ಭವೊಂದನ್ನು ತಿಳಿಸುತ್ತದೆ. ಹಾಗಾಗದೇ ಈ ವರ್ಣ ಪ್ರಜ್ಞೆಯ ಆಶಯ ಇಂತಹಾ ವೈದಿಕ ಪ್ರಿಯ ಕಾಲವೊಂದರಲ್ಲಿ ಅದರ ಬೆಳವಣಿಗೆಯ ಜೊತೆಯಲ್ಲಿ ಬೆಳೆ ದದ್ದರಿಂದ ವೈದಿಕ ವ್ಯವಸ್ಥೆಯನ್ನು ದಿನೇ ದಿನೇ ಒಪ್ಪಿಕೊಳ್ಳುತ್ತಿದ್ದ ವೈದಿಕೇತರರು ತಮ್ಮ ದೇವಿ ಯಾರಾಧನೆಯಲ್ಲಿ ಅವರು ಸೃಷ್ಟಿಸುವ ಆಶಯವನ್ನೇ ಪ್ರಧಾನವಾಗಿ ಪರಿಗಣಿಸತೊಡಗಿ — ತಮ್ಮ ಮೂಲ ವನ್ನು ಮರೆತಂತೆ ತೋರುತ್ತದೆ. ಇವತ್ತಿನ ಮಾರಿಯ ಆರಾಧನೆಯಲ್ಲಿ ಬ್ರಾಹ್ಮಣನನ್ನು ಬಿಟ್ಟು ಪ್ರಧಾನವಾಗುವ ಗೌಡ, ಬುದ್ಧಿವಂತ, ಇವರು ಕೂಡ ಒಂದು ಕಾಲಕ್ಕೆ ವೈದಿಕ ವ್ಯವಸ್ಥೆಯಿಂದ ಹೊರಗುಳಿದ ಸಮಾಜದವರೇ ಅನ್ನಿಸುತ್ತದೆ. ಆ ಮೇಲೆ ಇವರು ವೈದಿಕ ವ್ಯವಸ್ಥೆಯನ್ನು ಒಪ್ಪಿಕೊಳ್ಳ ತೊಡಗಿದಂತೆ, ಸ್ಪೃಶ್ಯರಾಗುತ್ತಾ ಬೆಳೆದಂತೆ,— ಅದನ್ನು ಮತ್ತು ತಮ್ಮ ಸ್ಪೃಶ್ಯತೆಯನ್ನು ಉಳಿಸಿ ಕೊಳ್ಳಲು ಕಟ್ಟಲಾಗಿದ್ದ ಐತಿಹ್ಯವನ್ನೇ ಬೆಳೆಸಿದಂತೆ ಕಾಣುತ್ತದೆ. ಅಧಿಕಾರ, ಅಂತಸ್ತುಗಳಿಂದಲೂ — ವೈದಿಕ ಬುದ್ಧಿಯೊಂದಿಗೆ ಕೈ ಜೋಡಿಸಿದಾಗ ಅನಿವಾರ್ಯವಾಗಿ 'ಮಾರಿ' ವರ್ಣ ವ್ಯವಸ್ಥೆ ಕಾಪಾಡುವ ದೇವಿ ಯಾದಳು. ಹೀಗೆ ಇದರ ಮರೆಯಲ್ಲಿ ಹುದುಗಿಹೋದ ಬ್ರಾಹ್ಮಣ ಕನ್ಯೆಯೊಬ್ಬಳ ಕಾಮಾತುರದ ಕಥೆಯನ್ನೂ ಐತಿಹ್ಯ ಸಾರಿದರೂ ಬಹುತೇಕ ಈ ಆರಾಧನೆ — ಅಲೆ ಮಾರಿ ತನದಿಂದ—ನೆಲೆಯೂರಿದ ಸ್ಥಿತಿ ಯಲ್ಲಿನ— ಕಾಮ, ಔಷಧಿ ಸಮೃದ್ಧಿಯ ಆಶಯಗಳಿಗೇ ಹತ್ತಿರವಾಗಿರುವುದು ಕಂಡುಬರುತ್ತದೆ. ಇದರ ಸತ್ಯಾಸತ್ಯತೆಗಳು ವಿದ್ವಾಂಸರಿಂದ ಇನ್ನು ನಿರ್ಣಯವಾಗಬೇಕಿದ್ದು. ಈ ಹಬ್ಬದ ಅಧ್ಯಯನ ಸಾಂಸ್ಕೃತಿಕ ಸಂಘರ್ಷ ಮತ್ತು ಸಂಮಿಲನಗಳ ಚರಿತ್ರೆಯೊಂದನ್ನು ರೂಪಿಸುತ್ತದೆಂದರೆ ತಪ್ಪಾಗಲಾರದು ಎನಿಸುತ್ತದೆ..

ವಕ್ತೃಗಳ ವಿವರ :

1) ಜೋಗಪ್ಪ,
ವಯಸ್ಸು : 65
ಜಾತಿ : ದೇವಾಂಗ,
ಊರು: ಅರಕೆರೆ ಗ್ರಾಮ,
ಭದ್ರಾವತಿ ತಾ.ಶಿವಮೊಗ್ಗ ಜಿ.

2) ಜೀಲಮಾರಪ್ಪ,
ವಯಸ್ಸು : 65,
ಜಾತಿ: ಮಾದಿಗರು,
ಊರು: ಬೀರಗೊಂಡನಹಳ್ಳಿ,
ಹೊನ್ನಾಳಿ ತಾ. ಶಿವಮೊಗ್ಗ.ಜಿ.

3) ಎ.ಕೆ ಬಸಪ್ಪ ಬಿನ ಕರಿಬಸಪ್ಪ
ವಯಸ್ಸು : 45
ಜಾತಿ : ಮಾದಿಗರು (ಆಸಾದಿ)
ಊರು: ಬೀರಗೊಂಡನಹಳ್ಳಿ,
ಹೊನ್ನಾಳಿ ತಾ.

4) ನಿಂಗಪ್ಪ,
ವಯಸ್ಸು : 65,
ಜಾತಿ: ಮಾದಿಗರು (ಆಸಾದಿ)
ಊರು: ರಾಂಪುರ,
ಹೊನ್ನಾಳಿ ತಾ.ಶಿವಮೊಗ್ಗ.ಜಿ.

5) ರಾಯಪ್ಪ ಡಿ.ಎಚ್.
ವಯಸ್ಸು ಐ 55,
ಜಾತಿ : ಕುರುಬರು,
ಊರು: ಹೊನ್ನಾಳಿ,

6) ಯಜಮಾನ ಅಪ್ಪಿನಕಟ್ಟೆ ಕರಿಯಪ್ಪ,
ವಯಸ್ಸು: 102,
ಜಾತಿ : ಕುರುಬರು,
ಊರು : ಹೊನ್ನಾಳಿ,

7) ವೈ.ಪರಮೇಶ್ವರಪ್ಪ,
ವಯಸ್ಸು: 65,
ಜಾತಿ: ಲಿಂಗಾಯತರು,
ಊರು: ಬೀರಗೊಂಡನಹಳ್ಳಿ,
ಹೊನ್ನಾಳಿ ತಾ.

8) ಗೌರಮ್ಮ,
ವಯಸ್ಸು: 90,
ಜಾತಿ: ಲಿಂಗಾಯತರು
ಊರು: ಬೀರಗೊಂಡನಹಳ್ಳಿ
ಹೊನ್ನಾಳಿ ತಾ.

ಆಧಾರ ಗ್ರಂಥಗಳು :-

1) ಜಾನಪದ — 1993 — ಸಂಪಾದಕರು: ರಂಗಾರೆಡ್ಡಿ ಕೋಡಿರಾಂಪುರ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ.

2) ಜಾನಪದ ಸಾಹಿತ್ಯ ದರ್ಶನ — 1981 — ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ.

3) The Art of Tanta - Philip Rowson 1973.

4) The culture and civilization of Ancient India in historical Out lines - B. B. Kosambi.

5) 'ಗರತಿಯ ಹಾಡು' — ಸಂಗ್ರಹ: ಹಲಸಂಗಿ ಸಹೋದರರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು —1990.

6) ಸಮಕಾಲೀನ ಕನ್ನಡ ಕವಿತೆ —1 — ಪ್ರಸಾರಾಂಗ, ಬೆಂಗಳೂರು ವಿಶ್ವ ವಿದ್ಯಾನಿಲಯ, ಬೆಂಗಳೂರು — 1996.

7) ತ್ರಿಪದಿ ರೂಪವಾಗಿ ರಚಿಸಿದ ಸರ್ವಜ್ಞನ ವಚನಗಳು — ಸಂಪಾದಕರು)— ಚನ್ನಪ್ಪ ಉತ್ತಂಗಿ, ಬಾಸೆಲ ಮಿಷನ, ಧಾರವಾಡ — 1950.

8) ಯಶೋಧರ ಚರಿತೆ — ಸಂಪಾದಕರು:— ಡಿ:ಕ·ವೆಂ·ರಾಘವಾಚಾರ್, ಉಪಾಸಾಹಿತ್ಯ ಮಾಲೆ, ಚಂದ್ರಗುಪ್ತ ರಸ್ತೆ, ಮೈಸೂರು 1, 1978.

9) Dictionary of mythology folklore and symbols-Part II - Gertrude Jobes, The Scare crow press- Inc, New-york 19602.

10) ಜಾನಪದ ಸಾಹಿತ್ಯ ದರ್ಶನ — 1981 — ಪ್ರಧಾನ ಸಂಪಾದಕರು : ಡಾ: ಎಂ·ಎಸ್· ಸುಂಕಾಪುರ, ಕನ್ನಡ ಅಧ್ಯಯನ ಪೀಠ· ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ — 1990.

11) ಭಾರತೀಯ ಸಮಾಜ — ಚ·ನ· ಶಂಕರರಾವ್, ಜೈ ಭಾರತ್ ಪ್ರಕಾಶನ, ಮಂಗಳೂರು — 1991.

12) Caste and Tribes of Southern India Vol- V. - Edgor Thurston, Asion Education Service, New delhi - 1987.

13) ಕರ್ನಾಟಕ ಜನಪದ ಕಲೆಗಳಕೋಶ — ಸಂಪಾದಕರು :— ಪ್ರೊ·ಹಿ·ಚಿ·ಬೋರಲಿಂಗಯ್ಯ,

13) ಕರ್ನಾಟಕ ಜನಪದ ಕಲೆಗಳ ಕೋಶ: — ಸಂಪಾದಕರು: ಪ್ರೊ: ಹಿ.ಚಿ. ಬೋರಲಿಂಗಯ್ಯ,
ಪ್ರಸಾರಾಂಗ,
ಕನ್ನಡ ವಿಶ್ವ ವಿದ್ಯಾಲಯ, ಹಂಪಿ,
1996.

14) ಜಾನಪದ ಜಗತ್ತು ಸಂಪುಟ : 17
ಸಂಚಿಕೆ : 3, ಜುಲೈ—ಸೆಪ್ಟೆಂಬರ್1996. — ಸಂಪಾದಕರು: ಪ್ರೊ: ಡಿ.ಲಿಂಗಯ್ಯ ಮತ್ತು
ಡಾ: ಚಕ್ಕೆರೆ ಶಿವಶಂಕರ,
ಕರ್ನಾಟಕ ಜಾನಪದ ಟ್ರಸ್ಟ್.

ಸಹಾಯಕ ಗ್ರಂಥಗಳು :

1) ಜಾನಪದ ವಾಹಿನಿ — ಲೇ: ದೇ. ಜವರೇಗೌಡ, ಡಿ.ವಿ.ಕೆ. ಮೂರ್ತಿ, ಕೃಷ್ಣ ಮೂರ್ತಿ ಪುರಂ, ಮೈಸೂರು –4.

2) Scheduled Caste and Scheduled Tribes in India. Dr. H.C.Upadyay, Anmol Publications -1991

3) ದೇವತೆಗಳು ಮತ್ತು ಹಬ್ಬಗಳು — ಮ. ಶ್ರೀಧರ ಮೂರ್ತಿ, ಪುನರ್ವಸು ಪ್ರಕಾಶನ – 1981, ಬೆಂಗಳೂರು.

4) The fold origions of Indian temples - S. K.Ramachandra Rao, IB.H. Prakashana, Bangalore.

5) 'ಕರ್ನಾಟಕ ಜಾತ್ರೆಗಳು' — ಸಂಪಾದಕರು: ಸಿ. ಎಸ್. ಶಿವಕುಮಾರ ಸ್ವಾಮಿ, ಕನ್ನಡ ವಿಭಾಗ, ಸ್ನಾತಕೋತ್ತರ ಕೇಂದ್ರ – ಶಿವಮೊಗ್ಗ.

6) ಹಕ್ಕಿಪಿಕ್ಕಿಯರ ಸಂಸ್ಕೃತಿ — ರಾಜಪ್ಪ ದಳವಾಯಿ, ಕನ್ನಡ ಸಾಹಿತ್ಯ ಅಕಾಡೆಮಿ – 1993, ಬೆಂಗಳೂರು.

7) Some Contributions of South India to Indian Culture. - K. Aiyangar, Cosmo publications-1981 New-Delhi.

8) Cult of the Goddess - James J. Preston Vikas publishing house 1980.

9) Pastoral Deities in Western India. - Gunther-Dietz Sontheimer(Marati) Translated by: Anne Feldhous. Oxford University press 1993. Delhi.

10) ಕರ್ನಾಟಕ ಸಂಸ್ಕೃತಿಯ ಪೂರ್ವ ಪೀಠಿಕೆ : ಶಂ.ಭಾ.ಜೋಶಿ,

11) ಕರ್ನಾಟಕ ರಾಜ್ಯ ಗ್ಯಾಸೆಟಿಯರ ಸಂಪುಟ – 1. : ಕರ್ನಾಟಕ ಸರ್ಕಾರ,

12) ಬಂಡಾಯ ಜಾನಪದ : ರಂಗಾರೆಡ್ಡಿ ಕೋಡಿರಾಂಪುರ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಬೆಂಗಳೂರು.

13) 'ಗ್ರಾಮದೇವತೆಮೂರಮ್ಮ' : ಸಂ: ಎಚ್.ಎಲ್.ನಾಗೇಗೌಡ, ಕರ್ನಾಟಕ ಜಾನಪದ ಟ್ರಸ್ಟ್, ಬೆಂಗಳೂರು.

14) ಜಾನಪದ ಸಾಹಿತ್ಯ ದರ್ಶನ ಭಾಗ : 9 : ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವ ವಿದ್ಯಾಲಯ, ಧಾರವಾಡ.

15) ಜಾನಪದ ಸಾಹಿತ್ಯ ದರ್ಶನ ಭಾಗ : 6 : ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವ ವಿದ್ಯಾಲಯ, ಧಾರವಾಡ.

16: ಕರ್ನಾಟಕ ಜಾತ್ರೆಗಳು : ಹಂ.ಪ.ನಾಗರಾಜಯ್ಯ,

17) ಜಾನಪದ ಸಾಹಿತ್ಯ ದರ್ಶನ ಭಾಗ : 8. : ಕರ್ನಾಟಕ ವಿಶ್ವ ವಿದ್ಯಾಲಯ, ಧಾರವಾಡ.

18) ಕರ್ನಾಟಕ ಸಂಸ್ಕೃತಿ ಪರಂಪರೆ ಭಾಗ : 7 ಜಾತ್ರೆಗಳು. : ಎಸ್.ಎಸ್.ಹಿರೇಮಠ, ಸಮತಾ ಪ್ರಕಾಶನ, ಹೊಸಪೇಟೆ–583201.

19) ಕರ್ನಾಟಕ ಸಂಸ್ಕೃತಿ ಪರಂಪರೆ ಭಾಗ : 1 'ಹಬ್ಬಗಳು' : ಎಸ್.ಎಸ್.ಹಿರೇಮಠ, ಸಮತಾ ಪ್ರಕಾಶನ – 1992, ಹರಪನಹಳ್ಳಿ.

20) 'ಜಾನಪದ ಅಧ್ಯಯನ : ಡಾ: ದೇ.ಜವರೇಗೌಡ, ಚೇತನ ಬುಕ್ ಹೌಸ – 1991. ಮೈಸೂರು – 24.

21) ಜಾನಪದ ಸಾಹಿತ್ಯ ದರ್ಶನ : ಭಾಗ : 10 : ಪ್ರಧಾನ ಸಂಪಾದಕರು, ಡಾ: ಎಸ್.ಎಂ.ವೃಷಭೇಂದ್ರ ಸ್ವಾಮಿ, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿ.ವಿ. ಧಾರವಾಡ.

22) ಜಾನಪದ ಸಂಕಲನ : ಬಸವರಾಜ ನೆಲ್ಲಿಸರ, ಯಕ್ಷ ಪ್ರಕಾಶನ, ಮೈಸೂರು.

23) ಜಾನಪದ ಜಗತ್ತು, ಸಂಪುಟ : 3 : ಜಾನಪದ ಟ್ರಸ್ಟ್, ಬೆಂಗಳೂರು.

24) ಚಿತ್ರದುರ್ಗ ಜಿಲ್ಲೆಯ ವ್ಯವಸಾಯ ಜಾನಪದ : ಡಾ: ಎಂ.ಜಿ. ಈಶ್ವರಪ್ಪ,

25) ಉಜ್ಜನಿ ಚಾಡವ್ವ : ಡಾ. ಹಿ.ಚಿ.ಬೋರಲಿಂಗಯ್ಯ.

26) ಕನ್ನಡ ಜಾನಪದ ವಿಶ್ವಕೋಶ, ಸಂಪುಟ : 1, : ಸಂ: ಡಾ: ಚಂದ್ರಶೇಖರ ಕಂಬಾರ,

27) ದಕ್ಷಿಣ ಕರ್ನಾಟಕದ ಜಾನಪದ ಕಾವ್ಯ ಪ್ರಕಾರಗಳು : ಡಾ: ಜಿ.ಶಂ.ಪರಮಶಿವಯ್ಯ,

28) ದೇವತೆಗಳು ಮತ್ತು ಹಬ್ಬಗಳು : ಮ. ಶ್ರೀಧರ ಮೂರ್ತಿ, ಪುನರ್ವಸು ಪ್ರಕಾಶನ – 1981, ಬೆಂಗಳೂರು.

29) ಕಾಡುಗೊಲ್ಲರ ನಂಬಿಕೆ ಮತ್ತು ಸಂಪ್ರದಾಯಗಳು : ಡಾ: ಶೀ.ನಂ.ಶಂಕರನಾರಾಯಣ,

30) Devi and The Spouse Goddess (Women Sexuality Marriages in India) : Lynne Gatwood, The Riverdale company Inc. Publishers - 1985. Riverdale, Marryland- U.S.A.

31) ಕನ್ನಡ–ಇಂಗ್ಲೀಷ್ ಶಬ್ದಕೋಶ : ರೆವೆರೆಂಡ ಎಫ್.ಕಿಟೆಲ್, ಏಷಿಯನ್ ಎಜುಕೇಷನ್ ಸರ್ವಿಸ್, ನ್ಯೂಡೆಲ್ಲಿ, ಮದ್ರಾಸ್ – 1994.

32) Hindu Tribes and Castes - M.A.Sherring Vol. II Cosmo Publication India. 1974.

33) ಕಾಡುಗೊಲ್ಲರ ಸಂಪ್ರದಾಯ ಮತ್ತು ನಂಬಿಕೆಗಳು : ಡಾ·ಶೀ·ನಂ·ಶಂಕರನಾರಾಯಣ,

ಪತ್ರಿಕೆಗಳು:

1) ಜಾನಪದ ಸಂಪುಟ: 3, ಸಂಚಿಕೆ : 1 : ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, 1970·

2) ಸುಧಾ (ವಾರಪತ್ರಿಕೆ) ಯುಗಾದಿ ವಿಶೇಷಾಂಕ — 1993·

ಛಾಯ ಚಿತ್ರಗಳು

'ಮಾರಮ್ಮ' (ಬೀರಗೊಂಡನಹಳ್ಳಿ)



ಚಿತ್ರ: ೧ ಗದ್ದಿಗೆ ಮಠ



ಚಿತ್ರ: ೨. ಕರಿಯಮ್ಮನ ಗದ್ದಿಗೆ. (ಮುಂಡೋಸಿ)



ಚಿತ್ರ ೨ '[illegible]'



ಚಿತ್ರ: ೪. 'ಚೌಡಿಕೆ'



ಚಿತ್ರ: ೬. [illegible]



ಚಿತ್ರ: ೭. ಬಲಗೆ ಬಯ್ಯುತ್ರಯನ ಕೋಣ.



ಚಿತ್ರ. ೭. ಘಟೆ' ಮಾಡುವವರು ಪೂಜಿಸುತ್ತಿರುವುದು



ಚಿತ್ರ: ೮. 'ಘಟೆ' ತಂದ ಮಹಿಳೆಗೆ ಆರತಿ ಮಾಡುತ್ತಿರುವುದು.



ಚಿತ್ರ: ೯. 'ಬಂಗಾರ[illegible]'





ಚಿತ್ರ: ೧೦.
ಚಪ್ಪರದಿಂ[illegible]
ಕರೆದೊಯ್ಯುತ್ತಿರುವುದು.
(ಹೊನ್ನಾಳಿ)

[illegible]



ಜೋಗಿಗಳು (ನಿಂಗಪ್ಪ ಮತ್ತು ದುಂಗಡಿಗ), ರಾಂಪುರ.



ನಿಂಗಪ್ಪ . ಎ. ಕೆ.   ದುಂಗಡಿಗ.